
# ಸೀಳುನಾಲಿಗೆ

ಸುದರ್ಶನ ದೇಸಾಯಿ



894.814 3
DES N98
ಗ್ರಂಥ ಸ್ವಾಮ್ಯ ವಿಭಾಗ

ಇದು ಸಾಹಿತ್ಯ ಪ್ರಕಾಶನದ ಐವತ್ತನೇ ಪ್ರಕಟಣೆ:

# ಸೀಳು ಸಾಲಿಗೆ

(ಕಾದಂಬರಿ)

ಸುದರ್ಶನ ದೇಸಾಯಿ

ಸಾಹಿತ್ಯ ಪ್ರಕಾಶನ
ಸಿಟಿ ಕ್ಲಿನಿಕ್ ಸಂಕೀರ್ಣ, ರಾಜಬಾಡ ಪೇಟೆ
ಹುಬ್ಬಳ್ಳಿ: 580 028

META ENTERED

ಸಾಹಿತ್ಯ ಪ್ರಕಾಶನ
ಸಿಟಿ ಕ್ಲಿನಿಕ್ ಸಂಕೀರ್ಣ, ದಾಜೀಬಾನ ಪೇಟೆ
ಹುಬ್ಬಳ್ಳಿ : 580 028

894.814 3
DLS N98

ಸಂಪಾದನ–ಪ್ರಕಾಶನ
ಎಂ. ಎ. ಸುಬ್ರಹ್ಮಣ್ಯ

ಹಸ್ತಪ್ರತಿ ಪರಿಶೀಲನೆ:
ಗೋಪಾಲ ವಾಜಪೇಯಿ
ಜಿ ವೀರಣ್ಣ

746590

SEELU NAALIGE : Fiction by Sudarshanan Desai
Published by Sahitya Prakashana, City Clinic Complex, Dajibanpet, Hubli : 580 028
ಹಕ್ಕುಗಳು: ಶ್ರೀಮತಿ ಸುಜಾತಾ ದೇಸಾಯಿ
ಪ್ರಥಮ ಮುದ್ರಣ: 1998 ಪುಟಗಳು: iv+200 ಬೆಲೆ : 48-00
ಮುದ್ರಣ: ಶ್ರೀ ವಿರುಪಾಕ್ಷ ಪರಗಿ, ಸುಭಾಷ ರಸ್ತೆ, ಬೆಟಗೇರಿ ಗದಗ-582102

# ಕೃತಜ್ಞತೆಗಳು

ಕನ್ನಡ ಪತ್ತೇದಾರಿ ಸಾಹಿತ್ಯಕ್ಕೆ ನೂರುವರ್ಷ ತುಂಬಿದೆ.(೧೮೯೨-೧೯೯೩) ಅದಕ್ಕಾಗಿ ಧಾರವಾಡದಲ್ಲಿ ನಾನು ಸುವಿವೇಕ ಪ್ರಕಾಶನದ ಪರವಾಗಿ ಕನ್ನಡ ಪತ್ತೇದಾರಿ ಸಾಹಿತ್ಯ ಶತಮಾನೋತ್ಸವ ವರ್ಷ ಆಚರಿಸಿದೆ. (೧೮-೧-೯೨) ನಂತರ ಅಖಿಲ ಭಾರತ ಮಟ್ಟದ ಪ್ರಪ್ರಥಮ ಕನ್ನಡ ಪತ್ತೇದಾರಿ ಸಾಹಿತ್ಯ ಸಮ್ಮೇಳನವನ್ನು ಎರಡು ದಿನಗಳ ಕಾಲ ಸಂಘಟಿಸಿದೆ (ಮೇ ೨೯,೩೦೧೯೯೨) ಅಂದಿನ ಮುಖ್ಯಮಂತ್ರಿಗಳೂ, ಸಾಹಿತ್ಯ ಪ್ರೇಮಿಗಳೂ ಆದ ಮಾನ್ಯ ಶ್ರೀ ಎಸ್. ಬಂಗಾರಪ್ಪನವರು ಇದನ್ನು ಉದ್ಘಾಟಿಸಿದರು. ಅಂದು ನವಿ ನೆನಪಿನ ಸಂಚಿಕೆ 'ಜುಂ ಜುಂ' ಬೆಳಕಿಗೆ ಬಂತು.

ಈ ಎಲ್ಲ ಕಾರ್ಯಗಳಿಗೆ, ಕನ್ನಡದ ಹೆಮ್ಮೆಯ ಲೇಖಕರು, ಸಾಹಿತಿಗಳು ವಿಮರ್ಶಕರೂ ಆದ ಸರ್ವಶ್ರೀ ಡಾ. ಶಂಕರ ಮೊಕಾಶಿ, ಪುಣೇಕರ, ಪ್ರೊ. ಕೀರ್ತಿನಾಥ ಕುರ್ತಕೋಟಿ, ಡಾ. ಗಿರಡ್ಡಿ ಗೋವಿಂದರಾಜ, ಡಾ. ಜಿ.ಎಸ್. ಆಮೂರ, ಡಾ. ಸಿ.ವಿ. ವೇಣುಗೋಪಾಲ, ಡಾ. ಶ್ಯಾಮಸುಂದರ ಬಿದರಕುಂದಿ ಶ್ರೀ ರೋಹಿದಾಸ ನಾಯಕ, ಮಿತ್ರರುಗಳಾದ, ಶ್ರೀ ಸಿಂಗಣ್ಣ ಕುಂಟಿ ಶ್ರೀ ಡಿ. ಎಚ್. ಗುಡಸಲಮನಿ, ಶ್ರೀ ಬಿ.ಎಸ್. ಜೋಶಿ. ಶ್ರೀ ವಿಜಯೇಂದ್ರ ದೇಶಪಾಂಡೆ, ಕಲಾವಿದರಾದ ಶ್ರೀ ಎಂ. ಆರ್. ಬಾಳೀಕಾಯಿ ಮತ್ತು ಚಲನಚಿತ್ರ ಕಲಾವಿದ ಶ್ರೀ ಸುರೇಶ ಕುಲಕರ್ಣಿ ಇವರೆಲ್ಲ ಪ್ರೋತ್ಸಾಹ ಸಹಕಾರ ನೀಡಿದರು.

ಪುತ್ರಿಯರಾದ ವೀಣಾ, ರೇಖಾ, ಮತ್ತು ಕವಿತಾ ಇವರು ಕೂಡ ಈ ಅಪೂರ್ವ ಸಾಹಿತ್ಯ ಯಜ್ಞದಲ್ಲಿ ಉತ್ಸಾಹದಿಂದ ಸಕ್ರಿಯರಾಗಿ ಭಾಗವಹಿಸಿ ದರು. ಈ ಸಂದರ್ಭದಲ್ಲಿ ಹಾಗೂ ನಂತರದಲ್ಲಿ ನಡೆದ ನನ್ನ ಹಿರಿಯ ಮಗಳು ರೇಖಾಳ ವಿವಾಹ ಸಂದರ್ಭದಿಂದಾಗಿಯೂ ನನ್ನ ಲೇಖನಿ ಸ್ಥಗಿತಗೊಂಡಿತ್ತು.

ಬೆಳಗಾವಿಯ 'ಕನ್ನಡಮ್ಮ'ದಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ 'ಸೀಳು ನಾಲಿಗೆ' ಪುಸ್ತಕ ರೂಪದಲ್ಲಿ ಬರುತ್ತಿದೆ. ಧಾರಾವಾಹಿ ಮಾಡಿದ ಶ್ರೀಮತಿ ಉಮಾದೇವಿ ಟೋಪಣ್ಣವರ, ಪುಸ್ತಕ ರೂಪದಲ್ಲಿ ತಂದ ಶ್ರೀ ಎಂ. ಎ. ಸುಬ್ರಹ್ಮಣ್ಯ, ಪತ್ರಕರ್ತ ಮಿತ್ರ ವಸಂತ ಮುರ್ಡೇಶ್ವರ ಮುಖಪುಟ ಕಲಾವಿದ ಹಾಗೂ ಮುದ್ರಣ ಕಾರ್ಯದ ಮಿತ್ರರು

ಎಲ್ಲರಿಗೂ ನನ್ನ ಕೃತಜ್ಞತೆಗಳು. ತಮ್ಮ ಅಭಿಪ್ರಾಯಗಳ ನಿರೀಕ್ಷೆಯಲ್ಲಿ.

ಹಳದಿ ಚೇಳು

—ಸುದರ್ಶನ ದೇಸಾಯಿ

ಸಾರಸ್ವತಪುರ ಧಾರವಾಡ-೫೮೦೦೦೨

“ಹಳದಿಚೇಳು” ಅಂದು ಮೌನವಾಗಿತ್ತು. ಮೇಜರ್ ಹೇಮಂತ ಸಹ ಅಂದು ಒಂಟಿಯಾಗಿದ್ದ. ಸದಾ ಯಾವುದಾದರೂ ಒಂದು ಮಾತನ್ನು ಹಿಡಿದು ಕೀಟಲೆ ಮಾಡಿ ಸಾರ್ಜಂಟ್ ಸುಷಮಾಳನ್ನು ಗೋಳು ಹೊಯ್ದುಕೊಳ್ಳು ತ್ತಿದ್ದ ಅಶೋಕ ಹಾಗೂ ಅವನ ಕೀಟಲೆಯಿಂದ ರೋಸಿ ಹೋಗಿ ಹುಸಿಕೋಪ ದೊಂದಿಗೆ ಅವನಿಗೆ ಶಾಸ್ತಿ ಮಾಡಲು ಧಾವಿಸುತ್ತಿದ್ದ ಸುಷ್ಮಾ ಇಬ್ಬರೂ ಮನೆಯಲ್ಲಿರದಿರುವದೇ ಅದಕ್ಕೆ ಕಾರಣ. ಎಂಟು ದಿನಗಳ ಹಿಂದೆಯೇ ನಿಶ್ಚಯಿಸಿ ಕೊಂಡಂತೆ, ಮೂವರೂ ಸೇರಿ ಇಂದು “ಸಂಗಮ್”ದಲ್ಲಿ ಭರ್ಜರಿಯಾಗಿ ನಡೆಯು ತ್ತಿರುವ “ಶರವೇಗದ ಸರದಾರ” ಚಿತ್ರ ನೋಡಲು ಹೋಗಬೇಕಾಗಿತ್ತು. ಎರಡು ದಿನಗಳ ಹಿಂದೆ ಸ್ವಲ್ಪ “ಸುಸ್ತು” ಎಂದು ಮಲಗಿಕೊಂಡಿದ್ದ ಹೇಮಂತನಿಗೆ ರಾತ್ರಿ ಸ್ವಲ್ಪ ಜ್ವರ ಕಾಣಿಸಿಕೊಂಡಿತ್ತು. ಈಗ ಜ್ವರ ನಿಂತಿದ್ದರೂ, ಮೈ ಕೈ ಭಾರ ವಾಗಿದ್ದರಿಂದ ಅವರಿಬ್ಬರನ್ನೇ ಒತ್ತಾಯದಿಂದ ಚಿತ್ರ ನೋಡಲು ಕಳಿಸಿ, ಆತ ಹಾಸಿಗೆಯಲ್ಲಿ ಒರಗಿ ಕರ್ನಲ್ ರಂಜೀತರ ಪುಸ್ತಕವೊಂದನ್ನು ಓದತೊಡಗಿದ್ದ.

ಗೋಡೆಯ ಮೇಲಿದ್ದ ಸುಂದರವಾದ ಗಡಿಯಾರ ಟಿಕ್ ಟಿಕ್ ಸದ್ದು ಮಾಡುತ್ತ ಓಡತೊಡಗಿತ್ತು. ಸಮಯ ರಾತ್ರಿ ಎಂಟೂವರೆಗೆ ಕೆಲವೇ ಸೆಕೆಂಡು ಉಳಿದಿದ್ದವು. ಗಡಿಯಾರದ ಮಧ್ಯ ಭಾಗದಲ್ಲಿದ್ದ ಪುಟ್ಟ ಮನೆಯ ಬಾಗಿಲು ತೆರೆಯಿತು. ಕೈಯಲ್ಲಿ ಚಿಕ್ಕ ಸುತ್ತಿಗೆ ಹಿಡಿದಿದ್ದ ಬಾಲಕನೊಬ್ಬ ಹೊರ ಬಂದು ಸುತ್ತಿಗೆಯಿಂದ “ಢಣ್” ಎಂದು ಗಂಟೆ ಬಾರಿಸಿ ಮರಳಿ ಮನೆ ಸೇರಿದ. ಪುನಃ ಬಾಗಿಲು ಮುಚ್ಚಿಕೊಂಡಿತು. ಇದೆಲ್ಲ ಎರಡು ಮೂರು ಸೆಕೆಂಡುಗಳಲ್ಲಿ ನಡೆ ಯಿತು ಅಷ್ಟೇ.

ಹೇಮಂತ ಪುಸ್ತಕ ಮುಚ್ಚಿ ಎದ್ದು ಕುಳಿತ. ಗಡಿಯಾರದ ಕಡೆಗೆ ದಿಟ್ಟಿಸಿ ಯೋಚಿಸತೊಡಗಿದ. ಈಗ ಎಂಟೂವರೆ. ಚಿತ್ರ ಬಿಡುವದು ಒಂಬತ್ತು ಗಂಟೆ. ಮನೆ ತಲುಪಲು ಇಪ್ಪತ್ತು ನಿಮಿಷಗಳು. ಅಂದರೆ ಅವರಿಬ್ಬರು ಬರಲು ಕನಿಷ್ಠ ಪಕ್ಷ ಇನ್ನೂ ಒಂದು ಗಂಟೆಯಾದರೂ ಬೇಕು. ಆತ ಚಟಕ್ಕನೇ

ಮೇಲೆದ್ದ. ಹಾಲು ಬಿಸಿ ಮಾಡಿ ಗ್ಲಾಸಿಗೆ ಬಗ್ಗಿಸಿದ. ಒಂದು ಚಮಚೆ ಸಕ್ಕರೆ ಬೆರೆಸಿ, ಕಬರ್ಡ್‌ನಲ್ಲಿದ್ದ "ರೆಡ್‌ಸ್ಪೈಡರ್" ಸೀಸೆ ಹೊರತೆಗೆದ ದೇಹಕ್ಕೆ ಶಕ್ತಿ ನೀಡುವ ಶಕ್ತಿವರ್ಧಕವದು. ಎರಡು ಚಮಚೆ "ರೆಡ್‌ಸ್ಪೈಡ್‌ರ" ಹಾಲಿಗೆ ಬೆರೆಸಿ ಚಮಚದಿಂದ ಚೆನ್ನಾಗಿ ಕಲಕಿ, ಗ್ಲಾಸಿನೊಂದಿಗೆ ಮತ್ತೆ ತನ್ನ ಮೊದಲಿನ ಜಾಗೆಗೆ ಬಂದ....

ಅಭಿಮಾನಿಗಳಿಂದ ಬಂದ ನಾಲ್ಕಾರು ಪತ್ರಗಳು ಮೇಜಿನ ಮೇಲಿದ್ದವು ಒಂದೊಂದಾಗಿ ಓದುತ್ತ ಹಾಲು ಕುಡಿದು ಮುಗಿಸಿದ....ಗ್ಲಾಸುಮೇಜಿನ ಮೇಲೆ ಇಡುತ್ತಿರುವಾಗಲೇ ಟೆಲಿಫೋನ್ ಬಾರಿಸಿತು. ರೂಢಿಯಂತೆ ಮೊದಲು ಟೇಪ್ ರಿಕಾರ್ಡರ್ ಗುಂಡಿ ಅದುಮಿ ಆಮೇಲೆ ರಿಸೀವರ್ ಮೇಲೆತ್ತಿದ: "ಹಲೋ" ಮೇಜರ್ ಹೇಮಂತ...."

"ಗುಡ್‌ನೈಟ್ ಮೇಜರ್....ಹೇಗಿದ್ದಿರಿ? ಆರೋಗ್ಯ ತಾನೆ?" ಸ್ವಲ್ಪ ಗಡಸು ಎನಿಸಿದರೂ ಮೃದುತ್ವ ಬೆರೆತ ಧ್ವನಿ ಕೇಳಿಸಿತು.

"ಓಹೋ ಚೆನ್ನಾಗಿದ್ದೇನೆ....ಹೇಳಿ ಏನು ವಿಷಯ?"

"ವಿಶೇಷವಾಗಿರುವದರಿಂದಲೇ ಫೋನು ಮಾಡಿದ್ದು. ಅಂದ ಹಾಗೆ ನಾನಾರು ಎಂದು ಅರ್ಥವಾಗಿದೆಯಲ್ಲ?"

"ಅರೆ, ನಿಮ್ಮಂಥವರನ್ನು ಮರೆತರೆ ನಮ್ಮಂಥ ಬಡಪಾಯಿಗಳು ಬದುಕುವದಾದರೂ ಹೇಗೆ ಹೇಳಿ," ಹೇಮಂತ ಬುರುಡೆಯೊಂದನ್ನು ಉರುಳಿಸಿದ.

"ನೋ ನೋ ಮೇಜರ ನಿಮ್ಮ ಬುರುಡೆ ಮಾತಿಗೆ ನಾ ಮೋಸ ಹೋಗ ಲಾರೆ. ನೀವು ಮೊದಲು ನಾನು ಯಾರೆಂಬುದನ್ನು ಹೇಳಿ ಆಮೇಲೆ ಮುಂದಿನ ಮಾತು."

ಹೇಮಂತ ಬಿಟ್ಟ ಬಾಣ ಮರಳಿ ಅವನ ಬತ್ತಳಿಕೆ ಸೇರಿತ್ತು. ಒಂದು ಕ್ಷಣ ತಬ್ಬಿಬ್ಬಾದ ಹತ. ತನ್ನ ಕಂಪ್ಯುಟರ್ ಮಿದುಳನ್ನು ತಿರುವಿ ಹಾಕುತ್ತಲೇ ಮತ್ತೊಂದು ಹುಸಿಗುಂಡು ಹಾರಿಸಿದ. "ಸಾಹೇಬರೆ ಈ....ಈ ಬಡಪಾಯಿಯ ಪರೀಕ್ಷೆ ಮಾಡಬೇಕೆ? ವಿಷಯುವೇನು ಹೇಳಿ."

"ಹೇಮಂತ ಅವರೆ, ನಾನು ಅಸಾಧ್ಯದವನು. ಒಂದು ಬಾರಿ ಆಡಿದ ಮಾತನ್ನು ಮರಳಿ ತೆಗೆದುಕೊಳ್ಳುವವನಲ್ಲ. ನಾನು ಹೇಗೆ ನಿಮ್ಮ ಹೆಸರು ಹಿಡಿದು ಕರೆದಿರುತ್ತೇನೋ ಅದೇ ರೀತಿ ನೀವೂ ಸಹ ಕರೆದರೆ ಸಿಗುವ ಖುಶಿಯೇ ಬೇರೆ."

ಹೇಮಂತ ಮುಗುಳುನಗೆ ನಕ್ಕ.

ಜೀವಮಾನದಲ್ಲಿ ಸಂಧಿಸಿದ ಸಾವಿರಾರು ಜನರಲ್ಲಿ ಈಗ ಮಾತನಾಡು

ತ್ತಿರುವ ವ್ಯಕ್ತಿ ಯಾರೆಂಬುದನ್ನು ಅವನ ಮಿದುಳು ಸೂಚಿಸಿತ್ತು.

"ಧರ್ಮ ರತ್ನಾಕರ, ಮಾಜಿ ಸಚಿವ ಸಾಂಬಮೂರ್ತಿಯವರೇ ಈಗ ಲಾದರೂ ಈ ಹುಲುಮಾನವನಿಂದ ಏನಾಗಬೇಕು ಎಂಬುದನ್ನು ಹೇಳಿ." ಸಾಂಬಮೂರ್ತಿಯವರು ಬಹುಶಃ ಅವಾಕ್ಕಾಗಿರಬೇಕು. ಆ ಕಡೆಯಿಂದ ಉಸಿರುಬಿಡುವುದೂ ಸಹ ಕೇಳಿ ಬರದಾಗಲು ಹೇಮಂತನೇ ನುಡಿದ. "ಏಕೆ? ಹಾವಿನ ಕಣ್ಣೇನಾದರೂ ನಿಮ್ಮ ಮೇಲೆ ಬಿತ್ತೋ ಅಥವಾ...."

"ಇಲ್ಲ ಇಲ್ಲ....ಹಳದಿಚೇಳು ಕಚ್ಚಿತು ಅಷ್ಟೇ."

ಇಬ್ಬರೂ ಮನಸಾರೆ ನಕ್ಕರು....ಸಾಂಬಮೂರ್ತಿಯೇ ಮಾತು ಆರಂಭಿಸಿ ದರು. "ಎಂಟು ವರ್ಷಗಳ ನಂತರವೂ ನೀವು ನನ್ನನ್ನು ಗುರುತಿಸಿದಿರಲ್ಲ."

"ಏಕೆ? ನಾನು ಮರೆತಿರುವೆ ಎಂದು ಭಾವಿಸಿದಿರಾ?"

"ಹೌದು ಸ್ವಾಮಿ. ಅಧಿಕಾರದಲ್ಲಿರುವಾಗ ಎಲ್ಲರೂ ನೆನಪಿಡುತ್ತಾರೆ, ಈಗ ನಾನು ಮಾಜಿ ಸಚಿವ ನೋಡಿ."

"ಸಾಂಬಮೂರ್ತಿಗಳೇ ನೀವು ಅಧಿಕಾರದಲ್ಲಿಲ್ಲ ನಿಜ. ಆದರೂ ನಿಮ್ಮ ಒಳ್ಳೆಯ ಕೆಲಸಗಳಿಂದಾಗಿ ಜನರ ಹೃದಯದಲ್ಲಂತೂ ಇದ್ದೀರಲ್ಲ?"

"ಥ್ಯಾಂಕ್ಸ್ ಮೇಜರ್, ನಿಮ್ಮ ಭಾವನೆಗಳಿಗೆ ನಾನು ಋಣಿ."

"ಅದೆಲ್ಲಾ ಇರಲಿ ಏನಾಗಬೇಕು ಮೊದಲು ಹೇಳಿ."

"ನಿಮ್ಮ ಜೊತೆ ಮಹತ್ವವಾದ ವಿಷಯದ ಬಗ್ಗೆ ಮಾತನಾಡಬೇಕಿದೆ."

"ಅದಕ್ಕೇನಂತೆ ಕೂಡಲೇ ಬಂದು ಬಿಡಿ, ನನ್ನದಿನ್ನೂ ಊಟವಾಗಿಲ್ಲ.... ಕೂಡಿ ಮಾತನಾಡುತ್ತಾ ಊಟ ಮಾಡಿದರಾಯ್ತು." ವಿಷಯ ತುಂಬಾ ಗಂಭೀರವಾಗಿದೆ ಮೇಜರ ನಮ್ಮ ಶಾಂತಪ್ರಿಯ ದೇಶದ ಮೇಲೆ ಕರಾಳ ಛಾಯೆ ಎರಗಲಿದೆ...."

"ಸಾಂಬಮೂರ್ತಿಗಳೆ, ದೇಶಕ್ಕೆ ಗಂಡಾಂತರ! ಈ ವಿಷಯ...."

"ನನಗೆ ತಿಳಿದಿದೆ. ಹೀಗಾಗಿ ನನ್ನ ಜೀವವೂ ಸಹ ಅಪಾಯದಲ್ಲಿದೆ. ಅದಕ್ಕಾಗಿ ನಾನು ತಮ್ಮ ಬಳಿ ಬರಲಾರೆ...."

"ಅರ್ಥವಾಯ್ತು ಸಾಂಬಮೂರ್ತಿಗಳೆ, ಹೇಳಿ....ನಾನೆಲ್ಲಿಗೆ ಬರಲಿ?"

"ರಂಗಮಹಲಿಗೆ ಬನ್ನಿ.... ಹೇಗಿದ್ದರೂ ನೀವು ನೋಡಿದ್ದೀರಲ್ಲ...."

"ಹಾಂ....ನೋಡಿದ್ದೇನೆ. ಆನೆಕೆರೆಯಲ್ಲಿರುವದು."

"ನಾನು ಅಲ್ಲಿಂದಲೇ ಮಾತಾಡ್ತಿರೋದು."

"ಸರಿ ಹಾಗಾದ್ರೆ ಈಗ ಸಮಯ ಎಂಟೂ ಮುಕ್ಕಾಲು ಅಲ್ಲಿ ತಲು ಪಲು ನನಗೆ ಕನಿಷ್ಟ ಮುಕ್ಕಾಲು ಗಂಟೆಯಾದರೂ ಬೇಕು."

"ಆಗಲಿ ಹೊರಟು ಬಿಡಿ, ನಾನು ನಿಮ್ಮ ದಾರಿ ಕಾಯ್ತಿರ್ತೀನೆ...."

ರಿಸೀವರ್ ಕೆಳಗಿಳಿಸಿ ಟೇಪ್‌ರೆಕಾರ್ಡರ್ ಬಂದ್ ಮಾಡಿ ಹೇಮಂತ ಮೇಲೆದ್ದ.

ಮುಂದಿನ ಹತ್ತು ನಿಮಿಷಗಳಲ್ಲಿ ಮೇಜರನ "ಕಾಂಟೆಸ್ಸಾ" ಕಾರು ಹೆದ್ದಾರಿಯ ಮೇಲೆ ಗಾಳಿಯೊಂದಿಗೆ ಮಾತನಾಡತೊಡಗಿತ್ತು. ಅವನ ಮನಸ್ಸು ಸಾಂಬಮೂರ್ತಿ ಅವರ ಬಗ್ಗೆ ಯೋಚಿಸತೊಡಗಿತ್ತು. ಎಂಟು ವರ್ಷಗಳ ಹಿಂದೆ ಅಧಿಕಾರಾರೂಢ ಪಕ್ಷದಲ್ಲಿ ಶಿಕ್ಷಣ ಸಚಿವರಾಗಿದ್ದ ಅವರು ತಮ್ಮ ಉದಾತ್ತ ಹಾಗೂ ಆದರ್ಶವಿಚಾರಗಳಿಂದಾಗಿ ಎಲ್ಲರ ಪ್ರೀತಿ ಪಾತ್ರರಾಗಿದ್ದರು. ಮೂರು ವರ್ಷಗಳ ಕಾಲ ಸಚಿವರಾಗಿದ್ದ ಅವರು "ಪ್ರಶ್ನೆ ಪತ್ರಿಕೆಗಳು ಬಯಲಾದ" ಸಮಸ್ಯೆಯಲ್ಲಿ ಸಿಲುಕಿ, ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದರು. ಅಂದಿನಿಂದ ಕೆಲಕಾಲ ಸಾರ್ವಜನಿಕ ಕಾರ್ಯಗಳಿಂದ ದೂರವಾಗಿದ್ದ ಅವರು, ದೂರ ಎಲ್ಲೊ ಒಂದೆಡೆ ಅನಾಥಾಶ್ರಮ ನಡೆಸುತ್ತಿದ್ದಾರೆ ಎಂದಷ್ಟೇ ಕೇಳಿದ್ದ ಮೇಜರ. ಇಂದು ಒಮ್ಮೆಲೆ ಅವರ ಫೋನು ಬಂದದ್ದರಿಂದಾಗಿ ಅವರು ತಿಳಿಸಿದ ವಿಷಯ ಅರಿತು ಚಿಂತಿತನಾಗಿದ್ದ ದೇಶಕ್ಕೆ ಅಪಾಯ ತರಬಹುದಾದಂಥ ವಿಷಯ ಅವರ ಬಳಿ ಏನಿರಬಹುದು....?

ಸಮಸ್ಯೆ ಜಟಿಲವಾಗುತ್ತ ಹೋಯಿತೇ ವಿನಃ ಬಗೆಹರಿಯಲಿಲ್ಲ. ಮೂವತ್ತೈದು ನಿಮಿಷ ಕಳೆದದ್ದೂ ಗೊತ್ತಾಗಲಿಲ್ಲ. ರಹದಾರಿ ಬಿಟ್ಟು ಅನೇಕೇರಿಗೆ ಹೋಗುವ ತಿರುವಿಗೆ ಗಾಡಿ ತಿರುಗಿಸಿದ. ಅಲ್ಲಿಂದ ಕೇವಲ ಒಂದೂವರೆ ಕಿಲೋ ಮೀಟರ್ ಅಂತರದಲ್ಲಿರುವದೇ ರಂಗಮಹಲ್.

ರಂಗಮಹಲ್....ಅನೇಕೇರಿಯಲ್ಲಿಯ ಒಂದು ಅದ್ಭುತ ಮಹಲ್.

ಸಾಂಬಮೂರ್ತಿಗಳು ಸಚಿವರಾಗಿದ್ದಾಗ್ಗೆ ಅವರೊಂದಿಗೆ ಒಂದು ಬಾರಿ ಬಂದಿದ್ದ ಮೇಜರ. ಅದೂ ಎಂಟು ವರ್ಷಗಳಿಗೂ ಹಿಂದೆ. ಆದಾಗಿ ಎಂಟು ವರ್ಷ ಕಳೆದಿದ್ದರೂ ರಂಗಮಹಲ್ ದೃಶ್ಯ ಅವನ ನೆನಪಲ್ಲಿ ಹಚ್ಚ ಹಸುರಾಗಿತ್ತು. ಓಹ್ ಎಂಥ ಸುಂದರವಾದ ಸ್ಥಳ. ನೆನಪಾಗುವದೇ ತಡ ರಂಗಮಹಲ್ ಅವರ ಕಣ್ಣೆದುರು ಸಜೀವವಾಯಿತು.

ಸುಮಾರು ಇಪ್ಪತ್ತು ಎಕರೆಯಷ್ಟು ವಿಸ್ತೀರ್ಣವಾದ ಫಾರ್ಮಿನಲ್ಲಿ ನಾಲ್ಕು ಎಕರೆಗೂ ಮೀರಿ ಆಕ್ರಮಿಸಿಕೊಂಡಿತ್ತು ರಂಗಮಹಲ್. ರಂಗಮಹಲ್ ಒಂದು ದೃಷ್ಟಿಯಿಂದ ಅರಮನೆಯೇ ಸರಿ. ಆಂಗ್ಲರ ಆಳಿಕೆಯ ಕಾಲದಲ್ಲಿ ಕಟ್ಟಲ್ಪಟ್ಟ ಬೃಹತ್ ಹಾಗೂ ಪುರಾತನವಾದ ಅರಮನೆಯದು. ಆಗಿನ ಕಾಲದಲ್ಲಿ ವಿದ್ಯುತ್ ಇರಲಿಲ್ಲವಾದ ಕಾರಣ ಬೆಳಕು ಬರಲು ದೊಡ್ಡ ದೊಡ್ಡ ಕಿಟಕಿ

ಇಡಿಸಿ ದೀಪ ಉರಿಸಲು ಎತ್ತರವಾದ ಕಂಬಗಳನ್ನು ನಿರ್ಮಿಸಿದ್ದರು. ಒಳಗಡೆ ಮೇಣಬತ್ತಿಯ ದೊಡ್ಡ ದೊಡ್ಡ ಫಾನೂಸ್‌ಗಳು ತೂಗಾಡುತ್ತಿದ್ದವು. ಇತ್ತೀ-ಚೆಗೆ ವಿದ್ಯುತ್ ಸಂಪರ್ಕ ಒದಗಿದ್ದರಿಂದ ಅವೆಲ್ಲ ಇಂದು ಮೂಕವಾಗಿ ನಿಂತಿದ್ದವು. ಅವುಗಳ ಸ್ಥಳದಲ್ಲಿ ಬಣ್ಣ ಬಣ್ಣದ ದೀಪಗಳು ಜಗಮಗಿಸುತ್ತಿದ್ದವು. ಎಷ್ಟೇ ದೀಪ ಉರಿಸಿದರೂ ಭವ್ಯವಾದ ಬಂಗಲೆ ಮಾತ್ರ ಅದರ ಬೆಳಕನ್ನೆಲ್ಲ ಕಬಳಿಸಿ ಮತ್ತೆ ಭೂತ ಬಂಗಲೆಯಂತೆ ಕಾಣಿಸುತ್ತಿತ್ತು. ಆದರೂ ಅದಕ್ಕೊಂದು ಬಗೆಯ ವಿಚಿತ್ರ ಆಕರ್ಷಣೆಯಿತ್ತು. ಸಾಂಬಮೂರ್ತಿಗಳ ಪೂರ್ವಜರು ಅದನ್ನು ಬ್ರಿಟಿಶ್ ಅಧಿಕಾರಿಗಳಿಂದ ಕೊಂಡು ಸುತ್ತಲೂ ಹಣ್ಣಿನ ಗಿಡಗಳನ್ನು ಬೆಳೆಸಿದ್ದರು. ಹೀಗಾಗಿ ಭಯಾನಕತೆ ಕಡಿಮೆಯಾಗಿ ಸ್ವಲ್ಪ ಮನೋಹರವಾಗಿ ಕಾಣುತ್ತಿತ್ತು.

ಹೇಮಂತನ ಕಾರು ಬಂಗಲೆ ಸಮೀಪಿಸಿತು. ಮಹಲ್ ಒಳಗೆ ಹೊರಗೆ, ಎಲ್ಲೂ ಬೆಳಕಿನ ಕಿರಣ ಇಲ್ಲದ್ದನ್ನು ಕಂಡು ಆತ ಚಿಂತಿತನಾದ. ಕೇವಲ ಒಂದು ಗಂಟೆ ಹಿಂದೆ ಸಾಂಬಮೂರ್ತಿಗಳು ರಂಗಮಹಲಿನಿಂದಲೇ ಫೋನು ಮಾಡಿದ್ದರು. ಹೀಗಿದ್ದೂ ಮಹಲು ಗಾಢಾಂಧಕಾರದಲ್ಲಿ ಮುಳುಗುವದೆಂದರೆ....ಅವರು ಫೋನು ಮಾಡಿ ಹೇಳಿದ "ಗಂಡಾಂತರದ" ವಿಷಯಕ್ಕೂ ಇದಕ್ಕೂ ಏನಾದರೂ ಸಾಮ್ಯವಿದೆಯೇ ಎಂದು ಯೋಚಿಸಿ, ಸಾಂಬಮೂರ್ತಿಗಳ ಪ್ರಾಣಕ್ಕೇನಾದರೂ ಅಪಾಯ ಒದಗಿರಬಹುದೇ ಎಂದುಕೊಂಡು ಮರುಕ್ಷಣ, ಛೆ ಛೆ, ಇರಲಿಕ್ಕಿಲ್ಲ; ವಿದ್ಯುತ್ ಕೈ ಕೊಟ್ಟಿರಬಾರದೇಕೆ ಎಂದು ಸಮಾಧಾನಪಟ್ಟುಕೊಂಡ. ಈಗಿನ ದಿನಗಳಲ್ಲಂತೂ ವಿದ್ಯುತ್‌ಲತೆ ಬಗ್ಗೆ ಮಾತನಾಡುವಂತೆಯೇ ಇಲ್ಲ. ಹಗಲಿರಲಿ ರಾತ್ರಿಯಿರಲಿ,ಮಳೆ ಬಿರುಗಾಳಿ ಇರಲಿ, ಇಲ್ಲದಿರಲಿ ಕೈಕೊಟ್ಟು ಪರಾರಿಯಾಗುತ್ತಾಳೆ. ಒಂದೊಂದು ಬಾರಿಯಂತೂ ಕನಸು ಮನಸ್ಸಿನಲ್ಲಿರದಿದ್ದರೂ ಗಾಳಿ.... ಮಳೆ....ಗುಡುಗು ಸಿಡಿಲು ಯಾವದೂ ಇಲ್ಲದೇ ವಾತಾವರಣ ಅತ್ಯುತ್ತಮವಾಗಿರುವಾಗಲೇ ಫಕ್ಕನೇ ವಿದ್ಯುತ್ ಹೊರಟುಹೋಗಿ ಎಲ್ಲೆಡೆ ಕತ್ತಲೆ ಕವಿಯುತ್ತಿದೆ....ಇದರ ಬಗ್ಗೆ ಯಾರೂ ಹೇಳುವಂತಿಲ್ಲ....ಕೇಳುವಂತಿಲ್ಲ....ಹೀಗಾಗಿ ಅವಳದೇ ರಾಜ್ಯ....

ಈಗಲೂ ಅದೇ ರೀತಿ ಆಗಿರಬೇಕು ಎಂದು ಅಂದುಕೊಳ್ಳುತ್ತ, ಮೇಜರ ಕಾರನ್ನು ಬಂಗಲೆಯ ಹೆಬ್ಬಾಗಿಲಿಗೆ ತಂದು ನಿಲ್ಲಿಸಿದ.ಎರಡು ಎತ್ತರದ ಬೃಹತ್ ಗೋಡೆಯ ಅಷ್ಟೇ ಗಾಂಭೀರ್ಯ ನೀಡುವಂಥ ಕಬ್ಬಿಣದ ಗೇಟು....ಅದರ ಹಿಂದೆ ವಿಶಾಲವಾದ ಎತ್ತರವಾಗಿ ಬೆಳೆದು ನಿಂತ ಮರಗಳು. ಕತ್ತಲೆಯಲ್ಲಿ ಆ ವಿಶಾಲವಾದ ಗೋಡೆ ಬೃಹತ್‌ಗಾತ್ರದಲ್ಲಿ ಬೆಳೆದ ಮರಗಳಿಂದಾಗಿ ರಂಗಮಹಲ್

ಹೆದರಿಕೆ ಹುಟ್ಟಿಸುವಂತೆ ತೋರುತ್ತಿತ್ತು.

"ಹೇಮಂತ ಸುತ್ತಲೂ ಕಣ್ಣಾಡಿಸಿದ....ಒಂದು ನರಪಿಳ್ಳೆಯ ಸುಳಿವೂ ಇಲ್ಲ. ಎರಡು ಮೂರು ಬಾರಿ ಕಾರಿನ ಹಾರ್ನು ಮಾಡಿದ ದೂರದಲ್ಲಿ ಯಾರೋ ಕೆಮ್ಮಿದ ಸದ್ದು ಅದರೊಂದಿಗೆ ಮಂದ ಬೆಳಕು ಮೂಡಿತು. ಅದು ಬ್ಯಾಟರಿ ಬೆಳಕು ಕಾವಲುಗಾರನಿರಬೇಕು ಎಂದುಕೊಂಡ ಮನದಲ್ಲಿ. ಆತ ಹತ್ತಿರ ಬಂದು ಬ್ಯಾಟರಿ ಬೆಳಕು ಹೇಮಂತನ ಮುಖದ ಮೇಲೆ ಚೆಲ್ಲಿದ....ಶಿಲ್ಲು ಸುಟ್ಟು ಬ್ಯಾಟರಿ ಮಂದ ಬೆಳಕು ಹರಡಿತು.

"ತಾವು ಮೇಜರ ಸಾಹೇಬರೇ" ಆತ ಕೇಳಿದ.

"ಹೌದು" ಚುಟುಕಾಗಿ ಉತ್ತರಿಸಿದ ಹೇಮಂತ.

"ಬನ್ನಿ ಸಾಹೇಬರು ನಿಮ್ಮ ದಾರಿ ಕಾಯುತ್ತಿದ್ದಾರೆ," ಗೇಟಿನ ಬೀಗ ತೆರೆಯುತ್ತ ಅವನೇ ಹೇಳಿದ...."ಒಮ್ಮೊಂದೊಮ್ಮೆಲೆ ಕರೆಂಟುಹೊರಟುಹೋಗಿದೆ ಬನ್ನಿ...."

ಗೇಟು ತೆರೆದ ಆತ ಮೇಜರನ ಕಾರು ಒಳಗೆ ಬರುತ್ತಲೂ ಪುನಃ ಬೀಗ ಜಡಿದು ತನ್ನ ಕೋಣೆ ಸೇರಿದ. ಪರವಾಗಿಲ್ಲ ಸಾಂಬಮೂರ್ತಿಗಳು ಸತರ್ಕರಾಗಿ ದ್ದಾರೆ ಎಂದುಕೊಳ್ಳುತ್ತ ಮಹಲ್ ಕಡೆ ಕಾರು ನಡೆಸಿದ. ಎಡ ಬಲಕ್ಕೆ ಶ್ರೇಷ್ಠ ದರ್ಜೆಯ ಮಾವಿನ ಮರಗಳ ಸಾಲು. ಮಧ್ಯ ಸುಂದರವಾಗಿ ಸಿದ್ಧಪಡಿಸಿದ ಸಿಮೆಂಟ್ ರೋಡು. ಕಾರು ಓಡಿಸಲು ಪ್ರೀತಿ ಬರುತ್ತಿತ್ತು. ಕಾರು ಮಹಲ್‌ಗೆ ಸಮೀಪ ಬಂದಾಗ ಅಲ್ಲಲ್ಲಿ ಒಂದೆರಡು ಕೋಣೆಗಳಲ್ಲಿ ಲಾಂದ್ರದ ಮಂದ ಬೆಳಕು ಕಾಣಿಸಿಕೊಂಡಿತು. ವೈಭವಶಾಲಿ ಈಜುಗೊಳ್ಳನನ್ನು ಸುತ್ತು ಹೊಡೆದು ಕಾರನ್ನು ತಂದು ಪೋರ್ಟಿಕೋದಲ್ಲಿ ನಿಲ್ಲಿಸಿದ. ಕಾರಿನಿಂದ ಕೆಳಗಿಳಿಯುತ್ತಿ ದ್ದಂತೆ ಎದೆ ಧಸ್ ಎಂದಿತು.ಕೈ ದೀಪ ಹಿಡಿದು ನಿಂತಿರುವ ಭಯಾನಕ ಮನುಷ್ಯ ಕಾರಿನ ದೀಪ ಆರಿದ್ದರಿಂದ ಆತ ಹಿಡಿದ ದೀಪದ ಬೆಳಕು ಕೇವಲ ಅವನ ಮುಖ ಕ್ಕಷ್ಟೇ ಸೀಮಿತವಾಗಿ ಆತ ಇನ್ನಷ್ಟು ಹೆದರಿಕೆ ಹುಟ್ಟಿಸುವಂತೆ ತೋರಿ ಬಂದ. ಬೋಳು ತಲೆ....ದೊಡ್ಡ ಉಬ್ಬಿದ ಹಣೆ, ಕೈ ಉಬ್ಬಿದ ಫ್ಯಾಕ್ಟರಿಯ ಹೊಗೆ ಕೊಳವೆಯಂತಿದ್ದ ಮೂಗು, ಚಿಕ್ಕ ಇಲಿ ಕಣ್ಣುಗಳು ದೊಡ್ಡ ಬಾಯಿ, ಹರಿದ ತುಟಿ, ಆರುಫೂಟು,ಎರಡಿಂಚು ಎತ್ತರವಿರಬಹುದು; ಕಡಿಮೆ ಕಡಿಮೆ ಎಂದರೂ ಇನ್ನೂರೈವತ್ತು ಕೆ.ಜಿ. ತೂಕದ ಆಸಾಮಿ ಆತ ಹುರಿಕಟ್ಟಾದ ಅವನ ದೇಹಕ್ಕೆ ಕಲಂಕ ಪ್ರಾಯವಾದುದೆಂದರೆ ಅವನ ಗುಡಾಣದಂಥ ಹೊಟ್ಟೆಯೊಂದೇ.

"ನಮಸ್ಕಾರ ಮೇಜರ್....ನಾನು ಸಾಹೇಬರ ಬಾಡಿಗಾರ್ಡ್ ಬನ್ನಿ.... ಅವರು ನಿಮ್ಮದೇ ದಾರಿಯನ್ನು ಕಾಯುತ್ತಿದ್ದಾರೆ....ದಯವಿಟ್ಟು ನನ್ನ ಹಿಂದೆ ಬನ್ನಿ...."

ಹತ್ತು ಜನರನ್ನು ಒಂದೇ ಬಾರಿಗೆ ಅಪ್ಪಚಿ ಮಾಡಬಲ್ಲಂಥ ಸಾಮರ್ಥ್ಯದ ಈ ಬಾಡಿಗಾರ್ಡ್‌ನ ಅವಶ್ಯಕತೆ ಏಕೆ ಸಾಂಬಮೂರ್ತಿಗಳಿಗೆ ಬಿತ್ತು ಎಂದು ಯೋಚಿಸುತ್ತ, ಬಹುಶಃ ಸಾಂಬಮೂರ್ತಿಗಳಿಗೆ ಪ್ರಾಣಾಪಾಯದ ಬೆದರಿಕೆ ಬಂದಿರಬೇಕು ಎಂದು ಊಹಿಸಿ ಅವನನ್ನು ಹಿಂಬಾಲಿಸಿದ.

ಬಾಗಿಲು ತೆರೆಯದೇ ಎಷ್ಟು ದಿನಗಳಾಗಿದ್ದವೋ ಏನೋ ಒಂದು ಬಗೆಯ ತಂಪು ಹಾಗೂ ಮುಗ್ಗಲು ವಾಸನೆ....ಲಾಂದ್ರಗಳ ಬೆಳಕಲ್ಲಿ ಕಂಡಷ್ಟು ಜಾಗೆಯಲ್ಲೆಲ್ಲ ಜೇಡಗ ಬಲೆ. ಹಲ್ಲಿಗಳ ಸಾಮ್ರಾಜ್ಯ. ಕಣ್ಣುಕಪ್ಪಡಿಗಳ ಹಾವಳಿ. ಇವರ ಹೆಜ್ಜೆಯ ಸಪ್ಪಳಕ್ಕಂತೂ ಅಲ್ಲಿದ್ದ ಇಲಿ ಹೆಗ್ಗಣಗಳು ಹೆದರಿ ಬುದು ಬುದು ಓಡಿದವು. ಇಂಥ ಅಸಹ್ಯಕರ ವಾತಾವರಣದಲ್ಲಿ ಸಾಂಬಮೂರ್ತಿಗಳು ಭೂಗತರಾಗಿ ಅಡಗಿ ಕುಳಿತಿದ್ದಾರೆಂದರೆ ಖಂಡಿತ ವಿಷಯ ತಾನು ತಿಳಿದಿರುವದಕ್ಕಿಂತ ಹೆಚ್ಚು ಗಂಭೀರವಾಗಿದೆಯೆಂದುಕೊಂಡ.

ಅದೇ ಆಗ ಗುಡಿಸಿ ಸ್ವಚ್ಛ ಮಾಡಿದ ಆಫೀಸಿನಂತೆ ಸ್ವಲ್ಪ ಮಟ್ಟಿಗೆ ಕಾಣುವ ಹಾಲಿಗೆ ಕರೆತಂದು ಕುರ್ಚಿ ಮೇಲೆ ಕುಳ್ಳಿರಿಸಿದ ಆ ದೈತ್ಯ ಮಾನವ ಹೇಳಿದ: "ದಯವಿಟ್ಟು ಕುಳಿತ್ಕೊಳ್ಳಿಸರ್," ನಾನು ಸಾಹೇಬರಿಗೆ ತಾವು ಬಂದ ವಿಷಯವನ್ನು ತಿಳಿಸಿ ಬರುತ್ತೇನೆ."

ಒಂದು ಹಳೆಯ ಮುರುಕಲು ಕುರ್ಚಿ ಮೇಲೆ ಕುಳಿತಕೊಂಡ ಹೇಮಂತ ಒಮ್ಮೆಲೆ ಬದಲಾದ ಅಪಾಯಕಾರಿ ವಾತಾವರಣದ ಬಗ್ಗೆ ಗಂಭೀರವಾಗಿ ಯೋಚಿಸತೊಡಗಿದ....ಮತ್ತಷ್ಟು ಸತರ್ಕನಾದ.

ಎರಡೇ ನಿಮಿಷಗಳಲ್ಲಿ ಆ ದೈತ್ಯ ಮರಳಿ ಬಂದ ಕಾಫಿ ಬಟ್ಟಲಿನೊಂದಿಗೆ. "ಸಾಹೇಬರು ಬಟ್ಟೆತೊಡುತ್ತಿದ್ದಾರೆ ತಾವು ಕಾಫಿ ಸೇವಿಸಿರಿ."

ಅವನಿಗೂ ಕಾಫಿಯ ಅವಶ್ಯಕತೆ ಎನಿಸಿತ್ತಾದ್ದರಿಂದ ಸಂತೋಷಪಡದೇ ಕಾಫಿ ಬಟ್ಟಲು ಕೈಗೆ ತೆಗೆದುಕೊಂಡು ಕಪ್ಪಿಗೆ ತುಟಿ ಆನಿಸಿದ. ಘಮ್ ಎಂದು ಬಂದಿತು ಸುವಾಸನೆ ಹೇಮಂತ ತುಟಿಯಂಚಿನಲ್ಲೇ ನಕ್ಕ. ಎಂಟು ವರ್ಷಗಳ ಹಿಂದೆಯೂ ಸಾಂಬಮೂರ್ತಿಗಳು ನೀಡಿದ ಕಾಫಿಗೆ ಇದೇ ಸುವಾಸನೆ ಇತ್ತು. ಈ ಬಗೆಯ ಘಮಘಮ ಸುವಾಸನೆ ಬಗ್ಗೆ ವಿಚಾರಿಸಿದಾಗ ನಕ್ಕು ನುಡಿದಿದ್ದರು ಅವರು: "ಮೇಜರ....ಸುಂದರವಾದ ಸ್ತ್ರೀಗೂ, ಅತ್ಯುತ್ತಮವಾದ ಕಾಫಿಗೂ ಇಂಥ ಸುಗಂಧವಿರದಿದ್ದರೆ ಪ್ರಯೋಜನವೇನು?"

ಕಾಫಿ ಕುಡಿದು ಕಪ್ಪು ಕೆಳಗಿಡುತ್ತಿದ್ದಂತೆ ಮೈಜುಂ ಎಂದಿತು. ನಾಲಿಗೆಯನ್ನು ಬಾಯಿ ಒಳಗೆ ಹಾಗೂ ತುಟಿಗಳ ಮೇಲೆ ಆಡಿಸಿದ. ಏನೋ ಒಂದು ಬಗೆಯ ಒಗರು. ಜಿಗುಟು ಜಿಗುಟು. ಕಾಫಿಯಲ್ಲಿ ಬೇರೆ ಏನನ್ನೋ ಬೆರಸ

ಲಾಗಿತ್ತು. ಅದನ್ನು ಮರೆಸಲೆಂದು ಆ ಸುಗಂಧದ ವಾಸನೆ ಓಹ್ ಹಾಗಾದರೆ ಆ ಸುಗಂಧದ ವಾಸನೆಗೆ ತಾನು ಮೋಸ ಹೋದ ಹಾಗಾಯ್ತು ಎಂದುಕೊಂಡು ವೈರಿ ಮೈಮೇಲೆ ಎರಗುವ ಮುನ್ನ ಇಲ್ಲಿಂದ ಕಾಲ್ತೆಗೆಯಬೇಕೆಂದು ನಿರ್ಧರಿಸಿ ಮೇಲೆದ್ದ.

ತಲೆ....ಮೈ ಕೈ ಎಲ್ಲಾ ಭಾರ ಕಣ್ಣು ಮಂಜಾಗತೊಡಗಿದವು. ಕಾಲು ಗಳಿಗೆ ಭಾರವಾದ ಗುಂಡು ತೊಡಿಸಿದಂತೆ ಕಿತ್ತಿಡಲು ಆಗದಂತಾಯ್ತು.... ಉಸಿರು ಬಿಗಿಯುತ್ತಿದ್ದಂತೆ ತಲೆ ಸಿಡಿದು ಹೋಗುವ ಹಾಗೆ ನೋವಿನ ಅಲೆ ಎದ್ದಿತು. "ಹಾ....ಅಯ್ಯೋ" ಎಂದು ನರಳುತ್ತ ಮೇಜರ್‌ಹೇಮಂತ ನೆಲಕಚ್ಚು ತ್ತಿದ್ದಂತೆ ಎದುರಿಗೆ ಕಂಡುಬಂದಿತು: ನಗುನಗುತ್ತಾ ನಿಂತ ಆ ದೈತ್ಯ ಮಾನವನ ಮುಖ... ಗುಡಾಣದಂಥ ಹೊಟ್ಟೆ.

*　*　*　*

ಎಷ್ಟು ಹೊತ್ತಿನವರೆಗೆ ಹೇಮಂತ ಮೂರ್ಛಾವಸ್ಥೆಯಲ್ಲಿದ್ದನೋ ತಿಳಿ ಯದು. ಎಚ್ಚರಬಂದಾಗ ಮಾತ್ರ ಆತ ವಿಚಿತ್ರಾವಸ್ಥೆಯಲ್ಲಿದ್ದ. ಅಡ್ಡಾದಿಡ್ಡಿ ಯಾಗಿ ಬಿದ್ದುಕೊಂಡಿದ್ದವು. ಏಳಲು ಪ್ರಯತ್ನಿಸಿದ. ಸಾಧ್ಯವಾಗಲಿಲ್ಲ.ಮೇಲೇ ಳಲು ಯತ್ನಿಸಿದಷ್ಟೂ ಯಾವುದೋ ಒಂದು ಶಕ್ತಿ ಅವನನ್ನು ಕೆಳಕ್ಕೆ ಜಗ್ಗು ತ್ತಿತ್ತು. ಅವನ ಕೈಕಾಲು, ದೇಹ ಎಲ್ಲಾ ಗಟ್ಟಿಯಾಗಿ ವಿಚಿತ್ರ ವಸ್ತುವಿ ನೊಂದಿಗೆ ಅಂಟಿಕೊಂಡಿದ್ದನು. ಇಲ್ಯಾಸ್ಟಿಕ್‌ನಂತೆ ಕೈ ಮೇಲೆತ್ತಿದ....ಮೇಲೆದ್ದ ಕೈ ಸರಕ್‌ನೇ ಎಳೆದುಕೊಂಡು ಚಪಕ್ ಎಂದು ಪುನಃ ಮೊದಲಿನ ಸ್ಥಿತಿಗೆ ಅಂಟಿಕೊಂಡಿತು. ಕಾಲು ಎತ್ತಿದ.....ಜಿಡ್ಡಿನಂಥ ವಸ್ತುವಿನೊಂದಿಗೆ ಮೇಲಕ್ಕೆ ಬಂದ ಕಾಲು ಮತ್ತೆ ಒಮ್ಮೆಲೆ ಕೆಳಕ್ಕೆ ಜಗ್ಗಲ್ಪಟ್ಟಿತು....ಅಂಟು ಅಂಟಾದ ವಸ್ತುವಿನೊಂದಿಗೆ ಆತ ಬಲವಾಗಿ ಅಂಟಿಕೊಂಡು ಬಿಡಿಸಿಕೊಳ್ಳಲಾಗದೇ ಒದ್ದಾಡತೊಡಗಿದ. ಯಾವ ವಸ್ತುವದು? ಜಿಗುಟಾದ ದ್ರವ. ಅದಕ್ಕೆ ದ್ರವ ಎನ್ನಲೂ ಸಾಧ್ಯವಿಲ್ಲ. ಚಪಾತಿ ಮಾಡಲು ಕಲಿಸಿದ ನೀರು ನೀರಾದ ಜಿಗುಟಾದ ಕಣಕದಂಥ ವಸ್ತುವದು....ಇದರಿಂದ ಪಾರಾಗಬೇಕಾದರೆ ತಾನೇನು ತುಂಬಾ ಪರಿಶ್ರಮಪಡಬೇಕಾಗುತ್ತದೆ ಎಂದಾತ ನಿರ್ಧರಿಸಿ ಪುನಃ ಪ್ರಯತ್ನಕ್ಕೆ ಮುಂದಾದ. ಒಂದು ಕೈ ಬಿಡಿಸಿಕೊಳ್ಳಲು ಇನ್ನೊಂದು ಕೈ ಉಪಯೋಗಿಸು ತ್ತಿದ್ದ. ಒಂದು ಕೈ ಸ್ವತಂತ್ರವಾದರೂ ಇನ್ನೊಂದು ಕೈ ಸಿಲುಕಿಕೊಳ್ಳುತ್ತಿತ್ತು. ಕಷ್ಟಪಟ್ಟು ಎರಡೂ ಕೈಬಿಡಿಸಿಕೊಂಡಾಗ ಎರಡೂ ಕಾಲು ಸಿಕ್ಕಿ ಹಾಕಿಕೊಳ್ಳು ತ್ತಿದ್ದವು. ಶರೀರದ ಎಲ್ಲಾ ಬಲಪ್ರಯೋಗ ಮಾಡಿ ಒಂದು ಕಾಲನ್ನು ಮೇಲ- ಕ್ಕೆತ್ತಿದಾಗ ಒಂದೇ ಕಾಲಿನ ಮೇಲೆ ನಿಲ್ಲಲಾಗದೇ, ಆಯ ತಪ್ಪಿ ಪುನಃ ಆ

ಜಿಗುಟಾದ ವಸ್ತುವಿನಲ್ಲಿ ಬಿದ್ದು ಪುನ್ಹ ಅದರೊಂದಿಗೆ ಒಂದಾಗಿಬಿಡುತ್ತಿದ್ದ.... ಬಟ್ಟೆ ಎಲ್ಲಾ ಆ ವಸ್ತುವಿಗೆ ಅಂಟಿ ಅಲ್ಲಲ್ಲಿ ಚರ್‍ರಪರ್‍ರ ಎಂದು ಹರಿಯತೊಡ ಗಿತು....ವಿಚಿತ್ರ ಘಾಟು ವಾಸನೆ; ಜಲಿಸುವ ವಾಸನೆ ಏನದು? ಇದೇ ರೀತಿ ಹತ್ತಾರು ಬಾರಿ ಪ್ರಯತ್ನಿಸಿ ಫಲ ಸಿಗದೇ ದಪ್ ಎಂದು ಆ ಜಿಡ್ಡು ಜಿಡ್ಡಾದ ವಸ್ತುವಿಗೆ ಅಂಟಿಕೊಂಡೇ ಏದುಸಿರುಬಿಡತೊಡಗಿದ. "ವೆಲ್‌ಡನ್ ಮೇಜರ್! ನಿಮ್ಮ ಪ್ರಯತ್ನ ಶ್ಲಾಘನೀಯ....ಟ್ರ್ಯಾಯ್ ಅಗೇನ್...."

ಕುಹಕ ತುಂಬಿದ ಧ್ವನಿ ಬಂದತ್ತ ಆತ ನೋಡಿದ. ಲೈಟರಿನಿಂದ ಸಿಗರೇಟು ಉರಿಸುತ್ತ ನಿಂತಿದ್ದ ಬೋಳುತಲೆಯ ಮನುಷ್ಯ. ಮಧ್ಯ ಇರುವದು ಒಂದು ಬಾಗಿಲು....ಮುಕ್ಕಾಲು ಭಾಗಕ್ಕಿಂತ ಹೆಚ್ಚು ಗಾಜಿನಲ್ಲಿ ತಯಾರಿಸಿದ ಬಾಗಿಲಾಚೆ ನಿಂತಿದ್ದ. ಆತ ಒಂದು ಬಾರಿ ಸಿಗರೇಟು ಹೊಗೆ ಬಿಟ್ಟು ಘುಸು ಘುಸು ನಕ್ಕಾಗ ಅವನ ಗುಡಾಣದಂಥ ಹೊಟ್ಟೆ ಕುಲು ಕುಲುಕುಲುಕಾಡಿತು. "ನೀವು ಮಹಾ ಪ್ರಯತ್ನವಾದಿಗಳು ಅಂತ ಕೇಳಿದ್ದೇನೆ....ದಯವಿಟ್ಟು ನಿಮ್ಮ ಯತ್ನವನ್ನು ಮುಂದುವರಿಸಿ............ಖಂಡಿತವಾಗಿ ಜಯ ನಿಮಗೇ ಸಿಗು ತ್ತದೆ." "ನೀನು ನೀನು" ಕೋಪದಿಂದ ಮುಂದಿನ ಮಾತು ಹೊರಡಲಿಲ್ಲ ಮೇಜರನಿಂದ.

"ಹೌದು....ನಾನೇ...." ಮಹಾಪ್ರಚಂಡ....ಪುಂಡರ ಗಂಡ....ಅರಿಹಂತ ಶತ್ರುಗಳಿಗೆ ಸಿಂಹಸ್ವಪ್ನ ಮುಂತಾದ ಬಿರುದು ಬಾವಲಿ ಪಡೆದ ನಿಮ್ಮನ್ನು ಚಿಟಿಕೆ ಹೊಡೆಯುವದರಲ್ಲಿ ಬಂಧಿ ಮಾಡಿದವ....!

"ಬಾಯಿಮುಚ್ಚು.........ಸಾಂಬಮೂರ್ತಿ ಎಲ್ಲಿದ್ದಾರೆ ಎಂಬುದನ್ನು ಮೊದಲು ಬೊಗಳು."

"ಅಬ್ಬಾ....ಸಾವಿಗೆದುರಾಗಿ ನಿಂತಿದ್ದರೂ ನಿನ್ನ ಪೊಗರು ಇನ್ನೂ ಕಡಿಮೆಯಾಗಲಿಲ್ಲವಲ್ಲ."

"ಸಾವಿಗೆ ಹೆದರಿ ಸೆರಗೊಡ್ಡಿ ಬೇಡಿಕೊಳ್ಳುವ ಹೇಡಿ ನಾನಲ್ಲ. ನಿನ್ನಂಥ ವರನ್ನು ಸಾವಿಗೆ ಆಹಾರವಾಗಿ ನೀಡುವ ಎಂಟೆದೆಯ ಬಂಟ ನಾನು."

"ನೋಡೋಣ....ಯಾರು ಯಾರಿಂದ ಸಾವಿಗೆ ಆಹಾರವಾಗುತ್ತಾರೋ ಅಂತ. ಹಾಂ....ಒಂದು ಮಾತು ಮೇಜರ್. ಯಾರು ನಿನ್ನ ಸಹಾಯಕ್ಕೆ ಬರುತ್ತಾರೆಂದು ನೀನು ನಿರೀಕ್ಷಿಸಿರುವೆಯೋ ಅವರೂ ಸಹ ನಿನ್ನ ಹಾಗೆ ನನ್ನ ಬಲೆಯಲ್ಲಿ ಸಿಲುಕಿದ್ದಾರೆ...."

"ಅಂದರೆ....ಅಂದರೆ....ನಾನು ಸಹಾಯ ನಿರೀಕ್ಷಿಸುತ್ತಿದ್ದೇನೆಯೇ?"

"ಹೌದು ಮತ್ತೆ....ಸ್ಸಾವಿನ ನಿರೀಕ್ಷೆಯಲ್ಲಿರುವ ನೀನಂತೂ ಪಾರಾಗುವ ಸ್ಥಿತಿಯಲ್ಲಿಲ್ಲ. ನಿನ್ನನ್ನುಳಿಸಲು ಬರಬೇಕಾದವರು ನಿನ್ನ ಸಹಾಯಕರಾದ ಸುಷಮಾ ಮತ್ತು ಅಶೋಕ...."

"ನಾನು ಯಾರನ್ನೂ ನಿರೀಕ್ಷಿಸುವದಿಲ್ಲ...."

"ಅದು ಒಳ್ಳೆಯ ಮಾತುನಿರೀಕ್ಷೆ ಮಾಡಿದರೂ ಉಪಯೋಗವಿಲ್ಲ. ಯಾಕೆಂದರೆ ಅವರಿಬ್ಬರೂ...."

ಮಾತು ಅರ್ಧಕ್ಕೆ ನಿಲ್ಲಿಸಿದ ಆತ ಜೋರಾಗಿ ಅಟ್ಟಹಾಸ ಮಾಡಿ ನಕ್ಕಾಗ ಹೇಮಂತನಿಗೆ ಅವರ ಪರಿಸ್ಥಿತಿಯು ಏನಾಗಿದೆಯೋ ಅಂತ ಭಯ ವಾಯಿತುಧೈರ್ಯ ತಂದುಕೊಂಡ ಆತ, "ಬಡಾಯಿಕೊಚ್ಚಬೇಡ....ಅವರನ್ನು ಮುಟ್ಟಲೂ ಸಹ ನಿನ್ನಿಂದ ಸಾಧ್ಯವಿಲ್ಲ."

"ಏಕೆ ಸಾಧ್ಯವಿಲ್ಲ....? ಅವರಿಬ್ಬರೂ ಕೂಡಿ ಶರವೇಗದ ಸರದಾರ ಚಿತ್ರ ನೋಡಲು ಹೋಗಿದ್ದು ನನಗೆ ತಿಳಿದಿಲ್ಲವೆಂದುಕೊಂಡೆಯಾ? ಅಲ್ಲಿಂದಲೇ ನಾನವರಿಗೆ ಮೃತ್ಯುವನ್ನು ಹುಡುಕಿಕೊಂಡು ಹೋಗುವಂತೆ ಮಾಡಿದ್ದೇನೆ... ಈಗಾಗಲೇ ಅವರೂ ನಿನ್ನಂತೆ ಒದ್ದಾಡುತ್ತಿರಬೇಕು."

ಹೇಮಂತ ಮನದಲ್ಲೇ ಖಿನ್ನನಾದ. ಬೋಳುತಲೆಯಾತ ಹಿಗ್ಗಿಹೋದ. "ನಿನಗೆದುರಾಗಿ ಬಂದವರೆಲ್ಲ ಹೇಡಿಗಳು ಮೇಜರ್....ಅದಕ್ಕೇ ಅವರೆಲ್ಲ ಹಾದಿ ಹೆಣವಾದರು....ನಾನು ಹಾಗಲ್ಲ....ನಿನಗೆ ಸರಿಯಾದ ಜೋಡಿ....ಅದಿರಲಿ ನಿನಗಾಗಿ ನೇಯ್ದ ಹಾಸಿಗೆ ಹೇಗಿದೆ?"

"ಹಾಸಿಗೆ....? ಎಲ್ಲಿದೆ ಹಾಸಿಗೆ?"

"ನೀವು ಯಾವದರಲ್ಲಿ ಸಿಕ್ಕು ಹೊರಗೆ ಬರಲು ಒದ್ದಾಡುತ್ತಿದ್ದೀರೋ ಅದು ಹಾಸಿಗೆಯಲ್ಲವೇ?"

ಹೇಮಂತ ಸುತ್ತಲೂ ಕಣ್ಣಾಡಿಸಿದ....ಸುತ್ತಲೂ ಕತ್ತಲು....ಹೊರಗಿನ ಹಾಲ್‌ನಲ್ಲಿ ಮಾತ್ರ ಉರಿಯುತ್ತಿದ್ದ. ಸಣ್ಣ ದೀಪ....ದೀಪ ಹೌದೋ ಅಲ್ಲವೋ ಅದರ ಮಂದ ಬೆಳಕು ಗಾಜಿನ ಮೂಲಕ ಮಸುಕು ಮಸಕಾಗಿ ಹರಡಿತ್ತು ಅದರಲ್ಲೇ ನೋಡುವ ಪ್ರಯತ್ನ ಮಾಡಿದ. ಅದು ಏನಿರಬಹುದೆಂದು ಊಹಿ ಸಲು ಆಗಲಿಲ್ಲ....ಮಿದುವಾದ ಜಿಡ್ಡುಜಿಡ್ಡಾದ ಪದಾರ್ಥ.

"ಹೆಚ್ಚಿಗೆ ತಲೆಕೆಡಿಸಿಕೊಳ್ಳಬೇಡಿ ಮೇಜರ್....ಪಾಪ! ಈಗಾಗಲೇ ನೀವು ಸಾಕಷ್ಟು ಜರ್ಜರಿತರಾಗಿದ್ದೀರಿ....ಮತ್ತೇಕೆ ಕೊಂದರೆ....ನಾನೇ ಹೇಳುತ್ತೇನೆ ಕೇಳಿ, ಭಯ ಪಡಬೇಡಿ. ಪೆಟ್ರೋಲ ಹಾಗು ಸ್ಪಿರಿಟನಲ್ಲಿ ರಬ್ಬರ ಪೌಡರನ್ನು ಬೆರೆಸಿ ಮಿದುವಾಗಿ ನಾದಿ ಈ ಮಿಶ್ರಣ ತಯಾರಿಸಲಾಗಿದೆ. ಪಾಪ....ನಮ್ಮ ನಾಲ್ಕು ಮಂದಿ ಕೆಲಸಗಾರರು ಹಗಲು ರಾತ್ರಿ ಅಂತ ಮೂರು ದಿನ ಪರಿಶ್ರಮಿಸಿ

ಡ್ಡಾರೆ.... ಈ ಸುಖಕರವಾದ ಮೃತ್ಯುಶಯ್ಯೆ ತಯಾರಿಸಲು. ಒಂದು ದೃಷ್ಟಿಯಿಂದ ನೀವು ತುಂಬಾ ಅದೃಷ್ಟವಂತರು. ಇಷ್ಟು ಹಾಯಾದ ಮಲ್ಲಿಗೆಗಿಂತ ಮೃದುವಾದ ಹಾಸಿಗೆ ಮೇಲೆ ಒರಗಿ ಸುಖಕರ ಮರಣವನ್ನು ಪಡೆಯುತ್ತೀರಿ. ಅದಕ್ಕಾಗಿಯಾದರೂ ನಮ್ಮ ಕೆಲಸಗಾರರಿಗೆ ನೀವು ಕೃತಜ್ಞತೆ ಸಲ್ಲಿಸಲೇಬೇಕು ಅಲ್ಲವೇ....?

ಬೆನ್ನುಹುರಿಯಲ್ಲಿ ನಿಧಾನವಾಗಿ ನಡುಕವುಂಟಾದರೂ ಅದನ್ನು ತೋರ್ಪಡಿಸಲಿಲ್ಲ ಹೇಮಂತ. "ಬಡಾಯಿ ಕೊಚ್ಚುವದನ್ನು ನಿಲ್ಲಿಸುಮೂರ್ಖಾ. ನಾನಾರು ಎಂಬುದನ್ನು ಮರೆತು ಈ ರೀತಿ ಮಾತನಾಡುತ್ತಿರುವೆ. ಸ್ವಲ್ಪ ಪ್ರಜ್ಞೆ ಇಟ್ಟುಕೊಂಡು ಮಾತನಾಡು, ಹುಷಾರ್."

ಗುಡಾಣದಂಥ ಹೊಟ್ಟೆಯ ಯಜಮಾನ ಮೆಲುವಾಗಿ ನಕ್ಕು ನುಡಿದ. "ಮೇಜರ್ ಹೇಮಂತ... ನನ್ನನ್ನು ಸಿಟ್ಟಿಗೆಬ್ಬಿಸಲು ಹುಚ್ಚು ಸಾಹಸ ಮಾಡಬೇಡ. ನನಗೆ ನಿನ್ನ ತಂತ್ರದ ಅರಿವಿದೆ. ನನ್ನನ್ನು ಸಿಟ್ಟಿಗೆಬ್ಬಿಸಿ ಸಿಟ್ಟಿನ ಭರದಲ್ಲಿ ನಾನು ತಪ್ಪು ಹೆಜ್ಜೆ ಇಡುವಂತೆ ನನ್ನನ್ನು ಪ್ರೇರೇಪಿಸುತ್ತಿ ಎಂಬುದು ನನಗೆ ಚೆನ್ನಾಗಿ ಗೊತ್ತು. ಹೀಗಾಗಿ ನಾನು ಸಿಟ್ಟಿಗೇಳಲಾರೆ. ಸದಾ ಶಾಂತವಾಗೇ ಇದ್ದು ನಿನ್ನೊಂದಿಗೆ ಸಮಾಧಾನದಿಂದ ವರ್ತಿಸುವೆ."

"ನಿನಗೆ ನನ್ನ ಒಂದೇ ಹೆಸರು ತಿಳಿದಂತೆ ಕಾಣಿಸುತ್ತದೆ. ನನ್ನ ಇನ್ನೊಂದು ಹೆಸರು ನೀನು ಕೇಳಿದ್ದರೆ ನನ್ನ ಹತ್ತಿರ ಸುಳಿಯಲೂ ನೀನು ಯೋಚಿಸುತ್ತಿರಲಿಲ್ಲ."

"ಬಡಾಯಿಕೊಚ್ಚಿಕೊಳ್ಳುವ ಸರದಿ ಈಗ ನಿನ್ನದೆಂದು ಕಾಣಿಸುತ್ತಿದೆ."

"ನನ್ನದು ಬಡಾಯಿ ಅಲ್ಲ....ಎಂಥ ಪ್ರಸಂಗದಲ್ಲೂ ಎಸಿದ್ದರೂ ಸಾಧಿಸಿ ತೋರಿಸುವ ಛಲ ನನ್ನದು. ನಿನ್ನಂಥ ಹತ್ತು ಜನರು ಬಂದರೂ ನನ್ನ ಕೂದಲನ್ನು ಕೊಂಕಿಸಲಾರರು....ನನ್ನ ಹೆಸರು ಕೇಳಿದರೆ ಸಾವು, ಕಾಲ ಮೃತ್ಯು ಸಹ ಸಾವಿರ ಹೆಜ್ಜೆ ಹಿಂದೆ ಸರಿಯುತ್ತದೆ. ಇನ್ನು ನಿನ್ನ ಪಾಡೇನು? ಮುಠ್ಠಾಳಾ .. ನಾನು ಸದಾ ಕಾಲ ಮೃತ್ಯುಂಜಯ....ಮೃತ್ಯುವನ್ನು ಜಯಿಸಿದವ ತಿಳಿಯಿತೇ...."

"ಓಹೋ ಹೀಗೋ....ನೀನು ಮೃತ್ಯುಂಜಯನೋ....? ಸಾವನ್ನು ಗೆದ್ದವನೋ? ಗೆದೆ....ಗೆದೆ...." ಅಪಹಾಸ್ಯ ಮಾಡಿ ನಕ್ಕ ಆ ಬೋಳು ತಲೆಯ ದೈತ್ಯ. ಕಟುಕವಾಗಿ ನುಡಿದ: "ಮೇಜರ್, ಸಾವಿನೊಂದಿಗೆ ಸೆಣಸಿ ಜಯಿಸಲು ನಿನಗೆ ಹದಿನೈದು ನಿಮಿಷಗಳ ಕಾಲಾವಕಾಶ ನೀಡುತ್ತಿದ್ದೇನೆ....ಅಷ್ಟರಲ್ಲಿ ನಿನ್ನ ಪ್ರತಾಪ ಎಷ್ಟಿದೆಯೋ ತೋರಿಸು. ನಿನ್ನ ರೇಶಿಮೆಯ ಶಯ್ಯೆ ಕೆಳಗೆ ವಿದ್ಯುತ್

ಲತೆಯ ಬಳ್ಳಿ ಹರಡಿಸಿದ್ದೇನೆ. ಹದಿನೈದು ನಿಮಿಷ ಕಳೆದು ಹದಿನಾರನೇ ನಿಮಿಷಕ್ಕೆ ಸರಿಯಾಗಿ ಅದರಲ್ಲಿ ವಿದ್ಯುತ್ ಪ್ರವಾಹ ಹರಿಯತೊಡಗುತ್ತದೆ.... ಮುಂದೇನಾಗಬಹುದೆಂಬುದನ್ನು ನೀನು ಕಲ್ಪಿಸಿಕೋ. ಪೆಟ್ರೋಲು ಮತ್ತು ಸ್ಪಿರಿಟನ್ನು ಅಷ್ಟು ಮಿದುವಾಗಿ ರಬ್ಬರ ಪುಡಿನಾದಿ ಸಿದ್ಧಪಡಿಸಿದ ರೇಶಿಮೆಯ ಶಯ್ಯೆಗೆ ಬೆಂಕಿ ತಗಲುತ್ತದೆ. ಕಣ್ಣವೆ ಬಡಿಯುವಷ್ಟರಲ್ಲಿ 'ಭಗ' ಎಂದ ಅಗ್ನಿಗೆ ನೀನು ಆಹುತಿಯಾಗುತ್ತೀಯಾ....ಕರ್ಪುರದಂತೆ ಉರಿವ ನಿನ್ನ ಅಂತ್ಯ ಸಂಸ್ಕಾರಕ್ಕೆ ಎಲುಬುಗಳು ಸಹ ಉಳಿಯಲಾರವು...."

"ಈ ರೇಶಿಮೆಯ ಹಾಸಿಗೆ, ನನ್ನನ್ನು ಕರ್ಪುರದಂತ ಸುಡುವ ಮಾತು ಕನಸಾದೀತು....ನನ್ನ ಒಂದು ಮಾತನ್ನು ಮಾತ್ರ ನೀನು ಸರಿಯಾಗಿ ನೆನ–ಪಿಟ್ಟುಕೋ....ನಾ ಮಾತ್ರ ನಿನ್ನನ್ನು ಸುಟ್ಟು ಹಾಕುವುದು ಸತ್ಯ....ಶಕ್ತಿ ಬಿದ್ದರೆ ಉಳಿದುಕೊ...."

"ಮೆಚ್ಚಿದೆ ಹೇಮಂತ....ನಿನ್ನ ಗಂಡೆದೆ ಮೆಚ್ಚಿದೆ....ಸಾವಿನ ಮುಂದೆ ನಿಂತಿದ್ದರೂ ನೀನು ಇನ್ನೂ ವಿಚಲಿತನಾಗಿಲ್ಲ. ಸೋಲು ಒಪ್ಪಿಕೊಳ್ಳುತ್ತಿಲ್ಲ. ಅದಕ್ಕೇನು ಮಾಡುವದು. ಒಂದು ದೃಷ್ಟಿಯಿಂದ ನಿನ್ನ ಕೆಚ್ಚೆದೆಯೇ ಹುಚ್ಚಿನ ಪರಮಾವಧಿ ಅನಿಸುತ್ತವೆ... ಸರಿ ವ್ಯರ್ಥ ಮಾತೇಕೆ....? ನಿಜ ಏನೆಂಬುದು ಹದಿನೈದು ನಿಮಿಷಗಳಲ್ಲಿ ನಿರ್ಧಾರವಾಗುವದು ಬೈ....ಬೈ...."

ಮಧ್ಯದಲ್ಲಿದ್ದ ಗಾಜಿನ ಬಾಗಿಲನ್ನು ಸರಿಯಾಗಿ ಮುಚ್ಚಿ, ಕೊಂಡಿ ಹಾಕಿ ಆತ ಅಲ್ಲಿಂದ ಹೊರಟುಹೋದ.

ಅಸಹನೀಯ ಮೌನ....ಮೃತ್ಯುವಿನ ಛಾಯೆಯೊಂದಿಗೆ ವ್ಯಾಪಿಸಿತು.

ಐದು ನಿಮಿಷಗಳ ಕಾಲ ಹೇಮಂತ ಏನೂ ಯೋಚಿಸಲೇ ಇಲ್ಲ. ಶರೀರದ ಸಮಸ್ತ ನರಗಳನ್ನು ಸಡಿಲು ಬಿಟ್ಟು ಎಲ್ಲ ಶಕ್ತಿಯನ್ನು ಮೆದುಳಿನಲ್ಲಿ ಕೇಂದ್ರೀಕರಿಸಿ, ಹಾಯಾಗಿ ಒರಗಿಬಿಟ್ಟ....ಕಣ್ಮುಚ್ಚಿ.

'ಟಿಕ್' ಎಂದು ಆರನೆಯ ನಿಮಿಷ ಕಾಲಿಡುವದಕ್ಕೂ ಪಳಕ್‌ನೆ ಆತ ಕಣ್ತೆರೆದ. ಈಗಾತ ಸಂಘರ್ಷಕ್ಕೆ ಸಿದ್ಧನಾಗಿದ್ದ...ಅವನ ದೇಹದಲ್ಲಿ ನವಶಕ್ತಿಯ ಸಂಚಾರವಾಗಿತ್ತು...ನರನಾಡಿಗಳಲ್ಲಿ ಹೊಸ ಹುರುಪು....ಉತ್ಸಾಹ ಉಕ್ಕಿ ಹರಿಯತೊಡಗಿತ್ತು.

ಹೊರಗಡೆ ಇದ್ದ ದೀಪದ ಮಂದ ಬೆಳಕು ಗಾಜಿನಿಂದ ಹಾಯ್ದು ಸುತ್ತಲೂ ಕ್ಷೀಣವಾಗಿ ಹರಡಿತ್ತು. ಹೇಮಂತನ ಹದ್ದಿನ ಕಣ್ಣುಗಳಲ್ಲಿ ಸುತ್ತಲೂ ತಿರುಗಿ ಸರ್ವೆ ಮಾಡತೊಡಗಿದವು. ಮೊತ್ತಮೊದಲು ಕಣ್ಣಿಗೆ ಬಿದ್ದದ್ದು ಮೇಲೆ ಸೂರಿಗೆ ನೇತು ಬಿದ್ದ. ತಿರುಗದೇ ಇರುವ ಫ್ಯಾನು. ಅದನ್ನೇ ಕ್ಷಣಕಾಲ ದಿಟ್ಟಿಸಿ

ದಾಗ ಆ ಫ್ಯಾನೇ ಬದುಕಲು ಆಸರೆಯಾಗಬಹುದೆಂದಾತ ನಿರ್ಧರಿಸಿದ. ಎರಡು ಮೂರು ಬಾರಿ ಆ ಫ್ಯಾನಿಗೂ ಗಾಜಿನ ಬಾಗಿಲಿಗೂ ಇರುವ ಅಂತರವನ್ನು ಕಣ್ಣಿನಲ್ಲೇ ಅಳೆದು ನೋಡಿದಾಗ ಕಣ್ಣಲ್ಲಿ ಮಿಂಚೊಂದು ಹೊಳೆಯಿತು.

ಇಷ್ಟಾಗುವದರಲ್ಲಿ ಮೂರು ನಿಮಿಷಗಳು ಕಳೆದಿದ್ದವು.

ತೀವ್ರ ಸೆಣಸಾಟ ಆರಂಭವಾಯಿತು. ಮೊದಲು ಎರಡೂ ಕಾಲುಗಳ ಮೇಲೆ ಎದ್ದು ನಿಲ್ಲಲು ಪ್ರಯತ್ನಿಸಿದ...ಕಾಲು ಸ್ವತಂತ್ರ ಮಾಡಲು ಕೈಗಳು ಮುಂದಾಗುತ್ತಿದ್ದವು. ಕಾಲು ಸ್ವತಂತ್ರವಾದರೆ ಕೈಗಳು ಬಂದಿಯಾಗುತ್ತಿದ್ದವು. ಈ ತೊಳಲಾಟದಲ್ಲಿ ಮತ್ತೆ ಮೂರು ನಿಮಿಷಗಳುಸಂದವು. ಉಳಿದದ್ದು ನಾಲ್ಕು ನಿಮಿಷಗಳ ಕಾಲಾವಕಾಶ. ಅಷ್ಟರಲ್ಲಿ ಹೇಮಂತ ಎರಡೂ ಕೈ ಹಾಗೂ ಒಂದು ಕಾಲುಗಳನ್ನು ಬಿಡಿಸಿಕೊಂಡುಒಂಟಿಗಾಲಲ್ಲಿನಿಂತು ತೂರಾಡತೊಡಗಿದ್ದ. ಕಾಲು ಮೂಳೆ ಮುರಿದು ಹೋಗುವಂಥ ನೋವು ಜೋಲಿ. ತಪ್ಪಿ ಬೀಳುವಂತಾದವ ಹೇಗೋ ಸುಧಾರಿಸಿಕೊಂಡು ಸುತ್ತಲೂ ಕಣ್ಣಾಡಿಸಿದ...ಎದುರಿಗೆ ತುಸು ಅಂತರದಲ್ಲಿತ್ತು ಒಂದು ಕಾಲು ಮುರಿದು ಮೂರೇ ಕಾಲುಗಳ ಮೇಲೆ ನಿಂತಿದ್ದ ಸ್ಟೂಲ್. ಆ ಸ್ಟೂಲನ್ನು ಹತ್ತಿದರೆ ಮೇಲೆ ತೂಗಾಡುತ್ತಿದ್ದ ಫ್ಯಾನು ಕೈಗೆ ಎಟಕುತ್ತಿತ್ತು. ಹೇಗಾದರೂ ಮಾಡಿ ಸ್ಟೂಲು ತಲುಪುವ ಸಾಹಸಕ್ಕಿಳಿದ ಹೇಮಂತ.

ಬಲವಾಗಿ ಸಿಲುಕಿಕೊಂಡಿದ್ದ ಒಂಟಿಕಾಲನ್ನು ಮೇಲಕ್ಕೆಳೆದು ಸ್ಟೂಲಿನತ್ತ ನೆಗೆಯಲು ಸನ್ನಾಹ ನಡೆಸಿದ. ಅಸಾಧ್ಯ ನೋವು ಚಿಕ್ಕಮಕ್ಕಳು ಕುಂಟಲಪೆ ಆಡುವದನ್ನು ನೆನಪಿಸಿಕೊಂಡು ಜಿಗಿದ. ಕಾಲುಮೂಳೆ ಕಿತ್ತು ಬಂದರೂ ಕಾಲು ಮಾತ್ರ ಬಲವಾಗಿ ಅಂಟಿಕೊಂಡಿತು. ಆದರೇನಾಯಿತು? ಒಂದು ಹೆಜ್ಜೆ ಸ್ಟೂಲಿಗೆ ಹತ್ತಿರವಾದೆನಲ್ಲ ಎಂದು ಯೋಚಿಸಿ ಮತ್ತೊಂದು ಹೆಜ್ಜೆ ನೆಗೆದ. ಹಾ ಎಂದು ನರಳಿಕೆ ಹೊರ ಬಂದಿತು. ಏನಿದ್ದರೂ ತಡೆದುಕೊಳ್ಳಲೇಬೇಕಾಗಿತ್ತು....ನಾಲ್ಕು ನಿಮಿಷಗಳಲ್ಲಿ ಎರಡು ನಿಮಿಷಗಳು ಕಳೆದು ಎರಡು ನಿಮಿಷ ಮಾತ್ರ ಉಳಿದಾಗ ಆತ ಸ್ಟೂಲು ತಲುಪಿ ಅದನ್ನು ಹತ್ತುವಲ್ಲಿ ಸಫಲನಾಗಿದ್ದ. ಮೂರು ಕಾಲಿನ ಸ್ಟೂಲ ಮೇಲೆ ಸರ್ಕಸ್ಸು ಮಾಡುತ್ತ ಎದ್ದು ನಿಂತಾಗ ಫ್ಯಾನು ಕೈಗೆ ತಗಲಿತು—ಒಂದು ನಿಮಿಷ.

ಉಳಿದ ಒಂದು ನಿಮಿಷದಲ್ಲಿ ಆತ ಮೃತ್ಯುವನ್ನು ವಂಚಿಸಬೇಕಾಗಿತ್ತು.

ವೇಗವಾಗಿ ಎರಡು ಮೂರು ಬಾರಿ ಉಸಿರು ತೆಗೆದುಕೊಂಡು ಫ್ಯಾನು ಹಿಡಿದು ಜೀಕತೊಡಗಿದ. ಒಂದು ಎರಡು ಮೂರು ಆರನೇ ಜೀಕಿಗೆ ಆತ ಬಾಗಿಲಿಗೆ ಬಂದಿದ್ದ...ಮುಂದಿನದ್ದೇ ನಿರ್ಣಾಯಕ ಘಟ್ಟ. ಸಾವು ಬದುಕಿನ ಮಧ್ಯ

ಕೇವಲ ಒಂದೇ ಒಂದು ಸೆಕೆಂಡಿನ ನಿರ್ಣಾಯಕ ಅಂತರ. ಮತ್ತೊಂದು ಬಾರಿ ಜೀಕಿದ ಎಂಟು ಅಂದ. ಒಂಬತ್ತನೇ ಜೀಕಿಗೆ ಸರಿಯಾಗಿ ಕೈ ಬಿಟ್ಟು ಬಲವಾಗಿ ಬಾಗಿಲಿಗೆ ಒದೆಯುತ್ತ ಆಚೆ ಹಾರಿದ.

ಫಳ್ ಫಳಾರ್ ಎಂಬ ಸದ್ದಿನೊಂದಿಗೆ ಗಾಜು ಒಡೆಯಿತು ಅಷ್ಟೇ ಅಲ್ಲ. ಜೀರ್ಣವಾಗಿದ್ದ ಬಾಗಿಲು ಸಹ ಮುರಿದು ಹೇಮಂತ ಆಚೆಗಿದ್ದ ಹಾಲಿಗೆ ಉರುಳಿದ್ದ.

ಅವನ ಅದೃಷ್ಟ ಚೆನ್ನಾಗಿತ್ತು. ಹಾಲಿಗೆ ಬೀಳುವದರ ಬದಲು ಮತ್ತೆ ಕೋಣೆಯೊಳಗೆ ಬಿದ್ದಿದ್ದರೆ! ನೆನೆಯುತ್ತಲೂ 'ಮೈ ಜುಂ' ಎಂದಿತು. ಅಂತೂ ಮೇಜರ್ ಸಾವಿಗೆ ಕೈ ಕೊಟ್ಟಿದ್ದ...ಮುಂದಿನ ಘಟ್ಟ. ಹಿಂದೆ ಮುಂದೆ ಯೋಚಿಸದೇ ಮೈ ಕೈಗಾದ ಗಾಜಿನ ಗಾಯವನ್ನು ಲೆಕ್ಕಿಸದೇ ಅಲ್ಲಿಂದ ಓಟ ಕಿತ್ತ. ಮೃತ್ಯುಶಯ್ಯೆ ಕೋಣೆಯಿಂದ ಆತ ಸಾಧ್ಯವಿದ್ದಷ್ಟು ದೂರ ಓಡಬೇಕಾಗಿತ್ತು. ಆತ ಓಡಿದ...ದಾರಿ ಕಂಡತ್ತ...ಕಾಲು ಒಯ್ದತ್ತ.

ಬಹಳವೆಂದರೆ ಐವತ್ತು ಸೆಕೆಂಡುಗಳು ಮಾತ್ರ ಉಳಿದಿರಬೇಕು.

ಹೇಮಂತ ನೆಲಮನೆಯಂಥ ಸ್ಥಳಕ್ಕೆ ಬಂದಿದ್ದ. ಕೆಳಗೆ ಇಳಿಯಲು ಮೆಟ್ಟಿಲುಗಳು. ಪಟಪಟನೆ ಮೂರು ನಾಲ್ಕು ಮೆಟ್ಟಲು ಇಳಿದು ಮೇಲೆ ತಲೆಮೇಲಿದ್ದ ಬಾಗಿಲನ್ನು ಎಳೆದುಕೊಂಡ.

ಅದೇ ಕ್ಷಣ ದೂರದಲ್ಲಿ ಪರ...ಪರ... ಫ್ರುರ್ ಫ್ರುರ್ ಎಂಬ ಸಪ್ಪಳ ಕೇಳಿಸಿತು...ರೇಶಿಮೆ ಹಾಸಿಗೆಗೆ ಅಗ್ನಿ ಸ್ಪರ್ಶವಾಗಿತ್ತು. 'ಢಂ' ಎಂಬ ಆಸ್ಫೋಟ ಕೇಳುತ್ತಲೂ ಆತ ಹಿಂದೆ ಮುಂದೆ ನೋಡದೇ ಕೆಳಗೆ ನೆಗೆದ.

ಆತ ಹಾರಿದ್ದೇನೋ ನಿಜ. ಕೆಳಗಡೆ ಏನಿರಬಹುದೆಂದಾತನಿಗೆ ತಿಳಿದಿರಲಿಲ್ಲ. ಏನೇ ಇರಲಿ ಮೇಲಿರುವ ಬೆಂಕಿ ಬಲೆಗಿಂತ ಕೆಳಗಿರುವದನ್ನು ಎದುರಿಸುವದು ಒಳ್ಳೆಯದಲ್ಲವೇ? ಚಪಕ್...ಚಪಕ್ ಎಂದೆನ್ನುತ್ತ ಧಮಾರೆಂದು ಆತ ನೀರಿಗೆ ಬಿದ್ದಿದ್ದ...ಸೋಜಿಗ ಮೊನೆಯಷ್ಟೇ ಹರಿತವಾದ ತಂಪು ನೀರು...ಹಿಮದಂತೆ ತಣ್ಣಗೆ ದೇಹದ ಗಾಜುಗಳಿಗೆ ನೀರಿನ ಸ್ಪರ್ಶವಾದಾಗ ನೋವು ತಾಳಲಾರದೇ ಆತ 'ಅಯ್ಯೋ' ಎಂದು ಚೀರಿದ...ಮೇಲಿಂದ ಬಿದ್ದ ವೇಗಕ್ಕಿಂತ ನೀರಿನೊಳಗೆ ಇಳಿದಿದ್ದರಿಂದಾಗಿ ತಲೆ ಕೆಳಗಿನ ಭಾಗಕ್ಕೆ ತಗುಲಿ 'ದಿವಪ್' ಎಂದು ಕಣ್ಣಲ್ಲಿ ಸಾವಿರ ದೀಪ ಹೊತ್ತಿಸಿತು...ಯಮಯಾತನೆ. ಬಾಯಿಂದ ಚಿತ್ರ ವಿಚಿತ್ರವಾದ ಧ್ವನಿ ಹೊರಡಿಸುತ್ತ ಕೈಕಾಲು ಒಡಿದ. ಎರಡೇ ಸೆಕೆಂಡುಗಳಲ್ಲಿ ಆತ ನೀರಿನ ಮೇಲೆ ಬಂದಿದ್ದ. ಸುತ್ತಲೆಲ್ಲ ಕತ್ತಲು...ತಾನೆಲ್ಲಿರುವೆ, ಬಿದ್ದುದ್ದೆಲ್ಲಿ ಎಂಬುದು ತಿಳಿಯದು. ದೇಹದ ಗಾಯಗಳಿಂದ ನೋವಿನ ಅಲೆ ಮೇಲೆ ವಿಪರೀತ ಚಳಿ

ಕಟಕಟ ಹಲ್ಲು ಕಡಿಯುತ್ತ ಬಾಣಲೆಯಿಂದಬೆಂಕಿಗೆ ಬಿದ್ದಂತಾಯಿತಲ್ಲ ಎಂದು ಅಂದುಕೊಂಡ. ಆ ಮೇಲೆ ತಾನೆಲ್ಲಿರುವೆಯೆಂಬುದನ್ನು ನಿರ್ಧರಿಸಲು ಮುಂದಾದ.

ಹಿಮದಷ್ಟೇ ತಂಪಾದ ನೀರಿನಲ್ಲಿ ಆತ ಸುತ್ತಲೂ ಅಡ್ಡಾಡಿ ತಾನಿರುವ ದೆಲ್ಲಿ, ತಾಣವೆಂತಹದು ಎಂದು ಗುರುತಿಸಲು ಪ್ರಯತ್ನಿಸಿದ. ನೀರಲ್ಲಿ ಮಧ್ಯ ಮಧ್ಯ ಯಾವುದೋ ವಸ್ತುಗಳು ತಗುಲಿ ದೂರ ಸರಿದವು. ಆಗಲೇ ಗಟ್ಟಿಯಾದ ಮರದ ದಿಮ್ಮಿಯಂಥ ತೇಲುವ ವಸ್ತುವೊಂದು ದೊರೆಯಿತು. ಅದರ ಸಹಾಯ ದಿಂದ ಅತ್ತಿತ್ತ ಸುತ್ತಿದ. ಗಟ್ಟಿಯಾದ ಕಟ್ಟೆ ಕೈಗೆ ತಗಲಿತು. ಅದರಗುಂಟ ಕೈ ಹಿಡಿದು ಸುತ್ತಿದ. ಹೀಗೆ ಇಪ್ಪತ್ತು ಹೆಜ್ಜೆ...ಹಾಗೆ ನಲವತ್ತೈದು ಹೆಜ್ಜೆ, ಅನಂತರ ಮತ್ತೆ ಇಪ್ಪತ್ತು, ಆಮೇಲೆ ನಲವತ್ತೈದು ಅಂದಮೇಲೆ ಅದು ಅಂದಾಜು ಇಪ್ಪತ್ತುಫೂಟು ಅಗಲ ನಲವತ್ತೈದ. ಫೂಟು ಉದ್ದವಿರುವ ಮಂಜಿನ ಹೊಂಡ ಇರಬೇಕೆಂದು ತರ್ಕಿಸಿದ.

ಒಮ್ಮೆಲೇ ಸಾಂಬಮೂರ್ತಿಗಳ ಜೊತೆ ಇದ್ದಾಗ ಅವರು ಹೇಳಿದ 'ಮಾತಿನನೆನಪಾಯಿತು.ಈ ಮಹಲಿನ ಕೆಳಗೆ ನೆಲಮಾಳಿಗೆ ಇದೆ.ಅದರಲ್ಲಿಒಂದು ಕೋಣೆ ಮಂಜುಗಡ್ಡೆಯ ಕೋಣೆ. ಬೇಸಿಗೆಯಲ್ಲಿ ಉಪಯೋಗಿಸಲು ಇಲ್ಲಿಂದ ಪೇಟೆ ದೂರ. ಫ್ರಿಜ್ ಬೇರೆ ಇಲ್ಲ. ಹೀಗಾಗಿ ಅದನ್ನೇ"ಕೋಲ್ಡ್ ಸ್ಟೋರೇಜ್" ಆಗಿ ಮಾಡಿಕೊಂಡಿದ್ದೇನೆ. ಕೋಲ್ಡ್ ಸ್ಟೋರೇಜಿನಿಂದಲೇ ಹೊರಗಿರುವ ಕಾರ್ ಗ್ಯಾರೇಜಿಗೆ ಗುಪ್ತ ದಾರಿ ಇದೆ. ಅಪಾಯದ ಸಮಯದಲ್ಲಿ ಉಪಾಯದಿಂದ ಪಾರಾಗಲು ಈ ವ್ಯವಸ್ಥೆ ಮಾಡಿಸಿರುವೆ. ಇದಕ್ಕೆ ಏನೆನ್ನುತ್ತೀರಿ...?

ಅಂದಿನ ಮಾತು ನೆನಪಾಗುತ್ತಲೂ ತಾನು ಖಂಡಿತವಾಗಿ ಕೋಲ್ಡ್ ಸ್ಟೋರೇಜಿನಲ್ಲಿಯೇ ಬಿದ್ದಿರುವುದಾಗಿ ಆತ ನಿರ್ಧರಿಸಿದ. ಮೇಲೆ ಬರಲು ಯತ್ನಿಸಿದ. ಒದ್ದೆಯಾಗಿ ಬಹಳಷ್ಟು ಕಡೆ ಹರಿದು ಮೈಗೆ ಅಂಟಿಕೊಂಡ ಬಟ್ಟೆ ಗಳು...ಗಾಜಿನಿಂದಾದ ಗಾಯಗಳು...ಇವುಗಳಿಂದಾಗಿ ವಿಪರೀತ ವೇದನೆ ಅನು ಭವಿಸಬೇಕಾಯಿತು. ಆವಾಗ ಸಹಾಯಕ್ಕೆ ಬಂದಿದ್ದು ನೀರಿನ ಮೇಲೆ ತೇಲುತ್ತಿ ರುವ ಮರದ ದಿಮ್ಮಿ...ಅದರ ಸಹಾಯದಿಂದ ಮೇಲೆ ಬರಲು ಪ್ರಯತ್ನಿಸಿದ. ದಿಮ್ಮಿ ನೀರಲ್ಲಿ ಹೊರಳಿ ಬುಡುಕ್ಕನೆ ಪುನಃ ನೀರಿಗೆ ಬಿದ್ದ. ಹೀಗೆ ನಾಲ್ಕಾರು ಬಾರಿ ಆದ ಮೇಲೆ ಯಶಸ್ಸು ದೊರೆಯಿತು- ಆತ ಆ ನೀರಿನ ಹೊಂಡದಿಂದ ಹೊರಗೆ ಬಂದಿದ್ದ.

ಮೊದಲು ಎಷ್ಟೇ ನೋವಾದರೂ ಹಲ್ಲು ಬಿಗಿ ಹಿಡಿದು ತಡೆದುಕೊಂಡು ಮೈಮೇಲಿನ ಬಟ್ಟೆ ಎಲ್ಲಾ ಕಳಚಿ ಅದರಲ್ಲಿಯ ಸಾಮಾನುಗಳನ್ನು ಹೊರ

ತೆಗೆದ. ಪಾಕೀಟು, ಸಿಗರೇಟು ಪ್ಯಾಕ್, ಲೈಟರ್, ಕರವಸ್ತ್ರ...ಡೈರಿ...ಹುಂ. ಸಿಗರೇಟು ಪ್ಯಾಕ್ ಮುದ್ದೆಯಾಗಿ ಹಾಳಾಗಿತ್ತು...ಒಂದೆಡೆ ಎಸೆದ. ಡೈರಿ ನೀರಿನಿಂದ ಒದ್ದೆಯಾದರೂ ಒಗೆಯುವಂತಿರಲಿಲ್ಲ. ಒಂದೆಡೆ ಲೈಟರ್ ಹಾಗೂ ಪಾಕೀಟುಗಳನ್ನು ಇಟ್ಟು ಉಳಿದೆಲ್ಲ ಬಟ್ಟೆಗಳನ್ನು ಸರಿಯಾಗಿ ಹಿಂಡಿ ಜಾಡಿಸಿದ. ಮತ್ತೆ ಕತ್ತಲೆಯಲ್ಲೇ ಕಷ್ಟಪಟ್ಟು ಬಟ್ಟೆಗಳನ್ನು ತೊಟ್ಟುಕೊಂಡು ಸಾಮಾನುಗಳನ್ನೆಲ್ಲ ಜೇಬಿಗೆ ಸೇರಿಸಿದ.

ಸಿಗರೇಟು ಹಾಳಾಗಿದ್ದವು. ಲೈಟರ್ ಗತಿಏನಾಗಿದೆಯೋ ಎಂದುಕೊಂಡು ಬಟನ್ ಅದುಮಿದ. ಪುಣ್ಯಕ್ಕೆ ನೀರು ಒಳಗೆ ಸೇರಿರಲಿಲ್ಲ. ನಾಲ್ಕಾರು ಬಾರಿ ಕಟ್ ಕಟ್ ಸದ್ದು ಮಾಡಿದ ಲೈಟರ್ ಹೊತ್ತಿಕೊಂಡಿತು. ಸುತ್ತಲೂ ಬೆಳಕು ಹರಡಿತು. ಕೊಳಕು ಮಣ್ಣಿನ ನೀರ ಮೇಲೆ ದೀಪದ ಕೆಂಪು ಹಳದಿ ಮಿಶ್ರಿತ ಬೆಳಕು ಹರಡಿತು. ಎಂಥ ಸುಂದರ ದೃಶ್ಯ! ಹೇಮಂತ ಮರದ ದಿಮ್ಮಿ ಮೇಲೆ ದೃಷ್ಟಿಹರಿಸಿದ.

'ಧಸ್' ಎಂದಿತು ಎದೆ. ಧಕ್ ಎಂದು ಉಸಿರು ನಿಂತೇಬಿಟ್ಟಿತು.

ಅದು ಮರದ ದಿಮ್ಮಿಯಲ್ಲಿ ಪುರುಷದೇಹ...ಶವ.

ಕೆಲ ಸಮಯ ಮೊದಲು ಅದರೊಂದಿಗೆ ಆತ ತೇಲಾಡಿದ್ದ. ಹೇಸಿಗೆ ಎನಿಸಿತು. ಮುಖಕಿವುಚಿದ.ಮುಂದೆ ಕುತೂಹಲ ಮೂಡಿತು. ಲೈಟರ್ ಬೆಳಕು ಹತ್ತಿರ ತಂದು ಬೆನ್ನು ಮೇಲಾದ ಶವವನ್ನು ಹೊರಳಿಸಿದ. ತುಂಬಾ ವಿಕಾರವಾದ ಮುಖ. ಸುಮಾರು ಮೂವತ್ತು ಮೂವತ್ತೈದು ವರ್ಷದವನಿರಬೇಕು. ಮುಖ, ದೇಹದ ಮೇಲೆಲ್ಲ ಸುಟ್ಟ ಹಾಗೂ ರಕ್ತದ ಕಲೆಗಳು. ಸ್ವಲ್ಪ ಹತ್ತಿರಕ್ಕೆ ಬಂದು ಮುಖ ದಿಟ್ಟಿಸಿದ. ಎಲ್ಲೋ ನೋಡಿದ ನೆನಪು. ಎಲ್ಲಿ ಎಂದು ಒಮ್ಮೆಲೇ ಹೊಳೆಯಲಿಲ್ಲ, ಎಲ್ಲಿ ನೋಡಿರುವೆ ಪರಿಚಿತ ಮುಖ ಅನಿಸುತ್ತಿದೆಯಲ್ಲ, ತನ್ನನ್ನೇ ತಾನು ಪ್ರಶ್ನಿಸಿಕೊಂಡ. ಉತ್ತರ ಹೊಳೆಯಲಿಲ್ಲ.

ಅಷ್ಟರಲ್ಲಿ ಈ ಮೊದಲು ಮೆಟ್ಟಲು ಇಳಿಯುವ ಮುನ್ನ ತಲೆ ಮೇಲಿದ್ದ ಬಾಗಿಲು ಮುಚ್ಚಿ ಬಂದಿದ್ದ ಅದೇ ಬಾಗಿಲು ಗಡಗಡ ಸದ್ದು ಮಾಡುತ್ತ ತೆರೆದುಕೊಂಡಿತು. ಲಾಂಧ್ರದ ಬೆಳಕು ಕೆಳಗಿನವರೆಗೆ ಹರಡುತ್ತಿದ್ದಂತೆ ಮೇಜರ್ ತಲೆ ಎತ್ತಿ ನೋಡಿದ.

ಲಾಂಧ್ರದ ಬೆಳಕಿನ ಮಧ್ಯ ಆತನಿಗೆ ಬೋಳು ತಲೆಯ ಮಾನವ ಕಂಡುಬಂದ.

* * * *

ಅತ್ಯುತ್ತಮವೆನ್ನಬಹುದಾದ ೭೦ ಎಂಎಂ. ಚಿತ್ರ ಕಣ್ಮುಂದೆ ಓಡುತ್ತಿ

ದ್ದರೂ ಸುಷಮಾ ಹಾಗು ಅಶೋಕರಿಗೆ ಅದರಲ್ಲಿ ಆಸಕ್ತಿ ಇರಲಿಲ್ಲ. ಹೇಮಂತನ ಒತ್ತಾಯಕ್ಕೆ ಮಣಿದ ಅವರು ಚಿತ್ರ ನೋಡಲು ಬಂದಿದ್ದರುಅಷ್ಟೇ. ವಿರಾಮದ ಸಮಯದಲ್ಲಿ ಹೊರಬಂದು ಕಾಫಿ ಕುಡಿದ ಅವರು ಆಗಲೆ ಮನೆಗೆ ಮರಳಲು ಯೋಚಿಸಿದ್ದರು. ಅಷ್ಟರಲ್ಲಿ ಮ್ಯಾನೇಜರನ ವಕ್ರದೃಷ್ಟಿ ಅವರ ಮೇಲೆ ಬೀಳ ಬೇಕೆ? ಬಲವಂತದಿಂದ ತನ್ನ ರೂಮಿಗೆ ಕರೆದೊಯ್ದು ಕಾಫಿ ತರಿಸಿದ. ಹತ್ತಾರು ಬಾರಿ ನಂದಿಸಿದ. ಮೇಜರ ಬಗ್ಗೆ ಕೇಳಿದ. ಅವನಿಂದ ಬಿಡಿಸಿಕೊಂಡು ಬರಬೇಕಾದರೆ ಅವರೆಲ್ಲರಿಗೂ ಸಾಕುಬೇಕಾಯಿತು....ಅವರು ಬಂದು ಸೀಟಿನಲ್ಲಿ ಕುಳಿತಾಗ ಚಿತ್ರ ಆರಂಭವಾಗಿತ್ತು. ಹದಿನೈದು ನಿಮಿಷ ಕಳೆದಿರಲಿಲ್ಲ. ಬ್ಯಾಟರಿ ಬೆಳಕು ಚೆಲ್ಲುತ್ತ ಗೇಟಕೀಪರ್ ಅವರನ್ನು ಹುಡುಕುತ್ತ ಬಂದು ಅವರ ಕೈಯಲ್ಲಿ ಚೀಟಿಯೊಂದನ್ನು ತುರುಕಿ ಹೇಳಿದ: "ಮೇಜರ್ ಸಾಹೇಬರ ಫೋನು ಬಂದಿತ್ತು. ಚಿತ್ರ ಮುಗಿದ ಮೇಲೆ ಈ ವಿಳಾಸಕ್ಕೆ ಬರಬೇಕಂತೆ...."

ಆತ ಹೊರಟುಹೋದ. ಚೀಟಿ ಮಡಚಿ ಜೇಬಿಗಿಳಿಸಿಕೊಂಡ ಅಶೋಕ. ಪಿಸು ದನಿಯಲ್ಲಿ ಸುಷಮಾಳಿಗೆ ತಿಳಿಸಿದ. ಸುಷಮಾಳಿಗೆ ಅಶಂಕೆ ಮೂಡಿತು. "ಮೇಜರ ಮೈಯಲ್ಲಿ ಸರಿಯಿರಲಿಲ್ಲ, ಅದಕ್ಕೆಂದೇ ಚಿತ್ರ ನೋಡಲು ಬಂದಿಲ್ಲ. ಹೀಗಿದ್ದೂ ಈ ವಿಳಾಸಕ್ಕೆ ಅವರು ಹೋಗಬೇಕೆಂದರೆ.... ಏನಿದರ ಅರ್ಥ?....

"ಅವರ ಸ್ವಭಾವ ನಿನಗೆ ಗೊತ್ತಿಲ್ಲವೆ? ಯಾರಾದರೂ ಬೇಡಿಕೊಂಡು ಉದ್ಧಾರ ಮಾಡಿ ಅಂದರೆ ಸಾಕು. ಅದರಲ್ಲಿ ಪೋಲೀಸ್ ಆಫೀಸರ್ ಆದರಂತೂ ಮುಗಿದೇಹೋಯಿತು. ಎಲ್ಲಾ ಮರೆತು ಅವರು ಸಿದ್ಧರಾಗಿಬಿಡುತ್ತಾರೆ ಅಷ್ಟೇ...."

ಸುಷಮಾಳಿಗೂ ಅದು ಸರಿ ಎನಿಸಿತು....

ಮನಸ್ಸಿರದಿದ್ದರೂ ಚಿತ್ರ ನೋಡಿ ಮೇಲೆದ್ದರು. ಅವರು ಹೊರಬಂದಾಗ ಒಂಭತ್ತು ಹೊಡೆದು ಹತ್ತು ನಿಮಿಷ. ಕಾರು ಹೊರಡುವದರಲ್ಲಿ ಐದು ನಿಮಿಷ ಗಳು ಕಳೆದಿದ್ದವು. ಅಶೋಕ ಕಾರು ನಡೆಸುತ್ತಿದ್ದ.... ಬೀದಿಗೆ ಕಾರು ತಂದು ನಿಲ್ಲಿಸಿ ಜೇಬಿನಿಂದ ಚೀಟಿ ತೆಗೆದ....

ಎನ್. ಸಿ. ಸಿ. ಶೂಟಿಂಗ್ ರೇಂಜ್....ನುಗ್ಗಿಕೇರಿ ರಸ್ತೆ ಎಂದಿತ್ತು....

"ಹೊಸ ಕೇಸು ನಮ್ಮ ದಾರಿ ಕಾಯ್ತಿದೆ".... ಅದನ್ನೋದಿದ ಸುಷಮಾ ಹೇಳಿದಳು.

"ನಿರ್ಜನವಾದ ಈ ಸ್ಥಳಕ್ಕೆ ಅದೂ ರಾತ್ರಿ ಬರಲು ತಿಳಿಸಿರಬೇಕಾದರೆ ನನಗೂ ಹಾಗೇ ಅನಿಸುತ್ತದೆ"

ಕಾರು ಸ್ಟಾರ್ಟ್ ಮಾಡುತ್ತ ಹೇಳಿದ ಅಶೋಕ.

ಮುಂದೆ ಇಬ್ಬರೂ ಮಾತನಾಡಲಿಲ್ಲ. ಕಾರು ಓಡತೊಡಗಿತು. ಐದಾರು ನಿಮಿಷಗಳಲ್ಲಿ ಅಶೋಕ ನಿರ್ಧರಿತ ಸ್ಥಾನ ತಲುಪಿದ್ದ.... ಕಾರಿನ ದೀಪ ಆರಿಸಿ ಒಳಗೇ ಕುಳಿತು ಇಬ್ಬರೂ ಸುತ್ತಲಿನ ವಾತಾವರಣ ನಿರೀಕ್ಷಿಸಿದರು. ನರಪಿಳ್ಳೆ ಸಹ ಸುಳಿಯುವಂತಿರಲಿಲ್ಲ. ನಾಯಿಗಳ ಬೊಗಳುವಿಕೆ, ಆಗೊಂದು ಈಗೊಂದು ಹಾಯ್ದು ಹೋಗುವ ಲಾರಿ ಸದ್ದು ಬಿಟ್ಟರೆ ಬೇರೆ ಏನೂ ಇರಲಿಲ್ಲ. ಇಬ್ಬರ ಮನದಲ್ಲೂ ಯಾವುದೋ ಅನಿಷ್ಟದ ಭಯ ಕಾಡತೊಡಗಿತ್ತು. ಅದನ್ನು ಪ್ರಕಟಿಸಲು ಇಬ್ಬರೂ ಹಿಂದೇಟು ಹಾಕತೊಡಗಿದರು....

ಗಡ.... ಗಡ.... ಗಡ್.... ಡ್ ಸ್ಕೂಟರೊಂದು ದೂರದಲ್ಲೆಲ್ಲೋ ನಿಂತ ಸದ್ದು ಅಶೋಕನ ಕಿವಿಗೆ ಕೇಳಿಸಿತು. ಆತ ಸುಷಮಾಳನ್ನು ಎಚ್ಚರಿಸಿದ. "ನನಗೆ ಸ್ಕೂಟರ ಸದ್ದು ಕೇಳುತ್ತಿದೆ. ಮೇಜರ್ ಅದನ್ನು ಉಪಯೋಗಿಸಲಾರರು. ನಿಧಾನವಾಗಿ "ನಾವಿಲ್ಲಿಂದ ಜಾಗ ಖಾಲಿ ಮಾಡೋಣ...." ಸಪ್ಪಳವಾಗದಂತೆ ಕಾರಿನ ಬಾಗಿಲು ತೆರೆದ ಅಶೋಕ ತೆವಳುತ್ತ ಕೆಳಗಿಳಿದ. "ನೀನು ಕಾರಿನ ಕೆಳ ಭಾಗದಲ್ಲಿರು. ನಾನು ಮರದ ಹಿಂದಿರುತ್ತೇನೆ...." ಸರಸರನೆ ಹೊಟ್ಟೆ ಸವರುತ್ತ ಅಶೋಕ ಮರದ ಹಿಂದೆ ಸೇರುತ್ತಿದ್ದಂತೆ, ಸುಷಮಾ ಸಹ ಬಗ್ಗಿಕೊಂಡೇ ಕೆಳಗಿಳಿದುಕಾರಿನ ತಳದಲ್ಲಿ ಮರೆಯಾದಳು....

ಸುಮಾರು ಐದಾರು ನಿಮಿಷಗಳು ಕಳೆದವು.... ಅನಂತರ ನಿರೀಕ್ಷಿಸಿದ ಗಳಿಗೆ ಸನ್ನಿಹಿತವಾಗಿತ್ತು....ರಬ್ಬರ ಬೂಟುಗಳ ಸದ್ದು.... ಎರಡು ಬಗೆಯದು. ಬಹುಶಃ ಅವರುಇಬ್ಬರು ಇರಬೇಕೆಂದು ತರ್ಕಿಸಿದ ಅಶೋಕ ಮರದಮರೆಯಿಂದ ತಲೆಯನ್ನು ಸ್ವಲ್ಪವೇ ಹೊರಹಾಕಿ ದಿಟ್ಟಿಸಿದ....ಹೌದು. ಅವರು ಇಬ್ಬರು ಒಬ್ಬ ಬಲಶಾಲಿಯಂತೆ ಕಂಡ.ಇನ್ನೊಬ್ಬ ಸ್ವಲ್ಪನಿರ್ಬಲ . ಬಲಶಾಲಿಯಾದವನ ಕೈಯಲ್ಲಿ ಆಯುಧವಿದ್ದಂತೆ ಕಾಣಿಸಿತು. ಅದು ಪಿಸ್ತೂಲು ಇರಬಹುದೆಂದು ಊಹಿಸಿದ....ಅವರಿಬ್ಬರೂ ಕಾರಿನ ಬಳಿ ಬಂದರು ಹಿಂಭಾಗದಿಂದ....

ಬೆಕ್ಕಿನ ಹೆಜ್ಜೆಯಲ್ಲಿ ಬರುತ್ತಿರುವವರು ಯಾರೆಂದು ಕಾಣದಿದ್ದರೂ ಕಾರಿನಡಿಯಿಂದಲೇ ನೋಡಿ ಅವರಿಬ್ಬರಿದ್ದಾರೆಂದುಅವರಕಾಲುಗಳನ್ನು ನೋಡಿ ಊಹಿಸಿ. ದಳು ಸುಷಮಾ.ಒಂದು ಜೊತೆ ಕಾಲುಗಳಲ್ಲಿ ಬೂಟುಗಳಿದ್ದು ತುಸು ಬಲವಾಗಿವೆ ಎನ್ನಿಸಿತು. ಇನ್ನೊಂದು ಜತೆ ಕಾಲುಗಳಲ್ಲಿ ಹವಾಯಿ ಚಪ್ಪಲಿಗಳು.... ಕಾಲುಗಳೂ ಸಹ ನಿರ್ಬಲವಾಗಿದ್ದವು. ಅವರಿಬ್ಬರೂ ಕಾರಿನ ಹಿಂಭಾಗದಿಂದ ಬಂದು ಕಾರಿನೊಳಗೆ ಇಣುಕುತ್ತಿದ್ದಾಗ ಸುಷಮಾ ಅವರನ್ನು ಗಮನಿಸಿದ್ದಳು. ಅವಳು ಸಂದರ್ಭಕ್ಕಾಗಿ ಕಾಯುತ್ತಿದ್ದಳು.

ಅವರಿಬ್ಬರೂ ಕಾರನ್ನು ಸುತ್ತುಹೊಡೆದರು. ಕಾರಿನಲ್ಲಿ ಇಣುಕಿದರು.

"ಯಾರೂ ಇಲ್ಲವಲ್ಲ ಗುರು" ಒಬ್ಬ ಕೇಳಿದ. ಬಹುಶಃ ಆತ ಹವಾಹಿ ಚಪ್ಪಲಿ ಯಾತ" "ಕಾರಂತೂ ಅವರದೇ.... ನೀನು ಸರಿಯಾಗಿ ಅವರನ್ನು ಗುರುತಿಸಿ ಅವರ ಕೈಯಲ್ಲೇ ಚೀಟಿ ಕೊಟ್ಟೆಯಲ್ಲವೇ?"

"ಹೌದು ಗುರು.... ಮ್ಯಾನೇಜರ್ ಜೊತೆ ಕಾಫಿ ಕುಡಿಯುವಾಗ ನಾನವರನ್ನು ಚೆನ್ನಾಗಿ ನೋಡಿದ್ದ. ಅವರಲ್ಲಿ ಕುಳಿತುಕೊಳ್ಳುತ್ತಾರೆ ನೋಡು ಎಂದು ನೀನು ಹೇಳಿದಾಗಲೇ ನಾನವರನ್ನು ಹಿಂಬಾಲಿಸಿದ್ದೆ. ನಾನು ತಪ್ಪಿಲ್ಲ ಬಿಡು ಗುರು."

"ಹಾಗಾದರೆ ಅವರು ಇಲ್ಲೆಲ್ಲೋ ಇದಾರೆ ಹುಷಾರಿ."

ಸುಷಮಾ ಕಾಯುತ್ತಿದ್ದ ಅವಸರ ಕೈಗೆ ತಗುಲಿತು. ಬಲಶಾಲಿ ಎನಿಸುವ ಆ ವ್ಯಕ್ತಿಯು ಕಾರಿಗೆ ತೀರ ಹತ್ತಿರ ಬಂದಾಗ ಸುಷಮಾ ಕಾರಿನಡಿಯಿಂದಲೇ ಕೈಚಾಚಿ ಅವನೆರಡು ಕಾಲು ಹಿಡಿದು ಎಳೆದಳು ..ಆ....ಆ....ಅರೆ....ಅರೆ.... ಎಂದು ವಿಚಿತ್ರವಾಗಿ ಕೂಗಿಕೊಳ್ಳುತ್ತಾ ಆತ ಜೋಲಿತಪ್ಪಿ ತನ್ನ ಸಂಗಡಿಗನ ಮೇಲೆ ಬಿದ್ದ....ಇಬ್ಬರೂ ನೆಲದ ಮೇಲೆ ಉರುಳುತ್ತಿರುವಾಗಲೆ ಮರದಡಿಯಿಂದ ಜಿಗಿದು ಹೊರಬಂದ ಅಶೋಕ. ಅವನ ಕೈಯಲ್ಲಿ ರಿವಾಲ್ವರ್‌ಕಾಣಿಸಿಕೊಂಡಿತ್ತು. ಸುಷಮಾ ಸಹ ಮತ್ತೊಂದು ಬದಿಯಿಂದ ಹೊರಗೆ ಬಂದಿದ್ದಳು. ನೆಲಕ್ಕೆ ಬಿದ್ದ ಅವರಿಬ್ಬರೂ ಮೇಲೇಳುತ್ತಿರುವಾಗಲೇ ಇವರಿಬ್ಬರೂ ಅವರ ನೆತ್ತಿ ಮೇಲೆ ಬಂದಿದ್ದರು....

"ಗುರು....ಗುರು.... ನಿನ್ನ ಪಿಸ್ತೂಲು ಅಲ್ಲಿ ಬಿದ್ದಿದೆ."

"ಪಿಸ್ತೂಲಿಗೆ ಕೈಹಾಕಿದರೆ ತಲೆ ಸಾವಿರ ಹೋಳಾಗಿ ಸೀಳಿಸಿ ಬಿಡುತ್ತೇನೆ ಹುಷಾರ್" ಅಶೋಕ ಅಬ್ಬರಿಸಿದಾಗ ಅವರಿಬ್ಬರೂ ಅಲ್ಲೇ ತೆಪ್ಪಗಾದರು. ಸುಷಮಾ ಕೆಳಗೆ ಬಾಗಿ ಬಿದ್ದ ಪಿಸ್ತೂಲ ಎತ್ತಿಕೊಂಡಳು. ಅದೊಂದು ದೇಶಿ ಪಿಸ್ತೂಲು. ಅಶೋಕ ಗದರಿಸುತ್ತ ಕೇಳಿದ.

"ಹೇಳಿ ಯಾರು ನೀವು?....ನಮ್ಮ ಹಿಂದೆ ಏಕೆ ಬಿದ್ದಿದ್ದೀರಿ?"

"ನಮಗೆ ಗೊತ್ತಿಲ್ಲ. ನಾವು ನಿಮ್ಮ ಹಿಂದೆ ಬಿದ್ದಿಲ್ಲ."

ಹವಾಯಿ ಚಪ್ಪಲಿಯಾತ ನುಡಿಯುತ್ತಿದ್ದಂತೆ "ಚಟಾರ್" ಎಂದು ಅವನ ಕೆನ್ನೆ ಮೇಲೆ ಸುಷಮಾ ಬಾರಿಸಿದಳು. ಅವನ ಕೆನ್ನೆ ಚುರುಕ್ ಎಂದಿತು. ಹರಿತವಾದ ಬ್ಲೇಡಿನಿಂದ ಕೆನ್ನೆ ಗೀರಿದಂತಾಯಿತು. ಕಿಟಾರನೆ ಕಿರುಚಿದ ಆತ ಕೂಗಿಕೊಂಡ.

"ನನ್ನದೇನೂ ತಪ್ಪಿಲ್ಲ.... ಈತನೇ ನನ್ನನ್ನು ಕರೆತಂದ.... ನೂರು ರೂಪಾಯಿ ಆಶೆ ತೋರಿಸಿದ. ನಿಮ್ಮ ದಮ್ಮಯ್ಯ ನನ್ನ ಬಿಟ್ಟುಬಿಡಿ. ಹೊಟ್ಟೆ

ಮೇಲೆ ಹೊಡೆಯಬೇಡಿ."

ಅಶೋಕನಿಗೆ ಚೆನ್ನಾಗಿ ಗೊತ್ತಾಯಿತು. ಹವಾಯಿ ಚಪ್ಪಲಿ ಧರಿಸಿದವ ಗೇಟ್‌ಕೀಪರ್ ಎಂದು.

"ನೀನು ನಮಗೆ ಚೀಟಿಕೊಟ್ಟು ಇಲ್ಲಿ ಕರೆಸಿ ಕೊಲೆ ಮಾಡಲು ಪ್ರಯತ್ನ ಮಾಡಿರುವೆ. ನಿನಗೆ ಶಿಕ್ಷೆ ಆಗಲೇಬೇಕು," ಸುಷಮಾ ಬೇಕಂತಲೇ ಹೆದರಿಸಿದಳು.

"ಇಲ್ಲ....ಇಲ್ಲ....ನನಗೆ ಏನೂ ತಿಳಿದಿರಲಿಲ್ಲ..........ಎಲ್ಲಾ ಈತನೇ ಮಾಡಿದ್ದು.

"ಯಾರೀತ?"

"ಈತ ಅಲ್ಲಾಭಕ್ಷ....ಬಾರಾ ಇಮಾಮು...."

"ಏಯ್ ಬಾಯಿಮುಚ್ಚು....ಮುಂದೇನಾದರೂ ಬೊಗಳಿದರೆ ನೋಡು ನಾ...."

ಅಲ್ಲಾಭಕ್ಷ ಗದರಿಸುತ್ತಿದ್ದಂತೆ "ಬೊಕ್" ಎಂದು ಅವನ ಹೊಟ್ಟೆ ಮೇಲೆ ಮುಷ್ಟಿಪ್ರಹಾರ ಮಾಡಿದ ಅಶೋಕ....ನೋವಿನಿಂದ ಕಿರುಚಿದ. ಅಲ್ಲಾಭಕ್ಷ ಹೊಟ್ಟೆ ಹಿಡಿದುಕೊಂಡವ ಮರುಕ್ಷಣ ಅಶೋಕನ ಮೇಲೆ ಎಗರಿದ... ಇದರ ಕಲ್ಪನೆ ಅಶೋಕನಿಗಿರಲಿಲ್ಲ....ಕೈಯಲ್ಲಿ ರಿವಾಲ್ವರ್ ಇದ್ದರೂ ಸಹ ಅದನ್ನು ಉಪಯೋಗಿಸಲು ಸಮಯವೇ ಸಿಗಲಿಲ್ಲ. ಅಲ್ಲಾಭಕ್ಷ ಒಂದು ಕೈಯಿಂದ ಅವನ ಪಿಸ್ತೂಲನ್ನು ಎಗರಿಸಿ, ಆತನನ್ನು ನೆಲಕ್ಕೆ ಕೆಡವಿ ಎದೆಯ ಮೇಲೆ ಮೊಣಕಾಲಿನಿಂದ ಪ್ರಹಾರ ಮಾಡಲು ಮೇಲೆ ನೆಗೆದ...."

ಸುಷಮಾ ಮಿಂಚಿನಂತೆ ಚಲಿಸಿದಳು. ಗಾಳಿಯಲ್ಲಿ ಹಾರಿದ ಅವಳ ಬಲ ಗಾಲಿನ ಏಟು ಅಲ್ಲಾಭಕ್ಷನ ಎದೆಯ ಮೇಲೆ ನೇರವಾಗಿ ಬೀಳುತ್ತಿದ್ದಂತೆ ವಿಕಾರ ಕಂಠದಲ್ಲಿ ಆತ ಕಿರುಚಿಕೊಂಡು ಹಿಂದಕ್ಕುರುಳಿದ. ಅವನ ಮೊಣಕಾಲು ಪ್ರಹಾರ ತಪ್ಪಿಸಿಕೊಳ್ಳಲು ಪಕ್ಕಕ್ಕೆ ಉರುಳಿದ್ದ ಅಶೋಕ ಎದ್ದುನಿಂತ. ಅಲ್ಲಾ ಭಕ್ಷ ನೋವಿನಿಂದ ನರಳುತ್ತ ಒದ್ದಾಡುತ್ತಿರುವಾಗಲೇ ಅವನ ಕೈಗೆ ದೂರ ಸಿಡಿದು ಬಿದ್ದಿದ್ದ ಅವನ ಪಿಸ್ತೂಲು ದೊರೆಯಬೇಕೆ? ಮುಖ ಕಿವುಚುತ್ತ ನೋವನ್ನು ನಿಗ್ರಹಿಸುವ ಪ್ರಯತ್ನ ಮಾಡುತ್ತ ಎದ್ದುನಿಂತ. ಅವನ ಪಿಸ್ತೂಲಿನ ಗುರಿ ಈಗ ಸುಷಮಾಳತ್ತ....ಅಶೋಕ ಗೇಟ್‌ಕೀಪರನ ಹತ್ತಿರದಲ್ಲಿದ್ದ. ಒಂದು ಕ್ಷಣ ಗಲಿಬಿಲಿಗೊಂಡಂತೆ ಕಂಡ ಆತ ಮರುಕ್ಷಣ ಕಾರ್ಯೋನ್ಮುಖನಾದ ಗೇಟ್‌ಕೀಪರನನ್ನೆತ್ತಿ ಗಾಳಿಯಲ್ಲಿ ಸುಷಮಾಳತ್ತ ಒಗೆದ. ಅದೇ ಸಮಯಕ್ಕೆ ಸರಿಯಾಗಿ ಅಲ್ಲಾಭಕ್ಷ ಕುದುರೆ ಎಳೆದಿದ್ದ. ಸಿಡಿದ ಗುಂಡು ಸುಷಮಾಳಿಗೆ ತಾಗದೇ ಮಧ್ಯ ಹಾರಿ ಬಂದ ಗೇಟಕೀಪರನ ಬೆನ್ನಿನಲ್ಲಿ ನಟ್ಟಿತು.

ಆತ ಅಪ್ರತಿಭನಾದ....ಏನೋ ಮಾಡಬೇಕೆಂದರೆ ಏನೋ ಆಯಿತಲ್ಲ....ಎಂದು ಕೊಳ್ಳುತ್ತಿರುವಾಗಲೇ ಗಿಡುಗನಂತೆ ಹಾರಿ ಬಂದ ಅಶೋಕ ಅವನನ್ನು ದೂರಕ್ಕೆ ತಳ್ಳಿದ್ದ. ಅಲ್ಲಾಭಕ್ಷ ಕತ್ತಲೆಯಲ್ಲಿ ಒಂದೆಡೆ ತೆಗ್ಗಿನಲ್ಲಿ ಬಿದ್ದು, ಸಖತ್ತಾಗಿ ಏಟು ತಿಂದು ಇನ್ನೂ ಇಲ್ಲೇ ಇದ್ದರೆ ಸಾವೇ ಗತಿ ಎಂದರಿತು ಅಲ್ಲಿಂದ ಏಳುತ್ತ ಬೀಳುತ್ತ ಪಲಾಯನಗೈದ. ಅವನನ್ನು ಬೆನ್ನಟ್ಟುವ ವಿಚಾರ ಕೈಬಿಟ್ಟು ಅಶೋಕ ಸುಷಮಾಳೆಡೆಗೆ ಧಾವಿಸಿದ. ಆಕೆ ಸುರಕ್ಷಿತವಾಗಿದ್ದಳು.

"ಅಶೋಕ....ನಾವಷ್ಟೇ ಗಂಡಾಂತರದಲ್ಲಿ ಸಿಲುಕಿಲ್ಲ....ನಮ್ಮೊಂದಿಗೆ ಮೇಜರ್ ಸಹ ಅಪಾಯದಲ್ಲಿದ್ದಾರೆ ಅನ್ನಿಸುತ್ತಿದೆ."

"ನಿಜ....ನಮ್ಮನ್ನು ಅವರಿಂದ ದೂರಮಾಡಿ ದಾರಿಯಿಂದ ಸರಿಸಲು ಯತ್ನ ಮಾಡಲಾಯಿತು. ಅವರ ಸಹಾಯಕ್ಕೆ ನಾವು ಹೋಗದಂತೆ ಮಾಡಿದ ತಂತ್ರವಿದು. ನಾವು ಕೂಡಲೇ ಮೇಜರ ಬಳಿ ಧಾವಿಸಬೇಕು. ಅವರು ಎಲ್ಲಿದ್ದಾರೋ....ಹೇಗಿದ್ದಾರೋ...."

ಸುಷಮಾಳ ಹೃದಯ ಮೆಲುವಾಗಿ ಕಂಪಿಸಿತು. ಆಕೆ ವ್ಯಾಕುಲಗೊಂಡು ಕಾರಿನ ಬಾಗಿಲು ತೆರೆದು ಚಾಲಕ ಸ್ಥಾನದಲ್ಲಿ ಕುಳಿತಳು. ಅಶೋಕ ಅವಳ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಕಾರು ಚಲಿಸಿತು.

ಮನೆಯಲ್ಲಿ ಮೇಜರನ ಸುಳಿವಿಲ್ಲ....ಮನೆಯೆಲ್ಲ ಜಾಲಾಡಿಸಿದರು. ಅವರ ನೈಟ್‌ಸೂಟ್‌ಹ್ಯಾಂಗರಿನಲ್ಲಿ ತೂಗುತ್ತಿತ್ತು. ಇದರರ್ಥ ಅವರು ಹೊರಗೆ ಹೋಗಿ ದ್ದಾರೆ ಎಂದಾಯಿತು. ಸುಷಮಾ ಹಾಸಿಗೆಯ ಮೇಲೆ ಧೊಪ್ ಎಂದು ಕುಸಿ ದಳು. ಅವಳ ಗಂಟಲುಬ್ಬಿಬಂದಿತ್ತು.

"ಸುಷಮಾ....ಹೆದರಬೇಡ....ಮೇಜರ್ ಇಲ್ಲೋ ಎಲ್ಲೋ ಇರಬೇಕು."

"ಸಾಧ್ಯವಿಲ್ಲ ಅಶೋಕ....ಅವರಿಗೆ ಮೈಹುಷಾರಿ ಇರಲಿಲ್ಲ....ಪಿಕ್ಚರ್‌ಗೆ ಸಹ ಅವರು ಬರುವದಿಲ್ಲವೆಂದಿದ್ದರು. ಹೀಗಿರುವಾಗ ಹೊರಗೆ ಹೋಗಬೇಕೆಂದರೆ ಬಲವಾದ ಕಾರಣ ಇರಲೇಬೇಕು....ನಮ್ಮನ್ನು ಸಹ ಯಾವ ರೀತಿ ಬಲೆಯಲ್ಲಿ ಸಿಲುಕಿಸಿದರು ನೋಡು....ಅದರಂತೆ ಅವರಿಗೂ ಸಹ ಫೋನು ಬಂದಿರಬೇಕು." ಅಥವಾ....

"ಜಸ್ಟ್ ಏ ಮಿನಿಟ್ ಸುಷಮಾ....ತಾಳು. ಟೇಪ್‌ರಿಕಾರ್ಡರ್ ನೋಡೋಣ ವಿಷಯ ಏನೆಂದು ಅರ್ಥವಾಗುತ್ತದೆ...."

ಸುಷಮಾ ಉಸಿರು ಬಿಗಿಹಿಡಿದುಕೊಂಡು ಕುಳಿತಳು. ಅಶೋಕ ಗುಂಡಿ ಅದುಮಿದ. ಮೇಜರ್ ಸಾಂಬಮೂರ್ತಿಗಳೊಂದಿಗೆ ಮಾತಾಡಿದ್ದ ಸಂಪೂರ್ಣ ಸಂಭಾಷಣೆ ಕೇಳಿಕೊಂಡರು. ಟೇಪ್ ಬಂದು ಮಾಡಿದ ಅಶೋಕ....ಸುಷಮಾ

ಹೇಳಿದಳು.

"ರಂಗಮಹಲ್ ಎಲ್ಲಿದೆ ಎಂದು ನನಗೆ ತಿಳಿಯದು!"

"ಆನೇಕೆರಿಯಲ್ಲಿದೆ ಎಂದು ಗೊತ್ತಾಯಿತಷ್ಟೇ....ಒಂದು ಕೆಲಸ ಮಾಡೋಣ. ಮೊದಲು ಇಲ್ಲೇ ಇರುವ ಸಾಂಬಮೂರ್ತಿಗಳ ಮನೆಗೆ ಹೋಗಿ ವಿಚಾರ ಮಾಡೋಣ ನಡೆ."

ಇಬ್ಬರೂ ಪುನಃ ಹೊರಗೆ ಬಂದರು. ಕಾರು ಓಡತೊಡಗಿತು. ನಗರದಲ್ಲಿರುವ ಮಾಜಿ ಸಚಿವ ಸಾಂಬಮೂರ್ತಿಗಳ ಮನೆಯತ್ತ ಮನೆಯಲ್ಲಿ ವಾಚಮನ್ನನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಅವನಿಂದ ತಿಳಿದ ವಿಚಾರದಿಂದಾಗಿ ಇಬ್ಬರೂ ಭೂಮಿಗಿಳಿದರು.

"ಮೇಜರ್ ಸಾಹೇಬರಿದ್ದಾರೆಯೋ....?" ಅಶೋಕ ಕೇಳಿದ.

"ಯಾವ ಮೇಜರ್ ಸಾಹೇಬರು?"

"ಮೇಜರ್ ಹೇಮಂತ, ಇದೀಗ ಒಂದುಗಂಟೆ ಹಿಂದೆ ನಿಮ್ಮ ಸಾಹೇಬರು ಫೋನು ಮಾಡಿದ್ದರಲ್ಲ?"

"ಸ್ವಾಮಿ ನಮ್ಮ ಸಾಹೇಬರು ಊರಿಗೆ ಹೋಗಿ ಮೂರು ದಿನಗಳಾಗಿವೆ. ಅಲ್ಲದೆ ನಮ್ಮ ಮನೆ ಫೋನು ಸಹ ನಾಲ್ಕು ದಿನಗಳಿಂದ ಸರಿಯಾಗಿಲ್ಲ."

ಮುಂದೇನು ಮಾಡಬೇಕೆಂಬುದು ಅರ್ಥವಾಗಲಿಲ್ಲ ಅಶೋಕನಿಗೆ. ಸುಷಮಾನೇ ಕೇಳಿದಳು.

"ಹೋಗಲಿಬಿಡು....ರಂಗಮಹಲ್ ಎಲ್ಲಿದೆ ಹೇಳು ಸಾಕು."

"ಅದು ಆನೇಕೆರಿಯಲ್ಲಿದೆ."

"ಆನೇಕೆರಿಯಲ್ಲಿದೆ?"

"ಬೆಳಗಾವಿ ರೋಡಿನಲ್ಲಿ....ಇಲ್ಲಿಂದ ಸುಮಾರು ದೂರ ಹೋಗಿ ಎಡಕ್ಕೆ ತಿರುಗಬೇಕು."

ಮುಂದೆ ಸಮಯ ಕಳೆಯಲಿಚ್ಛಿಸದೇ ಸುಷಮಾ ಕಾರುಸ್ಟಾರ್ಟ್ ಮಾಡಿದಳು. ಕಾರು ಅಲ್ಲಿಂದ ಬೆಳಗಾವಿ ರೋಡಿನತ್ತ ಓಡತೊಡಗಿತು. ಈಗವರ ಗುರಿ ರಂಗಮಹಲ್. ಅದು ಎಲ್ಲಿದೆ ಎಂದು ತಿಳಿಯದು. ಕಣ್ಣು ಕುರುಡಾದರೆ ಬಾಯಿ ಕುರುಡೆ? ಕೇಳುತ್ತ ಹೋದರಾಯಿತೆಂದರು ಮನದಲ್ಲಿ....

ಒಂದೇ ಸಮನೆ ಕಾರು ಓಡತೊಡಗಿತು....ಇವರಿಬ್ಬರ ಬಾಯಿಗೆ ಬೀಗ ಬಿದ್ದಿದ್ದರೂ ಇಬ್ಬರ ಮನದಲ್ಲೂ ಒಂದೇ ಬಗೆಯ ತುಮುಲ ನಡೆದದ್ದು ಸ್ಪಷ್ಟವಾಗಿ ಕಾಣುತ್ತಿತ್ತು. ತಮಗರಿವಿಲ್ಲದಂತೆ ತಾವು ತಮ್ಮ ಸುತ್ತ ಹೆಣೆದಿರುವ ಬಲೆಯಲ್ಲಿ ಬಂದಿಗಳಾಗುತ್ತಿದ್ದೇವೆಂಬ ವಿಷಯ ಮನದಟ್ಟಾಗಿತ್ತು. "ಯಾರಾತ?

ಯಾನ ವಿಷಯಕ್ಕೆ ಈ ರೀತಿಯ ಆಟ....? ಒಮ್ಮೊಮ್ಮೆಯಾದರೂ ಪ್ರತ್ಯಕ್ಷನಾಗ ಬೇಕಾದರೆ ವಿಷಯ ಏನಿರಬಹುದು?"

ರಾತ್ರಿ ಸಮಯವಾದುದರಿಂದ ಕಾರು ನಡೆಸಲು ಯಾವ ತೊಂದರೆಯೂ ಇರಲಿಲ್ಲ. ತೊಂದರೆಯಿದ್ದುದು ಒಂದೇ ರಂಗಮಹಲ್‌ಗೆ ಹೋಗುವ ಕಿರುದಾರಿ ಎಲ್ಲಿ ಅಂತ ತಿಳಿಯದೇ ಇರುವದು. ಹೀಗಾಗಿ ಸುಮಾರು ೨೦-೩೦ ಕಿಲೋ ಮೀಟರ್ ದೂರ ಹೋದ ಮೇಲೆ ಪ್ರತಿ ಅಡ್ಡರಸ್ತೆಗೂ ವೇಗ ತಗ್ಗಿಸಿ ಅಲ್ಲಿದ್ದ ಫಲಕ ನೋಡಬೇಕಾಗುತ್ತಿತ್ತು. ಇದೇ ರೀತಿ ಹೆಚ್ಚು ಕಡಿಮೆ ಒಂದು ಗಂಟೆಗೆ ಹತ್ತಿರ ಹತ್ತಿರವಾಗಿ ಅವರು ಪ್ರಯಾಣ ಬೆಳೆಸಿದರೂ ಅವರಿಗೆ ಆನೇಕೆರಿಯ ದಾರಿ ಸಿಗದಾಯಿತು. ಮುಂದೇನು ಮಾಡುವದು....ಒಂದೆಡೆ ಕಾರು ನಿಲ್ಲಿಸಿದ ಸುಷಮಾ ಹಿಂದಿನ ಸೀಟಿಗೆ ತಲೆ ಆನಿಸಿ ಕಣ್ಣು ಮುಚ್ಚಿದಳು. ಮುಚ್ಚಿದ ಎವೆ ಗಳ ಅಂಚಿನಲ್ಲಿ ಬೆಳ್ಳಿ ಪೋರೆಯಂತೆ ಕಣ್ಣೀರು ಕಾಣಿಸಿಕೊಂಡದ್ದು ಎದುರಿನಿಂದ ಬರುತ್ತಿದ್ದ ವಾಹನಗಳ ದೀಪದ ಬೆಳಕಿನಲ್ಲಿ ಅಶೋಕನಿಗೆ ಸ್ಪಷ್ಟವಾಗಿ ಕಾಣು ತ್ತಿತ್ತು....

ಐದಾರು ನಿಮಿಷಗಳು ಕಳೆದಿರಬೇಕು....ಪಕ್ಕದಲ್ಲಿ ಎದುರುಗಡೆಯಿಂದ ಬಂದ ಲಾರಿಯೊಂದು ನಿಂತಿತು....ಅದರಿಂದ ಒಬ್ಬ ಇಳಿಯುತ್ತಲೇ ಲಾರಿ ಪುನಃ ಹೊರಟಿತು. ಕೆಳಗೆ ಇಳಿದ ವ್ಯಕ್ತಿಯನ್ನು ಗಮನಿಸುತ್ತಲೇ ಅಶೋಕ ಕಾರಿನ ಬಾಗಿಲು ತೆರೆದು ಅವನತ್ತ ಧಾವಿಸಿದ. ಅವನು ಧರಿಸಿದ ಉಡುಪಿನಿಂದ ಆತ ಅಂಚೆಯವ ಎಂದಾತ ಊಹಿಸಿದ್ದ. ಅವನೊಂದಿಗೆ ಮಾತನಾಡಿದ ಅಶೋಕ ಓಡುತ್ತಲೇ ಕಾರಿನ ಬಳಿ ಬಂದ....ಇದಾವದೂ ಸುಷಮಾಳ ಗಮನಕ್ಕೆ ಬಂದಿರಲಿಲ್ಲ. ಅವಳು ಮೊದಲಿನ ಸ್ಥಿತಿಯಲ್ಲೇ ಕುಳಿತಿದ್ದಳು....ಕಣ್ಣಿನಿಂದಿಳಿದ ನೀರು ಅವಳ ಗಲ್ಲ ತೋಯಿಸಿತ್ತು.

"ಸುಷಮಾ....ಏ...." ಅಶೋಕ ಮೆಲುವಾಗಿ ಕರೆದ. ಆಕೆ ಕಣ್ತೆರೆದಳು.

"ಆನೇಕೆರಿಯ ಅಡ್ಡರಸ್ತೆ ಹಿಂದೆಯೇ ಹೋಗಿವೆ. ಅದಕ್ಕೆ ಫಲಕ ಇಲ್ಲ ವಂತೆ. ಚಿಕ್ಕದಾದ ಕೆರೆ ಇದ್ದು ಅದರ ಪಕ್ಕದಲ್ಲೇ ಹೋದರೆ ಸ್ವಲ್ಪ ದೂರದಲ್ಲಿದೆ ಯಂತೆ ರಂಗಮಹಲ್."

ಮತ್ತೆ ಆಸೆ ಗರಿಗೆದರಿತು....ಈ ಬಾರಿ ಅಶೋಕ ಕಾರು ನಡೆಸತೊಡಗಿದ. ಸಾಗಿ ಬಂದ ದಾರಿಯಲ್ಲಿ. ಅವರು ವಾಪಸಾಗುತ್ತಿದ್ದರು. ಬಲಭಾಗದತ್ತ ಆತ ದೃಷ್ಟಿಯನ್ನು ಕೇಂದ್ರೀಕರಿಸಿದ್ದ....ನಾಲ್ಕಾರುನಿಮಿಷಗಳುಕಳೆದವು. ಕೊನೆಗೂ ಕಣ್ಣಿಗೆ ಬಿತ್ತು. ಚಿಕ್ಕ ಕೆರೆ, ಅಲ್ಲಿಯೇ ರಸ್ತೆ ಟಿಸಲು ಒಡೆದಿತ್ತು....ಅದು ಬರು ವಾಗ ಅವರ ಗಮನಕ್ಕೆ ಬಂದಂತೆ ಕಾಣಲಿಲ್ಲ....ಈಗ ಸ್ಪಷ್ಟವಾಗಿತ್ತು.

ಅಶೋಕ ಆ ಅಡ್ಡರಸ್ತೆಗೆ ಕಾರು ತಿರುಗಿಸಿದ.

ತಗ್ಗುದಿನ್ನೆಗಳಿಂದ ಕೂಡಿದ ಕೆಂಪುವರ್ಣದ ದಾರಿ ಎಷ್ಟು ಸಾಧ್ಯವೋ ಅಷ್ಟು ವೇಗದಲ್ಲಿ ಅಶೋಕ ಕಾರು ನಡೆಸುತ್ತಿದ್ದ....ಸುಷಮಾ ತುಟಿ ಎರಡು ಮಾಡಲಿಲ್ಲ. ಅವಳ ಮನದಲ್ಲಿ ನಡೆಯುತ್ತಿರುವ ವಿಪ್ಲವ ಅಶೋಕನಿಗೆ ತಿಳಿದಿತ್ತಾದುದರಿಂದ ಆತ ಅವಳನ್ನು ಮಾತಿಗೆ ಎಳೆಯಲಿಲ್ಲ.

ಸುಮಾರು ದೂರ ಬಂದರೂ ರಂಗಮಹಲ್ ದರ್ಶನವಾಗಲಿಲ್ಲ. ಮತ್ತೆ ತಾವು ದಾರಿ ತಪ್ಪಿ ಬಂದಿರುವೆವೋ ಹೇಗೆಂದು ಯೋಚಿಸುತ್ತಿದ್ದಂತೆ "ಢಮಾರ್" ಎಂಬ ಭಯಂಕರ ಆಸ್ಫೋಟವೊಂದು ರಾತ್ರಿಯ ನೀರವತೆಯನ್ನು ಭೇದಿಸಿ ಕೊಂಡು ಕೇಳಿಬಂದಿತು. ಅಶೋಕ ಒಮ್ಮೆಲೆ ಬ್ರೆಕ್ ಹಾಕಿ ಶಬ್ದ ಬಂದತ್ತ ನೋಡಿದ....ಸುಷಮಾ ಗಾಯಗೊಂಡ ಹಕ್ಕಿಯಂತೆ ಕಕ್ಕಾಬಿಕ್ಕಿಯಾಗಿ ಅತ್ತಲೆ ನೋಡಿದಳು.

ಎಡಭಾಗದ ಆಗಸದಲ್ಲಿ ಬೆಂಕಿಯ ಕೆನ್ನಾಲಿಗೆ ಚಿಮ್ಮಿ ಹೊಗೆ ಕಂಡು ಬಂದಿತು. ಅಲ್ಲೆಲ್ಲೋ ಒಂದೆಡೆ ಸ್ಫೋಟವಾಗಿದೆ ಎಂದುಕೊಂಡ ಅಶೋಕ. ಅದೇ ದಿಕ್ಕಿನಲ್ಲಿ ಕಾರನ್ನು ವೇಗವಾಗಿ ಸಾಗಿಸಿದ. ಸನಿಹ ಬಂದಂತೆ ಬೆಂಕಿ ಸ್ಪಷ್ಟವಾಗ ತೊಡಗಿತು. ಅದೊಂದು ಭೀಕರ ಜ್ವಾಲೆ....

ಕಾರು ಇನ್ನೂ ಸಮೀಪ ಬಂದಾಗ ಗೋಚರಿಸಿತು ರಂಗಮಹಲ್....

ಅಗ್ನಿಯ ಹಿನ್ನೆಲೆಯಲ್ಲಿ ಅದು ಭಯಂಕರವಾಗಿ ಗೋಚರಿಸುತ್ತಿತ್ತು.

ಅಶೋಕ ಕಾರನ್ನು ತಂದು ಭವ್ಯ ಬಂಗಲೆಯ ಗೇಟಿಗೆ ನಿಲ್ಲಿಸಿದ. ರಂಗಮಹಲ್‌ನ ಒಂದು ಭಾಗ ಅಗ್ನಿ ಜ್ವಾಲೆಗಳಿಂದ ಉರಿಯುತ್ತಿತ್ತು.

ಗೇಟಿಗೆ ಒಂದು ದೊಡ್ಡ ಕೀಲಿ ನೇತಾಡುತ್ತಿತ್ತು.

ಸುಷಮಾ ಭಯ ತುಂಬಿದ ನೇತ್ರಗಳಿಂದ ಅಶೋಕನತ್ತ ಆರ್ತಳಾಗಿ ನೋಡತೊಡಗಿದಳು....ಗಂಡೆದೆಯ ಅಶೋಕನ ಗುಂಡಿಗೆ ಸಹ ಒಂದು ಗಳಿಗೆ ಆ ದೃಶ್ಯವನ್ನು ಕಂಡು ಸ್ತಬ್ಧವಾಯಿತು.

ಕೈಲಿ ಹಿಡಿದಿದ್ದ ಲಾಂದ್ರದ ಬೆಳಕಿನಲ್ಲಿ ಅವನ ಬೋಳುತಲೆ ತಾಮ್ರದ ತಪ್ಪಲೆಯಂತೆ ಮಿನುಗುತ್ತಿದ್ದರೆ ಕಣ್ಣುಗಳು ಕುತ್ಸಿತ ನಗೆ ಸೂಸುತ್ತಿದ್ದವು. "ಹಲೋ ಮೇಜರ್ ಹೇಗಿದ್ದೀಯಾ?"

ತುಂಬಾ ಮಜವಾಗಿದೇನೆ....ನೀನೂ ಬರತೀಯಾ?"

"ಇಲ್ಲ....ನನಗೆ ಬರೋಕಾಗೋಲ್ಲ"

"ಏಕೆ....? ಅಂಥಾ ರಾಯಭಾರಿ ಕೆಲಸವೇನಿದೆ?"

"ನಿನ್ನನ್ನ ಬೇರೊಂದು ಜಾಗೆಗೆ ಕಳಿಸುವ ಏರ್ಪಾಡು ಮಾಡಬೇಕಾಗಿದೆ

ಯಲ್ಲ....ಅದಕ್ಕೆ...."

"ಓಹೋ....ಕೆಲ ಸಮಯದ ಹಿಂದೆ ಮಾಡಿದ್ದೆಯಲ್ಲ.ಅದೇ ತೆರಹದ್ದಾ?"

"ಅದಕ್ಕಿಂತ ಬಲವಾದದ್ದು...."

"ಹೂಂ....ಹೂಂ....ಅದನ್ನು ನೋಡಿಯಾಯಿತು,ಇದನ್ನೂ ನೋಡುವಾ ನಡೆಯಿರಿ...."

"ಅಲ್ಲಿಂದ ತಪ್ಪಿಸಿಕೊಂಡು ಬಂದಿಯಂತೆ ಜಂಭಕೊಚ್ಚಿಕೊಳ್ಳಬೇಡ.... ಒಂದು ಮಾತು ನೆನಪಿಡು....ಅದೃಷ್ಟ ಯಾವಾಗಲೂ ಒಲಿಯುವದಿಲ್ಲ."

"ಅದು ನಿನ್ನಂಥ ಹೇಡಿಗಳಿಗೆ....ಅದೃಷ್ಟ ನನ್ನಂಥವನ ಕೈ ಎಂದಿಗೂ ಬಿಡುವದಿಲ್ಲ ತಿಳೀತಾ."

"ನೋಡೋಣವಂತೆ....ಹೇಗಿದ್ದರೂ ಪಾತಾಳ ಸೇರಿದೀಯಾ. ನಿನ್ನ ಸುತ್ತ ಮುತ್ತಲು ಕಟ್ಟಿಗೆಯ ರಾಶಿ ಹೇರಳವಾಗಿದೆ ನನ್ನ ಬಳಿ ಪೆಟ್ರೋಲ ಸಂಗ್ರಹ ತುಂಬಾ ಇದೆ. ಕಟ್ಟಿಗೆ ರಾಶಿ ಮೇಲೆ ಪೆಟ್ರೋಲ್ ಸುರಿದು ಈ ಲಾಂದ್ರ ಅದರ ಮೇಲೆ ಎಸೆದರೆ ಹೇಗೆ...."

"ಫೆಂಟಾಸ್ಟಿಕ್....ಐಡಿಯಾ ತುಂಬಾ ಚೆನ್ನಾಗಿದೆ."

"ಐಡಿಯಾ ಅಲ್ಲ....ನಿನ್ನ ಸುಟ್ಟು ಬೂದಿಮಾಡುವ ಅಗ್ನಿನೃತ್ಯ."

"ಮುಠ್ಠಾಳ ರಾವಣನು ಸಹ· ನಿನ್ನಂತೆ ಯೋಚಿಸಿದ್ದ...........ಈ ಕಪಿ ತನಗೇನು ಮಾಡುತ್ತದೆ ಎಂದು....ಕಪಿಯು ಬಾಲದ ಬೆಂಕಿ ಅವನ ಚಿನ್ನದ ಲಂಕೆಯನ್ನೇ ಸುಟ್ಟು ಹಾಕಿತು....ಪಾಪ! ನಿನಗೆಲ್ಲಿ ತಿಳಿಯಬೇಕು, ಭಾರತೀಯ ಅಮರ ಕಥೆಗಳ ಸಾರ."

"ಓಹೋ....ಹಾಗಾದರೆ ನಿನ್ನನ್ನು ನೀನು ಕೋತಿಯೆಂದು ಒಪ್ಪಿಕೊಳ್ಳು ತ್ತೀಯಾ...."

ಅಂಥ ಕೋತಿ ನಾನು ಹೇಗಾದೇನು? ಅದರ ಉಂಗುಷ್ಠಕ್ಕೂ ನಾ ಸಮ ನಾಗಲಾರೆ....ಅದು ಸಾಮಾನ್ಯ ಕೋತಿ ಅಲ್ಲ. ದೇವಕೋತಿ....ಸಾಕ್ಷಾತ್ ವಾಯುದೇವರ ರೂಪ....ನಾನೋ ಮಾನವ ಕೋತಿ....ನನಗಂತೂ ನೀನ್ನ ಬೆಂಕಿ ಇಡಲಾರೆ. ನಿನ್ನ ಲಂಕೆಗೆ ನೀನೇ ಬೆಂಕಿ ಇಡುತ್ತೀಯಾ....ಇಲ್ಲಿ ಬೇಕಾ ದಷ್ಟು ನೀರಿದೆ....ಅದನ್ನು ನಂದಿಸಲು ನಾನು ಪ್ರಯತ್ನಿಸುವೆ ಅಷ್ಟೇ...."

"ಏನು ಮಾಡಬೇಕಂತಿಯೋ ಮಾಡು. ನೀರಲ್ಲಿ ಮುಳುಗುವ ಮನುಷ್ಯ ಸಾವು ಶತಸಿದ್ಧ ಎಂದು ತಿಳಿದಿದ್ದರೂ ಕೈಕಾಲುಬಡಿಯಲೇಬೇಕಲ್ಲ....ಹಾಂ.... ಒಂದು ವಿಷಯ....ಸಮಯ ಕಡಿಮೆ ಇದೆ....ಇಷ್ಟರಲ್ಲೇ ನಿನಗಿಂತ ಮೊದಲೇ ನಿನ್ನ ದಾರಿ ಕಾಯುತ್ತಿರುವ....ಶವ... ಅದು ಯಾರದೆಂದು ಗುರುತಿಸಲು

ಯತ್ನಿಸು. ಅಂದರೆ ನಿನ್ನ ಆತ್ಮಕ್ಕೊಬ್ಬ ಸಂಗಾತಿ ಸಿಕ್ಕರೂ ಸಿಗಬಹುದು."

"ಅದು ಆಮೇಲಿನ ಮಾತು. ಮೊದಲು ನಿನಗೊಂದು ಗತಿ ಕಾಣಿಸುತ್ತೇನೆ."

ಹೇಮಂತ ನಗೆಯುತ್ತ ಮೆಟ್ಟಲು ಸಮೀಪಿಸಿದ. ಟಣ್ ಟಣ್ ಎಂದು ಎರಡು ಮೂರು ಮೆಟ್ಟಲು ಏರಿದ್ದ. ಅಷ್ಟರಲ್ಲಿ ಆವನ ಮೈಮೇಲೆ ಮೇಲಿಂದ ಪೆಟ್ರೋಲ್ ಧಾರೆ ಬೀಳಲಾರಂಭಿಸಿತು. ತಪ್ಪಿಸಿಕೊಳ್ಳಲು ಪಟ್ಟ ಯತ್ನ ವಿಫಲವಾದಾಗ ಆತ ಅಟ್ಟಹಾಸ ಮಾಡಿ ನಕ್ಕ. ಮೇಜರ್‌ಗೆ ಉಳಿದದ್ದೊಂದೇ ದಾರಿ ನೀರಿನ ಆಶ್ರಯ. ಅಲ್ಲಿಂದ ನೇರವಾಗಿ ಮತ್ತೆ ಟ್ಯಾಂಕಿಗೆ ಹಾರಿದ.

"ಮಾಡು, ಮಾಡು, ಸಾಯುವವರೆಗೂ ಪ್ರಯತ್ನಮಾಡು."

ಕಟ್ಟಿಗೆ ರಾಶಿ ಮೇಲೆ ನೀರಿನ ಟ್ಯಾಂಕಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಕಡೆ ಪೆಟ್ರೋಲ ಸುರಿದ. ಆ ಬೋಳು ತಲೆಯಾತ. ಕೈಲಿದ್ದ ಲಾಂದ್ರವನ್ನು ಕಟ್ಟಿಗೆ ರಾಶಿ ಮೇಲೆ ಎಸೆದು ಕೂಗಿ ಹೇಳಿದ.

"ಗುಡ್ ಬೈ ಮೇಜರ್, ನಿನ್ನ ಅಂತಿಮ ಯಾತ್ರೆ ಸುಖಕರವಾಗಲಿ."

ಮೇಲಿನ ಬಾಗಿಲು ಮುಚ್ಚಿಕೊಂಡಿತು.

ನೀರ ಒಳಗಿದ್ದ ಮೇಜರ್‌ಗೆ ಆವನ ಅಟ್ಟಹಾಸದ ಮಾತು ಹಾಗೂ ರಪ್ ಎಂದು ಗಾಜಿನಗ್ಲಾಸು ಒಡೆದ ಸದ್ದು ಅಸ್ಪಷ್ಟವಾಗಿ ಕೇಳಿಸಿತ್ತು. ಆತ ನೀರಿನಿಂದ ಮೇಲೆ ಬಂದಾಗ ಕಟ್ಟಿಗೆಯ ರಾಶಿ ಕರ್ಪೂರದಂತೆ ಉರಿಯುತ್ತಿತ್ತು. ಒಂದೆರಡು ನಿಮಿಷಗಳಲ್ಲಿ ಅದು ಸರ್ವತ್ರವ್ಯಾಪಿಸುವದರಲ್ಲಿಯಾವ ಸಂದೇಹವೂ ಇರಲಿಲ್ಲ. ಅಷ್ಟರಲ್ಲಿ ಆ ಸತ್ತ ವ್ಯಕ್ತಿಯ ಜಾತಕ ಪರೀಕ್ಷಿಸಿ ಅಲ್ಲಿಂದ ಸಜೀವವಾಗಿ ಪಾರಾಗುವದಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು.

ನೀರ ಮೇಲೆ ಬಂದ ಮೇಜರ್ ಆ ವ್ಯಕ್ತಿಯ ಮುಖ ದಿಟ್ಟಿಸಿ ನೋಡಿದ. ತಕ್ಷಣವೇ ಅವನಿಗೆ ಲೈಟರ್ ನೆನಪಾಯಿತು. ಜೇಬಿನಿಂದ ಲೈಟರ್ ಹೊರತೆಗೆದು ಚೆನ್ನಾಗಿ ಜಾಡಿಸಿ ನೀರು ಸಿಡಿದು ಹೋಗುವಂತೆ ಮಾಡಿದ. ಮಧ್ಯದ ಚಿಕ ಕಪ್ಪು ಬಿರಡಿ ಒತ್ತಿದ. ಈಗ ಲೈಟರ್ ಇಬ್ಭಾಗವಾಗಿ ಮಧ್ಯದಲ್ಲಿಟ್ಟ ಚಿಕ್ಕ ಮಿನಿ ಕೆಮರಾ ಕಣ್ಣು ಮಿಟುಕಿಸಿತು. ಅದರ ಸಹಾಯದಿಂದ ಹೇಮಂತ ಮೃತ ವ್ಯಕ್ತಿಯ ನಾಲ್ಕಾರು ಫೋಟೋ ತೆಗೆದ. ಮುಂದೆ ಸಮಯ ಸಿಗಲೇ ಇಲ್ಲ. ಬೆಂಕಿ ಟ್ಯಾಂಕಿಗೂ ದಾಳಿ ಇಟ್ಟಿತು. ಇನ್ನೂ ಟ್ಯಾಂಕಿನಲ್ಲಿದ್ದರೆ ಜೀವಂತ ದಹನ ಎಂದು ಟ್ಯಾಂಕಿನಿಂದ ಹೊರಗೆ ನೆಗೆದ. ನೀರ ಮೇಲೆ ತೇಲುತ್ತಿದ್ದ ಪೆಟ್ರೋಲಿಗೆ ಬೆಂಕಿ ತಗಲಿ ಅಗ್ನಿ ನರ್ತಿಸಲಾರಂಭಿಸಿತು. ಸುತ್ತಲೂ ನೋಡಿದ ಮೇಜರ್ ಒಡೆದ ತಗಡಿನ ಬಕೆಟ್ ದೃಷ್ಟಿಗೆ ಬಿತ್ತು. ಅದರಿಂದ ಟ್ಯಾಂಕಿನಲ್ಲಿದ್ದ ನೀರನ್ನು

ಪುನಃ ಸುಟ್ಟು ಬೂದಿಯಾದ ಕಟ್ಟಿಗೆಯ ರಾಶಿಯೆಡೆ ಎರಚತೊಡಗಿದ. ಇದರಿಂದ ಎರಡು ಲಾಭಗಳಾದವು. ಮೊದಲನೆಯದಾಗಿ ಟ್ಯಾಂಕಿನಲ್ಲಿದ್ದ ಪೆಟ್ರೋಲ್ ಅಂಶ ದೂರ ಹೋಗಿ ಟ್ಯಾಂಕ ಉರಿಯುವದು ಕಡಿಮೆಯಾಗತೊಡಗಿತ್ತು. ಎರಡನೆಯದಾಗಿ ಟ್ಯಾಂಕಿನಿಂದ ಮುಂದೆ ಹಬ್ಬಬೇಕಾಗಿದ್ದ ಅಗ್ನಿಯ ದಿಕ್ಕು ಬದಲಾಗಿ ಸಾಗಿ ಬಂದ ದಾರಿಯಲ್ಲಿ ಅದು ಮರಳತೊಡಗಿತ್ತು.

ಚಿಟ್....ಚಿಟ್....ಚಿಟಾರ್ ಸಿಡಿಯುವಿಕೆ ಅದರೊಂದಿಗೆ ದುರ್ನಾತ ಹೇಮಂತ ಅಂಗಿಯಿಂದ ಮೂಗು ಮುಚ್ಚಿಕೊಂಡ. ಶವಕ್ಕೆ ಬೆಂಕಿ ತಗಲಿ ಅದು ದಹಿಸಲಾರಂಭಿಸಿತು. ಎಷ್ಟು ಕೆಟ್ಟ ದುರ್ನಾತ. ಅಸಾಧ್ಯ ದುರ್ವಾಸನೆ ಟ್ಯಾಂಕಿನಿಂದ ದೂರ ಓಡಿ ಮೂಲೆಯೊಂದರಲ್ಲಿ ನಿಂತು ಯೋಚಿಸತೊಡಗಿದ ಮೇಜರ್. ಅವನ ಕಂಪ್ಯೂಟರ್ ಮೆದುಳು ಗತಕಾಲದ ಘಟನೆ. ವಿಷಯ ಮುಂತಾದವುಗಳನ್ನು ತಿರುವಿ ಹಾಕಲಾರಂಭಿಸಿತು. ಸಾಂಬಮೂರ್ತಿಗಳ ಜೊತೆ ಮೊದಲ ಸಾರೆ ಬಂದುದನ್ನು ನೆನೆಯಲಾರಂಭಿಸಿದ.

ಅಂದು ಅವರೊಂದಿಗೆ ಆತ ಪೂರ್ಣ ಮಹಲನ್ನು ಸುತ್ತು ಹಾಕುತ್ತ ನೆಲಮನೆಯವರೆಗೂ ಬಂದಿದ್ದ. ನೆಲಮನೆ...ನೆಲಮನೆಯಲ್ಲಿ ಇಪ್ಪತ್ತು ಫೂಟು ಅಗಲ ನಲವತ್ತೈದು ಫೂಟು ಉದ್ದದ ಕೋಣೆ ತೋರಿಸಿ ಅವರು ಹೇಳಿದ್ದರು. "ಇದನ್ನು ಫ್ರಿಜ್ಜಿನಂತೆ ಉಪಯೋಗಿಸಲು ಕೋಲ್ಡ್ ಸ್ಟೋರೇಜ್ ಮಾಡುತ್ತೇವೆ. ಇಲ್ಲಿಂದ ಮೇಲೆ ನಮ್ಮ ಕಾರು ಬಿಡುವ ಗ್ಯಾರೇಜಿಗೆ ಕಳ್ಳದಾರಿ ಇದೆ.ಅಪಾಯದ ಸಮಯದಲ್ಲಿ ಉಪಾಯದಿಂದ ಪಾರಾಗಲು ಉಪಯುಕ್ತ ದಾರಿ. ಹೇಗಿದೆ ಪ್ಲಾನು?"

ಒಮ್ಮೆಲೇ ಮೇಜರ ಕಾರ್ಯೋನ್ಮುಖನಾದ. ಗ್ಯಾರೇಜಿಗೆ ಹೋಗುವ ಕಳ್ಳದಾರಿ ಹುಡುಕಬೇಕಿತ್ತು. ಅದು ದೊರೆತರೆ ಸಧ್ಯ ಈ ಮೃತ್ಯುಜ್ವಾಲೆಯಿಂದ ಮುಕ್ತಿ ಸಿಕ್ಕಂತಾಗುತ್ತದೆ. ಪರಿಶೋಧನ ಆರಂಭವಾಯಿತು. ಗೋಡೆ ಬಾರಿಸಿದ. ನೆಲಕ್ಕೆ ಥಪ್ ಥಪ್ ಎಂದು ಕಾಲು ಅಪ್ಪಳಿಸಿದ.ಎಲ್ಲಿಯೂ ಆ ಕಳ್ಳದಾರಿ ಕಾಣಬರಲಿಲ್ಲ. ನಿಧಾನವಾಗಿದ್ದ ಬೇಕಿ ಪುನಃ ತನ್ನ ದಾರಿ ಕಂಡುಕೊಂಡು ಭುಗಿಲ್ ಎಂದು ಉರಿಯಲಾರಂಭಿಸಿತು. ಮೈಮೇಲೆ ಪೆಟ್ರೋಲಿನ ಮಳೆ ಬೀರೆ ಈ ಮೊದಲೇ ಆಗಿತ್ತು. ಬೆಂಕಿ ಶಾಖದಿಂದಾಗಿ ಅವನ ಬಟ್ಟೆ ಸಹ ಬಿಸಿಯಾಗತೊಡಗಿದವು. ಅಪಾಯ ಅಪಾಯ ಎಂದು ಅವನ ಮನಸ್ಸು ಕೂಗಿ ಹೇಳಿತು. ಕೂಡಲೆ ಮೈಮೇಲಿನ ಬಟ್ಟೆಗಳನ್ನು ಸರ ಸರ ಕಳೆದು ಮುದ್ದೆ ಮಾಡಿ ಒಂದೆಡೆ ಒಗೆದ. ಭೂಮಿಗೆ ಸ್ಪರ್ಶಿಸುವ ಮೊದಲೇ ಬಟ್ಟೆಗೆ ಬೆಂಕಿ ತಗುಲಿತು. ಟ್ಯಾಂಕಿನೆಡೆ ನೋಡಿದ. ಟ್ಯಾಂಕು ಶಾಂತವಾಗಿತ್ತು. ಸುಟ್ಟು ಕರಕಾದ ಶವ ಈಗ

ಉರಿದು ಆರಿದ ಮರದ ದಿಮ್ಮಿಯಂತೆ ಕಾಣುತ್ತಿತ್ತು. ನೀರೆಲ್ಲ ಕರಕುಮಯ ಟಿನ್ನಿನಿಂದ ಟ್ಯಾಂಕಿನಲ್ಲಿದ್ದ ನೀರು ತುಂಬಿಕೊಂಡು ಮೈಮೇಲೆ ಸುರಿದುಕೊಂಡ- ಹೇಸಿಗೆಯಿಂದ ಜಿಗುಪ್ಸೆಯುಂಟಾದರೂ ಬೇರೆ ದಾರಿಯಿರದೇ ಪೆಟ್ರೋಲಿನ ಸ್ವಲ್ಪ ಭಾಗ ತಗಲಿದ್ದ ಬನಿಯನ್ ಹಾಗು ಚಡ್ಡಿಗಳು ಪೂರ್ತಿ ಒದ್ದೆಯಾಗಿ ಅಗ್ನಿಸ್ಪರ್ಶದಿಂದ ಕೆಲ ಕಾಲ ದೂರಾದವು. ಮತ್ತೆಆರಂಭವಾಯಿತುಅನ್ವೇಷಣೆ.

ಅತ್ತಿತ್ತ ಅಲೆದ, ದಿಟ್ಟಿಸಿದ. ಮೈ ಶಾಖಕ್ಕೆ ಕಾಯ್ದು ಸಿಡಿಯಲು ಸಿದ್ಧ ವಾಗತೊಡಗಿತು. ಮೊದಲು ಸಣ್ಣದಾಗಿ ತುರಿಕೆ ಆರಂಭವಾಯಿತು. ಮೆಲುವಾಗಿ ಆತ ಕೆರೆದುಕೊಂಡ. ಶಾಖ ಹೆಚ್ಚಾದಾಗ ಚರ್ಮದ ತುರಿಕೆ ಹೆಚ್ಚಾಗತೊಡ ಗಿತು. ಈ ರೀತಿ ಆದರೆ ಆಟ ಬಹಳ ಹೊತ್ತಿನವರೆಗೆ ಸಾಗಲಾರದೆಂಬ ಸಿದ್ಧಾಂತಕ್ಕೆ ಬಂದ. ಆತ ಮೆದುಳಿನ ಮೇಲೆ ಎರಡು ಮೂರು ಪಟ್ಟು ಹೆಚ್ಚು ಭಾರ ಹಾಕಿ ಯೋಚಿಸಲಾರಂಭಿಸಿದ.

ಸಡಕ್‌ನೇ ನೆನಪಾಯಿತು. ಅಂದು ಟ್ಯಾಂಕ ಪಕ್ಕದಲ್ಲಿದ್ದ ಮೆಟ್ಟಿಲು ಗಳನ್ನು ಇಳಿದು ಹೋದದ್ದು. ಟ್ಯಾಂಕ ಯಾವ ಭಾಗದಲ್ಲಿ ಎಂಬುದು ಮಾತ್ರ ಸ್ಪಷ್ಟವಾಗಿ ನೆನಪಾಗಲಿಲ್ಲ. ಆದರೇನಾಯಿತು? ಅಲ್ಲೇ ಎಲ್ಲೋ ಒಂದೆಡೆ ಮೆಟ್ಟಿಲುಗಳು ಇರಲೇಬೇಕಲ್ಲ. ಸುತ್ತಲೂ ದಿಟ್ಟಿಸಿದ. ಹೆಚ್ಚು ಕಡಿಮೆ ಟ್ಯಾಂಕ ಸುತ್ತಲೆಲ್ಲ. ಅಗ್ನಿ ನರ್ತಿಸುತ್ತಿತ್ತು. ಅದನ್ನು ಮೊದಲು ನಂದಿಸಬೇಕು. ಸರಿ ಎಂದುಕೊಂಡು ಒಡೆದ ಬಕೆಟ್‌ಗೆ ಕೈಹಾಕಿದ. ಮರುಕ್ಷಣಅವನ ಬಾಯಿಯಿಂದ ಚೀತ್ಕಾರವೊಂದು ಹೊರಟಿತು. ಬಲಗೈ ಸುಟ್ಟು ಬುರುಬುರನೆಗುರುಳೆಗಳೆದ್ದವು. ಬೆಂಕಿಯ ಶಾಖಕ್ಕೆ ಬಕೆಟ್ಟು ಸಾಕಷ್ಟು ಕಾದಿದ್ದರಿಂದ ಅವನ ಕೈ....ಹಾ.... ಹೂ....ಎನ್ನುತ್ತ ಎರಡೂ ಕೈಗಳಿಂದ ನೀರು ದೋಗಸೆಯಲ್ಲಿ ಹಿಡಿದು ಬಕೆಟ್ ಮೇಲೆ ಎರಚತೊಡಗಿದ...ಸುಟ್ಟ ಕೈ ಮತ್ತಷ್ಟು ಚುರು ಚುರು ಅನ್ನತೊಡ ಗಿತು. ತಾಳಿಕೊಳ್ಳದೇ ಗತ್ಯಂತರವಿರಲಿಲ್ಲ. ಬಕೆಟ್ಟು ಆರಿದೆ ಎಂದು ಮನವರಿಕೆ ಯಾದ ಮೇಲೆ ಎಡಗೈಯಿಂದ ತುಸು ಮುಟ್ಟಿ ನೋಡಿದ.ಪುಣ್ಯಕ್ಕೆ ಆರಿತ್ತು. ಗುಡ್ ಎಂದು ಉದ್ಗರಿಸಿ ಬಕೆಟ್ ಎತ್ತಿ ಟ್ಯಾಂಕಿನಿಂದ ನೀರು ತುಂಬಿಸುತ್ತಲೂ ಸುರಿಯತೊಡಗಿದ. ಎರಡು ಮೂರು ನಿಮಿಷಗಳಲ್ಲಿ ಬೆಂಕಿ ನಂದಿಸುತ್ತಲೂ ಇದ್ದಿಲೆಯ ರಾಶಿ ಕರಕು ಹರಡಿತು. ಅವೇ ಬಕೆಟ್‌ನಿಂದ ಎಲ್ಲವನ್ನು ಎಳೆದೆಳೆದು ಹಿಂದಕ್ಕೆ ಚೆಲ್ಲತೊಡಗಿದ. ಅಂಥ ವಾತಾವರಣದಲ್ಲಿದ್ದರೂ ಆತ ಬೆವರಿನಿಂದ ತೊಯ್ದು ತಪ್ಪಲಾದ. ಎಂಟು ಹತ್ತು ನಿಮಿಷಗಳಲ್ಲಿ ಸುತ್ತಲೂ ಸಾಕಷ್ಟು ಬಯಲಾದ ಜಾಗ ಕಾಣಿಸಿಕೊಂಡಿತು. ಮೊಣಕಾಲು ಮೊಂಡೆಯೂರಿ ಬಾರಿ ಷುತ್ತ ನಡೆದ. .ಎಲ್ಲಿಡೆ ಗಟ್ಟಿಯಾದ ಜಾಗೆ ಟಪ್‌ಟಪ್ ಸದ್ದು ಒಂದೆಡೆ ಪೊಳ್ಳು

ಇರುವ ಸಂಶಯ ಬಂದಿತು. ಸಪ್ಪಳವೂ ಸಹ ಟಿಂಪ್ ಟಿಂಪ್ ಎಂದಾಗ ಆಶೆಗರಿ ಗೆದರಿತು. ಅಲ್ಲೀ ಮತ್ತಷ್ಟು ನೀರು ಸುರಿದು ಸ್ವಚ್ಛಮಾಡಿದ ಆಗಲೇ ಕಬ್ಬಿಣದ ಬಳೆಯೊಂದು ಗೋಚರಿಸಿತು. ಬಕೆಟ್ ಬದಿಗೆ ಸರಿಸಿ ಎರಡು ಕೈಗಳಿಂದ ಬಳಿಯನ್ನು ಹಿಡಿದು ಮೇಲಕ್ಕೆತ್ತಲಾರಂಭಿಸಿದ....ಮೊದಲದು ಮಿಸುಕಲಿಲ್ಲ. ನಂತರ ಕ್ರಮೇಣವಾಗಿ ಬಿಗಿ ಸಡಿಲಾಗುತ್ತ ಬಂದು ಆಮೇಲೆ ಕಬ್ಬಿಣದ ಬಳೆ ಮೇಲೆ ಬರುತ್ತಿದ್ದಂತೆ ನೆಲಮನೆಯನ್ನು ಮುಚ್ಚಿಕೊಂಡಿದ್ದ ಫಡಕು ಸರಿಯತೊಡಗಿತು. ಸಾಕಷ್ಟು ಸರಿದ ಮೇಲೆ ಕೆಳಗೆ ಕಾಣಿಸುತ್ತಿದ್ದ ಮೆಟ್ಟಿಲುಗಳ ಮೇಲೆ ಕಾಲಿಟ್ಟು ಮತ್ತೆ ನಿಧಾನವಾಗಿ ಫಡಕನ್ನು ಕೈಬಿಡಲಾರಂಭಿಸಿದ. ಫಡಕ್ಕ ಮೊದಲಿನ ಸ್ಥಾನಕ್ಕೆ ಬಂದಿತು. ಗಪ್ ಎಂದು ಕವಿದ ಕಾರ್ಗತ್ತಲೆಯ ಮಧ್ಯದಲ್ಲಿ ಏಕಾಕಿಯಾಗಿ ನಿಂತ ಮೇಜರ್ ಹೇಮಂತ. ನೆಲಮನೆಯಲ್ಲಿಯ ನೆಲಮನೆಯೊಳಗೆ ಆತ ಪ್ರವೇಶಿಸಿದ್ದ. ಲೈಟರ ಉರಿಸಿದಾಗ ಸ್ವಲ್ಪ ಸ್ವಲ್ಪವಾಗಿ ಬೆಳಕು ಹರಡಿತು. ಅದೇ ಬೆಳಕಲ್ಲಿ ಕಟ್ಟಿಗೆಯ ಮೆಟ್ಟಿಲು ಇಳಿದು ಕೆಳಗೆ ಬಂದು ಕಾಲುಗಳು ಭೂಮಿ ಸ್ಪರ್ಶಿಸಿದಾಗ ಬದುಕುವ ಆಶೆ ಚಿಗುರೊಡೆದಿತ್ತು.

ಅದೊಂದು ಕಡಿಮೆ ಎತ್ತರದ ಹಾವಿನಂಥ ಮುರಿಗೆಯ ದಾರಿ. ಸ್ವಲ್ಪ ಮೇಲೆದ್ದರೆ ಸಾಕು. ತಲೆ ಮೇಲೆ ತಾಗುತ್ತಿತ್ತು. ತಂಪು ಜವಳಿನಲ್ಲಿ ಸಾಗಿದದಾರಿ ನಿಧಾನವಾಗಿ ಮೇಲಕ್ಕೇರುತ್ತ ಹೋಗಿ ಒಮ್ಮೆಲೇ ನಿಂತುಹೋಯಿತು. ಎದುರಿಗೆ ಹಳೆಯ ಕಾಲದ ಬಾಗಿಲು ಅದಕ್ಕೆ ಕೊಂಡಿಯಷ್ಟೇ ಹಾಕಿದ್ದು ಬೀಗವಿರಲಿಲ್ಲ. ಮುಂದೆ ಬಂದು ಕೊಂಡಿ ಕಳಚಿ ಬಾಗಿಲು ತೆರೆದ. ಕರ್ ಕರ್ ಎಂಬ ಸಪ್ಪಳದೊಂದಿಗೆ ಬಾಗಿಲು ನಿಧಾನವಾಗಿ ತೆರೆದುಕೊಂಡಿತು ಎದುರಿಗಿದ್ದುದನ್ನು ಕಂಡ ಅವನ ಕಣ್ಣುಗಳ ಮೇಲೆ ಅವನಿಗೆ ಮೊದ ಮೊದಲು ವಿಶ್ವಾಸ ಮೂಡಲಿಲ್ಲ. ಆತ ಹೊರಗೆ ಬಿಟ್ಟು ಬಂದಿದ್ದ ಅವನ ಕಾಂಟೆಸಾ ಹಾಯಾಗಿ ಗ್ಯಾರೇಜಿನಲ್ಲಿ ಕುಳಿತಿತ್ತು. ಕಣ್ಣಲ್ಲಿ ಹೊಳಪು ಮೂಡುತ್ತಿದ್ದಂತೆ ಹೊರಗೆ ಪೋರ್ಟಿಕೋದಲ್ಲಿ ಬಿಟ್ಟ ತನ್ನ ಕಾರನ್ನು ತಂಪು ಗ್ಯಾರೇಜಿನಲ್ಲಿ ನಿಲ್ಲಿಸಿದ ಬೋಳುತಲೆಯವಾತನನ್ನು ಮನದಲ್ಲೇ ಅಭಿನಂದಿಸುತ್ತ ಕಾರಿನತ್ತ ಧಾವಿಸಿದ. ನಾಲ್ಕಾರು ಹೆಜ್ಜೆ ಹೋಗಿರಬೇಕು ಅಷ್ಟೇ. ಗಕ್ ಎಂದು ನಿಂತುಬಿಟ್ಟ.ಮನದ ಮೂಲೆಯಲ್ಲಿ ಸಂಶಯಸರ್ಪ ಹೆಡೆಯಾಡತೊಡಗಿತು. ತನ್ನನ್ನು ಮುಗಿಸಲುಗುಡಾಣದಂಥಹೊಟ್ಟೆಯುವ ಕಾರನ್ನೇಕೆ ಬಳಸಿರಬಾರದು. ಅದರಲ್ಲಿ ಗುಪ್ತವಾಗಿ ಬಾಂಬನ್ನುಬಚ್ಚಿಟ್ಟಿರಬಾರದೇಕೆ? ಶ್ವಾಸ ಬಿಗಿಹಿಡಿದು ಸಮಸ್ತ ನರಗಳನ್ನು ಸೆಟೆಸಿ, ದೇಹವನ್ನೇ ಕಿವಿಯಾಗಿಸಿ ಟಿಕ್ ಟಿಕ್ ಸದ್ದು ಆಲಿಸಿದ. ಆ ಸದ್ದು ಕೇಳಿಬರಲಿಲ್ಲ. ಸ್ವಲ್ಪ ಸಮಾಧಾನವಾಯಿತು. ಮೆಲ್ಲ ಮೆಲ್ಲಗೆ ಕಾರಿನ ಬಳಿ ಬಂದ. ಬೀಗ ಹಾಕಿರಲಿಲ್ಲ.ಬೀಗ ಒಳಗೆ

ನೇತಾಡುತ್ತಿತ್ತು. 'ಬಾಗಿಲು ತೆಗೆದು ಚಾಲಕನ ಸ್ಥಾನದಲ್ಲಿ ಕುಳಿತ. ಕಾರ್ ಸ್ಟಾರ್ಟ್ ಮಾಡಲು ಕೀ ಕಡೆಗೆ ಕೈ ಒಯ್ದ. ಮತ್ತೆ ಅವನ ಕೈ ಅಲ್ಲೇ ಜಡ ವಾಯಿತು. ಅರೆ ಯಂತ್ರವನ್ನು ಪರೀಕ್ಷಿಸಲಿಲ್ಲ. ಯಂತ್ರದಲ್ಲಿ ಬಾಂಬ ಕೂಡಿಸಿ ದ್ದರೆ? ಕಾರು ಸ್ಟಾರ್ಟ್ ಆಗುತ್ತಲೂ ಬಾಂಬು ಸ್ಫೋಟಗೊಂಡು ಕಾರು ಭಗ್ ಎಂದು ಉರಿಯುತ್ತದೆ. ಅದರೊಂದಿಗೆ ತಾನೂ ಸಹ. ಜರ್ ಎಂದು ಮೈ ಬೆವರು ತಿತ್ತು. ಹಾಗೇ ಕೆಳಕ್ಕಿಳಿದ. ಇಳಿಯುವ ಮುನ್ನ ಎಡಭಾಗದಲ್ಲಿದ್ದ ಸ್ಪ್ರಿಂಗ್ ಜಗ್ಗಿದ ಬಾನಟ್ ತೆರೆದ, ಆಮೇಲೆ ಬಾನಟ್ ಮೇಲಕ್ಕೆತ್ತಿ ಚೆನ್ನಾಗಿ ಪರೀಕ್ಷಿಸಿದ. ಅಂಗುಲ ಅಂಗುಲ ನಿರೀಕ್ಷಿಸಿದರೂ ಅಪಾಯಕಾರಿ ವಸ್ತು ಯಾವದೂ ಕಣ್ಣಿಗೆ ಬೀಳಲಿಲ್ಲ. ಬಾನಟ್ ಮುಚ್ಚಿ ಎರಡು ಮೂರು ಬಾರಿ ಕಾರನ್ನು ಸುತ್ತುವರೆದು ದಿಟ್ಟಿಸಿದ ಕಾರಿನಡಿ ಸರಿದು ಅಲ್ಲಿಯೂ ನೋಡಿದ. ಎಲ್ಲೂ ಬಾಂಬ ಇಟ್ಟಿರುವದು ಕಂಡು ಬರಲಿಲ್ಲ. ಮನಸ್ಸಿಗೆ ಸಮಾಧಾನವಾಗಿ ಸರಸರನೆ ಕಾರಿನೊಳಗೆ ನುಗ್ಗಿ ಕುಳಿತ.

ಮರುಕ್ಷಣ ಠುಸ್ ಎಂದು ಗಾಳಿ ಹೋದ ಬಲೂನಿನಂತಾದ.

ಗ್ಯಾರೇಜಿನ ಬಾಗಿಲು ಮುಚ್ಚಿತ್ತು, ಅದನ್ನು ತೆರೆಯಬೇಕಲ್ಲ. ಬಾಗಿಲಿಗೇ ನಾದರೂ ವಿದ್ಯುತ್ ಅಲೆ ಜೋಡಿಸಿರಬಹುದೆ? ಹೊರಭಾಗದಲ್ಲಿ ಬಾಂಬ ಇಟ್ಟಿ ದ್ದರೆ? ಇದೇ ರೀತಿಯ ಹತ್ತಾರು ಆಶಂಕೆಗಳು ಕಾಡಿದವು. ಆದದ್ದಾಗಲಿ, ಸಾಯುವದಾದರೆ ಈ ರೀತಿ ಸರಳ ಸಾಯುವದಕ್ಕಿಂತ ಒಂದೇ ಸಾರಿ ಘುರ್ ಎನ್ನುತ್ತ ಹಾರಿಹೋದರಾಯಿತು ಎಂದು ನಿರ್ಧರಿಸಿ ಬಾಗಿಲು ತೆರೆಯಲು ಮುಂದಾದ.

ಎಷ್ಟು ಶಕ್ತಿ ಪ್ರಯೋಗಿಸಿದರೂ ಮರದಿಂದ ಮಾಡಿದ ಬಾಗಿಲು ಮಿಸುಕ ವಲಿಲ್ಲ. ಹೊರಗಿನಿಂದ ಭದ್ರವಾಗಿ ಮುಚ್ಚಿಕೊಂಡಿ ಹಾಕಿದ್ದು ಸ್ಪಷ್ಟವಾಯಿತು. ಬಾಗಿಲು ಮೇಲೆ ಧಪ್ ಧಪ್ ಬಾರಿಸಿ ಕೂಗಿದ: "ಹಲೋ...ಹಲೋ...ಹೊರಗೆ ಯಾರಿದ್ದೀರಿ?" ಕ್ಷಣಕಾಲ ತಡೆದು ಮತ್ತೆ ಬಾರಿಸಿ ಕೂಗಿದ "ಹೊರಗೆ ಯಾರಿ ದ್ದೀರಿ?" ನಾನು ಗ್ಯಾರೇಜ ಒಳಗಿನಿಂದ ಕೂಗುತ್ತಿದ್ದೇನೆ. ಬಾಗಿಲು ತೆರೆಯಿರಿ." ಗಂಟಲು ಹರಿಯುವಂತೆ ಕೂಗಿದರೂ ಯಾವ ಪ್ರತಿಕ್ರಿಯೆ ಬರಲಿಲ್ಲ. ಬಾಗಿಲ ಮೇಲೆ ಬಾರಿಸಿ ಬಾರಿಸಿ ಮೊದಲೇ ಸುಟ್ಟು ಹಣ್ಣಾಗಿದ್ದ ಕೈಗಳು ಒಡೆದು ರಕ್ತ ಒಸರಲಾರಂಭಿಸಿತು.

"ಹುಷ್ ಎಂದು ನಿಟ್ಟುಸಿರುಬಿಟ್ಟು ನೆಲಕ್ಕೆ ಕುಸಿದ.

ದೈವ ಮತ್ತೊಂದು ಬಾರಿ ಕೈಕೊಟ್ಟಿತ್ತು.

"ನಿನ್ನನ್ನು ನೋಡಿ ನನಗೆ ಕನಿಕರ ಮೂಡುತ್ತಿದೆ, ಮೇಜರ್ ಸಾಹ!

ನಿನ್ನಂಥ ಎಂಟೆದೆಯ ಬಂಟನಿಗೆ ಈ ದುರ್ಗತಿ ಬರಬಾರದು...."

ಅಪಹಾಸ್ಯದ ಮಾತು ಬಂದೆಡೆ ನೋಡಿದ ಹೇಮಂತ.

ನೆಲ ಮನೆಯ ಬಾಗಿಲಿಗೆ ನಿಂತಿದ್ದ ಗುಡಾಣದ ಹೊಟ್ಟೆ ಮಾಲಿಕ.... ಅವನ ಕೈಯಲ್ಲಿ ರಿವಾಲ್ವರ್...ಅದರ ಗುರಿ ಹೇಮಂತನತ್ತ.

"ಹಲೋ" ಮಿಸ್ಟರ್ ಚಾಲ್ಸ್ ಹೆಡ್ ಹೇಗಿದ್ದೀಯಾ?

"ನನ್ನನ್ನೇಕೆ ವಿಚಾರಿಸುತ್ತಿ. ನಿನ್ನ ಬಗ್ಗೆ ಹೇಳು."

"ನಾನು ಚೆನ್ನಾಗಿದ್ದೇನೆ. ನೀನು ನನಗಾಗಿ ಹೆಣೆದ ಸಾವಿನ ಬಲೆಯನ್ನು ಹೆಜ್ಜೆ ಹೆಜ್ಜೆಗೂ ಎದುರಿಸಿ ಕತ್ತರಿಸುತ್ತ ಮುನ್ನಡೆದಿದ್ದೇನೆ."

"ಶಾಬ್ಬಾಶ್...ನಿನ್ನ ಬಗ್ಗೆ ನನಗೆ ಹೆಮ್ಮೆ ಎನಿಸುತ್ತದೆ."

"ನನಗೂ ಅಷ್ಟೇ...ನನಗಿಂಥ ಪ್ರಬಲ ಅಡ್ಡಿಯನ್ನು ಇನ್ನೂವರೆಗೂ ಯಾರೂ ನೀಡಿರಲಿಲ್ಲ. ನೀನಾರೋ ನನಗೆ ತಿಳಿಯದು...ನೀನು ನನ್ನನ್ನೇಕೆ ಕೊಲ್ಲಲು ಯತ್ನಿಸುತ್ತಿರುವೆ ಅದೂ ತಿಳಿಯದು. ಆದರೂ ನೀನು ನನಗೆ ಸಮ ಬಲವಾಗಿ ನಿಂತು ಎದುರಿಸುತ್ತಿರುವೆಯಲ್ಲ! ಆ ಮೇಧಾವಿ ಶಕ್ತಿಗೆ ನಾನು ತಲೆ ಬಾಗಿಸುತ್ತಿರುವೆ, ನಿನಗೆ ನನ್ನ ಅಭಿನಂದನೆಗಳು."

"ವಂದನೆಗಳು. ಮೇಜರ್ ನೀನೀಡಿದ ಸರ್ಟಿಫಿಕೇಟ್ ನನ್ನ ಕಿರೀಟಕ್ಕೆ ಕೊಹಿನೂರ ವಜ್ರವಿದ್ದಂತೆ ನೀನೂ ಅಷ್ಟೇ! ನನಗೆ ಸರಿಜೋಡಿ ಹೇಗಿದ್ದರೂ ಸಾವಿನ ಬಾಗಿಲ ಮುಂದೆ ನಿಂತಿದ್ದೀಯಾ, ಅದಕ್ಕಾಗಿ ಸತ್ಯ ಹೇಳುತ್ತಿದ್ದೇನೆ ನನ್ನ ಹೆಸರು ಚಾಂಗ್‌ಚೆನ್ ನಿನ್ನ ದೇಶವಾಸಿಗಳು ನನ್ನನ್ನು ಭಾರತಕ್ಕೆ ಆಮಂತ್ರಿಸಿದ್ದಾರೆ. ಅವರ ದಾರಿಗೆ ಅಡ್ಡವಾಗಿರುವ ನಿನ್ನನ್ನೂ ನಿನ್ನ ಸಂಗಡಿಗರನ್ನೂ ಯಮಲೋಕಕ್ಕೆ ಅಟ್ಟಿ, ಭಾರತದಲ್ಲಿ ಮಾರಣಹೋಮ ನಡೆಸಲಿಕ್ಕೆ, ಪವಿತ್ರ ಗಂಗಾನದಿ ಹರಿದ ದೇಶದಲ್ಲಿ ರಕ್ತದ ಹೊಳೆ ಹರಿಸಲಿಕ್ಕೆ, ಜಗತ್ತಿಗೆ ಆದರ್ಶಪ್ರಾಯವಾಗಿರುವ ಪರಧರ್ಮ ಸಹಿಷ್ಣುತೆಗೆ ಹೆಸರಾಗಿರುವ ದೇಶದಲ್ಲಿ ಮತೀಯ ಗಲಭೆ ಎಬ್ಬಿಸಿ ರಕ್ತದೋಕುಳಿ ಆಡಿಸಲಿಕ್ಕೆ ಪ್ರಜಾಪ್ರಭುತ್ವದ ಮರವನ್ನು ಬೇರು ಸಹಿತ ಕಿತ್ತಿ ಪುನಃ ನಿನ್ನ ದೇಶವಾಸಿಗಳಿಗೆ ದಾಸ್ಯತ್ವದ ಬೇಡಿ ತೊಡಿಸಲಿಕ್ಕೆ ಇದಕ್ಕಾಗಿ ನನಗೆ ದೊರೆಯುವ ಹಣ ಒಂದು ಸಾವಿರ ಕೋಟಿ ಡಾಲರ್. ಒಂದು ಸಾವಿರ ಕೋಟಿ ಡಾಲರ್...ಹ್ಹ...ಹ್ಹ...ಹ್ಹ..."

ಹೇಮಂತನ ದೇಹದಲ್ಲಿ ಸಣ್ಣನೆ ನಡುಕ ಆರಂಭವಾಯಿತು. ಎಂಥ ಭಯಾನಕ ಸಂಚು...ಇದರ ಸೂತ್ರಧಾರ ಯಾರಿರಬಹುದು? ಈ ಸಂಚಿ ಸುಳಿವು ಸಾಂಬಮೂರ್ತಿ ಅವರಿಗೆ ಹೇಗೆ ತಿಳಿಯಿತು? ಆತ ಗಂಭೀರ ಚಿಂತನದಲ್ಲಿ ಮುಳುಗಿದ.

"ಮೇಜರ್...ಏಕೆ ಈ ಮೌನ...? ಸಾವಿನಂಜಿಕೆಯೇ?"

"ಸಾವಿಗೆ ಅಂಜುವವ ನಾನಲ್ಲ ಎಂಬುದು ನಿನಗೆ ಚೆನ್ನಾಗಿ ಗೊತ್ತಿದೆ"

"ಮತ್ತೇತರ ಚಿಂತೆ?"

"ಜನ್ಮ ನೀಡಿದ ನಾಡಿನ ಬಗ್ಗೆ ಉಸಿರು ನೀಡಿದ ದೇಶದ ಬಗ್ಗೆ."

"ಅದನ್ನಾರೂ ತಪ್ಪಿಸಲಾರರು ಮೇಜರ್. ನಿನ್ನ ದೇಶವನ್ನು ಭಗವಂತನೂ ಕಾಪಾಡಲಾರ."

"ಚಾಂಗ್‌ಚಿನ್... ಈ ಪವಿತ್ರ ಭಾರತದ ಮಣ್ಣಲ್ಲಿ ಕಾಲಿಟ್ಟ ನಿನ್ನಂಥ ರಾಕ್ಷಸರು ಇನ್ನೂವರೆಗೂ ಯಾರೂ ಜೀವಂತ ಮರಳಿ ಹೋಗಿಲ್ಲ. ಯಾವ ದೇಶದಲ್ಲಿ ರಕ್ತದ ಹೊಳೆ ಹರಿಸಿ ಹೆಣಗಳ ರಾಶಿ ಚೆಲ್ಲಲು ಬಂದಿದ್ದಾರೋ ಅವರೇ ಇಲ್ಲಿ ಬೀದಿಯ ಹೆಣವಾಗಿದ್ದಾರೆ ನೀನೂ ಅಷ್ಟೇ."

"ನೋಡೋಣ...ಯಾರು ಹೆಣವಾಗುತ್ತಾರೋ ಅಂತ...ಮೊದಲು ನೀನು ಹೆಣವಾಗದಂತೆ ನೋಡಿಕೋ."

ಚಾಂಗ್‌ಚಿನ್‌ನ ಚಿಕ್ಕ ಚಿಕ್ಕ ಕಣ್ಣುಗಳು ಭಯಾನಕವಾಗಿ ಅರಳಿದವು. ಅವನ ಮುಖದಲ್ಲಿ ರಾಹುಕೇತು ಇಬ್ಬರೂ ಕುಣಿಯತೊಡಗಿದರು. ವಿಕಟವಾಗಿ ನಕ್ಕ ಆತ ತನ್ನ ದೊಗಳೆ ಪ್ಯಾಂಟಿಗೆ ಕೈ ಹಾಕಿ ಚಾಕಲೇಟಿನಂತಹ ಐದಾರು ವಸ್ತುಗಳನ್ನು ತೆಗೆದ. ಹಲ್ಲಿನಿಂದ ಕಚ್ಚಿ ಕಚ್ಚಿ ಒಂದೊಂದಾಗಿ ತೂರಿ ಹೇಮಂತನ ಮೇಲೆ ಎಸೆದು ಸರಕ್ಕನೇ ಹಿಂದೆ ಸರಿದು ಬಾಗಿಲು ಎಳೆದುಕೊಂಡ ಹಿಂದಿನಿಂದ ಭದ್ರವಾಗಿ ಕೊಂಡಿ ಹಾಕಿದ ಸದ್ದು ಸ್ಪಷ್ಟವಾಗಿ ಕೇಳಿಸಿತು. ಆತ ಕೈಬಾಂಬು ಚೆಲ್ಲಿರಬಹುದೆಂಬ ಶಂಕೆಯಿಂದ ಕಾರಿನ ಪಕ್ಕಕ್ಕೆ ನೆಗೆದಿದ್ದ ಮೇಜರ್. ಒಂದೆರಡು ನಿಮಿಷ ನೆಲಕ್ಕೊರಗಿ ಉಸಿರು ಬಿಗಿ ಹಿಡಿದು ಒರಗಿಕೊಂಡ.

ಠಿಸ್..ಠಿಸ್..ಸ್‌ಸ್‌ಸ್...ವಿಚಿತ್ರ ಸದ್ದು ಅದರ ಜೊತೆಗೆ ಮಂಜಿನಂತೆ ಬಿಳಿ ಹೊಗೆ ಗ್ಯಾರೇಜಿನ ತುಂಬ ವ್ಯಾಪಿಸತೊಡಗಿತು. ಬಾಂಬ ಅಂತೂ ಅಲ್ಲ. ವಿಷದ ಗ್ಯಾಸು ಏಕಾಗಿರಬಾರದೆಂಬ ಭಯದಿಂದ ಉಸಿರು ಬಿಗಿ ಹಿಡಿದೇ ಎದ್ದು ನಿಂತ ಹೇಮಂತ. ಚಾಕಲೇಟಿನಂಥ ಆ ವಸ್ತುಗಳ ಶೋಧನೆಯಲ್ಲಿ ತೊಡಗಿದ. ಎಲ್ಲೆಲ್ಲೋ ಉರುಳಿಬಿದ್ದು ಅಲ್ಲಿಂದಲೇ ರಭಸದಿಂದ ಬಿಳಿ ಹೊಗೆ ಕಾರುತ್ತಿರುವ ಆ ವಸ್ತುಗಳು ಎಲ್ಲಿವೆ ಎಂಬುದೇ ತಿಳಿಯದಂತಾಯಿತು. ಉಸಿರು ಬಿಗಿ ಹಿಡಿಯುವದಾದರೂ ಎಷ್ಟು ಹೊತ್ತು ಎದೆಯಲ್ಲಿ ಬೆಂಕಿ ಇಟ್ಟಂತೆ ವೇದನೆ ಆರಂಭವಾದಾಗ ಆದದ್ದಾಗಲಿ ಎಂದುಕೊಂಡು ಉಸಿರುಬಿಟ್ಟು ಸಾವಧಾನದಿಂದ ಮತ್ತೆ ಉಸಿರು ಎಳೆದುಕೊಂಡ. ಆಶ್ಚರ್ಯ ಅದು ವಿಷದ ಅನಿಲವಾಗಿರಲಿಲ್ಲ.

ಸುವಾಸನೆ ಹೊರಸೂಸುವ ಮಧುರ ಹೊಗೆ.... ಹೇಮಂತ ಮತ್ತೆ ಗ್ಯಾರೇಜ್ ಬಳಿ ಬಂದು ಬಾಗಿಲು ತೆರೆಯಲು ಕೂಗತೊಡಗಿದ.... ಕೂಗಿ ಕೂಗಿ ಗಂಟಲು ಒಣಗಿತು.... ಆತ ಬೆವತು ಒದ್ದೆಯಾದ.... ಆವಾಗಲೇ ಆತ ಬೆಚ್ಚಿ ಬೀಳಬೇಕಾಯಿತು.

* * * *

ಹಿಂದಿನಿಂದ ಬೆನ್ನು ಮೇಲೆ ಒತ್ತಡ.... ಯಾರೋ ಬಲವಾಗಿ ಒತ್ತುತ್ತಿರುವಂತೆ ಆತ ಆ ಒತ್ತಡಕ್ಕೆ ಮಣಿದು ಗ್ಯಾರೇಜಿನ ಬಾಗಿಲಿಗೆ ಅಂಟಿಕೊಳ್ಳತೊಡಗಿದ. ತನ್ನ ಹಿಂದಿನಿಂದ ಬಂದವರಾರು? ಬಂದದ್ದಾದರೂ ಹೇಗೆ? ಈ ರೀತಿ ಒತ್ತಡ ಹೇರಲು ಕಾರಣವೇನು? ಎಂಬ ಹತ್ತಾರು ಪ್ರಶ್ನೆಗಳು ಕಾಡುತ್ತಿರುವಂತೆ ಪ್ರಯತ್ನಪಟ್ಟು ಹೊರಳಿ ನೋಡಿದ. ಸುಲಭವಾಗಿ ಹೊರಳಲಾಗಲಿಲ್ಲ. ಹಿಂದಿನಿಂದ ಇರುವ ಒತ್ತಡದ ಜೊತೆಗೇ ಸುತ್ತಲೂ ಬಲವಾಗಿ ಬಿಗಿಯುತ್ತಿರುವ ಬಂಧನ ಶುರುವಾಯಿತು.

ಆ ಬಂಧನ ಕ್ಷಣ ಕ್ಷಣಕ್ಕೂ ಹೆಚ್ಚುತ್ತಲೇ ಹೋಯಿತು. ಏನಿದು? ಇದು ಮಾನವ ಶಕ್ತಿಯಂತೂ ಅಲ್ಲ, ಹಾಗಾದರೆ ಏನಿರಬಹುದು? ಮೆದುಳು ತೀವ್ರ ಗತಿಯಲ್ಲಿ ಯೋಚಿಸತೊಡಗಿತು. ಉತ್ತರ ಹೊಳೆಯಲು ವಿಳಂಬವಾಗಲಿಲ್ಲ. ಸುತ್ತಲೂ ದಿಗ್ಬಂಧನ ಹಾಕಿದ್ದು ಶ್ವೇತವರ್ಣದ ಗ್ಯಾಸೆಂಬುದುಸ್ಪಷ್ಟವಾಯಿತು. ಹೀಗೆ ಶರಣಾಗತನಾದರೆ ಕ್ಷಣ ಮಾತ್ರದಲ್ಲಿ, ಆ ಗ್ಯಾಸಿನ ಒತ್ತಡಕ್ಕ ಸಿಲುಕಿದ ತಾನು ಲಾರಿ ಅಡಿ ಸಿಲುಕಿದ ಟೊಮೆಟೋದಂತಾಗುತ್ತೇನೆಂಬುದು ಖಾತ್ರಿಯಾಯಿತು. ಸರ್ವಪ್ರಯತ್ನ ಮಾಡಿ ಪಾರಾಗಿ ಕಾರು ಸೇರಿದರೆಮಾತ್ರ ಮುಕ್ತಿ ಎಂದು ಗ್ರಹಿಸಿದ ಆತ ಸರ್ವಶಕ್ತಿ ವಿನಿಯೋಗಿಸಿ ಹೊರಳಿ ಕಾರಿನತ್ತ ನಡೆದ... ದೇಹ, ಕೈಕಾಲು ಮಣಭಾರವಾಗಿದ್ದವು. ಕಿತ್ತಿಡಲು ಸಾಧ್ಯವಿಲ್ಲ. ಎದುರಿನಿಂದ ಭಾರಿ ಒತ್ತಡ. ಆ ಒತ್ತಡವನ್ನು ಹಿಂದಕ್ಕೆ ನೂಕಿ ಆತ ನಿಧಾನವಾಗಿ ಹೆಜ್ಜೆ ಇಡುತ್ತಾ ಕಾರು ಸಮೀಪಿಸಿದ. ಬಾಗಿಲು ತೆಗೆಯಹೋದರೆ ತೆರೆಯಲಿಕ್ಕಾಗದು. ಬಾಗಿಲ ಮೇಲೂ ಗ್ಯಾಸಿನ ಒತ್ತಡ. ಅಲ್ಲಿಯೂ ಸಂಘರ್ಷ. ಸುಲಭವಾಗಿ ಸೋಲದ ಹೇಮಂತ ಕಾರಿನ ಬಾಗಿಲನ್ನು ತೆರೆಯಲು ಸಫಲನಾಗಿದ್ದ. ಒಳಗೆ ನುಗ್ಗಿ ಸರಕ್‌ನೇ ಮತ್ತೆ ಮುಚ್ಚುವಷ್ಟರಲ್ಲಿ ಸ್ವಲ್ಪಭಾಗ ಬಿಳಿಗ್ಯಾಸು ಒಳಗೆ ಪ್ರವೇಶಿಸಿತ್ತು. ಹಾಯಾಗಿ ಉಸಿರು ಬಿಟ್ಟ. ಒಳಗಡೆ ಉಸಿರು ಸಾಕಾಗಲಿಲ್ಲ. ಏರಕಂಡೀಶನರ ಬಟನ್ ಅದುಮಿದ. ಭರ್ರ್, ಎಂಬ ಸದ್ದಿನೊಂದಿಗೆ ತಂಪಾದ ಗಾಳಿ ಹಾಯೆನಿಸಿತು. ಮರುಕ್ಷಣ ಏರಕಂಡೀಶನರ ಮೂಲಕ ಬಿಳಿ ಗ್ಯಾಸ್ಸು ಕಾರಿನೊಳಗೆ ದಾಳಿ ಇಟ್ಟಿತು. ಗಾಬರಿಯಾಗಿ ಅದನ್ನು ಬಂದು ಮಾಡಿ ದಿಕ್ಕು

ತಪ್ಪಿದಂತಾಗಿ ತೆಪ್ಪಗೆ ಕುಳಿತ.

ಕಾರಿನ ಸುತ್ತಮುತ್ತ ಶ್ವೇತವರ್ಣದ ಗ್ಲಾಸಿನ ಸಾಮ್ರಾಜ್ಯ. ಈಗದರ ಒತ್ತಡ. ಈ ಕಾರಿನ ಮೇಲೆ ಅರ್ಧನಿಮಿಷ ಕಳೆದಿರಲಿಲ್ಲ. 'ಫಳಾರ್' ಸದ್ದಿನೊಂದಿಗೆ ಕಾರಿನ ಗ್ಲಾಸುಗಳು ಒಂದೊಂದಾಗಿ ಸಿಡಿದು ಪುಡಿ ಪುಡಿಯಾದವು. ನಾಲ್ಕಾರು ತುಂಡುಗಳು ಸಿಡಿದು ಅವನ ದೇಹದ ಮೇಲೆ ಗಾಯಗಳಾದವು. ಒಮ್ಮೆಲೆ ಹೊರಗಿದ್ದ ಗ್ಲಾಸು ಒಳನುಗ್ಗಿ ಅವನನ್ನು ಮುದ್ದೆ ಮಾಡತೊಡಗಿತು.

ಬದುಕಬೇಕು. ಬದುಕಲು ಏನಾದರೂ ಮಾಡಲೇಬೇಕು.

ಹೇಮಂತ ಒಂದು ನಿರ್ಧಾರಕ್ಕೆ ಬಂದ. ಗಟ್ಟಿ ಮನಸ್ಸು ಮಾಡಿ ಕಾರು ಸ್ಟಾರ್ಟ್ ಮಾಡಿದ. ಗೇರು ಬದಲಿಸಿ ವೇಗವಾಗಿ ಮುನ್ನುಗ್ಗಿದ. ಕಾರು ಬಂದು ಗ್ಯಾರೇಜ್‌ನ ಬಾಗಿಲಿಗೆ ಢೀ ಕೊಟ್ಟಿತು. ಬಾಗಿಲು ಕಿಮಕ್ ಅನ್ನಲಿಲ್ಲ. ಎರಡು ಮೂರು ಬಾರಿ ಇದೇ ರೀತಿ ಪ್ರಯತ್ನಿಸಿದ. ಪ್ರತಿ ಬಾರಿ ಕಾರಿನ ಮುಂದಿಟ್ಟ ಗ್ಲಾಸು ಕಾರಿನ ವೇಗವನ್ನು ತಡೆಯುತ್ತಿತ್ತು. ಮೇಜರ್ ಸೋತು ಸಣ್ಣಗಾದ ಕಣ್ಣು ಮುಂದೆ ಕತ್ತಲೆ ಕವಿಯಲಾರಂಭಿಸಿತು. ಅದೇ ವೇಳೆಗೆ ಕಣ್ಣಿಗೆ ಬಿದ್ದದ್ದು "ಟರ್ಬೋ" ವಿಶಿಷ್ಟ ಸಂದರ್ಭದಲ್ಲಿ ಅತ್ಯಧಿಕ ಶಕ್ತಿಯ ಅವಶ್ಯಕತೆ ಬಿದ್ದಾಗ ಉಪಯೋಗಿಸಲೆಂದು ಅಳವಡಿಸಿದ್ದ ಶಕ್ತಿಶಾಲಿ ಯಂತ್ರ ಟರ್ಬೋ.

ಅದೇ ಅವನ ಕೊನೆಯ ಆಸರೆ.

ಟರ್ಬೋದ ಗುಂಡಿ ಅದುಮಿದ. ಕಾರಿನ ವೇಗ ಹೆಚ್ಚಿಸಿದ. ಬ್ರೇಕ್ ಮೇಲೆ ಬಲವಾಗಿ ಕಾಲಿನಿಂದ ಒತ್ತಿದ ಕಾರು ಗುಂಯೀ...ಯೀ ಎಂದು ಕರ್ಣಪಟಲ ಹರಿದು ಹೋಗುವಂತೆ ಕೂಗತೊಡಗಿತು. ಅದು ಸಹಿಸಲಸಾಧ್ಯವಾದಾಗ ಒಮ್ಮೆಲೇ ಬ್ರೇಕ್ ಮೇಲೆ ಬಲವಾಗಿ ಒತ್ತಿದ್ದ ಕಾಲನ್ನು ಕಿತ್ತಿದ. ತೋಫಿನಿಂದ ಸಿಡಿದ ಬೆಂಕಿ ಚೆಂಡಿನಂತೆ ಮುನ್ನುಗ್ಗಿದ ಕಾರು ಗ್ಯಾರೇಜಿನ ಮರದ ಬಾಗಿಲಿಗೆ ಅಪ್ಪಳಿಸಿತು. ಭಾರಿ ಆಸ್ಫೋಟ ಬಾಗಿಲು ಮುರಿದುಬಿದ್ದು ಅದನ್ನು ತೂರಿಕೊಂಡು ಹೊರಗೆ ಬಂದ ಕಾರು ಮದಿರೆ ಸೇವಿಸಿದಂತೆ ಹುಚ್ಚುಚ್ಚಾಗಿ ಓಡುತ್ತ ಬಂದು ಎದುರಿಗಿದ್ದ ಬೃಹದಾಕಾರದ ಮರಕ್ಕೆ ಅಪ್ಪಳಿಸಿತು.

ಚಾಲಕ ಸ್ಥಾನದಲ್ಲಿದ್ದ ಹೇಮಂತನನ್ನು ಯಾವದೋ ದೈತ್ಯ ಶಕ್ತಿ ಮೇಲೆ ಎತ್ತಿ ತೂರಿ ಒಗೆದಂತಾಗಿ ಆತ ಕಿಟಾರನೆ ಕಿರುಚಿಕೊಂಡ.

* * * *

ಅರಗಿನ ಮನೆಯಂತೆ ರಂಗಮಹಲಿನ ಒಂದು ಭಾಗ ಧುರಧುರನೆ ಉರಿಯುತ್ತಿರುವ ದೃಶ್ಯ ಕಂಡು ಅಶೋಕನ ಜಂಘಾಬಲವೇ ಉಡುಗಿಹೋಗಿತ್ತು. ಟೆಲಿಫೋನಿನಲ್ಲಿ ಕೇಳಿದ ಸಂಭಾಷಣೆ ಪ್ರಕಾರ ರಂಗಮಹಲಿನಲ್ಲಿ ಮೇಜರ್ ಹೇಮಂತ

ಇರಬೇಕಾಗಿತ್ತು.... ಅದೇ ರಂಗವುಹಲಿನಲ್ಲಿಯ ಒಂದು ಭಾಗ ಅಗ್ನಿಗಾಹುತಿ ಯಾಗಿರುವದು ಆಶಂಕೆಗಳಿಗೆ ಎಡೆಮಾಡಿಕೊಡುವಂತಿತ್ತು.... ಸುಷಮಾಳಂತೂ ಭೂಮಿಗಿಳಿದು ಹೋಗಿದ್ದಳು. ಹತ್ತತ್ತು ಥಾಂಡಿಗರನ್ನು ಒಬ್ಬಂಟಿಗಳಾಗಿ ಎದುರಿಸಿ, ಹಣ್ಣುಗಾಯಿ ನೀರುಗಾಯಿ ಮಾಡುವ ಸಾಮರ್ಥ್ಯ ಪಡೆದಿದ್ದರೂ ಮೇಜರನ ಪರಿಸ್ಥಿತಿ ನೆನೆದಾಗ ಆಕೆ ತನ್ನತನ ಕಳೆದುಕೊಂಡಿದ್ದಳು. ಇಂಥ ದುರ್ಧರ ಪ್ರಸಂಗದಲ್ಲಿ ಅಶೋಕನೇ ಧೈರ್ಯ ತೆಗೆದುಕೊಂಡು ಮುಂದಾದ. ತಬ್ಬಿಬ್ಬಾಗಿ ನಿಂತಿದ್ದ ಸುಷಮಾಳನ್ನು ತಟ್ಟಿ ಧೈರ್ಯ ಹೇಳಿದ: "ಸುಷಮಾ.... ಏಯ್ ಸುಷಮಾ...."

"ಆಂ....! ಏನು?" ಎಚ್ಚತ್ತು ಸುಷಮಾ ಅಶೋಕನತ್ತ ನೋಡಿದಳು.

"ಬಾ.... ಒಳಗೆ ಹೋಗೋಣ...."

ಅವಳ ಉತ್ತರಕ್ಕೂ ಕಾಯದೇ ಅಶೋಕ ಗೇಟಿನತ್ತ ಓಡಿದ. ಗೇಟಿನ ಬೀಗ.... ತಡಮಾಡದೆ ಆತ ಸರಸರನೆ ಕಬ್ಬಿಣದ ಗೇಟು ಏರಿ ಒಳಗೆ ಜಿಗಿದ. ಸುಷಮಾ ಸಹ ಅವನನ್ನು ಅನುಸರಿಸಿದಳು. ಇಬ್ಬರೂ ಉರಿಯುತ್ತಿದ್ದ ಭಾಗದತ್ತ ಓಡಿದರು. ಅವರಿಬ್ಬರೂ........ಎಚ್ಚರಿಕೆಯಿಂದ.......ಸುತ್ತಲೂ ನೋಡುತ್ತಿದ್ದರು....

ಬೃಹತ್ ಅರಮನೆಯ ಒಂದು ಚಿಕ್ಕಭಾಗ ಮಾತ್ರ ಅಗ್ನಿಗೆ ಅಂಟಿ ಕೊಂಡಿತ್ತು. ಅಶೋಕ.... ಆಕಡೆ ಈಕಡೆ ನೋಡಿ ಹೇಗೋ ಒಂದೆಡೆ ದಾರಿ ಮಾಡಿಕೊಂಡು ಒಳಗೆ ನುಗ್ಗಿದ. ಆತನ ದಾರಿಕಾಯುತ್ತ ಸುಷಮಾ ಹೊರಗೇ ನಿಂತಳು.... ಐದು ಹತ್ತು ನಿಮಿಷಗಳಲ್ಲಿ ಅಶೋಕ ಹೊರಗೆ ಬಂದ.

"ಇಲ್ಲ.... ಒಳಗಡೆ ಮೇಜರನ ಸುಳಿವಿಲ್ಲ."

"ಆಂ....!"

"ಹೌದು.... ನನಗನಿಸುವ ಮಟ್ಟಿಗೆ ಮೇಜರ್ ಇಲ್ಲಿ ಬಂದೇ ಇಲ್ಲ"

"ಹಾಗಾದರೆ ಫೋನಿನಲ್ಲಿ ಕೇಳಿದ್ದರ ಅರ್ಥವೇನು?"

"ಮಧ್ಯ ದಾರಿಯಲ್ಲಿ ಆತನಿಗೆ ಬೇರೆ ಯಾರಾದರೂ ಸಂದೇಶ ಮುಟ್ಟಿಸಿರ ಬೇಕು. ಅಥವಾ ಭೆಟ್ಟಿಯಾಗಿ ಬೇರೆಡೆ ಕರೆದೊಯ್ದಿರಬೇಕು."

"ನನಗೇಕೋ ನಿನ್ನ ಮಾತು ಒಪ್ಪಿಗೆಯಾಗುತ್ತಿಲ್ಲ. ಅವರುಇಲ್ಲೇ ಎಲ್ಲೋ ಇರಬೇಕು ಎಂದು ನನ್ನ ಮನಸ್ಸು ಹೇಳುತ್ತಿದೆ."

"ಹುಚ್ಚಿಯಂತೆ ಮಾತಾಡಬೇಡ. ಮೇಜರ್ ಇಲ್ಲಿಗೆ ಬಂದಿದ್ದರೆ ಅವರ ಕಾಂಟೆಸ್ಸಾ ಕಾರು ಇಲ್ಲೇ ಇರಬೇಕಲ್ಲ? ಅದೆಲ್ಲಿದೆ?"

ಸುಷಮಾಳಿಗೂ ಅವನ ವಾದ ಸರಿ ಎನಿಸಿತು. ಇಲ್ಲಿಯವರೆಗೂ ಅವರಿಗೆ

ಮೇಜರರ ಕಾರು ಕಣ್ಣಿಗೆ ಬಿದ್ದಿರಲಿಲ್ಲ.

"ಮುಂದೇನು ಮಾಡುವದು?"

"ಮೊದಲು ಅಗ್ನಿಶಾಮಕ ದಳದವರಿಗೆ ಫೋನು ಮಾಡುವದು. ಆಮೇಲೆ ಪೊಲೀಸ ಠಾಣೆಗೆ."

"ಅದಕ್ಕೂ ಮೊದಲು ಮನೆಗೆ ಫೋನು ಮಾಡೋಣ. ಮೇಜರ್ ಏನಾದರೂ ಮರಳಿ ಮನೆಗೇ ಹೋಗಿದ್ದರೆ....ಗೊತ್ತಾಗುತ್ತದೆ."

"ಸರಿ ಹಾಗೇ ಮಾಡೋಣ ನಡೆ."

ಇಬ್ಬರೂ ಓಡುತ್ತ ಗೇಟಿನವರೆಗೆ ಬಂದರು. ಮುನ್ನಿನಂತೆ ಗೇಟು ಹಾರಿ ಕಾರಿನ ಬಳಿ ಬಂದರು. ಅಶೋಕನೇ ಕಾರು ನಡೆಸತೊಡಗಿದ....ಸುಷಮಾ ಬೊಂಬೆಯಂತೆ ಕುಳಿತಿದ್ದಳು. ಕಾರು ಒಂದು ಹೆದ್ದಾರಿ ಸೇರಿ ನಗರದತ್ತ ಧಾವಿಸತೊಡಗಿತು. ಸುಮಾರು ಒಂದು ಕಿಲೋಮೀಟರ್ ದೂರ ಬಂದಿರಬೇಕು ಅಷ್ಟೇ...ರಸ್ತೆ ಪಕ್ಕದಲ್ಲಿ ನಿಂತ ಕಾರಿನ ಬಳಿಯಿಂದ ವ್ಯಕ್ತಿಯೊಂದು ರಸ್ತೆಗೆ ಬಂದು ಕೈ ಮಾಡಿ ನಿಲ್ಲಿಸುವಂತೆ ಸೂಚಿಸಿತು. ರಾತ್ರಿ ಸಮಯ...ಏನೋ ತೊಂದರೆ ಇರಬೇಕೆಂದು ಅಶೋಕ ಗಾಡಿ ನಿಲ್ಲಿಸಿದ. ಕಾರಿನ ಬೆಳಕಿನಲ್ಲಿ ಕಂಡ ಆ ಅತ್ಯಂತ ಎತ್ತರದ ಅಷ್ಟೇ ದಷ್ಟಪುಷ್ಟ ವ್ಯಕ್ತಿಯನ್ನು ಕಂಡ. ಕಿಟಕಿಯಿಂದ ಸುಷಮಾ ಇಣುಕಿದಾಗ ಅವಳ ದೃಷ್ಟಿಗೆ ಬಿದ್ದ ಮೊದಲ ವಸ್ತು ಎಂದರೆ ಅವನ ಗುಡಾಣದಂಥ ಹೊಟ್ಟೆ. ದಿನ ತುಂಬಿದ ಗರ್ಭಿಣಿಗೂ ಸಹ ಆ ಪರಿ ಹೊಟ್ಟೆ ಇರಲಿಕ್ಕಿಲ್ಲ..ಅಂಥ ಸಮಯದಲ್ಲೂ ಅವಳಿಗೆ ನಗೆ ಬಂತು. ಕಷ್ಟಪಟ್ಟು ತಡೆದುಕೊಂಡಳು.

"ಏನಾಗಬೇಕಿತ್ತು?" ಅಶೋಕ ಕಿಟಕಿಯಿಂದ ಹೊರಗೆ ತಲೆ ಹಾಕಿ ಕೇಳಿದ.

"ಟೈರ್‌ಪಂಕ್ಚರ್ ಆಗಿದೆ. ದಯವಿಟ್ಟು ಸಹಾಯಮಾಡಿ."

"ಏನಾಗಬೇಕು?"

"ಇಲ್ಲಿಂದ ಎರಡೇ ಕಿಲೋಮೀಟರ್ ದೂರದಲ್ಲಿ ನನ್ನ ಮನೆ ಇದೆ. ತಾವು ಸಹಾಯ ಮಾಡಿದರೆ ಐದು ನಿಮಿಷಗಳಲ್ಲಿ ಅಲ್ಲಿಂದ ಟಾಯರ್‌ತರಬಹುದು."

"ಸಾರಿ ಸರ್...ಸಮಯವಿಲ್ಲ..ಅರ್ಜಂಟಾಗಿಫೋನು ಮಾಡಬೇಕಾಗಿದೆ."

"ಇನ್ನೂ ಒಳ್ಳೆಯದಾಯಿತಲ್ಲ...ನಮ್ಮ ಮನೆಯಲ್ಲಿ ಫೋನಿದೆ."

ಹುಡುಕಿ ಹೊರಟಿರುವ ಬಳ್ಳಿ ಕಾಲಿಗೆ ತೊಡಕಿದಂತಾಯ್ತು. ಅಶೋಕ ಸುಷಮಾಳತ್ತ ನೋಡಿದ.

"ಏನು ಮಾಡೋಣ. ಮನೆ ಸೇರಿ ಫೋನು ಮಾಡಬೇಕೆಂದರೆ, ಒಂದು

ಗಂಟೆಯಾದರೂ ಬೇಕು."

"ನಿನಗೆ ಸರಿ ಕಂಡಂತೆ ಮಾಡು..." ಅನ್ಯಮನಸ್ಕಳಾಗಿ ನುಡಿದಳಾಕೆ.

"ಸರಿ ನಡೆಯಿರಿ" ಎಂದ ಅಶೋಕ. ಆತ ಬಂದು ಹಿಂದೆ ಕುಳಿತ.

ಕಾರು ಹೊರಳಿಸಿದ ಅಶೋಕ. ಮತ್ತೆ ವಿರುದ್ಧದಿಕ್ಕಿನಲ್ಲಿಓಡಿಸತೊಡಗಿದ. ಎರಡು ಮೂರು ಕಿಲೋಮಿಟರ್ ಅಲ್ಲ, ಎಂಟು ಹತ್ತು ಕಿಲೋಮೀಟರ ಆದ ಮೇಲೆ ಬಲಕ್ಕೆ ಹೊರಳಿಸಲು ಹೇಳಿದ. ಇದಕ್ಕೂ ಮೊದಲು ಅಶೋಕನಿಗೆ ತಾವು ಅಲ್ಲಿಯವರೆಗೂ ಬಂದು ಹೋದದ್ದು, ಪೋಸ್ಟಮ್ಯಾನ್‌ನಿಂದ ರಂಗ ಮಹಲ ವಿಳಾಸ ಪಡೆದದ್ದು ನೆನಪಾಯಿತು.

ಅದೊಂದು ಚಿಕ್ಕಹಳ್ಳಿ. ಆಗಲೇ ರಾತ್ರಿ ಹನ್ನೆರಡು ದಾಟಿದ್ದರಿಂದಾಗಿ ಊರೆಲ್ಲ ಮೌನವಾಗಿತ್ತು. ಬಾಲಮುದುರಿ ಮಲಗಿದ್ದ ನಾಯಿಗಳು ಮಲಗಿದ ಲ್ಲಿಂದಲೆ ಬೌಬೌ ಎಂದು ಮೌನವಾದವು. ಜೋಡಿ ಮನೆಯೊಂದರ ಬಳಿ ಕಾರು ನಿಲ್ಲಿಸಿ ಕೆಳಗಿಳಿದ. ಅವನ ಜೊತೆ ಸುಷಮಾ....ಆಕೆ ಸುತ್ತಲೂ ದಿಟ್ಟಿಸಿ ಕೇಳಿದಳು.

"ಅರೆ....ಟೆಲಿಫೋನ್ ಕಂಬವೇ ಇಲ್ಲಿಲ್ಲ....ಫೋನು ಎಲ್ಲಿದೆ?"

"ಹೌದಲ್ಲ....ಏನ್ರಿ....ಎಲ್ಲಿದೆ ಫೋನು" ಅಶೋಕ ಹೊರಳಿ ಕೇಳಿದ.

ಅಷ್ಟರಲ್ಲಿ ಆತ ಕೆಳಗಿಳಿದಿದ್ದ. ಜೇಬಿಗೆ ಕೈ ಹಾಕಿ ಪಿಸ್ತೂಲ್ ಮುಖಕ್ಕೆ ಹಿಡಿದ.

"ಇದೇ ಟೆಲಿಫೋನು ಬಾಯಿಮುಚ್ಚಿಕೊಂಡು ಒಳಗೆ ನಡೆಯಿರಿ...."

ಅವರಿಬ್ಬರೂ ಮತ್ತೆ ಶತ್ರುವಿನ ಕೈಗೆ ಸಿಲುಕಿಕೊಂಡಿದ್ದರು. ಎರಡನೇ ಮಾರ್ಗವಿರಲಿಲ್ಲ. ಮೆಟ್ಟಿಲು ಹತ್ತಿ ಕೀಲಿ ಹಾಕಿದ ಮನೆಯೆದುರು ನಿಂತು ಕೀಲಿ ಕೈಕೊಟ್ಟು ಆತ ಬೀಗ ತೆರೆಯಲು ಆದೇಶ ನೀಡಿದ....ಅಶೋಕ ಕೀಲಿ ತೆಗೆದ.... ಮೊದಲು ಅವರಿಬ್ಬರನ್ನು ದೂಡಿ ಹಿಂದಿನಿಂದ ಆತ ಒಂದು ದೀಪ ಉರಿಸಿದ. ಬಾಗಿಲು ಮುಚ್ಚಿ ಚಿಲಕ ಹಾಕಿದ.

"ಯಾರು ನೀನು? ನಮ್ಮನ್ನೇಕೆ ಇಲ್ಲಿಗೆ ಕರೆತಂದೆ?" ಅಶೋಕ ಸಿಟ್ಟಿನಿಂದ ಕೇಳಿದ.

"ಶಾಂತಿ....ಶಾಂತಿ....ಮೊದಲು ನನ್ನ ಕೆಲಸ, ನಂತರ ನಿಮ್ಮ ಪ್ರಶ್ನೆಗೆ ಉತ್ತರ....ಆತ ಸುಷಮಾಳಿಗೆ ನೇತಾಡುತ್ತಿದ್ದ ಹಗ್ಗದಿಂದ ಅಶೋಕನ ಕಾಲು ಕಟ್ಟುವಂತೆ ಆಜ್ಞಾಪಿಸಿದ. ಸುಷಮಾ ಹಾಗೇ ಮಾಡಿದಳು. ಆಮೇಲೆ ಅವನಿಂದ ಸುಷಮಾಳ ಕಾಲು ಹಗ್ಗದಿಂದ ಕಟ್ಟಿಸಿದ, ಅದೂ ಆಯಿತು. ಈಗ ಕೈಗಳ ಸರದಿ. ಸುಷಮಾ ಅಶೋಕನ ಕೈಗಳನ್ನು ಕಟ್ಟಿದಳು.ಈಗಾತ ಮುಂದೆ

ಬಂದು ತಾನೇ ನಿಂತು ಅವಳ ಕೈಗಳನ್ನು ಬಲವಾಗಿ ಕಟ್ಟಿದ.

ಇಬ್ಬರೂ ಕೈಕಾಲು ಕಟ್ಟಿಸಿಕೊಂಡು ನೆಲಕ್ಕುರುಳಿದರು.

"ಈಗ ಹೇಳುತ್ತೇನೆ ಕೇಳಿ....ಪೊಲೀಸ್ ಶೂಟಿಂಗ್ ರೇಂಜಿಗೆ ಬರುವಂತೆ ಆ ಗೇಟಕೀಪರ್ ಕೈಯಲ್ಲಿ ನಾನೇ ಚೀಟಿ ಕಳಿಸಿದ್ದೆ....ನಿಮ್ಮನ್ನು ಮುಗಿಸಲು ಅಲ್ಲಾಭಕ್ಷನಿಗೆ ಹತ್ತು ಸಾವಿರ ನೀಡಿದವನೂ ನಾನೇ....ಅವನ ಮೂರ್ಖತನದಿಂದಾಗಿ ಪಾರಾದ ನೀವು ನಿಮ್ಮ ಮೂರ್ಖತನದಿಂದಾಗಿ ನನ್ನ ಕೈಗೆ ಸೆರೆಸಿಕ್ಕಿರಿ ಅಷ್ಟೇ."

ಮೂರ್ಖತನವಲ್ಲದೆ ಮತ್ತೇನು? ಅಶೋಕ ಮನದಲ್ಲಿ ತನ್ನ ತಾನೇ ಹಳಿದುಕೊಂಡ. ನೇರವಾಗಿ ಹೋಗುವುದನ್ನು ಬಿಟ್ಟು ಆತ ಕೈ[illegible]ಸಲು ಕಾರು ನಿಲ್ಲಿಸಿದನಲ್ಲ.

"ನಾವು ನಿನಗೇನು ಮಾಡಿದ್ದೇವೆ?"

"ಏನೂ ಮಾಡಿಲ್ಲ...."

"ಮತ್ತೇಕೆ ನಮ್ಮನ್ನು ಬಂಧಿಸಿರುವೆ?"

"ಏನು ಮಾಡುವದು? ಒಬ್ಬರು ಬದುಕಬೇಕಾದರೆ ಇನ್ನೊಬ್ಬರನ್ನು ದಾರಿಯಿಂದ ಸರಿಸಬೇಕಲ್ಲ...."

"ಅಂದರೆ...."

"ಅದೊಂದು ಕತೆ, ನಿನಗೇಕೆ ಎಲ್ಲಾ ಹೇಳಬೇಕು. ನಿಮ್ಮ ಗುರು ಮೇಜರ್ ಸಹ ಈ ಜಗತ್ತಿನಿಂದ ಹೊರಟುಹೋದ ಮೇಲೆ ನೀವೇಕೆ ಬದುಕಬೇಕು ಹೇಳಿ...."

"ಅಂ? ನೀನು ಹೇಳುತ್ತಿರುವುದು ನಿಜವೇ?" ಸುಷಮಾ ಆರ್ತಳಾಗಿ ಕೇಳಿದಳು.

"ಹೌದು ಬುಲ್‌ಬುಲ್....ನಿನ್ನ ರಾಜನನ್ನು ಅಗ್ನಿಗಾಹುತಿ ಮಾಡಿಯೇ ನಾನು ನಿಮ್ಮ ದಾರಿ ಕಾಯುತ್ತ ನಿಂತದ್ದು ತಿಳಿಯಿತೆ?"

"ನಾವು ಬರುವ ವಿಷಯ ನಿನಗೆ ಹೇಗೆ ತಿಳಿಯಿತು."

"ಸುಲಭವಾದ ಪ್ರಶ್ನೆ....ಉತ್ತರವೂ ಸುಲಭ ಜಾನೇಮನ್....ಅಲ್ಲಾ-ಭಕ್ಷ ನನಗೆ ಫೋನು ಮಾಡಿ ನೀವು ಪಾರಾದ ವಿಷಯ ತಿಳಿಸಿದ. ಅದಕ್ಕೇ ಹೇಮಂತನನ್ನು ಮುಗಿಸಿ, ನಿಮಗಾಗಿ ಕಾಯುತ್ತ ನಿಂತಿದ್ದೆ....ನೀವು ಯಾವ ಮಾಯದಿಂದ ಹೋಗುವಾಗ ನನ್ನ ಕಣ್ಣಿನಿಂದ ತಪ್ಪಿಸಿಕೊಂಡು ಹೋದಿರೋ ತಿಳಿಯದು....ಬರುವಾಗ ಸಿಕ್ಕಿರಿ."

ತಾವು ದಾರಿ ತಿಳಿಯದೇ ಮುಂದೆ ಹೋಗಿ ಹಾಗೇ ಮರಳಿ. ಬಂದ

ವಿಷಯ ಅವನಿಗೆ ತಿಳಿದಿಲ್ಲವೆಂದು ಇಬ್ಬರೂ ಯೋಚಿಸಿದರು. ಅವರು ಯೋಚನಾ ಮಗ್ನರಾದುದನ್ನು ಗಮನಿಸಿದ ಆತ ನಗುತ್ತ ತಾನೇ ಹೇಳಿದ.

"ಮುಂದೇನು............ಎಂದು ಯೋಚಿಸುತ್ತಿದ್ದೀರಾ? ಕೇಳಿ....ಮೊದಲು ನಿಮ್ಮಿಬ್ಬರನ್ನು ದಾರಿಯಿಂದ ಸರಿಸಿ ಮೇಜರನನ್ನು ಮುಗಿಸಲು ಯೋಚಿಸಿದ್ದೆ. ಆತನೇ ಸತ್ತ ಮೇಲೆ ನಿಮ್ಮ ಬಗ್ಗೆ ನನಗೆ ಭಯವಿಲ್ಲ....ನಿಮ್ಮನ್ನು ಕೊಂದರೆ ನನಗೆ ಬರುವ ಲಾಭವೇನು? ಆದಕ್ಕಾಗಿ ನಿಮ್ಮನ್ನು ಕೊಲ್ಲದೆ ಸೆರೆಹಿಡಿದು ಒಯ್ಯುತ್ತೇನೆ. ಈ ಮೈನಾಳೊಂದಿಗೆ ನಾಲ್ಕು ದಿನ ಮಜಾ ಮಾಡಿ ನಂತರ ಮಾರಿಬಿಡುತ್ತೇನೆ. ಕಡಿಮೆ ಕಡಿಮೆ ಎಂದರೂ ಹತ್ತು ಲಕ್ಷವಾದರೂ ನನಗೆ ದೊರೆಯುತ್ತದೆ. ನೀನಂತೂ ಗಂಡಸು....ಇವಳಷ್ಟು ಬೆಲೆಬಾರದು ನಿಜ. ಲಕ್ಷ ಕ್ಕಾದರೂ ನಿನ್ನ ಕೊಟ್ಟರೂ ಸಾಕು....ಹೇಗಿದೆ ನನ್ನ ವಿಚಾರ."

ಅವನ ಪವಿತ್ರ ವಿಚಾರ ಕೇಳಿ ಮನದಲ್ಲೇ ಸುಷಮಾ ಗಡಗಡ ನಡುಗಿ ಹೋದಳು. ಅಶೋಕ ಗಂಭೀರನಾದ. ಅವರಿಬ್ಬರೆಡೆ ಕುತ್ಸಿತ ನೋಟ ಬೀರಿ ಆತ ಮೇಲೆದ್ದ, ಕೈಗೆ ಸಿಕ್ಕ ಆರಿವೆಯ ಉಂಡೆ ಮಾಡಿ ಇಬ್ಬರ ಬಾಯಿಗೂ ತುರುಕಿ ಕೈಜಾಡಿಸುತ್ತ ಹೊರನಡೆದ.

"ಕ್ಷಮಿಸಿ ಸ್ನೇಹಿತರೆ, ಇನ್ನೊಂದೆರಡು ಕೆಲಸಗಳು ಉಳಿದಿವೆ. ಇವನ್ನು ಮುಗಿಸಿ ಬಂದು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ."

ದೀಪ ಆರಿಸಿದ. ಆತ ಬಾಗಿಲು ತೆರೆದು ನಂತರ ಮುಚ್ಚಿದ. ಹೊರಗಡೆ ಕೀಲಿ ಜಡಿದ ಸದ್ದು ಕೇಳಿಸಿತು. ಒಂದೆರಡು ನಿಮಿಷಗಳ ನಂತರ ಮೊಪೆಡ್ ಸ್ಟಾರ್ಟ್ ಆದ ಸದ್ದು ಅವರಿಗೆ ಕೇಳದಿರಲಿಲ್ಲ........ಆತ ತುಂಬಾ ಚುರುಕು. ಮೊಪೆಡ್‌ನಿಂದ ಕಾರು ತಲುಪಿ, ಆಮೇಲೆ ಮೊಪೆಡ್ ಕಾರಿನ ಟಾಪ್ ಮೇಲೆ ಒಗೆದು ಕಾರು ನಡೆಸಲು ಯೋಚಿಸಿದ್ದಾನೆ ಎಂದುಕೊಂಡ ಅಶೋಕ. ಆತ ಮರಳಿ ಎಷ್ಟು ಸಮಯದ ನಂತರ ಬರುತ್ತಾನೋ ತಿಳಿಯದು. ಅಷ್ಟರಲ್ಲೇ ಅಲ್ಲಿಂದ ಪಾರಾಗಲು ಯೋಚಿಸಬೇಕೆಂದುಕೊಂಡಳು ಮನದಲ್ಲಿ. ಸುಷಮಾ.... ಅದಕ್ಕಿಂತ ಮೊದಲು ಬಾಯಿಗೆ ತುರುಕಿದ್ದ ಬಟ್ಟೆಯಿಂದ ಮುಕ್ತಿ ಪಡೆಯ ಬೇಕಿತ್ತು. ಸುಷಮಾ ಕಾರ್ಯೋನ್ಮುಖಳಾದಳು.

ಸುಷಮಾ ನಿಧಾನವಾಗಿ ಬಿದ್ದುಕೊಂಡಲ್ಲಿಂದಲೇ ಅರ್ಧವರ್ತುಳಾಕಾರ ದಲ್ಲಿ ಸುತ್ತಲು ಮುಂದಾದಳು. ಕಾಲು ಕೈ ಎರಡೂಹಿಂದಿನಿಂದಕಟ್ಟಲಾಗಿತ್ತು. ಹೀಗಾಗಿ ತುಂಬಾ ತೊಂದರೆಯಾಗತೊಡಗಿತು. ಬಾಯಲ್ಲಿ ಬಟ್ಟೆ ತುರುಕಿದ್ದ ರಿಂದ ಉಸಿರಾಡಿಸಲೂ ಆಗಲೊಲ್ಲದು....ಪುಪ್ಪುಸ ಬಿಗಿದು ಈಗೋ ಇನ್ನೊಂದು ಕ್ಷಣಕ್ಕೊ ಒಡೆದು ಹೋಗುತ್ತದೆ ಎನಿಸತೊಡಗಿತು. ಅವಳು ಮೂಗಿನಿಂದ

ವೇಗವಾಗಿ ಉಸಿರು ತೆಗೆದುಕೊಳ್ಳುತ್ತಿದ್ದಂತೆ ಸರ್ಪದಂತೆ ಭುಸುಗುಡುವದು ಆರಂಭವಾಯಿತು. ಮೊದಲು ಸ್ವಲ್ಪ ಹೊತ್ತು ಅಶೋಕನಿಗೆ ಅದರರ್ಥ ತಿಳಿಯು ಲಿಲ್ಲ. ಆಮೇಲೆ ಅವಳ ವಿಚಾರವೇನಿರಬಹುದೆಂಬುದನ್ನು ಊಹಿಸಿದ ಆತ ಅವಳಿಗೆ ನೆರವಾಗಲು ಮುಂದಾದ.

ಹೀಗೆ ಒಂದು ಕಡೆಯಿಂದ ಸುಷಮಾ ಇನ್ನೊಂದು ಕಡೆಯಿಂದ ಅಶೋಕ ಇಬ್ಬರೂ ಕ್ರಿಯಾಶೀಲರಾದರು. ಒಬ್ಬರು ಕೆಳಗೆ ಸರಿದರೆ ಇನ್ನೊಬ್ಬರು ಸುತ್ತ ತೊಡಗಿದರು. ಕಟ್ಟಿದ್ದ ಕೈಗಳು ಕೇವಲ ಬೆರಳು ಮಾತ್ರ ಚಲಿಸುವಲ್ಲಿ ಸ್ವತಂತ್ರ ವಾಗಿದ್ದವು....ಈ ಪ್ರಯತ್ನದಲ್ಲಿ ಮೊದಲ ಯಶಸ್ಸು ದೊರೆತದ್ದು ಸುಷಮಾಳಿಗೆ. ಅವಳ ಕೈಗಳ ಹತ್ತಿರ ಅಂತೂ ಕೊನೆಗೊಮ್ಮೆ ಅಶೋಕನ ಬಾಯಿ ಬಂದಿತು. ಆ ಅವಸರ ಆಕೆ ಬಿಟ್ಟುಕೊಡಲಿಲ್ಲ....ಬೆರಳುಗಳಲ್ಲಿ ಬಟ್ಟೆಯ ತುದಿ ಹಿಡಿದು ಎಳೆಯತೊಡಗಿದಳು. ಅಶೋಕ ಸಹ ತಲೆಯನ್ನು ಹಿಂದಕ್ಕೆ ಕೊಡವಿ ಆಕೆಗೆ ಸಹಕರಿಸಿದ. ಕೆಲವೇ ನಿಮಿಷಗಳಲ್ಲಿ ಅಶೋಕನ ಬಾಯಿಯಲ್ಲಿದ್ದ ಬಟ್ಟೆ ಚೆಂಡು ಕರಗಿ ಹೊರಗೆ ಬಂದಿತು, 'ಅಬ್ಬಾ ಬದುಕಿದೆ' ಎಂದು ಉಸಿರುಬಿಟ್ಟ ಆತ.

ಐದಾರು ಬಾರಿ ಜೋರಾಗಿ ಉಸಿರೆಳೆದುಕೊಂಡು ಸುಷಮಾಗೆ ಹೇಳಿದ.

"ಸುಷಮಾ ಈಗ ನಾನು ಹೇಳಿದಂತೆ ಸರಿದಾಡು. ಮೊದಲು ನಿನ್ನ ಬಾಯಿಯಲ್ಲಿಯ ಬಟ್ಟೆ ತೆಗೆಯುವೆ."

ಈ ಬಾರಿ ಅಷ್ಟು ತೊಂದರೆಯಾಗಲಿಲ್ಲ. ಒಬ್ಬರಾದರೂ ಮಾತನಾಡಿ ನಿರ್ದೇಶನ ಕೊಡುವ ಹಾಗಿತ್ತು. ಹೀಗಾಗಿ ಎರಡು ಮೂರು ನಿಮಿಷಗಳಲ್ಲಿ ಸುಷಮಾಳ ಬಾಯಿಯಿಂದ ಅಶೋಕ ಬಟ್ಟೆ ಹೊರಕ್ಕೆಳೆದಿದ್ದ....ಆಕೆಗೂ ಹೋದ ಜೀವ ಮರಳಿ ಬಂದಂತಾಯಿತು.

ಜೀವಿಸಲು ಮುಖ್ಯವಾದುದು ಉಸಿರು ತಾನೇ? ಅದೇ ದೊರೆತ ಮೇಲೆ ಮುಂದೇನು? ಮುಂದೆ ತಡವಾಗಲಿಲ್ಲ. ಇಬ್ಬರೂ ಮಾತನಾಡುವ ಹಾಗಿತ್ತು. ಒಬ್ಬರಿಗೊಬ್ಬರು ಸೂಚನೆ ಕೊಡುತ್ತ ಸರಿದಾಡಿದರು. ಈ ಬಾರಿ ಅಶೋಕನ ಕೈಗಳಿಗೆ ಸುಷಮಾಳ ಕೈಕಟ್ಟು ದೊರೆಯಿತು. ಕಷ್ಟಪಟ್ಟು ಅವಳ ಕೈಕಟ್ಟು ಬಿಡಿಸಿದ. ಎದ್ದು ಕುಳಿತ ಸುಷಮಾ ತನ್ನ ಕಾಲಿನ ಬಂಧನ ಕಳಚಿ ಎರಡೇ ನಿಮಿಷಗಳಲ್ಲಿ ಅಶೋಕನನ್ನು ಬಂಧಮುಕ್ತನನ್ನಾಗಿ ಮಾಡಿದಳು. ಬದುಕುವ ಆಶೆ ಮೂಡಿತು. ಅಶೋಕ ಎದ್ದು ತಡಕಾಡಿ ದೀಪದ ಗುಂಡಿ ಹುಡುಕಿದ. ಮುಂದಿನ ಕ್ಷಣ ದೀಪದಿಂದ ಕೋಣೆ ಪ್ರಕಾಶಿತವಾಯಿತು. ಅಶೋಕ ಬಾಗಿಲಿಗೆ ಬಂದು ಅದನ್ನು ತೆರೆಯಲು ಯತ್ನಿಸಿದ ಆಗಲಿಲ್ಲ....ಬಾಗಿಲು ಕೀಲಿ ತಪ್ಪಿಸಲು ಯತ್ನಿಸಿ ಸೋತ, ಸುಷಮಾ ಎಚ್ಚರಿಸಿದಳು.

"ಅಶೋಕ ಕೋಣೆ ದೀಪ ಉರಿಸುವದು ಅಪಾಯ ನಾವು... ಸ್ವತಂತ್ರ ರಾದುದು ಅವನಿಗೆ ತಿಳಿದುಬಿಡುತ್ತದೆ."

"ಸರಿ....ಇದರ ಬದಲು ಏನು ಉಪಯೋಗಿಸಬಹುದು ಹುಡುಕು."

ಇಬ್ಬರೂ ಕೂಡಿ ಹುಡುಕಿದಾಗ ಚಿಕ್ಕ ದೀಪವೊಂದು ದೊರೆಯಿತು. ಅದನ್ನು ಉರಿಸಿ ವಿದ್ಯುತ್ ದೀಪ ಆರಿಸಿದರು. ಗಪ್ ಎಂದು ಕತ್ತಲೆ ಆವರಿಸಿ ದರೂ ಉರಿಯುತ್ತಿದ್ದ ಚಿಕ್ಕ ದೀಪದಿಂದ ಸಾಕಷ್ಟು ಬೆಳಕು ಹರಡಿತು.

ಅಶೋಕ ನೆಲ ಬಾರಿಸಿ ನೆಲಮನೆ ಇದೆಯೇ ಎಂದು ಪರೀಕ್ಷಿಸಿದ. ಆಮೇಲೆ ಗೋಡೆ ಬಾರಿಸುತ್ತ ನಡೆದ. ಒಂದೆಡೆ ಸದ್ದು ಉಪಯುಕ್ತವೆನಿಸಿತು. ಸಂತಸದಿಂದ "ಸುಷಮಾ....ಇಲ್ಲಿ ಗೋಡೆ ದಪ್ಪವಾಗಿಲ್ಲ. ಇದನ್ನು ಒಡೆಯ ಬಹುದು" ಎಂದ. ಕೋಣೆಯಲ್ಲಿ ಸುತ್ತಾಡಿದ. ದೊರೆತದ್ದು ಒಂದು ರೈಫಲ್.... ಅದರ ಮುಂಭಾಗದಲ್ಲಿ ಛರ್ಚಿ, ಅದನ್ನು ತೆಗೆದುಕೊಂಡು ಮೆಲ್ಲ ಮೆಲ್ಲನೆ ಪೊಳ್ಳು, ಎನಿಸಿದ ಗೋಡೆಯನ್ನು ಕೆರೆಯತೊಡಗಿದ....ಐದು ಹತ್ತು ನಿಮಿಷ ಗಳಲ್ಲಿ ಛರ್ಚಿ ಗೋಡೆಯಿಂದ ಆ ಕಡೆ ಪಾರಾದಾಗ ಅಶೋಕನಿಗೆ ಆನಂದ ವಾಯಿತು. ಆದ ಛಿದ್ರದ ಸುತ್ತ ಮತ್ತೆ ಮಣ್ಣು ಕೆರೆಯಲು ಆತ ಆರಂಭಿಸಿದ.

"ಏ ಏನಿದು....ಕಪಾಟಿನಲ್ಲಿ ಸಾಮಾನು ಸದ್ದು ಮಾಡುತ್ತಿವೆಯಲ್ಲ" ಎಂಬ ಧ್ವನಿ ಆ ಕಡೆಯಿಂದ ಬಂದಿತು. ಅಶೋಕ ಒಮ್ಮೆಲೆ ತಟಸ್ಥನಾದ. ಆ ಕಡೆ ಮನೆ ಇದೆ ಎಂದಾಯಿತು....ಸುಮ್ಮನಿರಲಂತೂ ಸಾಧ್ಯವಿಲ್ಲ. ಪಾರಾಗಬೇಕಿತ್ತು ಮತ್ತೆ ಸ್ವಲ್ಪ ಸಮಯಬಿಟ್ಟು ಮೊದಲಿನ ಕಾರ್ಯ ಆರಂಭಿಸಿದ....ಪಕ್ಕದ ಮನೆಯಾತ ತನ್ನ ಹೆಂಡತಿಯನ್ನು ಎಚ್ಚರಿಸಿ, ಕಪಾಟಿನಲ್ಲಿ ಸದ್ದಾಗುತ್ತಿದೆ ನೋಡು ಎಂದಾಗ ಆಕೆ ನಿದ್ದೆಯ ಗುಂಗಿನಲ್ಲೇ ಸಿಡುಕಿದಳು.

"ಸುಮ್ನೇ ಮಕ್ಕೊಳ್ರಿ....ಇಷ್ಟೋತನಕ ನನ್ನ ಕಾಡಿಸಿ ನಿದ್ದಿ ಕೆಡಿಸೀರಿ ಈಗ...."

ಪಕ್ಕದ ಮನೆಯಾತ ಮುಂದೆ ಮಾತನಾಡದೇ ಮೌನವಾದ. ಅಶೋಕ ಮುಸಿ ಮುಸಿ ನಗುತ್ತಿದ್ದರೆ ಸುಷಮಾಳ ಗಲ್ಲ ಕೆಂಪಗಾಗಿದ್ದವು.

ಅರ್ಧಗಂಟೆ ಕಳೆಯಿತು....ಅಷ್ಟರಲ್ಲೇ ಅವಘಡ ನಡದೇ ಹೋಯಿತು. ತೋಡುತ್ತಿದ್ದ ಕಿಂಡಿ ದೊಡ್ಡದಾಗುತ್ತಲೂ ಛರ್ಚಿ ಏಟಿಗೆ ಡಬ್ಬಿಯೊಂದು ಕೆಳಗೆ ಉರುಳಿತು. ಆ ಸದ್ದಿಗೆ ಪಕ್ಕದ ಮನೆಯ ಗಂಡ-ಹೇಂಡತಿ ಇಬ್ಬರೂ ಎದ್ದು ದೀಪ ಉರಿಸಿದರು. ಇನ್ನು ತಡಮಾಡಿದರೆ ಕೆಲಸ ಕೆಡುತ್ತದೆ ಎಂದು ಕೊಂಡ.

ಅಶೋಕ ರೈಫಲ್ಲಿನ ಹಿಂಭಾಗದಿಂದ ಎರಡು ಮೂರು ಬಾರಿ ಏಟು ಹಾಕಿ

ದಾಗ ಗೋಡೆ ಒಡೆದು ಒಬ್ಬರುಪಾರಾಗುವಷ್ಟುದಾರಿಯಾಯಿತು. ಅವರಿಬ್ಬರೂ ಹಾರಾಡುತ್ತಿದ್ದಂತೆಯೇ ಅಶೋಕ ಕಿಂಡಿಯಿಂದ ಪಾರಾಗಿದ್ದ. ಅವನ ಕೈಯಲ್ಲಿ ರೈಫಲ್ ನೋಡಿ ಗಂಡ ಹೆಂಡತಿ ಇಬ್ಬರ ಬಾಯಿ ತೆಪ್ಪಗಾದವು. ಸುಷಮಾ ಸಹ ಪಾರಾಗಿ ಬಂದಳು. ಅವರಿಬ್ಬರನ್ನು ನೋಡಿ ಗಂಡನಾದವ ನುಡಿದ.

"ಅರೆ....ನೀವು ಇಲ್ಲಿಗೆ ಹೇಗೆ ಬಂದಿರಿ? ನಾನು ರಂಗಮಹಲ್‌ಗೆ ದಾರಿ ಹೇಳಿದ್ದೆನಲ್ಲ."

ಈಗ ಬೆಚ್ಚುವ ಸರದಿ ಅಶೋಕ ಹಾಗೂ ಸುಷಮಾರದು. ಅವನನ್ನು ದಿಟ್ಟಿಸಿ ನೋಡಿದರು. ಆತ ಪೋಸ್ಟ್‌ಮ್ಯಾನ್ ಮಾತನಾಡಲು ಸಮಯವಿರಲಿಲ್ಲ. "ಅದನ್ನೆಲ್ಲ ಆಮೇಲೆ ಹೇಳುತ್ತೇನೆ ಮೊದಲು ಇಲ್ಲಿಂದ ಪಾರಾಗಬೇಕು."

ಚುಟುಕಾಗಿ ಉತ್ತರಿಸಿದ. ಇಬ್ಬರೂ ಬಾಗಿಲು ತೆರೆದು ಹೊರಬಂದರು ಅವರ ಅದೃಷ್ಟ. ಅವರ ಕಾರು ಅಲ್ಲೇ ನಿಂತಿತ್ತು. ಸುರಕ್ಷಿತವಾಗಿ ಅಶೋಕ ತಾನೇ ಕಾರು ನಡೆಸಲು ಕುಳಿತ. ಸುಷಮಾ ಪಕ್ಕದಲ್ಲಿ ಕೂಡುತ್ತಲೂ ಅದಕ್ಕಾಗಿ ಬಾಯ್ತೆರೆದು ನಿಂತುಕೊಂಡಿದ್ದ ಪೋಸ್ಟ್‌ಮ್ಯಾನ್ ದಂಪತಿಗಳಿಗೆ ವಂದಿಸಿ ಅಶೋಕ ವೇಗವಾಗಿ ಕಾರು ಓಡಿಸಿದ.

ಈಗಾಗಲೇ ದಾರಿಯ ಪರಿಚಯ ಚೆನ್ನಾಗಿತ್ತು. ಹೀಗಾಗಿ ಕಡಿಮೆ ಸಮಯದಲ್ಲಿ ಆತ ಅಡ್ಡದಾರಿಗೆ ತಿರುಗಿ ರಂಗಮಹಲ್ ಕಡೆ ನಡೆದ. ಸ್ವಲ್ಪ ದೂರ ಬಂದಾಗಲೇ ಈ ಮೊದಲು ಕೇಳಿದ ಆಸ್ಫೋಟ ಅವರಿಗೆ ಕೇಳಿಸಿತು. ಇಬ್ಬರ ಮುಖದ ಮೇಲೂ ಒಂದು ಬಗೆಯ ಸಮಾಧಾನದ ಇನ್ನೊಂದು ಬಗೆಯ ಕಳವಳ ಮೂಡಿ ಮಾಯವಾಯಿತು. ಇಬ್ಬರಲ್ಲಿ ಒಬ್ಬರೂ ಮಾತ ನಾಡಲಿಲ್ಲ.

ರಂಗಮಹಲ್ ಗೇಟಿಗೆ ಕಾರುನಿಲ್ಲಿಸಿದ. ಅಶೋಕ ಜೇಬಿನಿಂದ ರಿವಾಲ್ವರ್ ತೆಗೆದು ಬೀಗದ ಮೇಲೆ ಗುರಿ ಇಟ್ಟು ಹಾರಿಸಿದ ದಾರಿ ಸುಗಮವಾಯಿತು. ಕಾರು ಓಡಿಸಿಕೊಂಡು ಒಳಗೆ ಬಂದ. ಈಜುಕೊಳದ ಹತ್ತಿರ ಬಂದಾಗ ಮೇಜರನ ಕಾಂಟೆಸಾ ಕಾಣಿಸಿತು "ಅಶೋಕ ಮೇಜರ ಕಾರು" ಎಂದು ಸಂತೋಷ ತಾಳಲಾರದೇ ಸುಷಮಾ ಅರಚಿದಳು. ಅಶೋಕ ಕಾರು ನಿಲ್ಲಿಸಿದ ಇಬ್ಬರೂ ಕೆಳಗಿಳಿದು ಕಾಂಟೆಸಾ ಕಡೆ ಓಡಿದರು.

ಎದುರಿಗಿನ ಮರಕ್ಕೆ ಢೀ ಹೊಡೆದು ನಿಂತಿದ್ದ ಕಾರು. ಕಿಟಕಿ ಗಾಜು ಒಡೆದು ಚೂರಾಗಿದ್ದವು. ಕಾರಿನ ಒಳಗೆಲ್ಲ ಸುಟ್ಟು ಕರಕಾದ ವಾಸನೆ. ಇನ್ನೂ ಒಂದೆರಡು ಕಡೆ ನಿಧಾನವಾಗಿ ಬೆಂಕಿ ಕಾಣಿಸುತ್ತಿತ್ತು.

ಆದರೆ ಕಾರಿನಲ್ಲಿ ಮೇಜರ್ ಇರಲಿಲ್ಲ.

ಸುಷಮಾಳ ಮುಖ ಕಳೆಗುಂದಿತು.

“ಹೆದರಬೇಡ ಸುಷಮಾ....ಸುಷಮಾ....ಮೇಜರಗೆ ಯಾರೂ ಏನೂ ಮಾಡುವಂತಿಲ್ಲ. ಆತ ಮೃತ್ಯುಂಜಯ. ಅಜೇಯ....ಎಲ್ಲಾ ಕಡೆ ಹುಡುಕು. ಮೇಜರ ಇಲ್ಲೇ ಎಲ್ಲೋ ಒಂದು ಕಡೆ ಇರಬೇಕು...”

ಅಶೋಕನ ಮಾತು ಮುಗಿದಿರಲಿಲ್ಲ. ಅವರ ಹಿಂದಿರುವ ಪೊದೆಯಲ್ಲಿ ದೊಡ್ಡ ಸದ್ದಾಯಿತು....ಅವರಿಬ್ಬರೂ ಹೊರಳುತ್ತಿದ್ದಂತೆ ಭಯಾನಕ ಆಕೃತಿಯೊಂದು ಎದ್ದುನಿಂತು ಅವರತ್ತ ಹೆಜ್ಜೆ ಹಾಕಿತು.

ಸುಷಮಾ ಕಿಟಾರನೆ ಕಿರುಚಿದಳು.

ಅಶೋಕ ಆ ಭಯಾನಕ ಆಕೃತಿಯತ್ತ ರಿವಾಲ್ವರ್ ಹಿಡಿದು ಅರಚಿದ: “ಖಬರದಾರ್. ಒಂದು ಹೆಜ್ಜೆ ಮುಂದಿಟ್ಟರೆ ನಿನ್ನ ಸುಟ್ಟುಬಿಡುತ್ತೇನೆ.”

*  *  *  *

ಮೈತುಂಬ ಅಲ್ಲಲ್ಲಿ ಸುಟ್ಟಗಾಯಗಳು, ಹರಿದು ಚಿಂದಿಯಾದ ಅರಿವೆಗಳು....ನಾಲ್ಕಾರು ಕಡೆ ಒಸರುತ್ತಿರುವ ರಕ್ತ....ಒಂದಂಗುಲವೂ ಉಳಿಯದಂತೆ ಮೈತುಂಬ ಮೆತ್ತಿದ ಕಪ್ಪು....ರಾತ್ರಿಯ ಕಪ್ಪಿನಲ್ಲಿ ಎದ್ದು ಬಂದು ಭಯಾನಕತೆಯನ್ನು ಮೆರೆಸುವ ಆ ಆಕೃತಿ. ಒಂದೊಂದೇ ಹೆಜ್ಜೆ ಇಡುತ್ತ ಅವರಿಬ್ಬರನ್ನು ಸಮೀಪಿಸತೊಡಗಿತು. ಆ ಭೀಕರಾಕೃತಿಯನ್ನು ನೋಡಲಾಗದ ಸುಷಮಾ ಎರಡು ಹೆಜ್ಜೆ ಹಿಂದೆ ಸರಿದು ಅಶೋಕನ ಹಿಂದೆ ಮರೆಯಾದಳು. ಅಶೋಕ ರಿವಾಲ್ವರ್ ಮೇಲಿನ ಹಿಡಿತ ಬಲಪಡಿಸಿದ. ಬೆರಳು ಕುದುರೆ ಮೇಲೆ ಕುಣಿಯತೊಡಗುತ್ತಿದ್ದಂತೆ ಆತ ಮತ್ತೊಮ್ಮೆ ಎಚ್ಚರಿಸಿದ. “ಖಬರದಾರ್.... ಕೊನೆ ಬಾರಿ ಎಚ್ಚರಿಸುತ್ತಿದ್ದೇನೆ....ಅಲ್ಲೇ ನಿಲ್ಲು....ಮುಂದೆ ಬರಬೇಡ.”

ಆ ಭಯಾನಕ ಕುರೂಪ ವ್ಯಕ್ತಿಯ ತುಟಿಗಳು ಅಲುಗಿದವು. ಮಾತು ಬರಲಿಲ್ಲ. ಮುಖದಲ್ಲಿ ನೋವಿನ ಛಾಯೆ ಮೂಡಿತು. ಬಲಗೈ ಮುಂದೆ ಚಾಚಿ ಏನನ್ನೋ ಹೇಳಲು ಪ್ರಯತ್ನಿಸಿತು. ಸಾಧ್ಯವಾಗದೇ ಪರಿತಪಿಸುತ್ತ ಆಯತಪ್ಪಿ ಧೊಪ್ ಎಂಬ ಸದ್ದಿನೊಂದಿಗೆ ನೆಲದ ಮೇಲೆ ಉರುಳಿತು.

ಕೈಲಿ ರಿವಾಲ್ವರ ಹಿಡಿದುಕೊಂಡೇ ಅಶೋಕ ಆ ವ್ಯಕ್ತಿಯನ್ನು ಸಮೀಪಿಸಿದ. ಕೆಳಗೆ ಬಾಗಿ ಎಡಗೈಯಿಂದ ದೇಹವನ್ನು ಅಲುಗಿಸಿದ. ಆ ವ್ಯಕ್ತಿ ಮಿಸುಕಲಿಲ್ಲ, ಬಹುಶಃ ಎಚ್ಚರ ತಪ್ಪಿರಬೇಕು.

“ಸುಷಮಾ....ಗಾಡಿಯಿಂದ ಬ್ಯಾಟರಿ ತೆಗೆದುಕೊಂಡು ಬಾ”.

ಒಂದೇ ಉಸುರಿಗೆ ಓಡಿದ ಸುಷಮಾ ಗಾಡಿಯಲ್ಲಿದ್ದ ಬ್ಯಾಟರಿಯೊಂದಿಗೆ ಹಾಜರಾದಳು. ಅಲ್ಲಿಯವರೆಗೂ ಸ್ವಲ್ಪವೂ ಮಿಸುಕದೆ ಕೈಯಲ್ಲಿ ರಿವಾಲ್ವರ್ ಹಿಡಿದುಕೊಂಡು ಭದ್ರವಾಗಿ ಕಾಯುತ್ತ ನಿಂತಿದ್ದ ಅಶೋಕ.

"ನಾನು ಈತನನ್ನು ತಿರುಗಿಸುತ್ತೇನೆ. ನೀನು ಮುಖದ ಮೇಲೆ ಬೆಳಕು ಚೆಲ್ಲು" ಅತ್ಯಂತ ಎಚ್ಚರಿಕೆಯಿಂದ ಮುಂದೆ ಬಾಗಿದ ಅಶೋಕ ರಿವಾಲ್ವರ್ ಗುರಿಯನ್ನು ಕೆಳಗೆ ಬಿದ್ದ ವ್ಯಕ್ತಿಯಿಂದ ಸ್ವಲ್ಪವೂ ಅಲುಗಿಸದೇ ಎಡಗೈಯಿಂದ ಜೋರಾಗಿ ಬಿದ್ದ ವ್ಯಕ್ತಿಯನ್ನು ತಿರುಗಿಸಿದ....ತನ್ನತ್ತ ಮುಖ ಹೊರಳುತ್ತಲೂ ಸುಷಮಾ ಕೈಲಿದ್ದ ಬ್ಯಾಟರಿ ಬೆಳಕು ಅವನ ಮುಖದ ಮೇಲೆ ಚೆಲ್ಲಿದಳು.... ಮತ್ತೊಮ್ಮೆ ಅವಳ ಕಂಠದಿಂದ ಚಿಕ್ಕ ಚೀತ್ಕಾರವೊಂದು ಹೊರಬಂದಿತು. ಕೈಲಿದ್ದ ಬ್ಯಾಟರಿ ಅವಳಿಗರಿವಿಲ್ಲದಂತೆ ಕೆಳಗೆ ಬಿದ್ದಿತು. ಆಕೆ ಆ ಭಯಾನಕ ವ್ಯಕ್ತಿಯನ್ನಪ್ಪಿ ಬಿಕ್ಕಿ ಬಿಕ್ಕಿ ಅಳುತ್ತ ಆರ್ತನಾದ ಮಾಡಿದಳು, "ಮೇಜರ್.... ಮೇಜರ್....ಇದೇನಾಯಿತು ನಿಮಗೆ?"

ಅವಳ ಮಾತಿಗೆ ಉತ್ತರಿಸಲು ಮೇಜರಗೆ ಎಚ್ಚರವಿದ್ದರೆ ತಾನೆ? ಒಂದೆರಡು ಕ್ಷಣ ಅಶೋಕನಿಗೂ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಆಕಸ್ಮಿಕವಾಗಿ ಮಿಂಚಿನ ವೇಗದಲ್ಲಿ ನಡೆದ ಘಟನೆಗಳಿಂದಾಗಿ ಆತ ದಿಗ್ಮೂಢನಾಗಿದ್ದ ಮುಂದೆ ಒಂದೇ ನಿಮಿಷದಲ್ಲಿ ಆತ ಸುಧಾರಿಸಿಕೊಂಡಿದ್ದ........ಎಷ್ಟಾದರೂ ಮೇಜರ್ ಹೇಮಂತನ ಸಹಾಯಕನಲ್ಲವೇ? ಸುಷಮಾಳನ್ನು ಸಮಾಧಾನ ಪಡಿಸಿದ.

"ಸುಷಮಾ....ಅಳುತ್ತ ಕುಳಿತುಕೊಳ್ಳುವ ಸಮಯವಲ್ಲವಿದು....ನಾವು ಕೂಡಲೇ ಯಾವದಾದರೂ ಆಸ್ಪತ್ರೆಗೆ ಮೇಜರನನ್ನುಸಾಗಿಸಬೇಕು....ಏಳು.... ನನಗೆ ಸಹಾಯಮಾಡು"

ಸುಷಮಾ ಚಟಕ್‌ನೆ ಮೇಲೆದ್ದಳು. ಆಕೆಯ ಸಹಾಯದಿಂದ ಹೇಮಂತನನ್ನು ಅನಾಮತ್ತಾಗಿ ಎತ್ತಿಕೊಂಡ ಅಶೋಕ ತನ್ನ ಕಾರಿನೆಡೆ ಧಾವಿಸಿದ. ಅವನಿಗಿಂತ ಮುಂದೆ ಓಡಿದ ಸುಷಮಾ ಹಿಂದಿನ ಬಾಗಿಲು ತೆರೆದಳು. ಇಬ್ಬರೂ ಕೂಡಿ ಸೀಟಲ್ಲಿ ಮೇಜರನನ್ನು ಮಲಗಿಸಿದರು. ಅಲ್ಲೇ ಪಕ್ಕದಲ್ಲಿ ಕುಳಿತುಕೊಳ್ಳುತ್ತ ಸುಷಮಾ ಹೇಳಿದಳು. "ರಾಧಾಕೃಷ್ಣ ಆಸ್ಪತ್ರೆಗೆ ನಡೆ. ಡಾಕ್ಟರ್ ದೇಸಾಯಿ ನಮಗೆ ದೊರೆತರೆ ನಮ್ಮ ಸೌಭಾಗ್ಯ"....ಅಶೋಕ ತುಟಿ ಎರಡು ಮಾಡದೇ ಕಾರನ್ನು ಓಡಿಸತೊಡಗಿದ....ಮನದಲ್ಲಿ ದುಃಖದ ಮಹಾಪೂರವೇ ಇದ್ದರೂ ಅದನ್ನು ತೋರ್ಪಡಿಸದೆ ಮೈ ಎಲ್ಲ ಎಚ್ಚರವಾಗಿದ್ದು ಕಾರು ನಡೆಸತೊಡಗಿದ........ಚಿಂತೆಯ ಕಾರ್ಮೋಡಗಳ ಮಧ್ಯೆಯೂ ಆತ ಕಿಂಚಿತ್ತೂ

ವಿಚಲಿತನಾಗಿರಲಿಲ್ಲ....ಅವನಿಗಿರುವ ಚಿಂತೆ ಒಂದೇ, ಡಾಕ್ಟರರು ಊರಿನಲ್ಲಿ ಇದ್ದಾರೋ ಇಲ್ಲವೋ ಎಂದು....ಎಂಭತ್ತು ಕಿಲೋ ಮೀಟರ ವೇಗದಲ್ಲಿ ಓಡಿಸಿದ ಕಾರನ್ನು ದೇಸಾಯಿ ನರ್ಸಿಂಗ ಹೋಂ ಮುಂದೆ ತಂದು ನಿಲ್ಲಿಸಿದಾಗ ನಸುಕಿನ ಕೋಳಿ ಕೂಗತೊಡಗಿತ್ತು. ಧಡಪಡಿಸುವ ಹೃದಯದೊಂದಿಗೆ ಕರೆಗಂಟೆ ಬಾರಿಸಿದ. ಬಾಗಿಲು ತೆರೆಯಿತು. ಬಾಗಿಲಲ್ಲಿ ನಿಂತಿದ್ದ ದೇಸಾಯಿಯವರನ್ನು ಕಾಣುತ್ತಲೂ ಅಶೋಕನ ಕಣ್ಣುಗಳಲ್ಲಿ ನೀರು ಚಿಮ್ಮಿತು. ಭಾವಾವೇಶ ದಿಂದಾತ ದೇಸಾಯಿಯವರನ್ನಪ್ಪಿ ಭೋರೆಂದು ಅಳಲಾರಂಭಿಸಿದ...ಸುಷಮಾ ಳದೂ ಅದೇ ಪರಿಸ್ಥಿತಿ.... ಡಾಕ್ಟರ ತಬ್ಬಿಬ್ಬಾದರೂ ಧೈರ್ಯದಿಂದ ಕೇಳಿದರು. "ಅಶೋಕ ಏನಾಯ್ತು....ಅಂ....ಸುಷಮಾ ಏನು ವಿಷಯ" ಇಬ್ಬರಿಂದಲೂ ಮಾತನಾಡಲಾಗಲಿಲ್ಲ. ತುಂಡು ತುಂಡಾಗಿ ಉತ್ತರಿಸಿದ. "ಡಾಕ್ಟರ್.... ಡಾಕ್ಟರ್....ಮೇಜರ್.... ಕಾರಿನಲ್ಲಿ....ದಾರಿ.... ಪ್ಲೀ....ಜ್.... ಪ್ಲೀ" ಇಷ್ಟೆ. ಮತ್ತೆ ದುಃಖದ ಕಟ್ಟೆ ಒಡೆದಿತ್ತು.

ದೇಸಾಯಿಯವರಿಗೆ ಆ ತುಂಡು ಮಾತುಗಳಿಂದಲೇ ಎಲ್ಲಾ ಅರ್ಥ ವಾಗಿತ್ತು. ಯಮನ ಬಂಟರಿಗೂ ಬೆವರಿಳಿಸುವ ಅಶೋಕ ಹಾಗೂ ಸುಷಮಾ ಹಸುಗೂಸಿನಂತೆ ಅಳುತ್ತ ಮೇಜರನನ್ನು ಉಳಿಸಿ ಎಂದು ಬೇಡಿಕೊಂಡಾಗ ವಿಷಯ ಎಷ್ಟು ಗಂಭೀರವಾಗಿದೆಯೆಂಬುದನ್ನರಿತ ಅವರು "ಎಮರ್ಜನ್ಸಿ" ಕರೆಗಂಟೆ ಮೇಲೆ ಬೆರಳಿಟ್ಟರು. ಐದು ನಿಮಿಷಗಳಲ್ಲಿ ಹತ್ತಾರು ಜನರ ಗುಂಪು ಅವರ ಮನೆಯತ್ತ ಧಾವಿಸಿತು. ಮೇಜರ್ ಹೇಮಂತ ಅವರ ಸಂರಕ್ಷಣೆಯಲ್ಲಿ ತುರ್ತು ವಿಭಾಗಕ್ಕೆ ಸೇರಿದ....

ತುರ್ತು ಕರೆಯ ಮೇಲೆ ಧಾವಿಸಿದ ಐವರು ವಿಶೇಷತಜ್ಞರು ಹಾಗೂ ತಮ್ಮ ಇಬ್ಬರು ಸಹಾಯಕರೊಂದಿಗೆ ಡಾಕ್ಟರ ದೇಸಾಯಿ ಮೂರೂವರೆ ಗಂಟೆಗೂ ಮಿಕ್ಕಿ ಹೆಣಗಾಡಿದಾಗ ಮೇಜರ್ ಅಪಾಯದಿಂದ ಪಾರಾಗಿದ್ದ.... ಪುಪ್ಪುಸ ಸೇರಿದ ವಿಷಾನಿಲವನ್ನು ಸಂಪೂರ್ಣವಾಗಿ ತೆಗೆದು ಪುಪ್ಪುಸ ಸ್ವಚ್ಛ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದರು. ದೇಹದ ನಾನಾಕಡೆಗೆ ಚುಚ್ಚಿ ಒಳಸೇರಿದ್ದ ಸುಮಾರು ಎಂಭತ್ತು ಎಂಭತ್ತೈದು ಗಾಜಿನ ಚೂರುಗಳನ್ನು ಹೊರತೆಗೆಯಲಾಗಿತ್ತು. ಸುಟ್ಟಗಾಯ ತೊಳೆದು ಪಟ್ಟಿಹಾಕಲಾಗಿತ್ತು. ನೆತ್ತಿಗಾದ ಗಾಯವನ್ನು ಪರೀಕ್ಷಿಸಿ ಒಳಭಾಗದಲ್ಲೇನಾದರೂ ಪೆಟ್ಟಾಗಿದೆಯೋ ಎಂಬುದನ್ನು ಪರೀಕ್ಷಿಸಿ, ಚಿಂತೆಗೆ ಕಾರಣವಿಲ್ಲವೆಂಬ ನಿರ್ಧಾರಕ್ಕೆ ಬಂದಾದ ಮೇಲೆ ವೈದ್ಯರ ತಂಡ ನಿಶ್ಚಿಂತೆಯ ಉಸಿರಿನೊಂದಿಗೆ ಆಪರೇಶನ್ ಥೇಟರಿನಿಂದ ಹೊರಬಂದಿತು. ದೈನ್ಯದಿಂದ ನಿಂತಿದ್ದ ಇಬ್ಬರು ಸಂಗಾತಿಗಳು ಅವರತ್ತ

ನೋಡಿದವು. ಅವರಿಬ್ಬರ ತುಟಿಗಳು ಅಲುಗಿದರೂ ಅವರಿಂದ ಮಾತನಾಡ ಲಾಗಲಿಲ್ಲ.... ಅದರ ಅರ್ಥಮಾಡಿಕೊಂಡ ದೇಸಾಯಿ ಅವರಿದ್ದ ಕಡೆ ತಮ್ಮ ಎರಡೂ ಕೈ ಚಾಚಿದರು. ಮುಂದಿನ ಕ್ಷಣ ಅಶೋಕ ಹಾಗೂ ಸುಷಮಾ ದೇಸಾಯಿ ಅವರ ತೆಕ್ಕೆಯಲ್ಲಿದ್ದರು........ಅವರ ಬೆನ್ನ ಮೇಲೆ ಕೈಯಾಡಿಸಿ ಸಮಾಧಾನ ಮಾಡಿದ ಡಾಕ್ಟರು "ಚಿಂತಿಸಬೇಡಿ....ಯಮನೊಂದಿಗೆ ನಾವು ಹೋರಾಡಿ ಮೇಜರರನ್ನು ಉಳಿಸಿಕೊಂಡಿದ್ದೇವೆ. ಈಗ ಅವರು ಕುಶಲವಾಗಿ ದ್ದಾರೆ....ಡೋಂಟ್‌ವರಿ...."

ಅವರ ಅಮೃತ ಸಮಾನವಾದ ಮಾತು ಅವರಿಬ್ಬರ ಮೇಲೆ ಅದ್ಭುತ ಪರಿಣಾಮ ಮಾಡಿದವು. ದೇಹದಲ್ಲಿ ಮಿಂಚು ಸಂಚಾರವಾದಂತಾಗಿ ಡಾಕ್ಟರ ರಿಂದ ದೂರ ಸರಿದು ಕೃತಜ್ಞತೆಯಿಂದ ಕೈಮುಗಿದು ನುಡಿದರು...."ನಿಮ್ಮಿಂದ ಅತ್ಯಂತ ಉಪಕಾರವಾಯ್ತು ಡಾಕ್ಟರ್...."

"ಔಪಚಾರಿಕ ಮಾತುಬೇಡ....ಮೇಜರ್ ನಿಮಗೆಷ್ಟು ಪ್ರೀತಿಪಾತ್ರರೋ ನನಗೂ ಅಷ್ಟೇ. ನನಗಷ್ಟೇ ಏಕೆ? ಪ್ರತಿಯೊಬ್ಬ ನಾಗರಿಕ ಹೆಮ್ಮೆಪಟ್ಟು ಕೊಳ್ಳುವ ವ್ಯಕ್ತಿ ಅವರು. ಅವರು ನಮ್ಮ ದೇಶದ ಆಸ್ತಿ....ಅವರನ್ನು ಉಳಿ ಸುವುದು ನಮ್ಮ ಕರ್ತವ್ಯ....ಹಾಂ.... ಒಂದು ಮಾತು.... ಮೇಜರ ಕನಿಷ್ಟ ಒಂದು ವಾರ ಆಸ್ಪತ್ರೆಯಲ್ಲಿರಬೇಕು. ಅವರಿಗೆ ಸಂಪೂರ್ಣ ವಿಶ್ರಾಂತಿಯ ಅವಶ್ಯಕತೆ ಇದೆ. ನಲವತ್ತೆಂಟು ಗಂಟೆ ಕಾಲ ಅವರು ನಿದ್ರೆಯಲ್ಲಿರುತ್ತಾರೆ.... ತೊಂದರೆಕೊಡಬೇಡಿ..."

ಅಶೋಕ ಮೌನವಾಗಿ ತಲೆಯಾಡಿಸಿದ.... "ನಾವು ಅವರ ಬಳಿ ಇರ ಬಹುದಲ್ಲವೆ? ಸುಷಮಾ ಅಳುಕುತ್ತ ಕೇಳಿದಳು."

"ಅವಶ್ಯವಾಗಿ... ನಿನ್ನ ಸಾನಿಧ್ಯ ಅವರನ್ನು ಬೇಗ ಗುಣಪಡಿಸಬಲ್ಲದು" ದೇಸಾಯಿ ನಗುತ್ತ ನುಡಿದಾಗ ಆಕೆ ನಾಚಿ ನೀರಾದಳು...

ಅಶೋಕ ಮುಂದೆ ಬಂದು ದೇಸಾಯಿ ಅವರ ಕರೆಯ ಮೇರೆಗೆ ಧಾವಿಸಿ ಅವರಿಗೆ ಸಹಾಯ ಮಾಡಿದ ವೈದ್ಯರಿಗೆಲ್ಲ ಕೈ ಮುಗಿದು ಕೃತಜ್ಞತೆ ಸಲ್ಲಿಸಿ ದಾಗ ಅವರೆಲ್ಲ ಧನ್ಯತೆ ಅನುಭವಿಸಿದರು. ಲಕ್ಷ ಲಕ್ಷ ರೂಪಾಯಿ ನೀಡಿದಾಗಿನ ಆನಂದಕ್ಕಿಂತ ಸಾವಿರಪಟ್ಟು ಆನಂದ ವೈದ್ಯರ ಬಳಗಕ್ಕಾಗಿತ್ತು.

ಬೆಳಗಿನ ಹತ್ತು ಗಂಟೆಯಾಗುವಷ್ಟರಲ್ಲಿ ಮೇಜರ ಆಸ್ಪತ್ರೆ ಸೇರಿದ ವಿಷಯ ಕಾಡ್ಗಿಚ್ಚಿನಂತೆ ನಗರದ ತುಂಬೆಲ್ಲಾ ಹರಡಿತ್ತು. ತಂಡತಂಡವಾಗಿ ಬಂದ ಜನ ಆಸ್ಪತ್ರೆ ಮುಂದೆ ಸಾವಿರಾರು ಸಂಖ್ಯೆಯಲ್ಲಿ ನೆರೆದರು. ಪತ್ರಿಕಾ ಪ್ರತಿನಿಧಿಗಳು, ಗಣ್ಯರು, ಸಚಿವರು, ಶಾಸಕರು, ಮೇಜರನ ಹಿತೈಷಿಗಳು

ಆಸ್ಪತ್ರೆಗೆ ಧಾವಿಸಿದರು. ಅವರಿಗೆಲ್ಲ ಸಮಾಧಾನದ ಉತ್ತರ ನೀಡಿ ಕಳಿಸಲು ಆಸ್ಪತ್ರೆ ಸಿಬ್ಬಂದಿ ಹೆಣಗಬೇಕಾಯಿತು. ಅಶೋಕ ಹಾಗೂ ಸುಷಮಾ ಅವರಿಗೆ ಸಹಾಯ ಮಾಡುವಲ್ಲಿ ಹಿಂದಾಗಲಿಲ್ಲ. ಪತ್ರಕರ್ತರೊಂದಿಗೆ ಗುಪ್ತವಾಗಿ ಮಾತ ನಾಡಿದ ಅಶೋಕ ಸಧ್ಯ ಪತ್ರಿಕೆಗಳಲ್ಲಿ ವಿವರವಾಗಿ ಏನೂ ಬರೆಯಬೇಡಿ ಎಂದು ವಿನಂತಿಸಿಕೊಂಡ.

ಸಾಯಂಕಾಲ ಹಿಂತಿರುಗುವ ಮುನ್ನ ಇಬ್ಬರೂ ಡಾಕ್ಟರರ ಬಳಿ ಬಂದರು.

"ನನಗೆ ನಿಮ್ಮಿಬ್ಬರ ತುಮುಲ ಗೊತ್ತು. ಅದಕ್ಕಾಗಿ ಹೇಳುತ್ತಿದ್ದೇವೆ. ನೀವು ಹೆದರುವ ಕಾರಣವಿಲ್ಲ. ಅವರೀಗ ಸಂಪೂರ್ಣವಾಗಿ ಅಪಾಯದಿಂದ ಪಾರಾಗಿದ್ದಾರೆ. ಅವರಿಗೆ ಎಚ್ಚರ ಬಂದರೂ ನಾವು ಪುನಃ ನಿದ್ದೆ ಔಷಧಿ ನೀಡಿ ಮಲಗಿಸುತ್ತೇವೆ. ಅವರಿಗೆ ವಿಶ್ರಾಂತಿಯ ಅವಶ್ಯಕತೆ ಇದೆ. ಕಾರಣ ದಯ ವಿಟ್ಟು ನೀವು ಎರಡು ದಿನ ಅವರಿಗೆ ತೊಂದರೆ ಕೊಡಬೇಡಿ. ಆಸ್ಪತ್ರೆ ಕಡೆಗೆ ಬರದಿದ್ದರೂ ಒಳ್ಳೆಯದೇ. ಅವರ ರಕ್ಷಣೆಯ ಭಾರ ನನಗಿರಲಿ.

"ನಿಮ್ಮ ಮಾತನ್ನು ನಾವು ಸಂಪೂರ್ಣ ಒಪ್ಪಿಕೊಳ್ಳುತ್ತೇವೆ ಸರ್, ಆದರೆ ಒಂದು ಮಾತು....ನಮಗೆ ಬರಬೇಡಿ ಅನ್ನಬೇಡಿ.....ನಾವು ಮೇಜರಿಗೆ ಯಾವ ತೊಂದರೆ ಕೊಡುವದಿಲ್ಲ. ಅವರನ್ನು ದೂರದಿಂದಲೇ ನೋಡಿ ಸಮಾ ಧಾನಮಾಡಿಕೊಳ್ಳುತ್ತೇವೆ."

"ನನ್ನ ಅಭ್ಯಂತರವಿಲ್ಲ, ನೀವಿನ್ನೂ ಹೊರಡಿ. ನಿಮಗೂ ಸಹ ವಿಶ್ರಾಂತಿ ಬೇಕು. ಇಲ್ಲದಿದ್ದರೆ ನಿಮ್ಮನ್ನು ಸಹ ಇಲ್ಲೇ ಸೇರಿಸಬೇಕಾಗುತ್ತದೆ..." ಪ್ರೀತಿ ಬೆರೆತ ದನಿಯಲ್ಲಿ ಡಾಕ್ಟರ್ ಹಾಸ್ಯ ಮಾಡಿದಾಗ ಅವರಿಬ್ಬರ ಮುಖದ ಮೇಲೆ ನಗೆನವಿಲು ಲಾಸ್ಯವಾಡಿತು.ಮತ್ತೊಮ್ಮೆ ಡಾಕ್ಟರಿಗೆ ವಂದನೆ ಸಲ್ಲಿಸಿ ಇಬ್ಬರೂ ಕಾರಿನ ಬಳಿ ಬಂದರು. ಅವರ ಮನಸ್ಸು ಹಗುರಾಗಿತ್ತು.ಅಂದು ಸುಷಮಾ ತನ್ನ ರೂಮಿನಲ್ಲಿ ಮಲಗದೇ ಅಶೋಕನ ಕೋಣೆಗೆ ಬಂದಳು. ಅಶೋಕನಿಗೂ ಸಹ ಯಾರಾದರೂ ಸಂಗಾತಿಗಳು ಬೇಕಾಗಿತ್ತು. ಪ್ರೀತಿಯಿಂದವಳನ್ನು ಸ್ವಾಗತಿಸಿದ ಅವರಿಬ್ಬರೂ ಯಾರೋ ಏನೋ ಎಲ್ಲಿಯವರೋ ರಕ್ತಸಮ್ಮಂಧವಂತೂ ಇರಲೇ ಇಲ್ಲ. ಹೀಗಿದ್ದರೂ ಸಹೋದರ ಸಹೋದರಿಯ ಬಾಂಧವ್ಯ ಅವರಿಬ್ಬರನ್ನು ಬಲವಾಗಿ ಬಂಧಿಸಿತ್ತು. ಸದಾ ಸಾವಿನೊಂದಿಗೆ ಕಣ್ಣು ಮುಚ್ಚಾಟವಾಡುವ ಕಾಯಕ ವೀರರಾದ ಅವರು ಎಂದೋ ಅಣ್ಣಾತಂಗಿಯರಾಗಿದ್ದರು. ರಾತ್ರಿ ಯೆಲ್ಲಾ ಅವರು ಮಾತಾಡಿದ್ದು ಒಂದೇ ವಿಷಯ ಮೇಜರ್. ಮೇಜರಿಗೆ ಆ ದುರ್ಗತಿ ಒರಬೇಕಾದರೆ ಏನು ನಡೆದಿರಬಹುದು? ಅವರ ಮೇಲೆ ದಾಳಿ

ಯಿಟ್ಟು ಈ ರೀತಿ ಸ್ಥಿತಿಯನ್ನು ತಂದೊಡ್ಡಿದ ಶತ್ರು ಯಾರೇ ಇದ್ದರೂ, ಆತ ಸಾಮಾನ್ಯನಂತೂ ಅಲ್ಲ. ಮೇಜರನ ಸರಿಯಾಗಿ ಗುಣವಾದ ಮೇಲೆ ವಿಷಯ ತಿಳಿದು ಸೇಡು ತೀರಿಸಿಕೊಳ್ಳುವ ಛಲ ಇಬ್ಬರದೂ, ತನ್ನ ಪ್ರಿಯತಮನಿಗೆ ಬಂದ ದುರ್ಗತಿ ಕಂಡು ಹರಿತವಾದ ಚೂರಿಯನ್ನು ಎದೆಗಿಳಿಸಿದಾಗ ಾಗುವ ವೇದನೆ ಅನುಭವಿಸಿದ ಸುಷಮಾ ಕೆರಳಿದ ಫಣಿಯಾಗಿದ್ದಳು. ದುಃಖಿತಪ್ತ ಹೃದಯದಲ್ಲಿ ಸಿಡಿಯುತ್ತಿದ್ದ ಜ್ವಾಲಾಮುಖಿಯನ್ನು ಕಷ್ಟಪಟ್ಟು ಹತ್ತಿಕ್ಕಿದ್ದ ಅಶೋಕ. ಆ ವ್ಯಕ್ತಿ ಏನಾದರೂ ಕೈಗೆಸಿಕ್ಕರೆ ಅವನ ಎದೆ ಬಗೆದು ಬಿಸಿ ಬಿಸಿ ರಕ್ತದಲ್ಲಿ ಕೈತೊಳೆದುಕೊಳ್ಳುವ ಹಂಬಲ ವ್ಯಕ್ತಪಡಿಸಿದ....ಅಶೋಕನೊಂದಿಗೆ ತನ್ನ ಭಾವನೆ ನೋವುಗಳನ್ನು ಹಂಚಿಕೊಂಡ ಸುಷಮಾ ತಾಯಿಯ ಮಡಿಲಲ್ಲಿ ಹಾಯಾಗಿ....ನಿದ್ರಿಸುವ ಮಗುವಿನಂತೆ........ಅವನ ಆಸರೆಯಲ್ಲಿ ಸುಖವಾಗಿ ನಿದ್ರಿಸಿದಳು.

ಮರುದಿನದ ಪತ್ರಿಕೆಗಳ ತುಂಬೆಲ್ಲ ಮೇಜರನದೇ ಸಮಾಚಾರ. ಮೊದಲೇ ಅಶೋಕ ಎಲ್ಲರಿಗೂ ವಿನಂತಿಸಿಕೊಂಡಂತೆ ವಿಶೇಷವಾಗಿ ಏನನ್ನೂ ಉಲ್ಲೇಖಿಸದೆ ರಂಗಮಹಲ್ ಹಾಗೂ ಸಾಂಬಮೂರ್ತಿಗಳ ಹೆಸರೂ ಸಹ ಕಾಣಿಸದೇ ಕೇವಲ ಹೇಮಂತ ಗಾಯಗೊಂಡು ಆಸ್ಪತ್ರೆ ಸೇರಿದ ಸಮಾಚಾರವನ್ನಷ್ಟೇ ಪ್ರಕಟಿಸಿದ್ದರು. ಹಾಗೂ ಆತ ಸಾವಿನಂಚಿನಿಂದ ಪಾರಾಗಿದ್ದು, ಚಿಂತಿಸುವ ಅವಶ್ಯಕತೆ ಇಲ್ಲವೆಂದು ವಿಶೇಷವಾಗಿ ನಮೂದಿಸಿದ್ದರು. ಎಲ್ಲಾ ಪತ್ರಿಕೆ ತಿರುವಿ ಹಾಕಿ ಎಲ್ಲೂ ಕಳವಳಕ್ಕೆಡೆ ಮಾಡುವ ಸಮಾಚಾರ ಪ್ರಕಟವಾಗದಿದ್ದನ್ನು ಕಂಡು ಸಮಾಧಾನದ ಉಸಿರುಬಿಟ್ಟು ಸುಷಮಾಳೊಂದಿಗೆ ಆಸ್ಪತ್ರೆ ಕಡೆ ಸಾಗಿದ.

ಹಿಂದಿನ ದಿನದಂತೆ ಇಂದೂ ಸಹ ಜನಸಮುದಾಯ.....ಎರಡು ಪಟ್ಟು ಹೆಚ್ಚು....ಪತ್ರಿಕೆ ಓದಿ ಕಳವಳಕ್ಕೀಡಾದ ಅವರೆಲ್ಲ ಹೇಮಂತನ ಕುಶಲ ವಿಚಾರಿಸಲು ಶುಭಕಾಮನೆಗಳೊಂದಿಗೆ ಧಾವಿಸಿದ್ದರು. ಅವರೆಲ್ಲರಿಗೂ ಸಮಾಧಾನ ಹೇಳಿ ಒಳಗೆ ಬಂದಾಗ ಉನ್ನತ ಮಟ್ಟದ ಅಧಿಕಾರಿಗಳ ಗುಂಪು ಅವರಿಗಾಗಿ ಕಾಯುತ್ತಿತ್ತು. ಡಾಕ್ಟರ್ ದೇಸಾಯಿ ಯಾವ ವಿಷಯವನ್ನೂ ತಿಳಿಸಿರಲಿಲ್ಲ. ಏನೇ ಕೇಳುವದಿದ್ದರೂ ಕ್ಯಾಪ್ಟನ್ ಅಶೋಕ ಅವರನ್ನೇ ಕೇಳಿ, ಎಂದು ಹೇಳಿ ಕೈತೊಳೆದುಕೊಂಡಿದ್ದರು. ಅಶೋಕ ಮತ್ತು ಸುಷಮಾ ಅವರೆಲ್ಲರ ಮಧ್ಯ ಕುಳಿತು ಚರ್ಚಿಸಿದರು. ದಯವಿಟ್ಟು ಮೇಜರ್ ಗುಣಮುಖರಾದ ಮೇಲೆ ಅವರ ಒಪ್ಪಿಗೆ ಪಡೆದು ವಿವರ ಬಹಿರಂಗಪಡಿಸುವದಾಗಿ ವಿನಮ್ರತೆಯಿಂದ ನುಡಿದರು. ಅವರೊಂದಿಗೆ ದಯವಿಟ್ಟು ಸರ್ವದೃಷ್ಟಿಯಿಂದಲೂ ರಕ್ಷಣೆವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಂಡರು. ಎಲ್ಲರಿಗೂ ಅಲ್ಪೋಪಹಾರದೊಂದಿಗೆ ಕಾಫಿಕೊಟ್ಟು

ಕಳಿಸಿದಾಗ ಮಧ್ಯಾಹ್ನ ಎರಡು ಗಂಟೆ. ಮುಗುಳುನಗೆಯೊಂದಿಗೆ ದೇಸಾಯಿ ಅವರಿಗೆ ಅಭಿನಂದನೆ ನೀಡಿದರು. ಎಲ್ಲರನ್ನು ಸಮಾಧಾನಪಡಿಸಿದ. ಕಾರ್ಯ ವಿಧಾನ ಮೆಚ್ಚಿ ಬೆನ್ನು ಚಪ್ಪರಿಸಿದಾಗ ಇಬ್ಬರಿಗೂ ಅತುಲ ಆನಂದವಾಯಿತು.

ಮೇಜರ ಸುಖವಾಗಿ ನಿದ್ರಿಸುತ್ತಿದ್ದ....ಅತ್ಯುತ್ತಮ ರೀತಿಯ ಆರೈಕೆ ದೊರೆತದ್ದು ಶೀಘ್ರಗುಣವಾಗಲು ಅನುವು ಮಾಡಿತ್ತು. ಒಂದರ್ಧ ಗಂಟೆ ಕುಳಿತು ಇಬ್ಬರು ಮನೆ ಕಡೆ ನಡೆದರು........ ಇದೇ ರೀತಿ ಎರಡು ದಿನಗಳು ಉರುಳಿದವು.

ಇಂದವರು ಹೇಮಂತನನ್ನು ನೋಡಬಹುದಿತ್ತು. ಅವನೊಂದಿಗೆ ಮನ ತುಂಬಿ ಮಾತನಾಡುವಂತಿತ್ತು. ಹೇಮಂತನಿಗೆಂದು ಸುಂದರ ಹೂಗಳಿಂದ ಕೂಡಿದ ಪುಷ್ಪಗುಚ್ಛದೊಂದಿಗೆ ಇಬ್ಬರೂ ಆಸ್ಪತ್ರೆ ಸೇರಿದರು. ಡಾಕ್ಟರ್ ದೇಸಾಯಿ ರೂಮಿನಲ್ಲಿರಲಿಲ್ಲ. ಅವರಿಗಾಗಿ ಕಾಯದೇ ಹೇಮಂತನನ್ನಿರಿಸಿದ್ದ ಸ್ಪೇಶಲ್ ರೂಮಿನ ಬಾಗಿಲಿಗೆ ಬಂದಾಗ ಒಳಗಿನಿಂದ ಡಾಕ್ಟರು ಹೇಮಂತ ನೊಂದಿಗೆ ಮಾತನಾಡುವದು ಕೇಳಿ ಬಂದು ಬಾಗಿಲಿಗೆ ನಿಂತರು.

"ವೆಲ್ ಹೇಮಂತ....ನೀವೀಗ ಸಂಪೂರ್ಣ ಗುಣಮುಖರು."

"ಥ್ಯಾಂಕ್ಯು ಡಾಕ್ಟರ್....ಅಂದ ಹಾಗೆ ನನಗೇನಾಗಿತ್ತು?"

"ಒಂದಾಗಿದ್ದರೆ ಹೇಳಬಹುದು ಮೇಜರ್. ಒಂದು ದೃಷ್ಟಿಯಿಂದ ನೀವು ಬದುಕಿದ್ದೇ ಒಂದು ಪವಾಡ....ನಿಮ್ಮ ಶ್ವಾಸಕೋಶದಲ್ಲಿ ವಿಷವಾಯು ತುಂಬಿ ಕೊಂಡಿತ್ತು. ದೇಹದ ತುಂಬೆಲ್ಲ ಗಾಜುಗಳು ಚುಚ್ಚಿಕೊಂಡಿದ್ದವು. ದೇಹದ ಮೇಲೆಲ್ಲ ಸುಟ್ಟಗಾಯ....ಕೈಕಾಲುಗಳಿಗೆ ಬಾವು ನೆತ್ತಿ ಮೇಲೆ ಭಾರಿ ಪೆಟ್ಟು. ಹಾಂ... ಆಸ್ಪತ್ರೆಗೆ ನಿಮ್ಮ ಸಂಗಡಿಗರು ಸರಿಯಾದ ಸಮಯಕ್ಕೆ ತಂದರು. ಒಂದೆರಡು ಗಂಟೆ ಕಳೆದಿದ್ದರೆ ಜಗತ್ತಿನ ಯಾವ ಶಕ್ತಿಯೂನಿಮ್ಮನ್ನು ಬದುಕಿಸಿ ಕೊಳ್ಳುತ್ತಿರಲಿಲ್ಲ....ಒಂದು ಮಾತು ಮಾತ್ರ ನಿಜ ಹೇಮಂತ. ನೀವು ಅಸಾಮಾನ್ಯರು ಅಸಾಧ್ಯರು....ಯು ಆರ್ ರಿಯಲಿ ಗ್ರೇಟ್ ಮೇಜರ್" ನಿಮ್ಮ ಬಗ್ಗೆ ನನಗೆ ಹೆಮ್ಮೆ ಅನಿಸುತ್ತದೆ. ಹೇಮಂತ ಮೌನ ತಾಳಿದ....ಕಣ್ಣುಗಳಲ್ಲಿ ವಿಚಿತ್ರ ಮಿಂಚು....ಮೂಗಿನ ಹೊರಳೆಗಳು ಉಬ್ಬಿದವು. ಡಾಕ್ಟರಿಗೆ ಅಚ್ಚರಿ "ಮೇಜರ....ಏನಾಯಿತು? ನಿಮ್ಮ ಆರೋಗ್ಯ."

ಹೇಮಂತ ಮುಗುಳುನಗೆ ನಕ್ಕ. "ನನಗೇನೂ ಆಗಿಲ್ಲ ಡಾಕ್ಟರ್.... ಬಾಗಿಲ ಬಳಿ ಮರೆಯಲ್ಲಿ ನಿಂತ ನನ್ನ ಸಂಗಡಿಗರ ಬಗ್ಗೆ ನನಗೆ ಇದೀಗ ಸಂದೇಶ ಬಂದಿದೆ. ಸುಷಮಾಳ ಹೃದಯ ಬಡಿತ, ಅಶೋಕನ ಕಾಲಸಪ್ಪಳ....ನನ್ನನ್ನು ದ್ರವಿತಗೊಳಿಸುತ್ತಿದೆ."

ಅವನ ಮಾತು ಮುಗಿದಿರಲಿಲ್ಲ. ಎಲ್ಲಾ ಕೇಳಿಸಿಕೊಂಡ ಸುಷಮಾ, ಅಶೋಕ ಒಳಗೆ ಕಾಲಿಟ್ಟರು. ಅಶೋಕ ಬೇಕೆಂತಲೇ ಎರಡು ಹೆಜ್ಜೆ ಹಿಂದಾದ. ಸುಷಮಾ ಬಿರುಗಾಳಿಯಂತೆ ಒಳನುಗ್ಗಿದಳು. ವಿಶಾಲವಾದ ಮಂಚದ ಮೇಲೆ ಶುಭ್ರ ಗಾದಿಯಲ್ಲಿ ಒರಗಿದ್ದ ಹೇಮಂತ ಇಬ್ಬರ ಕಡೆಗೂ ನೋಡಿದ. ಅವರ ಬಳಿ ಸಾರಿದ ಸುಷಮಾ ಹಾಸಿಗೆಯ ಮೇಲೆ ಕುಸಿದು ಅವನೆದೆಯ ಮೇಲೆಮುಖ ಹುದುಗಿಸಿದಳು. ಹೇಮಂತ ಅವಳ ಬೆನ್ನ ಮೇಲೆ ಮೆಲುವಾಗಿ ಕೈಯಾಡಿಸ ತೊಡಗಿದ. ಕೆಲ ಸಮಯ ಬಿಟ್ಟು ಅಶೋಕ ನುಡಿದ. "ನಿಮ್ಮ ರೋಮ್ಯಾನ್ಸ್ ಮುಗಿದಿದ್ದರೆ ನನ್ನೊಡನೆ ಸ್ವಲ್ಪ ಮಾತನಾಡಬಹುದಲ್ಲ," ವ್ಯಂಗ್ಯವಾಗಿ ಹಾಸ್ಯ ಬೆರೆತ ದನಿ ಸುಷಮಾ ಕೆಂದಾವರೆ ಮುಖದೊಂದಿಗೆ ಮೇಲೆದ್ದಳು. ಡಾಕ್ಟರ್ ದೇಸಾಯಿ ಮುಸಿಮುಸಿ ನಕ್ಕರು.ಹೇಮಂತ ಕೃತಜ್ಞತೆ ಹಾಗೂ ಹೆಮ್ಮೆಯಿಂದ ಅವನೆಡೆ ನೋಡಿದ. ಹತ್ತಿರ ಕರೆದು, ಕುಳ್ಳಿರಿಸಿ ಅವನೊಂದಿಗೆ ಆತ್ಮೀಯವಾಗಿ ಹೇಳಿದ. "ಅಶೋಕ ನಿನ್ನಿಂದಾಗಿ ನಾನು ಪುನರ್ಜನ್ಮ ಪಡೆದೆ. ಸರಿಯಾದ ಸಮಯಕ್ಕೆ ನನ್ನನ್ನು ನೀವಿಬ್ಬರೂ ಕೂಡಿ ಆಸ್ಪತ್ರೆ ಸೇರಿಸಿದಿರಿ....ಇಲ್ಲದಿದ್ದರೆ ನನ್ನ ಗತಿ ಏನಾಗುತ್ತಿತ್ತೋ?"

"ದಯವಿಟ್ಟು ಹಾಗೆನ್ನಬೇಡಿ, ಮೇಜರ್....ಕೊಲ್ಲುವವನೊಬ್ಬನಾದರೆ ಕಾಯುವವನೂ ಒಬ್ಬನಿದ್ದಾನೆ. ನನಗೊಂದೇ ಚಿಂತೆ. ಇಷ್ಟು ಹಿಂಸೆ ಅನುಭವಿ ಸಿದ ನಿಮಗೆ ಸಹಾಯ ಮಾಡಲಿಕ್ಕೆ ಆಗಲಿಲ್ಲವಲ್ಲ ಎಂದು. ಅದಲ್ಲದೇ ನಿಮ್ಮ ನಿಕಟವರ್ತಿಯಾಗಿದ್ದು ಅಂದು ರಾತ್ರಿ ನಿಮ್ಮನ್ನು ಗುರುತಿಸಲು ಆಗದೇ ನಿಮಗೆ ರಿವಾಲ್ವರ್ ಹಿಡಿದೆ. ದೈವ ಚೆನ್ನಾಗಿತ್ತು....ಏನಾದರೂ ಹೆಚ್ಚು ಕಡಿಮೆ ಯಾಗಿದ್ರೆ...."

"ಅದೆಲ್ಲ ಮರೆತು ಬಿಡಿ . ನನ್ನ ಪರಿಸ್ಥಿತಿಯೂ ಹಾಗೆಯೇ ಆಗಿತ್ತು.... ನಿಮ್ಮನ್ನು ನಾನು ಗುರುತಿಸಿದೆ....ಮಾತನಾಡಲು ಶಕ್ತಿ ಇರಲಿಲ್ಲ. ನಿಮ್ಮ ಹೆಸರಿಡಿದು ಕೂಗಲು ಸಾಕಷ್ಟು ಪ್ರಯತ್ನಪಟ್ಟೆ ಆಗಲಿಲ್ಲ."

ಮಧ್ಯೆ ಡಾಕ್ಟರ್ ದೇಸಾಯಿ ಮೂವರನ್ನೂ ತಡೆದರು. "ಸಾಕಷ್ಟು ಮಾತನಾಡಿಯಾಯಿತಲ್ಲ, ಇನ್ನು ಹೊರಡಿ, ಇವರಿಗೆ ವಿಶ್ರಾಂತಿ ಬೇಕು."

ಸುಷಮಾಳ ಮುಖ ಚಿಕ್ಕದಾಯಿತು. ಅಶೋಕನೇ ಹೇಳಿದ. ಡಾಕ್ಟರ್ ನಾವು ಇವರಿಗೆ ತೊಂದರೆ ಕೊಡುವದಿಲ್ಲ. ಮಾತೂ ಸಹ ಆಡುವದಿಲ್ಲ. ಹಾಗೇ ಜೊತೆಯಾಗಿ ಸಂಜೆವರೆಗೂ ಇರಲು ಅನುಮತಿ ಕೊಡುವಿರಾ."

ಮತ್ತೊಮ್ಮೆ ದೇಸಾಯಿ ಮೋಹಕವಾಗಿ ನಕ್ಕರು. "ನನಗೆ ಗೊತ್ತು. ನಾನು ಅನುಮತಿ ಕೊಡದಿದ್ದರೂ ನೀವು ಮನೆಗೆ ಹೋಗದೇ ಬಾಗಿಲ ಬಳಿ

894.8143
DES N98



ಕಾಯುತ್ತ ಕುಳಿತುಕೊಳ್ಳುತ್ತೀರೆಂದು. ಅದಕ್ಕಾಗಿ ಒಪ್ಪಿಗೇ ಕೊಡುತ್ತಿದ್ದೇನೆ. ಒಂದು ಮಾತು, ಇವರಿಗೆ ದಣಿವು ಆಗಕೂಡದು. ಬೇಗ ಗುಣವಾಗಬೇಕೆಂದರೆ ನನ್ನ ಮಾತು ಖಂಡಿತ ಪಾಲಿಸಬೇಕು."

ಅವರಿಗೆ ವಂದಿಸಿ ಬೀಳ್ಕೊಟ್ಟರು. ಮುಂದೆ ಎಲ್ಲಾ ಕೈಸನ್ನೆ ಬಾಯಿ ಸನ್ನೆ ಮೇಲೆ ಮೂಕರಾಟ.ಮೂವರೂ ಊಟಮಾಡಿದರು. ಹೇಮಂತ ಎರಡು ದಿನಗಳ ಪತ್ರಿಕೆ ತಿರುವಿ ಹಾಕಿದ. ಜನತೆಯ ಪ್ರೀತಿ ಅಧಿಕಾರಿಗಳ, ಗಣ್ಯವ್ಯಕ್ತಿಗಳ ಶುಭಾಶಯ ಪಡೆದು ಗದ್ಗದಿತನಾದ....ರಾತ್ರಿ ಊಟವೂ ಮೂವರೂ ಕೂಡಿ ಮಾಡಿಯಾಯಿತು. ಒಂಭತ್ತು ಗಂಟೆಗೆ ಹೊರಟು ನಿಂತಾಗ ಮೊದಲು ಅಶೋಕ ಗುಡ್‌ನೈಟ್ ಹೇಳಿ ಹೊರಬಂದ. ಸುಷಮಾ ನಾಲ್ಕು ಹೆಜ್ಜೆ ಬಂದಂತೆ ಮಾಡಿ, "ಅಶೋಕ ನಾನು ಪರ್ಸ್ ಮರೆತು ಬಂದಿರುವೆ" ಎಂದಳು. ಅಶೋಕ ಹಾಸ್ಯ ಬೆರೆತ ದನಿಯಲ್ಲಿ "ನನಗೆ ಈ ವಿಷಯ ಮೊದಲೇ ಗೊತ್ತಿತ್ತು," ಎಂದ.

ಸುಷಮಾ ಹೇಮಂತನ ಬಳಿ ಸಾಗಿದಳು. ಹೇಮಂತ ಅವಳ ಬರುವನ್ನೇ ನಿರೀಕ್ಷಿಸುತ್ತಿದ್ದ.ಸುಷಮಾ ಅವನ ಮುಖದ ಮೇಲೆ ಬಾಗಿದಳು. ತಾವರೆಯಂಥ ಅವಳ ಮುಖವನ್ನು ತನ್ನೆರಡೂ ಕೈಗಳಲ್ಲಿ ಹಿಡಿದು ಕೊಳದಂತಿದ್ದ ಕಣ್ಣುಗಳನ್ನು ಮನಸಾರೆ ಚುಂಬಿಸಿ, ಆಮೇಲೆ ಅರೆ ಬಿರಿದ ಪುಷ್ಪದಂತಿದ್ದ ಅವಳ ಕಂಪಿಸುವ ತುಟಿಗಳ ಮೇಲೆ ಹೂಮುತ್ತನ್ನಿತ್ತು," ಹೋಗಿ ಬಾ....ಎಂದ.... ಸುಷಮಾ ಬಾಗಿಲಿಗೆ ಬಂದಾಗ ಹಿಂದೆ ಬಂದಿತ್ತು ಧ್ವನಿ "ಗುಡ್ ನೈಟ್ ಸ್ವೀಟ್ ಡ್ರೀಮ್ಸ್" ಅವಳ ಮುಖದ ಮೇಲೆ ನಗೆಹೂವು ಅರಳಿತು.

* * * *

74659 CR

ಮೇಜರ ಹೇಮಂತನ ಪ್ರಕೃತಿ ದಿನದಿಂದ ದಿನಕ್ಕೆ ಸುಧಾರಿಸುತ್ತ ಹೋಯಿತು. ನಾಲ್ಕೈದು ದಿನಗಳಲ್ಲಿ ಆತ ಬಹಳಷ್ಟು ಚೇತರಿಸಿಕೊಂಡ. ಅಂದು ನಡೆದ ಘಟನೆಗಳನ್ನೆಲ್ಲ ಅಶೋಕ ಮತ್ತು ಸುಷಮಾರಿಗೆ ತಿಳಿಸಿ ಹೇಳಿದ. ಅವರೂ ಸಹ ತಮಗಾದ ಅನುಭವವನ್ನು ಪ್ರಾಣಾಪಾಯದ ಕ್ಷಣಗಳನ್ನು ಅವನ ಮುಂದಿಟ್ಟರು. ಅವರಿಬ್ಬರ ಅನುಭವ ಒಂದೇ ಬಗೆಯಾಗಿದ್ದವು. ಇಬ್ಬರೂ ಮೃತ್ಯುವಿಗೆ ಮುತ್ತಿಟ್ಟು ವಾಪಸಾಗಿದ್ದರು.

ಒಂದು ಮಾತು ಮಾತ್ರ ಸತ್ಯವಾಗಿತ್ತು. ಮಾಜಿಸಚಿವ ಸಾಂಬಮೂರ್ತಿ ಅವರ ಹೆಸರಿನಲ್ಲಿ ಈ ಮೋಸದ ಜಾಲ ಹೆಣೆಯಲ್ಪಟ್ಟಿತ್ತು. ಇಲ್ಲಿಯವರೆಗೂ ನಡೆದ ದುಷ್ಕೃತ್ಯಗಳಿಗೂ ಸಾಂಬಮೂರ್ತಿಗಳಿಗೂ ಯಾವದೇ ರೀತಿಯ ಸಮ್ಮಂಧವಿರಲಿಲ್ಲ.

"ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ;" ಹೇಮಂತ ನುಡಿದ: "ನನಗೆ ಪೂರ್ಣ ಗುಣವಾದ ಮೇಲೆ ಇದರ ಹಿಂದಿರುವ ರಹಸ್ಯವನ್ನೇ ಬಯಲು ಮಾಡಿ ಇದಕ್ಕೆ ಕಾರಣರಾದವರನ್ನು ನ್ಯಾಯಾಲಯದ ಮೆಟ್ಟಿಲು ಹತ್ತಿಸುತ್ತೇನೆ. ನನಗೆನಿಸುವ ಮಟ್ಟಿಗೆ ಇದು ಮೇಲ್ನೋಟಕ್ಕೆ ತೋರುವಂತೆ ಸಾಮಾನ್ಯಕೇಸಲ್ಲ. ಆರಂಭದಲ್ಲಿ ಸಾಮಾನ್ಯವೆಂದು ತೋರಿದರೂ ಮುಂದೆ ಭಯಾನಕ ರೂಪ ತಾಳುವ ಭಾರತದ ಪ್ರಜಾಸತ್ತೆಯ ಮೇಲೆ ಬರಸಿಡಿಲು ಎರಗುವ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತಿವೆ. ಅದಕ್ಕಾಗಿ ನಾವಿಂದಿನಿಂದಲೇ ಸಿದ್ಧತೆ ಆರಂಭಿಸ ಬೇಕು."

ಕರಕರ ಹಲ್ಲು ಕಡಿಯುತ್ತ ಕೈ ಮುಷ್ಟಿಯಿಂದ ಮೇಜಿಗೆ ಗುದ್ದಿದ ಅಶೋಕ "ಮೊದಲು ಅವರು ನನ್ನ ಕೈಗೆ ಸಿಗಲಿ....ಹೆತ್ತ ತಾಯಿ ಸಹ ಗುರುತಿ ಸಲಸಾಧ್ಯವಾದಂಥ ದುರ್ಗತಿ ಅವರಿಗೆ ನೀಡುತ್ತೇನೆ."

"ಯಾವುದಕ್ಕೂ ಮೊದಲು ನೀವು ಗುಣಹೊಂದಿ ಕಳೆದುಹೋದ ಶಕ್ತಿ ನಿಮ್ಮ ದೇಹಕ್ಕೆ ಮರಳಬೇಕು....ಆವಾಗ ಮುಂದಿನ ಮಾತು."

ತನ್ನ ಮೇಲಿನ ಅಪಾರ ಪ್ರೇಮದಿಂದೊಡಗೂಡಿದ ಕಳಕಳಿಯ ಮಾತು ಗಳನ್ನಾಡಿದ ಸುಷ್ಮಾಳತ್ತ ಅನುರಾಗ ಪೂರ್ಣ ದೃಷ್ಟಿ ಬೀರಿದ ಹೇಮಂತ.... ಸುಷಮಾ ತಲೆಬಾಗಿಸಿದಳು.

ಎಂಟು ದಿನಗಳ ನಂತರ ಹೇಮಂತನಿಗೆ ಆಸ್ಪತ್ರೆಯಿಂದ ಮುಕ್ತಿ ದೊರೆ ಯಿತು. ಕೆಲವೊಂದು ಸೂಚನೆಗಳನ್ನು ನೀಡಿದ ಡಾಕ್ಟರ್ ದೇಸಾಯಿ ಅವರು ಹೇಮಂತನಿಗೆ ಕೈಕುಲಕಿ ಬೀಳ್ಕೊಟ್ಟರು. ಮೇಜರ್ ಅವರಿಗೆ ಕೈ ಮುಗಿದ್ದು ಅವರ ಸಹಾಯಕ್ಕಾಗಿ ಕೃತಜ್ಞತೆ ಸಲ್ಲಿಸಿದ. ಮೇಜರ್ ಮೊದಲಿನ ಸ್ಥಿತಿಗೆ ಬರ ಬೇಕಾದರೆ ಹೆಚ್ಚು ಕಡಿಮೆ ಒಂದು ತಿಂಗಳೇ ಹಿಡಿಯಿತು. ಸುಷಮಾ ಮತ್ತು ಅಶೋಕ ಅವನನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯ್ದರು. ಅವರ ಕಣ್ಣು ತಪ್ಪಿಸಿ ಹೇಮಂತ ಒಂದರಘಳಿಗೆ ಸಹ ದೂರ ಹೋಗಲಾಗಲಿಲ್ಲ. ದಿನಕ್ಕೆ ಮೂರು ಹೊತ್ತು ಔಷಧಿ ಶಕ್ತಿವರ್ಧಕಗಳನ್ನು ಸ್ವತಃ ಸುಷಮಾಳೇ ಬಲವಂತ ಮಾಡಿ ನೀಡುತ್ತಿದ್ದಳು. ಸರಿಯಾದ ಸಮಯಕ್ಕೆ ಪೌಷ್ಟಿಕ ಹಾಗೂ ಉತ್ತಮ ಆಹಾರ ಸೇವಿಸುವಂತೆ ಅಶೋಕ ಮೇಜರ್ ಮೇಲೆ ಒತ್ತಾಯ ತರುತ್ತಿದ್ದ. ಈ ಮಧ್ಯೆ ಮೇಜರ್ ಪ್ರತಿ ದಿವಸ ಪತ್ರಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸುತ್ತಿದ್ದ. ತಾನು ಆಸ್ಪತ್ರೆ ಸೇರಿದ ದಿನದಿಂದ ಮನೆಗೆ ಬರುವವರೆಗಿನ ಎಂಟು ಹತ್ತು ದಿನ ಗಳ ಪತ್ರಿಕೆಗಳ ಮೇಲೆ ಆತ ಹೆಚ್ಚು ಗಮನಹರಿಸಿದ್ದ....ಕೆಲವೊಂದು ಸುದ್ದಿ ಗಳಿಗೆ ಕೆಂಪು....ಹಸಿರು ಶಾಯಿಗಳಿಂದ ಗುರುತು ಹಾಕಿ ಆ ಪತ್ರಿಕೆಗಳನ್ನು

ಒಂದು ಬದಿಗೆ ಬೇರೆ ಇರಿಸಿದ.

ಹಾಗೂ ಹೀಗೂ ಒಂದು ತಿಂಗಳು ಕಳೆಯಿತು. ಈ ಅವಧಿಯಲ್ಲಿ ಮೂವರಿಗೂ ಅಚ್ಚರಿ ಮೂಡಿಸಿದ ವಿಷಯವೆಂದರೆ. 'ಚಾಂಗ್‌ಲಿನ್' ಮೌನವಾಗಿರುವದು. ಆತ ಮತ್ತೆ ಮೂವರ ಸುದ್ದಿಗೆ ಬಂದೇ ಇರಲಿಲ್ಲ. ಇದರರ್ಥ ಆತ ಯಾವುದೋ ವಿಷಯದ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿರಬೇಕು. ಇಲ್ಲವೇ ಭಾರತ ಬಿಟ್ಟು ಪಲಾಯನ ಮಾಡಿರಬೇಕು ಎಂಬ ಸಿದ್ಧಾಂತಕ್ಕೆ ಅವರು ಬಂದಿದ್ದರು....ಅವರನ್ನು ಭಾರತಕ್ಕೆ ಕರೆಸಿದವರಾರು? ಅವರ ಉದ್ದೇಶವೇನು? ಎಂಬುದೂ, ಸಹ ಸ್ಪಷ್ಟವಾಗಿರಲಿಲ್ಲ. ಭಾರತದಲ್ಲಿ ರಕ್ತದ ಹೊಳೆಹರಿಸುವದಕ್ಕಾಗಿ ತಾನು ಒಂದು ಸಾವಿರ ಕೋಟಿ ರೂಪಾಯಿ ಕರಾರಿನ ಮೇಲೆ ಬಂದಿರುವದಾಗಿ, ಚಾಂಗ್‌ಲಿನ್ ಹೇಳಿದ್ದರೂ ಅದೆಷ್ಟು ಸತ್ಯ ಎಂಬುದು ಕಂಡುಬಂದಿರಲಿಲ್ಲ.

ಎಲ್ಲಕ್ಕಿಂತ ಹೆಚ್ಚು ಮೇಜರ್ ಹಾಗೂ ಅವನ ಸಂಗಡಿಗರನ್ನು ಯೋಚನೆಯ ಕಡಲಲ್ಲಿ ಮುಳುಗಿಸುವಂತೆ ಮಾಡಿದ್ದು ನೀರಿನ ಟ್ಯಾಂಕಿನಲ್ಲಿ ತೇಲುತ್ತಿದ್ದ ಶವ. ಆ ಶವ ಯಾರದಿರಬಹುದು? ಅವನ ಕೊಲೆ ಮಾಡುವಂಥ ಪರಿಸ್ಥಿತಿ ಏಕೆ ಬಂದಿತು? ಅವನ ಹಿಂದೆ ಬಿದ್ದವರು ಯಾರು? ಎಂಬ ಮುಂತಾದ ಹತ್ತಾರು ಪ್ರಶ್ನೆಗಳು. ಹೇಮಂತ ತನ್ನ ಮಿನಿ ಕೆಮರಾದಲ್ಲಿ ಶವದ ಫೋಟೋಗಳನ್ನು ಸೆರೆ ಹಿಡಿದಿದ್ದ. ಅವುಗಳನ್ನು ಅಶೋಕ ಪ್ರಿಂಟ್ ಹಾಕಿ ತಂದೂ ಆಗಿತ್ತು. ವಿಭಿನ್ನ ಕೋನಗಳಲ್ಲಿ ಮೂಡಿ ಬಂದ ಶವದ ಚಿತ್ರಗಳನ್ನು ಹತ್ತಾರು ಬಾರಿ ಮೇಜರ ದಿಟ್ಟಿಸಿದ್ದ. ಅಶೋಕ ಹಾಗೂ ಸುಷಮಾರಿಗೂ ಜಾಗರೂಕತೆಯಿಂದ ಪರೀಕ್ಷಿಸಲು ಹೇಳಿದ್ದ. ಆದಾಗ್ಯೂ ಸತ್ತ ಆ ವ್ಯಕ್ತಿ ಯಾರೆಂಬುದು ತಿಳಿದು ಬಂದಿರಲಿಲ್ಲ. ಅವರ ಪ್ರಯತ್ನಕ್ಕೆ ಯಶ ಸಿಕ್ಕಿರಲಿಲ್ಲ.

ತಾನು ಗುಣಮುಖನಾಗಿದ್ದೇನೆ. ಮೊದಲಿನಂತೆ ಕೆಲಸ ಮಾಡಬಲ್ಲೆ.... ಏನು ಬಂದರೂ ಸಮರ್ಥವಾಗಿ ಎದುರಿಸಬಲ್ಲೆ ಎಂಬ ಆತ್ಮವಿಶ್ವಾಸ ಮೂಡುತ್ತಿದ್ದಂತೆ ಮೇಜರ್ ಮನೆಯಿಂದ ಹೊರಬಿದ್ದ. ನೆರಳಿನಂತೆ ಅವರ ಸಂಗಡಿಗರು ಹಿಂಬಾಲಿಸಿದರು. ಅವನ ಹೊಸ ಕಾರು "ಟೊಯೊಟಾ" ಮಾಜಿ ಸಚಿವ ಸಾಂಬಮೂರ್ತಿಗಳ ಮನೆಯತ್ತ ಓಡತೊಡಗಿತು. ವಿಶ್ರಾಂತಿ ಪಡೆಯುತ್ತಿದ್ದ ಸಾಂಬಮೂರ್ತಿಯವರು ಹೇಮಂತನ ಹೆಸರು ಕೇಳುತ್ತಲೂ ಹಾಗೇ ಹೊರಗೆ ಓಡಿ ಬಂದರು. ಅವರ ಮೇಲೆ ನಡೆದ ಹಲ್ಲೆ ಬಗ್ಗೆ ಅವರಿಗೆ ತಿಳಿದಿತ್ತು. ಹೀಗಾಗಿ ಮೊದಲು ಅವನ ಆರೋಗ್ಯದ ಬಗ್ಗೆ ವಿಚಾರಿಸಿ, ಆತ ಆಪತ್ತಿನಿಂದ ಪಾರಾದುದಕ್ಕೆ ಸಂತಸ ವ್ಯಕ್ತಪಡಿಸಿದರು. "ನನ್ನ ಬಗ್ಗೆ ತಾವು ವ್ಯಕ್ತಪಡಿಸಿದ ಭಾವನೆಗಳಿಗೆ ನಾನು ಕೃತಜ್ಞ. ಸಾಂಬಮೂರ್ತಿಗಳೆ," ತಕ್ಕಡಿಯನ್ನಿಟ್ಟು ತೂಗಿದಂತೆ

ಒಂದೊಂದೇ ಶಬ್ದವನ್ನು ಸ್ಪಷ್ಟವಾಗಿ ತೂಗುತ್ತ ಮಾತು ಆರಂಭಿಸಿದ ಹೇಮಂತ "ಒಂದು ವಿಷಯ ನಿಮಗಷ್ಟೇ ಅಲ್ಲ, ಯಾರಿಗೂ ಇನ್ನುವರೆಗೂ ತಿಳಿದಿಲ್ಲ."

"ಯಾವದದು ಅಂಥ ಗುಪ್ತ ಸಮಾಚಾರ?"

"ನನ್ನ ಮೇಲೆ ಹಲ್ಲೆ ಮಾಡಿ, ಚಿತ್ರಹಿಂಸೆ ನೀಡಿ, ಅಮಾನವೀಯ ರೀತಿಯಿಂದ ನನ್ನ ಕೊಲೆ ಮಾಡಲು ಪ್ರಯತ್ನಿಸಿದವರು ನೀವು ಎಂಬ ವಿಷಯ."

ತೋಫಿನಿಂದ ಸಿಡಿದ ಬೆಂಕಿಯುಂಡೆಯಂತೆ ಬಂದ ಹೇಮಂತನ ನುಡಿಗೆ ಮಾಜಿ ಸಚಿವರು ತತ್ತರಿಸಿ ಹೋದರು. "ಆಂ? ಏನೆಂದಿರಿ ಮೇಜರ್....ನಾನು ನಿಮ್ಮ ಕೊಲೆ ಮಾಡಲು ಪ್ರಯತ್ನಿಸಿದೆನೆ?

"ಹೌದು ನಿಃಸಂಶಯವಾಗಿ."

"ಸುಳ್ಳು....ಅಪ್ಪಟ ಸುಳ್ಳು..."

"ನನ್ನ ಬಳಿ ಸರಿ ಎಂಬುದಕ್ಕೆ ಸಾಕ್ಷಿ ಇದೆಯಲ್ಲ."

ಒಮ್ಮೆಲೆ ಸಾಂಬಮೂರ್ತಿಯವರು ತಣ್ಣಗಾದರು. ಏನು ಉತ್ತರಿಸ ಬೇಕೆಂಬುದೇ ಹೊಳೆಯದೆ ಹೇಮಂತ ನಗುತ್ತ ಕೋಟಿನ ಜೇಬಿನಿಂದ ಕ್ಯಾಸೆಟ್ ತೆಗೆದು ಟೀಪಾಯಿ ಮೇಲಿಟ್ಟ. "ದಯವಿಟ್ಟು ಟೇಪರಿಕಾರ್ಡರ್ ತರುತ್ತೀರಾ" ವಿನಯದಿಂದ ಕೇಳಿದ.

ಮೇಲೆದ್ದು ಒಳಗೆ ಹೋದ ಸಾಂಬಮೂರ್ತಿಗಳು ಹಾಗೆಯೇ ಟೇಪ ರಿಕಾರ್ಡರ್‌ದೊಂದಿಗೆ ಮರಳಿ ಬಂದರು. ಹೇಮಂತ ಟೀಪಾಯ್ ಮೇಲಿದ್ದ ಕ್ಯಾಸೆಟ್ ಹಾಕಿದ. ಮಾತು ಆರಂಭವಾಯಿತು. ಸಾಂಬಮೂರ್ತಿಗಳು ಕ್ಷಣ ಕ್ಷಣಕ್ಕೂ ಬೆಚ್ಚಿ ಬೀಳುತ್ತಿದ್ದರು. ಸಂಭಾಷಣೆ ಮುಗಿಯುತ್ತಿದ್ದಂತೆ ಹೇಮಂತ ಅವರೆಡೆ ಹೊರಳಿ ಕೇಳಿದ. "ನಾನು ಫೋನಿನಲ್ಲಿ ತಾವು ಹೇಳಿದಂತೆ ರಂಗ ಮಹಲ್ ಕಡೆ ಧಾವಿಸಿದೆ...ಅಲ್ಲಿ ಒಬ್ಬ ಬೋಳು ತಲೆಯ ಗುಡಾಣದಂಥ ಹೊಟ್ಟೆಯ ದೈತ್ಯ ಮಾನವ ನನ್ನ ದಾರಿ ಕಾಯುತ್ತಿದ್ದ...ನನಗಾಗಿ ತಾವು ಒಳಗೆ ದಾರಿ ಕಾಯುತ್ತಿದ್ದೀರಿ. ನಾನು ಅವರ ಬಾಡಿಗಾರ್ಡ್ ಎಂದು ಹೇಳಿ, ಕುಡಿಯಲು ಸುವಾಸನೆಭರಿತ ಕಾಫಿ ಕೊಟ್ಟ. ನಾನು ಕುಡಿದು ಮೂರ್ಛೆ ಹೋದೆ...ಮುಂದೆ..." ಮೇಜರ್ ನಡೆದ ಎಲ್ಲಾ ವಿಷಯ ಅವರ ಮುಂದೆ ನೇರ ವಾಗಿ ಇಟ್ಟು ಗಡಸು ಕಂಠದಲ್ಲಿ ಕೇಳಿದ. "ಈಗ ಹೇಳಿ ಸಾಂಬಮೂರ್ತಿಗಳೇ... ನಾನು ನಿಮಗೇನು ಅನ್ಯಾಯ ಮಾಡಿದ್ದೆನೆ ಅಂತ ಈ ರೀತಿ ನನ್ನೊಂದಿಗೆ ವರ್ತಿಸಿದಿರಿ...?"

"ಹೇಮಂತ...ನಾನು ಸತ್ಯವಾಗಿ ಹೇಳುತ್ತೇನೆ. ನಾನು ನಿಮಗೆ ಫೋನು ಮಾಡೇ ಇಲ್ಲ..."

"ಹಾಗಾದರೆ ಇದರಲ್ಲಿ ಕೇಳಿ ಬಂದ ದನಿ ಯಾರದು?"

"ಅದು ನನ್ನದೇ...." ಅಳುಕುತ್ತ ಸಾಂಬಮೂರ್ತಿ ನುಡಿದಾಗ ಹೇಮಂತ ಮಂದಹಾಸ ಸೂಚಿಸಿದ.

"ಅಂದ ಮೇಲೆ ನೀವು ನಿರಾಕರಿಸುವದರಲ್ಲಿ ಅರ್ಥವಿಲ್ಲ."

"ನಾನು ಹೇಳುವದನ್ನು ಸ್ವಲ್ಪ ಕೇಳಿ....ದನಿ ನನ್ನದೇ....ಆದರೆ ನಾನು ಮಾತಾಡಿಲ್ಲ....ಯಾರೋ ನನ್ನಂತೆ ಅನುಕರಣೆ ಮಾಡಿದ್ದಾರೆ...."

"ನಾನು ನಂಬುವದಾದರೂ ಹೇಗೆ?"

"ಈ ದುರ್ಘಟನೆ ನಡೆದಾಗ ನಾನು ಊರಲ್ಲೇ ಇರಲಿಲ್ಲ....ನಾನು ಮರಳಿ ಬಂದಾಗ ತಾವು ಆಸ್ಪತ್ರೆಯಲ್ಲಿದ್ದಿರಿ.... ನಾನು ತಮ್ಮ ಯೋಗಕ್ಷೇಮ ವಿಚಾರಿಸಲು ಬಂದಿದ್ದೆ....ಡಾಕ್ಟರರು ತಮ್ಮಭೆಟ್ಟಿಯಾಗಲು ನಿರಾಕರಿಸಿದರು.... ಸಂದೇಶ ಇಟ್ಟು ಮರಳಿ ಬಂದೆ"

"ಈ ವಿಷಯ ನನಗೆ ಗೊತ್ತಿದೆ."

"ಅಂದ ಮೇಲೆ ನೀವೇ ಹೇಳಿ....ನಾನು ಫೋನು ಮಾಡಲು ಹೇಗೆ ಸಾಧ್ಯ?"

"ಏಕೆ?....ಬೇರೆ ಕಡೆಯಿಂದ ಮಾಡಿ ನೀವು ನಿರಪರಾಧಿ ಎಂದು ಸಿದ್ಧ ಪಡಿಸಲು...."

"ತಾವು ಹೀಗೆ ಅಂದರೆ ನನಗೆ ಬೇರೆ ದಾರಿಯೇ ಉಳಿಯುವದಿಲ್ಲ ಹೇಮಂತ. ನೀವು ನನ್ನ ಬಗ್ಗೆ ಚೆನ್ನಾಗಿ ತಿಳಿದಿದ್ದೀರಿ.... ಇಂಥ ದುಷ್ಕೃತ್ಯಕ್ಕೆ ನಾನು....ನಾನು"

ಮೇಜರ್ ಮೆಲುವಾಗಿ ನಕ್ಕ....ಅಚ್ಚರಿಯಿಂದ ಅವರೆಡೆ ನೋಡಿ ತಬ್ಬಿಬ್ಬಾದರು ಸಾಂಬಮೂರ್ತಿ.

"ಸಾಂಬಮೂರ್ತಿಗಳೇ....ತಾವು ಹೆದರುವ ಅವಶ್ಯಕತೆಯಿಲ್ಲ....ನನಗೆ ತಾವು ನಿರಪರಾಧಿ ಎಂದು ಮೊದಲೇ ತಿಳಿದಿದೆ...."

"ಓಹ್...." ನಿಡಿದಾದ ಉಸಿರುಬಿಟ್ಟರು ಸಾಂಬಮೂರ್ತಿಗಳು– ಮನಸ್ಸು ಹಗುರಾಗಿತ್ತು.

"ಮೇಜರ್ ಇನ್ನೊಂದು ವಿಷಯ"

"ಹೇಳಿ."

"ರಂಗಮಹಲ್‌ಗೆ ತಮ್ಮನ್ನು ನಾನು ಕರೆಸಲು ಸಾಧ್ಯವೇ ಇರಲಿಲ್ಲ".

"ಅದ್ಹೇಗೆ?"

"ರಂಗಮಹಲ್ ಒಡೆಯ ಈಗ ನಾನಲ್ಲ, ಸುಮಾರು ಎಂಟು ತಿಂಗಳ ಹಿಂದೆ ನಾನದನ್ನು ಮೂರೂವರೆ ಕೋಟಿ ರೂಪಾಯಿಗಳಿಗೆ ಮಾರಿರುವೆ...."

ಈ ವಿಷಯ ಮೇಜರಗೆ ತಿಳಿದಿರಲಿಲ್ಲ....

"ಹೌದಾ?........ ನೀವದನ್ನು ಮಾರುವದೆಂದರೆ.... ಏಕೋ ನಂಬಿಕೆ ಆಗ್ತಿಲ್ಲ."

ನೀವು ನಮ್ಮವರು. ಅದಕ್ಕೇ ಸತ್ಯ ಹೇಳುತ್ತಿದ್ದೇನೆ....ನಾನು ಸಚಿವ ನಾಗಿದ್ದರೂ ನ್ಯಾಯವಾಗಿ ಕೆಲಸ ಮಾಡಿದವ ಎಂಬ ವಿಷಯ ನಿಮಗೆ ತಿಳಿದಿದೆ ನಾನು........ಸಚಿವ ಪದವಿ ಕಳೆದುಕೊಂಡು ಆರೆಂಟು ವರ್ಷಗಳಾದವು. ಈ ಅವಧಿಯಲ್ಲಿ ನನ್ನ ಅಂತಸ್ತು ಗೌರವ ಕಾಯ್ದುಕೊಳ್ಳಲು ಹೆಣಗಾಡಿದ್ದೇನೆ.... ಹೈಕಮಾಂಡಿನಲ್ಲಿ ನನ್ನ ಹೆಸರು ಉಳಿಸುವಂತೆ ಮಾಡಲು ನಾನು ಸಾಕಷ್ಟು ಜನರನ್ನು ಸಾಕಬೇಕಾಗಿತ್ತು. ಅದಕ್ಕಾಗಿ ಹಣ ನೀರಿನಂತೆ ಹರಿಸಿಲ್ಲವೆ.... ಇದಕ್ಕೆಲ್ಲ ಹಣವೆಲ್ಲಿಂದ ಬರುತ್ತಿದೆ? ಅದಕ್ಕೆ ರಂಗಮಹಲ್ ಮಾರಿದೆ. ಈ ವಿಷಯ ಯಾರಿಗೂ ತಿಳಿದಿಲ್ಲ.

"ಅದನ್ನು ಖರೀದಿಸಿದವರು ಯಾರು?"

"ಇಲ್ಲಿಯವರಲ್ಲ" ಪಂಜಾಬದವರು....ಲಖಾನಿಯಾ ಅಂತ."

"ಲಖಾನಿಯಾ ಅಂದರೆ....ಸುನೀಲ ಲಖಾನಿಯಾ....ಮಾಜಿ ಮುಖ್ಯ ಮಂತ್ರಿಗಳ ಅಳಿಯಂದಿರು?"

"ಹೌದು....ಅವರು ನಿಮಗೆ ಗೊತ್ತಾ?"

"ಕೇಳಿದ್ದೇನೆ....ಪರಿಚಯವಿಲ್ಲ ಅಷ್ಟೇ....ಅಂತೂ ಮಾಜಿ ಮುಖ್ಯಮಂತ್ರಿಗಳು ತಾವು ಗಳಿಸಿದ ಕಪ್ಪು ಹಣದಲ್ಲಿ ಸ್ವಲ್ಪಭಾಗ ಬಿಳಿ ಮಾಡಿದರು ಅನ್ನಿ"

"........"

"ನೀವು ಬುದ್ಧಿವಂತರು ಹೇಮಂತ....ಬೇರಿನ ಆಳಕ್ಕೇ ಇಳಿದುಬಿಟ್ರಿ"

"ಎಷ್ಟಾದರೂ ಇದು ನನ್ನ ಉದ್ಯೋಗವೇ ಅಲ್ಲವೆ", ಮೇಲೇಳುತ್ತ ಉತ್ತರಿಸಿದ ಹೇಮಂತ.

ಸಾಂಬಮೂರ್ತಿಗಳ ಒಪ್ಪಿಗೆ ಪಡೆದು ಮೂವರೂ ಮೇಲೆದ್ದರು. ಹೊರ ಬಾಗಿಲವರೆಗೂ ಬಂದು ಸಾಂಬಮೂರ್ತಿಗಳು ಅವರನ್ನು ಬೀಳ್ಕೊಟ್ಟರು.... ಅವರ ಗುರಿ ಈಗ ರಂಗಮಹಲ್.... ರಂಗಮಹಲ್ ಅಂದು ಅಶೋಕ ಹಾಗೂ ಸುಷಮಾ ನೋಡಿದಂತೆಯೇ ಇಂದೂ ಇತ್ತು. ಸುಟ್ಟು ಕರಕಾದ ಒಂದು ಭಾಗ....ಗ್ಯಾರೇಜ್ ಬಾಗಿಲು ಒಡೆದು....ಮುಕ್ಕಾಲು ಭಾಗ ಸುಟ್ಟುಬಿದ್ದಿತ್ತು ವಾಚಮನ್ ಆಗಲಿ....ಮರಕ್ಕೆ ಢೀ ಕೊಟ್ಟು ಆಸ್ಫೋಟಿಸಿದ ಮೇಜರನ ಕಾರು

ಕಾಂಟೆಸಾ ಆಗಲಿ ಅಲ್ಲಿರಲಿಲ್ಲ....ಹೇಮಂತ ಸಂಪೂರ್ಣ ಮಹಲನ್ನು....ಕೋಲ್ಡ ಸ್ಟೋರೇಜ್ ರೂಮನ್ನು ಹಾಗೂ ನೆಲಮಾಳಿಗೆ, ಗ್ಯಾರೇಜ್ ಎಲ್ಲಾ ಜಾಲಾಡಿಸಿದ....ಎಲ್ಲೂ ಯಾವ ಸುಳಿವೂ ದೊರೆಯಲಿಲ್ಲ....

ಅಲ್ಲಿಂದ ಮುಂದೆ ಸಮೀಪದ ಪೋಲೀಸ್ ಸ್ಟೇಷನ್‌ಗೆ ಕಾರು ಓಡಿತು.

ಇನಸ್ಪೆಕ್ಟರ್ ಯಶವಂತರಾವ್‌ಗೆ ಹೇಮಂತನ ಬಗ್ಗೆ ತಿಳಿದಿತ್ತು. ಹೀಗಾಗಿ ಅವರು ಮೂವರನ್ನೂ ಆದರದಿಂದ ಬರಮಾಡಿಕೊಂಡು ಕುಳ್ಳಿರಿಸಿ ಸತ್ಕರಿಸಿದರು. ಮುಂದೆ ಹೇಮಂತನಿಂದ ತಿಳಿದ ಸುದ್ದಿಗೆ ಅಚ್ಚರಿ ದಿಗ್ಭ್ರಮೆ ವ್ಯಕ್ತಪಡಿಸಿದರು. ಇಷ್ಟು ದೊಡ್ಡ ಅನಾಹುತ ನಡೆದರೂ ತಮಗೆ ಅದರ ಗಂಧ ಸಹ ಬಡಿಯದಿದ್ದುದರ ಬಗ್ಗೆ ವ್ಯಥೆ ಸೂಚಿಸಿದರು. ಸು. ೮-೧೦ ದಿನಗಳ ವರೆಗೆ ಯಾವ ವಿಷಯವೂ ಅವರಿಗೆ ಗೊತ್ತಿರಲಿಲ್ಲ.... ಯಾರೂ ದೂರು ನೀಡಲಿಲ್ಲ.... ಇದಾದ ಮೇಲೆ ಅವರ ಮನೆಗೆ ಹಾಲು ನೀಡುವವ ಮಾತನಾಡುತ್ತ ರಂಗಮಹಲ್‌ಗೆ ಬೆಂಕಿ ತಗುಲಿದ ವಿಷಯ ತಿಳಿಸಿದ. ಯಶವಂತರಾವ್ ಅವರು ಖಾಸಗಿಯಾಗಿ ಹೋಗಿ ರಂಗಮಹಲ್ ಪರಿಶೀಲನೆ ಮಾಡಿದ್ದರು. ಅವರಿಗೂ ಅಲ್ಲಿ ಯಾವ ಸುಳಿವೂ ದೊರೆತಿರಲಿಲ್ಲ. ಶವವಾಗಲಿ, ಸುಟ್ಟುಹೋದ ಶವವಾಗಲಿ ಕಾಣಬರಲಿಲ್ಲ. ಅಪರಾಧಿಗಳು ತುಂಬಾ ಬುದ್ಧಿವಂತರು ಎಂದುಕೊಂಡ ಹೇಮಂತ. ಅಲ್ಲಿಗೆ ಅಂದಿನ ವಿಚಾರಣೆ ಮುಗಿಯಿತು.

ಕಾರಿನಲ್ಲಿ ಬರುತ್ತಿರುವಾಗ ಅಶೋಕ ಕೇಳಿದ ಮೇಜರಿಗೆ, "ಇದರ ಬಗ್ಗೆ ಪಂಜಾಬದ ಮಾಜಿ ಸಚಿವರನ್ನೋ ಅಥವಾ ಅವರ ಅಳಿಯ ಸುನೀಲ ಅವರನ್ನೋ ವಿಚಾರಿಸಿದರೆ ಹೇಗೆ?"

"ಏನೂ ಆಗುವದಿಲ್ಲ.... ಅವರಿಬ್ಬರೂ ರಂಗಮಹಲ್ ಖರೀದಿಸಿದ ಬಗ್ಗೆಯೇ ನಿರಾಕರಿಸುತ್ತಾರೆ. ಅವರೇ ಅದನ್ನು ಖರೀದಿಸಿದ್ದರೂ ಅದು ಅವರ ಹೆಸರಿನಲ್ಲಿರುವದಿಲ್ಲ, ಬೇರೆ ಯಾರದೋ ಬೇನಾಮಿ ಹೆಸರಿನಲ್ಲಿರುತ್ತದೆ."

ಅಶೋಕ ಮುಂದೆ ಮಾತನಾಡಲಿಲ್ಲ. ಮತ್ತೆರಡು ನೀರಸ ದಿನಗಳು ಕಳೆದವು. ಎಂದಿನಂತೆ ರಾತ್ರಿ ಊಟವಾದ ಮೇಲೆ ರಮಿ ಆಡುತ್ತ ಕುಳಿತಿದ್ದರು ಮೂವರು, ಟೆಲಿಫೋನಿನ ಕರೆಗಂಟೆ. ಅಲ್ಲೇ ಸಮೀಪವಿದ್ದ ಅಶೋಕ ಮೇಲೆದ್ದ, ಟೇಪ್ ಗುಂಡಿಯನ್ನು ಅದುಮಿ ರಿಸೀವರ್ ಮೇಲೆತ್ತಿದ. "ಹಲೋ...ಯಾರು ಮಾತಾಡ್ತಿರೋದು".

"ಅದೆಲ್ಲ ನಿನಗೇಕೆ, ಹೇಮಂತನನ್ನು ಕರೆ."

"ಸಾರಿ.... ಅವರು ನಿದ್ರಿಸುತ್ತಿದ್ದಾರೆ. ನನ್ನ ಮುಂದೆ ಏನೆಂಬುದನ್ನು ಹೇಳು".

"ಮಿಸ್ಟರ್ ಅಶೋಕ, ನನ್ನ ಮುಂದೆ ಬುರುಡೆ ಉರುಳಿಸಬೇಡಿ...... ಹನ್ನೊಂದೂವರೆ ಒಳಗೆ ಹೇಮಂತ ಮಲಗುವದಿಲ್ಲವೆಂದು ನನಗೆ ಚೆನ್ನಾಗಿ ಗೊತ್ತು, ಅವರು ಓದುತ್ತಿರಬೇಕು, ಕರೆಯಿರಿ"

"ಸಾರಿ...ವಿಷಯವೇನೆಂದು ತಿಳಿದರೆ..."

"ಹೋಗಲಿಬಿಡಿ...........ರಂಗಮಹಲ್ ವಿಷಯ ನಿಮಗೆ ಬೇಡವೆಂದು ಕಾಣುತ್ತದೆ".

ರಂಗಮಹಲ್ ಹೆಸರು ಕಿವಿಗೆ ಬೀಳುತ್ತಲೂ ಅಶೋಕ ಜಾಗ್ರತನಾದ.

"ಸ್ವಲ್ಪ ಇರಿ... ನೋಡುತ್ತೇನೆ"

ರಿಸೀವರ್ ಮೇಲೆ ಕೈ ಇಟ್ಟು ಹೇಮಂತನಿಗೆ ವಿಷಯ ಹೇಳಿದ ರಿಸೀವರ್ ಕೈಲಿ ಹಿಡಿದು ಬೇಕೆಂತಲೇ ಸ್ವಲ್ಪ ತಡೆದು ಹೇಮಂತ ಮಾತನಾಡಿದ. "ಹಲೋ...ನಾನು ಮೇಜರ್ ಹೇಳಿ...ತಾವು ಯಾರು?"

"ನಾನಾರೆಂಬುದನ್ನು ಕೇಳಿ ಮಾಡುವಿರೇನು? ಮೊದಲು ಹೇಳಿ. ರಂಗ ಮಹಲ್ ವಿಷಯ ನಿಮಗೆ ಬೇಡವೆ? ನಿಮಗೆ ಫೋನು ಮಾಡಿ ಕೊಲ್ಲಲು ಬಯಸಿದವರು ಯಾರೆಂದು ತಿಳಿಯುವದು ಬೇಡವೆ....?"

"ಅವಶ್ಯವಾಗಿ ತಿಳಿದುಕೊಳ್ಳಬೇಕು."

"ಹಾಗಾದರೆ ಕೂಡಲೇ ನಾನು ಹೇಳಿದಲ್ಲಿಗೆ ಬನ್ನಿ."

"ಕ್ಷಮಿಸಿ... ಈಗಾಗಲೇ ನಾನೊಂದು ಬಾರಿ ಏಟು ತಿಂದಿದ್ದೇನೆ"

"ನಾನು ನಿಮ್ಮ ಶುಭಚಿಂತಕ, ಶತ್ರುವಲ್ಲ."

"ಸದ್ಯದ ಪರಿಸ್ಥಿತಿಯಲ್ಲಿ ಶತ್ರು ಯಾರು? ಮಿತ್ರ ಯಾರು? ಎಂದು ತಿಳಿಯುವದೇ ಕಷ್ಟವಾಗಿದೆ."

"ನಿಮ್ಮ ಮಾತು ನಿಜ, ಮೇಜರ್...ನಾನು ನಿಮ್ಮ ಶುಭಚಿಂತಕ ಎಂಬುದಕ್ಕೆ ನಿದರ್ಶನವನ್ನು ನೀಡುತ್ತಿದ್ದೇನೆ. ಸುಮಾರು ಮೂರು ತಿಂಗಳ ಹಿಂದಿನ ಇಂಗ್ಲೀಷ್ ಪತ್ರಿಕೆಗಳನ್ನು ತಿರುವಿಹಾಕಿ?"

"ಅದರಿಂದೇನಾಗುತ್ತದೆ?"

"ಅದರಿಂದ ಟ್ಯಾಂಕಿನಲ್ಲಿದ್ದ ಶವ ಯಾರದೆಂದು ತಿಳಿಯುತ್ತದೆ. ನಾನು ನಾಳೆ ಪುನಃ ಇದೇ ಸಮಯಕ್ಕೆ ಫೋನು ಮಾಡುತ್ತೇನೆ....ಗುಟ್‌ನೈಟ್".

"ಒಂದು ನಿಮಿಷ."

"ಇಂದು ಇಲ್ಲಿಗೇ ಸಾಕು....ನಾನು ಎಲ್ಲಿಂದ ಫೋನ ಮಾಡುತ್ತಿದ್ದೇನೆಂದು ವಿಚಾರಿಸಬೇಡಿ. ನಾನು ರೈಲು ನಿಲ್ದಾಣದ ಸಾರ್ವಜನಿಕ ದೂರವಾಣಿ

ಕೇಂದ್ರದಿಂದ ಫೋನು ಮಾಡುತ್ತಿದ್ದೇನೆ. ನಾಳೆ ಬೇರೆ ಕಡೆಯಿಂದ ಮಾಡುವೆ ಬೈ........"

ಸಂಪರ್ಕ ಕಡಿಯಿತು, ಹೇಮಂತ ಗಂಭೀರನಾದ. "ಈ ಧ್ವನಿಯನ್ನು ಎಲ್ಲೋ ಕೇಳಿದಂತಿದೆ....ಎಲ್ಲಿ? ಎಂದು ನೆನಪಾಗಲೊಲ್ಲದು."

"ಯೋಚಿಸಿರಿ....ಆದರೆ ಅಂದು ಮಾಡಿದಂತೆ ಮಾತ್ರ ಮಾಡಬೇಡಿ."

"ಇಲ್ಲ ಸುಷಮಾ, ಮಾಜಿ ಸಚಿವರ ಧ್ವನಿ ಗುರುತಿಸಿ ಅವರ ಕರೆಯಂತೆ ಓಡಿ ನಾನು ದುಡುಕಿದ್ದು ನೆನಪಿದೆ....ಇಂದು ಮಾತ್ರ ಆ ರೀತಿ ಮಾಡಲಾರೆ."

"ಗುಡ್‌ಬಾಯ್."

ಸುಷಮಾ ಮುದ್ದಿನಿಂದ ನುಡಿದಾಗ ಅಶೋಕ ಕೆಣಕಿದ. "ಈ ಮಗು ಎಲ್ಲ ಮಗುವಿನಂತಲ್ಲ....ಸ್ವಲ್ಪ ತಲೆಮೇಲೆ ಕೈಯಾಡಿಸಿ, ಬೆನ್ನು ತಿಕ್ಕಿ ಮುದ್ದಿಟ್ಟರೆ ಮಾತ್ರ ತಿಳಿದುಕೊಳ್ಳುತ್ತದೆ" ಸುಷಮಾ ದುರದುರನೆ ಅಶೋಕನೆಡೆ ನೋಡಿದಳು. "ಬೇಕಾದಷ್ಟು ನೋಡು, ನಾನೇನು ಸುಟ್ಟು ಹೋಗುವದಿಲ್ಲ.... ನಿನ್ನ ಮನದಲ್ಲಿದ್ದುದನ್ನು ಹೇಳಿದೆ ಅಷ್ಟೇ, ಅದೇನೋ ಅಂತಾರಲ್ಲ...."

"ಚೇಷ್ಟೆ ಸಾಕು, ಇನ್ನು ಮಲಗಿ....ನಾಳೆ ಮೂವರಿಗೂ ತುಂಬಾ ಕೆಲಸ ವಿದೆ." ಮೇಜರ್ ಸಿಟ್ಟು ಮಾಡಿದಾಗ ಎಲ್ಲೆಡೆ ಶಾಂತಿ ನೆಲೆಸಿತು.

ಮುಂಜಾನೆ ಬೇಗನೆ ಎದ್ದ ಹೇಮಂತ....ಅವನ ಜೊತೆ ಸಂಗಾತಿಗಳು, ಸರಿಯಾಗಿ ಒಂಬತ್ತು ಗಂಟೆಗೆ ಮೂವರೂ ಸೆಂಟ್ರಲ್ ಲೈಬ್ರರಿಯಲ್ಲಿದ್ದರು. ಅಲ್ಲಿಯ ಅಧಿಕಾರಿ ದೇಶಪಾಂಡೆ ಪ್ರೀತಿಯಿಂದ ಬರಮಾಡಿಕೊಂಡರು. ಹೇಮಂತರ ಮಾತಿನಂತೆ ಮೂರು ತಿಂಗಳ ಇಂಗ್ಲೀಷ ಪತ್ರಿಕೆಗಳ ಗಂಟನ್ನು ತಂದು ಮುಂದಿಟ್ಟರು. ಮೂವರು ಒಂದೊಂದು ಗಂಟು ತಮ್ಮೆಡೆಗೆ ಎಳೆದು ಕೊಂಡರು.

ಸುಮಾರು ೨ ಗಂಟೆಗಳ ಪರಿಶ್ರಮ ಫಲ ನೀಡಿತು. ಮೇಜರ ಒಂದು ಪತ್ರಿಕೆಯಲ್ಲಿ ಓರ್ವ ವ್ಯಕ್ತಿಯ ಫೋಟೋದೊಂದಿಗೆ ತನ್ನ ಬಳಿಯಿದ್ದ ಶವದ ಫೋಟೋ ಹೋಲಿಸತೊಡಗಿದ. ಅವರ ತುಟಿಗಳು ಗೋಲವಾದವು. ಟ್ಯಾಂಕಿನಲ್ಲಿ ತೇಲಾಡುತ್ತ ನಂತರ ಸುಟ್ಟು ಕರಕಾದ ಶವ ಯಾರದೆಂದು ಅವರಿಗೆ ತಿಳಿದಿತ್ತು....

* * * *

**ಚಂದ್ರಮೋಹನ....**

ಹೆಚ್ಚು ಕಡಿಮೆ ಮೂವತ್ತು ಮೂವತ್ತೈದು ವರ್ಷಗಳ ಸುಂದರ ತರುಣ ಪ್ರಸಿದ್ಧ ರಾಷ್ಟ್ರೀಯ ಪತ್ರಿಕೆಯೊಂದರಲ್ಲಿ ಪ್ರಧಾನ ವರದಿಗಾರ. ಚಿಕ್ಕವಾಗಿ

ದ್ದರೂ ಹೊಳಪುಳ್ಳ ಕಣ್ಣುಗಳು, ಅಗಲವಾದ ಹಣೆ, ಗುಂಗುರು ಕೂದಲು ಗಳಿಂದಾಗಿ ಆಕರ್ಷಕವಾಗಿ ಕಾಣುತ್ತಿದ್ದ. ಭಾರತೀಯ ವಿಮಾನದ ಭೀಕರ ದುರಂತದ ಬಗ್ಗೆ ಆತ ವರದಿ ತಯಾರಿಸಿ ಪ್ರಕಟಿಸಿದ್ದ. ಆ ವರದಿಗಾಗಿ ಅವನಿಗೆ ಜಾಗತಿಕ ಪುರಸ್ಕಾರ ದೊರಕಿತ್ತು. ಅದರ ಬಗ್ಗೆಯೇ ಅವನ ಫೋಟೋದೊಂದಿಗೆ ಸಂಪಾದಕರ ಹಾಗೂ ಪತ್ರಕರ್ತ ಸಂಘದವರು ಸಲ್ಲಿಸಿದ ಅಭಿನಂದನೆ ಸಹ ಅಚ್ಚಾಗಿತ್ತು.

ಮನೆಯಲ್ಲಿ ಎಲ್ಲವನ್ನು ಓದುತ್ತಿದ್ದಂತೆ ಹೇಮಂತನ ಮುಖ ಕಳೆಗುಂದಿ ದ್ದನ್ನು ಗಮನಿಸಿದಳು ಸುಷಮಾ.... ಮನಸ್ಸಿಗೆ ತೀರಾ ವೇದನೆಯಾದಾಗ ಮಾತ್ರ ಆತ ದುಃಖಿತನಾಗುತ್ತಾನೆ ಎಂಬುದು ಅವನ ಸಂಗಡಿಗರಿಂದ ತಿಳಿದ ವಿಷಯವಾಗಿತ್ತು. ಅಶೋಕನೆಡೆ ಆಕೆ ನೋಡಿದಾಗ ಅಶೋಕನೂ ಅವಳತ್ತ ನೋಡುತ್ತಿದ್ದ. ಇಬ್ಬರ ದೃಷ್ಟಿಗಳೂ ಬೆರೆತವು, ಎರಡೂ ದೃಷ್ಟಿಗಳಲ್ಲಿ ಇದ್ದುದು ಒಂದೇ ಬಗೆಯ ಪ್ರಶ್ನೆ....ವಿಷಯ ಗಂಭೀರವಾಗಿದೆ....ಏನಿರಬಹುದು....

"ಮೇಜರ....ಏನು ವಿಷಯ?"

"ತೀರ ಅಪಾಯಕಾರಿ ಹಂತದಲ್ಲಿದ್ದೇವೆ ಎಂದೆನಿಸುತ್ತದೆ."

"ತಾವು ಖಿನ್ನರಾದಾಗಲೇ ನಾನದನ್ನು ಗಮನಿಸಿದೆ....ಈ ಫೋಟೋಗೂ ತಾವು ಹೇಳುತ್ತಿರುವ ವಿಷಯಕ್ಕೂ....ಅಲ್ಲದೆ ಒಂದು ತಿಂಗಳ ಹಿಂದೆ ನಮ್ಮ ಮೇಲೆ ನಡೆದ ಆಕ್ರಮಣಕ್ಕೂ ಏನಾದರೂ ಸಂಬಂಧವಿದೆಯೇ?"

ಬುದ್ಧಿವಂತಿಕೆಯ ಪ್ರಶ್ನೆ ಮಾಡಿದ ಅಶೋಕನತ್ತ ಹೆಮ್ಮೆಯಿಂದ ನೋಡಿದ ಮೇಜರ. "ಹೌದು.... ನಿನ್ನ ಪ್ರಶ್ನೆ ಅತೀ ಮಹತ್ವದ್ದು....ನಾವು ತೀರಾ ಆಳಕ್ಕಿಳಿದು ಯೋಚಿಸಿದಾಗ ಮೂರೂ ಘಟನೆಗಳು ಬೇರೆ ಬೇರೆಯಾ ಗಿದ್ದರೂ ಒಂದಕ್ಕೊಂದು ಸಂಬಂಧ ಹೊಂದಿವೆ ಎಂಬ ಮಾತು ಸ್ಪಷ್ಟವಾಗು ತ್ತವೆ....ಎಲ್ಲಕ್ಕಿಂತ ಮಹತ್ವದ ವಿಷಯ ಚಂದ್ರಮೋಹನ...."

"ಅಂದರೆ........ ಚಂದ್ರಮೋಹನನ ಸಾವು........" ಸುಷಮಾ ಅರ್ಥಕ್ಕೆ ಸಿಲ್ಲಿಸಿದಳು.

"ನಾನು ಚಿಂತಿತನಾದುದೇ ಚಂದ್ರಮೋಹನನ ಸಾವಿನಿಂದಾಗಿ....ಒಂದು ಮಾತು ನೆನಪಿಡಿ. ನಮ್ಮ ರಾಷ್ಟ್ರ ಪ್ರಜಾಪ್ರಭುತ್ವ ರಾಷ್ಟ್ರ....ಪತ್ರಿಕಾ ಸ್ವಾತಂತ್ರ್ಯ ಹೊಂದಿದ ದೇಶ. ದೇಶದ ಇತಿಹಾಸ ಬರೆಯುವಲ್ಲಿ, ಅದರ ಆಗು ಹೋಗುಗಳನ್ನು ಗುರುತಿಸುವಲ್ಲಿ ಪತ್ರಿಕೆಗಳು, ಪತ್ರಕರ್ತರು ಮಹತ್ವದ ಪಾತ್ರವಹಿಸುತ್ತಾರೆ. ಚಂದ್ರಮೋಹನ ಪ್ರತಿಭಾವಂತ ವರದಿಗಾರ. ಆತ ಕೆಲಸ ಮಾಡುತ್ತಿದ್ದುದೂ ಸಹ ಒಂದು ಪ್ರಸಿದ್ಧ ಅಂತರಾಷ್ಟ್ರೀಯ ಪತ್ರಿಕೆ

ಯಲ್ಲಿ....ಕೇವಲ ಮೂರು ತಿಂಗಳ ಹಿಂದೆ ಆತ ಮಾಡಿದ ವರದಿಗಾಗಿ ಜಾಗತಿಕ ಪುರಸ್ಕಾರ ದೊರೆತಿದೆ.

ಅದೇ ವ್ಯಕ್ತಿ ಮೂರು ತಿಂಗಳ ನಂತರ ಬೀದಿ ಹೆಣವಾಗಿ, ಯಾರ ಕಲ್ಪನೆಗೂ ಬರದಂತೆ, ಅವನ ಸಾವಿನ ಸುದ್ದಿ ಯಾರ ಕಿವಿಗೂ ಬೀಳದಂತೆ, ವಿಚಿತ್ರ ರೀತಿಯಲ್ಲಿ, ಭಯಾನಕ ಸಾವು ಅನುಭವಿಸುತ್ತಾನೆಂದರೆ ಈ ವಿಷಯ್ಯ ಭಯಾನಕವಲ್ಲವೆ?.... ಪಾಪ! ಅವನ ಸಂಬಂಧಿಕರಿಗೆ ಅವರ ಬಗ್ಗೆ ಏನೂ ತಿಳಿದಿಲ್ಲ. ಅವನ ಹೆಂಡತಿ ಮಕ್ಕಳು ದಾರಿ ಕಾಯುತ್ತಿರಬಹುದು....ಅವರಿಗೆ ಅವನ ಸಾವಿನ ಸುದ್ದಿಯು ತಿಳಿಯದು....ಇದೆಂಥ........ದುರದೃಷ್ಟ........ ನಮ್ಮದೇಶದಲ್ಲಿ ಪತ್ರಕರ್ತನಿಗೆ ಒದಗಿದ ದುರ್ಗತಿ ಬಗ್ಗೆ ನಾನು ಚಿಂತಿತ ನಾಗಿದ್ದೇನೆ........"

ಅಶೋಕ.... ಸುಮ್ಮನೂ ತುಟಿ ಎರಡು ಮಾಡಲಿಲ್ಲ. ಆತ ನುಡಿದದ್ದು ಕಟುಸತ್ಯವಾಗಿತ್ತು. ನಿರ್ಭಿಡೆಯಿಂದ, ಯಾರ ಜೊತೆಗೂ ಹೊಂದಾಣಿಕೆ ಮಾಡಿಕೊಳ್ಳದೇ ಸತ್ಯ ಪ್ರತಿಪಾದಿಸುವ, ಜಗತ್ತಿನಲ್ಲಿ ಹೆಸರು ಮಾಡಿದ ಪತ್ರ ಕರ್ತರನ್ನು ಹಾಡುಹಗಲೇ ನಡುಬೀದಿಯಲ್ಲಿ ನಿರ್ದಯೆಯಿಂದ ಕೊಂದು ಹಾಕಿದ ಬರ್ಬರ ಕೃತ್ಯಗಳೂ ಸಹ ಈ ಶಾಂತಪ್ರಿಯ ದೇಶದಲ್ಲಿ ನಡೆಯು ತ್ತಿವೆ. ಮುಂದೆಯೂ ಇದೇ ರೀತಿ ಸಾಗಿದರೆ ದೇಶದ ಗತಿ ಏನು? ದೇಶವಾಸಿ ಗಳನ್ನು ಕೇಳುವವರಾರು....? ಚಂದ್ರಮೋಹನನ ಸಾವು ಮೈ ನಡುಗಿಸುವಂತ ಹುದು.... ಆತ ಸತ್ತಿದ್ದಾನೆ ಎಂಬ ವಿಷಯುವೇ ಜಗತ್ತಿಗಿನ್ನೂ ತಿಳಿದಿರಲಿಲ್ಲ. ತಿಳಿದಿರುವದು ಅಪರಾಧಿಯನ್ನು ಬಿಟ್ಟು ಈ ಮೂವರಿಗೆ ಮಾತ್ರ. ಆತ ಸತ್ತಿದ್ದಾನೆ....ಕೊಲೆಯಾಗಿದ್ದಾನೆ? ಎಂದು ಹೇಳಿದರೂನಂಬುವವರೆಷ್ಟು ಜನ? ಸತ್ತಿದ್ದಾನೆ ಎಂಬುದಕ್ಕೆ ಸಾಕ್ಷಿ ಏನು? ಫೋಟೋ ತೋರಿಸಿದರೂ ಶವ ಎಲ್ಲಿದೆ? ಎಂದರೆ ಉತ್ತರವೇನು? ಎಂಥ ನತದೃಷ್ಟ ಚಂದ್ರಮೋಹನ....?

ಹೇಮಂತ ಸಮಯ ನೋಡಿದ....ಹನ್ನೆರಡೂ ನಲವತ್ತು.

"ನಮಗಿನ್ನೂ ಬೇಕಾದಷ್ಟು ಸಮಯವಿದೆ, ರಾತ್ರಿ ನಮ್ಮ ಶುಭ ಚಿಂತಕನ ಫೋನು ಬರುವದಕ್ಕೆ ಮೊದಲು ಸಾಕಷ್ಟು ಕೆಲಸ ಮಾಡಬಹುದು."

ಇಬ್ಬರೂ ಹೇಮಂತನ ಮಾತನ್ನು ಗಮನವಿಟ್ಟು ಆಲಿಸುತ್ತಿದ್ದರು.

"ಅಶೋಕ....ನೀನೊಂದು ಕೆಲಸ ಮಾಡು. ನೇರವಾಗಿ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಹೋಗು. ಮೋಹನ ಭದ್ರಾಪುರ ಅವರನ್ನು ಭೆಟ್ಟಿ ಯಾಗು.... ಅವರಿಗೆ ಚಂದ್ರಮೋಹನನ ವಿಳಾಸ ತಿಳಿದಿದ್ದರೆ ವಿಚಾರಿಸು....

ತಿಳಿಯದೇ ಇದ್ದ ಪಕ್ಷದಲ್ಲಿ ಹೇಗಾದರೂ ಮಾಡಿ ಒಂದರ್ಧ ಗಂಟೆಯಲ್ಲಿ ಬೇಕು ಎಂದು ಒತ್ತಾಯಿಸು....ನೀನಿನ್ನು ಹೊರಡು."

"ಸರಿ" ಎನ್ನುತ್ತ ಮೇಲೆದ್ದ ಅಶೋಕ, ಸುಷಮಾಳತ್ತ ಕೊಂಕು ನೋಟ ಬೀರಿ ಕೆಣಕಿದ. "ಒಂದೆರಡು ಗಂಟೆ ಪೀಡೆ ಹೊರಗಿರುತ್ತದೆ. ಇನ್ನೇನು? ಮಜಾ ಮಾಡಬಹುದು, ಎಂಥಾ ನಸೀಬು!"

ಅವನಿಗೆ ಒಂದೇಟು ಬಿಗಿಯಬೇಕೆಂದು ಸುಷಮಾ ಮೇಲೇಳುತ್ತಿದ್ದಂತೆ ಹೇಮಂತ ಹೇಳಿದ, "ಸುಷಮಾ ನೀನು ಸಾಂಬಮೂರ್ತಿಯವರ ಮನೆ ಬಳಿ ಹೋಗು....ಬೇರೆ ಬೇರೆ ಸೂತ್ರಗಳಿಂದ ಅವರ ಒಂದು ತಿಂಗಳ ಕಾರ್ಯಕ್ರಮ ವಿಚಾರಿಸು....ರಂಗಮಹಲ್ ಘಟನೆ ನಡೆದ ದಿನ ಅವರೆಲ್ಲಿದ್ದರು? ಎಂಬುದು ತಿಳಿಯುವದು ಅತೀ ಅವಶ್ಯ...."

"ಅಯ್ಯೋ ಪಾಪ!" ಹಲ್ಲಿಯಂತೆ ಲೊಚಗುಟ್ಟಿದ ಅಶೋಕ.

"ಹಾಂ....ಒಂದು ಮಾತು....ಸುಷಮಾ ವೇಷ ಮರೆಸಿಕೊಂಡು ಹೋಗು" ಹೇಮಂತನೆಂದ.

"ಗುಡ್.... ಭಿಕ್ಷುಕಿಯಾದರೆ.... ಯಾರಿಗೂ ಸಂಶಯಬಾರದು........ ಅಲ್ಲವೇ........?"

"ಸುಷಮಾಳಿಗೂ ತಡೆದು ಸಾಕಾಗಿತ್ತು. ಸೋಫಾಕ್ಕೆ ಆನಿಸಿದ ಅರಳೆಯ ದಿಂಬನ್ನು ಕೈಗೆ ತೆಗೆದುಕೊಂಡು ಮೇಲೆತ್ತಿದಳು. ಅಷ್ಟರಲ್ಲಿ ಅಶೋಕ ಮಂಗ ಮಾಯ....ಸುತ್ತಲೂ ಆಕೆ ನೋಡುತ್ತಿರುವಾಗಲೇ ಹೊರಗೆ ಕಾರು ಸ್ಟಾರ್ಟ್ ಆದ ಸಪ್ಪಳ ಕೇಳಿಸಿತು."

ದಿಂಬು ಹಿಡಿದಿದ್ದ. ಮೇಲೆತ್ತಿದ ಕೈ ನಿಧಾನವಾಗಿ ಕೆಳಗಿಳಿಯುತ್ತಿದ್ದಂತೆ ಅವಳ ದೃಷ್ಟಿ ಮೇಜರನ ಕಡೆ ಹರಿಯಿತು. ಆತ ಗಂಭೀರವಾಗಿ ಹೇಳಿದ:

"ಸ್ಟಾಪ್...ಸ್ಟಾಪ್ ಸುಷಮಾ..."

"ಏನು...."

"ದಿಂಬು ಹಿಡಿದೇ ಕೈ ಮೇಲೆತ್ತು.... ಆಕೆ ಕೈ ಮೇಲೆತ್ತಿದಳು... ಈಗ ಆ ಕೈ ಮೇಲೆತ್ತು" ಆಕೆ ಮತ್ತೊಂದು ಕೈ ಸಹ ಮೇಲೆತ್ತಿದಳು. "ಗುಡ್.... ನಿಧಾನವಾಗಿ ಎರಡೂ ಕೈ ಕೆಳಕ್ಕಿಳಿಸು". ಆತ ಹೇಳಿದಂತೆಯೇ ಆಕೆ ಮಾಡಿದಳು. "ಗುಡ್.... ಇದೇ ರೀತಿ ಇನ್ನೊಮ್ಮೆ" ಸುಷಮಾ ಅವನೆಡೆ ಆಚ್ಚರಿಯಿಂದ ನೋಡಿದಳು. "ಹೂಂ.... ಬೇಗ, ನನಗೇನೂ ಹುಚ್ಚು ಹಿಡಿದಿಲ್ಲ [illegible]?"

ಮತ್ತೆ ಅದೇ ರೀತಿ ಸುಷಮಾ ಮಾಡಿದಳು. ದಿಂಬು ಹಿಡಿದ ಒಂದು ಕೈ ಮೇಲೆತ್ತಿದ್ದಳು; ಆಮೇಲೆ ಇನ್ನೊಂದು ಕೈ....ನಂತರ ಎರಡೂಕೈ ನಿಧಾನವಾಗಿ ಕೆಳಗಿಳಿಸಿದಳು. ಅವಳನ್ನೇ ದಿಟ್ಟಿಸುತ್ತಿದ್ದ ಮೇಜರ. ಒಮ್ಮೆಲೆ ಸುಷಮಾಳಿಗೆ ಹೇಮಂತನ ವರ್ತನೆಯ ಅರ್ಥ ಹೊಳೆಯಿತು. ಒಂದು ನಿಮಿಷದ ಹಿಂದೆ 'ಹುಚ್ಚಿರಬಹುದೆ?' ಎಂದುಕೊಂಡಿದ್ದ ಆಕೆಗೆಈಗ ಅರ್ಥ ತಿಳಿಯುತ್ತಲೇನಾಚಿ ಕೆಂಪು ಕೆಂಪಾದ ಆಕೆ ಅವನೆಡೆ ದಿಂಬು ಬೀಸಿ ಒಗೆದಳು.

"ಥೂ, ನೀವಿಷ್ಟು ಕೆಟ್ಟವರೆಂದು ನಾನು ತಿಳಿದಿರಲಿಲ್ಲ."

ಆತ ಅಟ್ಟಹಾಸ ಮಾಡಿ ನಗುತ್ತಿದ್ದಂತೆ ಆಕೆ ಹೊರಗೋಡಿದ್ದಳು. ಹೇಮಂತ ತನ್ನ ಫೈಲು ತೆಗೆದ. ಸುತ್ತಲೂ ಪತ್ರಿಕೆ ಹರಡಿಕೊಂಡು ಅವುಗಳಲ್ಲಿ ಮಗ್ನನಾದ.

* * * *

**ಮೋ**ಹನ ಭದ್ರಾಪುರ ಅವರು ಆಫೀಸಿನಲ್ಲಿರಲಿಲ್ಲ. ಪ್ರೆಸ್ ಮೀಟಿಂಗಿಗೆ ಹೋಗಿದ್ದಾರೆ. ಒಂದರ್ಧ ಗಂಟೆಯಲ್ಲಿ ಮರಳುತ್ತಾರೆಂದುಅವರ ಆಪ್ತ ಕಾರ್ಯ ದರ್ಶಿ ತಿಳಿಸಿದರು. ಅರ್ಧಗಂಟೆ ಎಲ್ಲಿ ಕಳೆಯುವದೆಂದು ಯೋಚಿಸುತ್ತಿರುವಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ದೇಶಪಾಂಡೆ ಎದುರಿಗೆ ಬರಬೇಕೆ? ಸಮಸ್ಯೆ ಹುಟ್ಟುತ್ತಿರುವಂತೆಯೇ ಸತ್ತು ಹೋಯಿತು. "ಹಾಯ್ ದೇಶಪಾಂಡೆ" ಅಶೋಕ ಕೈಬೀಸಿದ.

ದೇಶಪಾಂಡೆಗೆ ಅಚ್ಚರಿ, ಅದರ ಹಿಂದೆಯೇ ಸಂಭ್ರಮ. ಮೇಜರ್ ಹೇಮಂತನ ಸಂಗಾತಿ. ತನ್ನ ಆತ್ಮೀಯ ಸ್ನೇಹಿತ ಅಶೋಕ ಎದುರಿಗೆ.... ಆತ್ಮೀಯತೆಯಿಂದ ಕೈ ಕುಲುಕಿದ. ಇಬ್ಬರೂ ಕೂಡಿ ಸಮೀಪದ"ಮಧುದರ್ಶಿನಿ" ಹೊಕ್ಕು ತಿಂಡಿ ತಿಂದು, ಕಾಫಿ ಕುಡಿದರು...ಮಾತನಾಡುತ್ತ ದೇಶಪಾಂಡೆ ತನ್ನ ಆಫೀಸಿಗೆ ಅಶೋಕನನ್ನು ಕರೆತಂದ. ಆಗಲೇ ಮೂರು ನಾಲ್ಕು ಜನ ಬಂದು ಕುಳಿತು ಅವನ ದಾರಿ ಕಾಯುತ್ತಿದ್ದರು. ಬೇರೆ ಬೇರೆ ಭಾಗಗಳಿಂದ ಬಂದವರವರು. ಅವರು ಬಂದ ಕೆಲಸದ ಬಗ್ಗೆ ವಿಚಾರಿಸುತ್ತ, ಅಶೋಕನೆಡೆ ಹೊರಳಿದ.

"ಅಂದ ಹಾಗೆ ಬಂದ ಕೆಲಸ ಹೇಳಲೇಇಲ್ಲವಲ್ಲ?"

"ನಾನು ಬಂದದ್ದು ವಾರ್ತಾ ಇಲಾಖೆಗೆ. ಭದ್ರಾಪುರ ಇರಲಿಲ್ಲ! ನೀನು ಕಣ್ಣಿಗೆ ಬಿದ್ದೆ."

"ಏನಾದರೂ ವಿಶೇಷವಿದೆಯೇ?"

"ಅಂಥಾದ್ದೇನೂ ಇಲ್ಲ....ಚಂದ್ರಮೋಹನ ಅಂತ ಒಬ್ಬ ಪತ್ರಿಕಾ ವರದಿ

ಗಾರರಿದ್ದಾರೆ. ಅವರ ವಿಳಾಸ ಬೇಕಿತ್ತು....ಅಷ್ಟೇ...

"ಇಷ್ಟೇನಾ...?"

ದೇಶಪಾಂಡೆ ಮಲ್ಲೇಶಿಯನ್ನು ಕರೆದು ಅವನಿಗೆ ಸೂಚನೆ ನೀಡಿ ಕಳಿಸಿ ಕೊಟ್ಟ...ಹತ್ತು ನಿಮಿಷಗಳಲ್ಲಿ ಆತ ಮರಳಿ ಬಂದು ಸುದ್ದಿ ಮುಟ್ಟಿಸಿದ. "ಸಾಹೇಬರಿಗೆ ಗೊತ್ತಂತೆ ಅವರು ಬರಬೇಕು" ಅಂದರು.ದೇಶಪಾಂಡೆ ಮುಂದಿದ್ದ ನಾಲ್ಕೈದು ಜನರಲ್ಲಿ ಇಬ್ಬರು ಮೂರವರು ಎದ್ದು ಹೋದರು. ಉಳಿದವರಿಗೆ ಸಾಯಂಕಾಲ ಬರುವಂತೆ ತಿಳಿಸಿ ಆತ ಫ್ರೀ ಆದ. ಮತ್ತೆ ಹರಟೆ ಹೊಡೆಯುತ್ತ ಕುಳಿತರು. ಟೆಲಿಫೋನು ಗಂಟೆ ಬಾರಿಸಿತು. ಆಲಿಸಿದ ದೇಶಪಾಂಡೆ ಹೇಳಿದ. "ಭದ್ರಾಪುರ ಬಂದಿದಾರಂತೆ, ನೀನು ಹೋಗು. ನನಗೆ ಸ್ವಲ್ಪ ಕೆಲಸವಿದೆ," ಎಂದೆನ್ನುತ್ತ ಅಶೋಕನನ್ನು ಬೀಳ್ಕೊಟ್ಟ.

ಒಳ್ಳೇ ಉತ್ಸಾಹದಿಂದ ಎದ್ದು ಬಂದ ಮೋಹನ ಭದ್ರಾಪುರ ಸ್ವಾಗತಿಸಿ ದರು. ಬೇಡ ಬೇಡವೆಂದರೂ ಮತ್ತೊಮ್ಮೆ ಕಾಫಿ ತರಿಸಿ ಉಪಚರಿಸಿದರು. ಆಮೇಲೆ ಅಶೋಕ ತಾನು ಬಂದ ಕೆಲಸ ಹೇಳಿದ. ಕೇಳಿಕೊಂಡ ಮೋಹನ ಸ್ವಲ್ಪ ಹೊತ್ತು ಯೋಚಿಸಿ ಹೇಳಿದರು, "ಚಂದ್ರಮೋಹನ ಬಗ್ಗೆ ನನಗೆ ಗೊತ್ತಿದೆ, ಆದರೆ ಅವರ ವಿಳಾಸದ ಬಗ್ಗೆ ತಿಳಿಯಬೇಕೆಂದರೆ ಫೋನು ಮಾಡಿ ಪಡೆಯಬೇಕು. ಒಂದು ಗಂಟೆಯಾದರೂ ಕಾಯಬೇಕಾಗುತ್ತದೆ."

"ಅದರ ಅವಶ್ಯಕತೆ ಇಲ್ಲ....ಫೋನ್ ನಂಬರ ಹೇಳಿ."

ಅಶೋಕ ಫೋನು ಹಿಡಿದು ಕೇಳಿದ ಭದ್ರಾಪುರ ಹೇಳಿದ ನಂಬರ್ ಗುರುತಿಸಿ ರಿಸೀವರ್ ಮೇಲೆತ್ತಿದ. ಟೆಲಿಫೋನ್ ಆಫೀಸಿನಲ್ಲಿರುವ ರವೀಂದ್ರ ಕ್ಷೀರಸಾಗರರಿಗೆ ಫೋನು ಮಾಡಿದ, "ರವಿ....ನನಗೆ ಐದು ನಿಮಿಷಗಳಲ್ಲಿ ಈ ನಂಬರಿಗೆ ಕನೆಕ್ಷನ್ ಬೇಕು ತಿಳಿಯಿತೆ?" ಅವನ ಉತ್ತರಕ್ಕೂ ಕಾಯದೇ ರಿಸೀವರ್ ಕೆಳಗಿಟ್ಟ. ಭದ್ರಾಪುರ ವಿಚಿತ್ರ ದೃಷ್ಟಿಯಿಂದ ಅವನನ್ನೇ ದಿಟ್ಟಿಸು ತ್ತಿದ್ದರು...ಪಾಪ! ಮೇಜರ್ ಹೇಮಂತನ ಸಹಾಯಕ ಅಶೋಕನ ಬಗ್ಗೆ ಅವರಿ ಗೇನು ಗೊತ್ತು...ಎರಡು ಮೂರು ನಿಮಿಷಗಳಲ್ಲಿ ಟೆಲಿಫೋನ್ ಕರೆ. ಆ ಕಡೆ ಯಿಂದ ರವಿ ಹೇಳಿದ..."ನಿನ್ನ ನಂಬರು...ಮಾತನಾಡು. ."

ಅಶೋಕ ಪೇಪರ ಮತ್ತು ಪೆನ್ ಸಿದ್ಧಪಡಿಸಿಕೊಂಡು ಮಾತಿಗೆ ಅಣಿ ಯಾದ. "ಹಲೋ...ನಾನು ಮೇಜರ ಹೇಮಂತನ ಸಹಾಯಕ ಕ್ಯಾಪ್ಟನ್ ಅಶೋಕ. ಸರ್...ದಯವಿಟ್ಟು ನನಗೆ ನಿಮ್ಮ ಮುಖ್ಯ ವರದಿಗಾರ ಚಂದ್ರ ಮೋಹನ ಬಗ್ಗೆ ವಿವರ ಬೇಕಿತ್ತು..."

ನಾಲ್ಕು ನಿಮಿಷ ಮಾತನಾಡಿ ಅವನ ಮನೆ ವಿಳಾಸ ಗುರುತು ಹಾಕಿ

ಕೊಂಡು ರಿಸೀವರ್ ಯಥಾಸ್ಥಾನದಲ್ಲಿರಿಸಿ, ವಿಳಾಸ ಬರೆದ ಕಾಗದ ಮಡಚಿ ಕೋಟಿನ ಜೇಬಿಗೆ ಸೇರಿಸಿ ಎದ್ದುನಿಂತ.

"ವಂದನೆಗಳು ಭದ್ರಾಪುರ ಅವರೆ....ಒಂದು ಮಾತು. ಟೆಲಿಫೋನು ಬಿಲ್ಲು ನಿಮ್ಮ ಆಫೀಸ್ ಲೆಕ್ಕಕ್ಕೆ ಸೇರುವದಿಲ್ಲ..." ಅಚ್ಚರಿಯಿಂದ ಅವರು ದಿಟ್ಟಿಸುತ್ತಿದ್ದಂತೆ ಆತ ಹೊರಬಂದಿದ್ದ.

ಅಶೋಕನ ಕಾರು ಡಿ.ಸಿ. ಆಫೀಸನ್ನು ಸುತ್ತುವರೆದು ಕೆಳಗಿಳಿಯಿತು. ಡಿ.ಡಿ.ಪಿ.ಐ. ಕಚೇರಿ ಎದುರು ಬರುತ್ತಿದ್ದಂತೆ ಇಬ್ಬರು ಮಹಿಳೆಯರು ಕಾರಿಗೆ ಅಡ್ಡಬಂದು ತಡೆದರು. ಅದರಲ್ಲಿ ಒಬ್ಬಳು ತುಂಬ ಗರ್ಭಿಣಿ. ಆಕೆ ರೇಶಿಮೆ ಬಣ್ಣದ ಬುರಖಾ ಧರಿಸಿದ್ದಳು. ಕಾರು ನಿಲ್ಲುತ್ತಲೂ ಸ್ವಲ್ಪ ದೊಡ್ಡವಳೆನಿಸಿದಾಕೆ ಕೈ ಮುಗಿದು ಬೇಡಿಕೊಂಡಳು: "ನನ್ನಕ್ಕನಿಗೆ ಹೆರಿಗೆ ನೋವು ಕಾಣಿಸಿಕೊಂಡಿದೆ ದಯವಿಟ್ಟು ಸಹಾಯ ಮಾಡಿ."

ಅಶೋಕ ಹಿಂದೆ ಮುಂದೆ ಯೋಚಿಸಲಿಲ್ಲ. ಆಕೆ ಪಡುತ್ತಿರುವ ವೇದನೆ ಅವನಿಂದ ನೋಡಲಾಗಲಿಲ್ಲ. ಕಾರಿನ ಹಿಂದಿನ ಬಾಗಿಲು ತೆರೆದ. ಅವರಿಬ್ಬರೂ ಕುಳಿತುಕೊಂಡರು. "ದಯವಿಟ್ಟು ತಾವರಗೇರಿ ಆಸ್ಪತ್ರೆಗೆ ನಡೆಯಿರಿ" ಆಕೆ ವಿನಂತಿಸಿಕೊಂಡಳು.

ನಿಧಾನವಾಗಿ ಕಾರು ನಡೆಸುತ್ತ ಅಶೋಕ ಕಲಾಭವನದೆದುರು ಆಲೂರ ವೆಂಕಟರಾವ್ ವೃತ್ತಕ್ಕೆ ಬಂದ. ಸ್ವಲ್ಪ ನಿಲ್ಲಿಸಿ ಹಿಂದಿನಿಂದ ಆಕೆ ವಿನಂತಿಸಿಕೊಂಡಳು. ಕಾರು ನಿಲ್ಲಿಸಿದ ಆತ 'ಏನಾಯ್ತು?' ಎಂದು ಕೇಳುತ್ತ ಹೊರಳಿ ನೋಡಿದ....ಅಚ್ಚರಿನಿಂದ ಅವನಿಗೆ ಉಸಿರು ನಿಂತುಹೋಯಿತು. ಹಿಂದಿನ ಸೀಟಿನಲ್ಲಿದ್ದ ಇಬ್ಬರು ಮಹಿಳೆಯರಲ್ಲಿ ಒಬ್ಬಾಕೆ ಯಾವಾಗಲೋ ಮಾಯವಾಗಿದ್ದಳು. ಪುರುಷನೊಬ್ಬ, ಗಡಸು ಮುಖ ಹಾಕಿಕೊಂಡು ಅವನನ್ನೇ ಉಗ್ರ ನೋಟದಿಂದ ನೋಡುತ್ತ ಕುಳಿತಿದ್ದ...

ಅಶೋಕ ನೋಡುತ್ತಿದ್ದಂತೆ ಮಹಿಳೆ ಕಿಟಾರನೆ ಕಿರುಚುತ್ತ ಲಬೋ ಲಬೋ ಬೊಬ್ಬೆ ಹೊಡೆದುಕೊಂಡು ಕಾರಿನ ಬಾಗಿಲು ತೆರೆದು ರಸ್ತೆಗಿಳಿದಳು. ಮೂರೂ ಕಡೆಯಿಂದ ಬರುತ್ತಿದ್ದ ಎಲ್ಲಾ ವಾಹನಗಳಲ್ಲದೆ ಹಿಂದಿದ್ದ ವಾಹನಗಳೂ ಸಹ ಗಕ್‌ನೇ ನಿಂತುಬಿಟ್ಟವು. ರಸ್ತೆಯಲ್ಲಿ ಸಂಚರಿಸುತ್ತಿದ್ದ ಜನ ಇತ್ತ ಆಕರ್ಷಿತರಾದರು....ಪುರುಷ ರಪ್ ಎಂದು ಅಶೋಕನ ಬೆನ್ನಿನ ಮೇಲೆ ಬಾರಿಸಿ ಕಾಲರ್ ಹಿಡಿದು ಕಾರಿನಿಂದ ಹೊರಗೆಳೆದ. ಮುಂದಿನ ಬಾಗಿಲಿನಿಂದ ಅಶೋಕ ಹಿಂದಿನ ಬಾಗಿಲಿನಿಂದ ಆತ ಕೆಳಗಿಳಿದರು....ಆ ವ್ಯಕ್ತಿ ಅಚ್ಚರಿಸಿದ: "ಭಾಂಚೋದ್....ಹಮಾರಿ ಔರತ್‌ಕೋ ರಾಂಡ್ ಬೋಲತಾ ಹೈ...."

ಆಕೆ ಬಾಯಿ ಬಾಯಿ ಬಡಿಸುಕೊಂಡು ಅರಚಿದಳು: "ಅರೆ........ಅರೆ ದೇಖೋ ಇಸ್ ಛೋಲಿ ಅದಮಿಕೊ. ದೇಖನೇಕೋ....ಛೋಲಾ...ಕರನೆಮೆ ಏ ಶೈತಾನ್ ಹೈ....ಮುಝೆ ಸೌ ರೂಪಯೆ ದೇನೆ ಆಯಾ."

"ಮೇರಿ ಔರತಕೊ ಸೌ ರೂಪಯಮೆಂ ಏಕೆ ರಾತ ಮಾಂಗತಾ ಹೈ ಏ ಹೈವಾನ್...."

ಅಶೋಕ ಬದಲಾದ ವಾತಾವರಣಕ್ಕೆ ತಬ್ಬಿಬ್ಬಾದ....ಆತ ಸುಧಾರಿಸಿ ಕೊಳ್ಳುವದರಲ್ಲಿ ಜನ ರೊಚ್ಚಿಗೆದ್ದಿದ್ದರು. ಒಬ್ಬೊಬ್ಬರು ಒಂದೊಂದು ಬಗೆಯಿಂದ ತೆಗಳತೊಡಗಿದರು. "ಸೂ....ಮಗನೆ....ನೂರು ರೂಪಾಯಿಗೆ ಹೆಣ್ಣಿನ ಕೇಳತೀಯಾ."

"ಇವನ ಡ್ರೆಸ್ ನೋಡ್ರಿ....ಎಷ್ಟು ಸಾಧುನಂಗ ಕಾಣತಾನ?"

"ಲುಚ್ಚಾ ಇದಾನಿವ ಲುಚ್ಚಾ...."

"ನಾಲ್ಕು ಬಾರಿಸಿ....ಎರಡು ಮದೀರಿ."

"ಪೋಲೀಸ್ರಿಗೆ ಕೊಡ್ರಿ....ಕಾಲು ಮುರಿತಾರ....

"ಇನ್ನು ತಪ್ಪಿಗಿದ್ದರೆ ಎಂಟು ದಿನ ಆಸ್ಪತ್ರೆ ಕಾಟ ಗ್ಯಾರಂಟಿ ಎಂದರಿತ ಅಶೋಕ ಜೇಬಿನಿಂದ ರಿವಾಲ್ವರ್ ಹೊರತೆಗೆದ. ಅಷ್ಟರಲ್ಲಿ ಜೊತೆಗಿದ್ದ ಆವರಿಬ್ಬರೂ ಅವನನ್ನು ಅಪ್ಪಿ ಮೈಮೇಲಿನ ಬಟ್ಟೆ ಹರಿಯತೊಡಗಿದ್ದರು. ಒಂದಿಬ್ಬರು ಎದುರಿಗೆ ಬಂದು ಕೈ ಎತ್ತಿದರು. "ಢಂ....ಢಂ" ಎಂದು ಎರಡು ಗುಂಡು ಸಿಡಿದವು. ರಿವಾಲ್ವರಿನಿಂದ....ಸೇರಿದ್ದ ನೂರಾರು ಜನರ ಗುಂಪು ಬೆದರಿ ಹಿಂದೆ ಸರಿಯಿತು. ಹಿಂದೆ ನೋಡಿದ....ಆಶ್ಚರ್ಯ ಕಾರಿನಲ್ಲಿ ಬಂದಿದ್ದ ಆ ಜೋಡಿ ಮಾಯವಾಗಿತ್ತು.

"ಯಾರಾದರೂ ನನ್ನತ್ತ ಒಂದು ಹೆಜ್ಜೆ ಇಟ್ಟರೆ ಗುಂಡಿಟ್ಟು ಬಿಡುತ್ತೇನೆ ಹುಷಾರ್" ಎಲ್ಲರೂ ಮೆತ್ತಗಾಗಿ ಹಿಂದೆ ಸರಿದರು. ಎಚ್ಚರಿಕೆಯಿಂದ ಸುತ್ತಲೂ ನೋಡುತ್ತ ಆತ ಕಾರಿನಲ್ಲಿ ಕುಳಿತು ಸ್ಟಾರ್ಟ ಮಾಡಿದ. ಜನ ಬಾಯ್ತೆರೆದು ನೋಡುತ್ತಿದ್ದಂತೆ ಕಾರು ಮುಂದೆ ಓಡಿತ್ತು....ನಿಟ್ಟುಸಿರುಬಿಡುತ್ತ ಸೈಡ ಮಿರರ್‌ನಲ್ಲಿ ನೋಡಿದ....ಸರ್ಕಲ್ ಬಳಿ ಇದ್ದ ಪೋಲೀಸ್‌ಕಾನಸ್ಟೇಬಲ್ ಇವನ ಕಾರಿನ ನಂಬರನ್ನು ತನ್ನ ಡೈರಿಯಲ್ಲಿ ಗುರುತು ಹಾಕಿಕೊಳ್ಳುತ್ತಿದ್ದ.

ಅಶೋಕ ಮರಳಿ ಮನೆಗೆ ಬಂದಾಗ ಮೇಜರ್ ಇನ್ನೂ ಬರೆಯುತ್ತಲೇ ಇದ್ದ. ಅವನ ಪಕ್ಕದಲ್ಲಿ ಮೇಜಿಗೆ ಅಂಟಿಕೊಂಡು ಬಾಗಿಲೆಡೆ ಬೆನ್ನು ಮಾಡಿ ಅಚ್ಚ ಬಿಳಿಬಣ್ಣದ ಸೀರೆ. ಬ್ಲೌಜ್ ತೊಟ್ಟ ತರುಣಿಯೊಬ್ಬಳು ನಿಂತಿದ್ದಳು, ಅಲ್ಲೇ ಇದ್ದ ಬಾಸ್ಕೆಟ್‌ನಲ್ಲಿ ಅನೇಕ ಪ್ರಕಾರದ ಸ್ನಾನದ ಸಾಬೂನು ಶಾಂಪೇನು

ಪೌಡರ್ ಡಬ್ಬಿಗಳು ವಿಚಿತ್ರ ರೀತಿಯಿಂದ ಅವೆಲ್ಲವನ್ನು ನಿರೀಕ್ಷಿಸಿದ ಅಶೋಕ.

"ಹೇಳು ಏನಾಯ್ತು?" ಮೇಜರ ಕೇಳಿದ.

ಒಂದು ಬಾರಿ ಶುಭ್ರ ವಸ್ತ್ರಧಾರಿ ತರುಣಿಯತ್ತ ನೋಡಿದ ಅಶೋಕ.... ಎಂಥಾ ನಿಲುವು? ಮನಸ್ಸಿಗೆ ಹುಚ್ಚು ಹಿಡಿಸುವ ಸಮತೋಲ ಯೌವನಕ್ಕೊಂದು ಮಾದರಿ."

"ಬೇಗ ಹೇಳು...ಅತ್ತ ಏನು ನೋಡುತ್ತಿರುವೆ?"

ಹೇಮಂತನ ಬದಲಾದ ದನಿಗೆ ಬೆಚ್ಚಿದ ಅಶೋಕ. ಬಡಬಡನೆ ಎಲ್ಲಾ ಬಡಬಡಿಸಿದ. ಅದನ್ನು ಕೇಳುತ್ತಿದ್ದಂತೆ ಮೇಜರ ಹೇಮಂತ ಹೊಟ್ಟೆ ಹುಣ್ಣಾಗುವಂತೆ ನಕ್ಕ...ಆಶ್ಚರ್ಯದ ಮಾತೆಂದರೆ ಅವನ ಜೊತೆ ದನಿಕೂಡಿಸಿ ಖಿಲಖಿಲನೆ ನಕ್ಕಳು ಆ ಸುಂದರಿ. ಹರಿದು ತಿನ್ನುವಂತೆ ಅವಳತ್ತ ನೋಡುತ್ತಿರುವಾಗಲೇ ಆಕೆ ಹೊರಳಿದಳು....ಅರೆ....ಆಕೆ ಸುಷಮಾ....

"ಅರೆ....ಮೇರೆ ಏ ದೋಸ್ತ್ ಶೇರ್ ಬನಕೆ ಘೂಮತಾ ಥಾ, ಅಬ್ ಬಿಲ್ಲಿ ಬನಕರ ಭಾಗಾಯಾ ಹೈ."

ಆಕೆಯ ವ್ಯಂಗ್ಯೋಕ್ತಿಗೆ ನಾಚಿ ಮುಗ್ಧಿಯಾದ ಅಶೋಕ....

"ಮೇಜರ್....ನನ್ನ ಕಾರಿನಲ್ಲಿ ಕುಳಿತ ಇಬ್ಬರೂ ಮಹಿಳೆಯರು, ಅವರಲ್ಲಿ ಒಬ್ಬಳು ಗರ್ಭಿಣಿ ಹೀಗಿರುವಾಗ ಆ ಗರ್ಭಿಣಿ. ಇಳಿದದ್ದೆಲ್ಲಿ? ಆ ಪುರುಷ ಹತ್ತಿದ್ದೆಲ್ಲಿ?"

ಮೇಜರ್ ಗಂಭೀರವಾಗಿ ಯೋಚಿಸಿ ನುಡಿದ.

"ನೀನು ಕಾರನ್ನು ಚೆನ್ನಾಗಿ ಪರೀಕ್ಷಿಸಿದೆಯಾ?"

"ಹಾಂ ನನಗೆ ಕೇವಲ ಆಕೆ ತೊಟ್ಟ ರೇಶಿಮೆ ವರ್ಣದ ಬುರಖಾ ಹಾಗೂ ಒಂದು ಚಿಕ್ಕ ಪ್ಲಾಸ್ಟಿಕ್ ಬುಟ್ಟಿ ಮಾತ್ರ ಸಿಕ್ಕಿತು."

"ಈ ಬಾರಿ ಜೋರಾಗಿ ನಕ್ಕವಳು ಸುಷಮಾ....ಮುಗುಳುನಗೆಯೊಂದಿಗೆ ಹೇಮಂತ ಹೇಳಿದ. "ನೀನೊಬ್ಬ ಬುದ್ಧು ಗರ್ಭಿಣಿ ಹೆಂಗಸು ಹೆಂಗಸಲ್ಲ....ಆಕೆ ಗರ್ಭಿಣಿಯೂ ಅಲ್ಲ. ಆ ಪುರುಷ ಬುರಖಾ ಧರಿಸಿ ಕುಳಿತಿದ್ದ....ಆ ಬುಟ್ಟಿಯನ್ನು ಹೊಟ್ಟೆಗೆ ಸುತ್ತಿಕೊಂಡಿದ್ದ ಅಷ್ಟೇ."

ಈಗರ್ಥವಾಯಿತು ಅಶೋಕನಿಗೆ....

"ಇದನ್ನೆಲ್ಲ ವಿಚಾರಿಸಿದರೆ ಅಪರಾಧಿ ನಮ್ಮ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದಾನೆ ಎಂದಂತಾಯ್ತು. ನಾವಿನ್ನು ಹುಷಾರಿಯಿಂದಿರಬೇಕು. ಏಳಿ ಊಟಕ್ಕೇಳಿ. ಅಂದ ಹಾಗೆ ನಾನು ಮರೆತೇ ಬಿಟ್ಟಿದ್ದೆ....ಚಂದ್ರಮೋಹನ ವಿಳಾಸ ಎಲ್ಲಿದೆ ಕೊಡು."

ತನ್ನ ರೂಮಿನೆಡೆ ಹೊರಟಿದ್ದ ಅಶೋಕ ನಿಂತ. ಕೋಟಿನ ಜೇಬಿಗೆ ಕೈ ಹಾಕಿದ....ಚೀಟಿ ದೊರೆಯಲಿಲ್ಲ. ಒಂದೊಂದಾಗಿ ಜೇಬು ಪರಿಶೀಲಿಸಿದ.... ಚೀಟಿ ಮಾಯವಾಗಿತ್ತು. ಅಶೋಕ ದಂಗಾಗಿ ನಿಂತುಬಿಟ್ಟ....

"ಆ ಚೀಟಿ ಸಲುವಾಗಿಯೇ ನಿನ್ನ ಮೇಲೆ ಆ ರೀತಿ ಆಕ್ರಮಣದ ನಾಟಕ ಮಾಡಿದ್ದಾರೆ. ನನಗೆ ಅಪಾಯದ ವಾಸನೆ ಬರುತ್ತಿದೆ. ಚಂದ್ರಮೋಹನನ ಮನೆಯವರು ಅಪಾಯದಲ್ಲಿದ್ದಾರೆ.... ಓ ದೇವರೇ ಅವರನ್ನು ಹೇಗೆ ಉಳಿಸುವದು? ವಿಳಾಸದ ಚೀಟಿ ದೊರೆತಿದ್ದರೆ...."

"ಮೇಜರ್....ಚಿಂತಿಸಬೇಡಿ ನನಗೆ ವಿಳಾಸ ನೆನಪಿದೆ. ಚಂದ್ರಮೋಹನ ಅಶ್ವಿನಿ ಬಿಲ್ಡಿಂಗ್....ಥರ್ಡ ಫ್ಲೋರ್...."

ಆತನಿನ್ನೂ ಪೂರ್ತಿ ಹೇಳಿರಲಿಲ್ಲ, ಹೇಮಂತ ಕೂಗಿದ: "ಅದೆಲ್ಲಾ ಆಮೇಲೆ, ಮೊದಲು ನಾವು ಅವರ ಮನೆಗೆ ಧಾವಿಸಬೇಕು....ರೈಟ್...."

ಎರಡೇ ನಿಮಿಷಗಳಲ್ಲಿ ಮೇಜರನ ಕಾರು ಓಡತೊಡಗಿತ್ತು....ಚಂದ್ರಮೋಹನನ ಮನೆಯ ಕಡೆಗೆ....

* * * *

ಅನುಸೂಯಾ....

ಇಪ್ಪತ್ತೆಂಟು ಮೂವತ್ತು ವರ್ಷಗಳ ತರುಣಿ. ಅನಿಂದ್ಯ ಸುಂದರಿಯಾಗಿರದಿದ್ದರೂ ಸಾಮಾನ್ಯರಲ್ಲಿ ಎದ್ದು ಕಾಣುವಂಥ ರೂಪವತಿ. ಗೋದೀ ಬಣ್ಣ, ಕಪ್ಪು ವರ್ಣದ ನೀಳ ಕೇಶರಾಶಿ, ಬೆಳಕು ಚಿಮ್ಮುವ ಕಣ್ಣುಗಳು, ಆಕರ್ಷಕ ಮೈಕಟ್ಟು, ಸಾಮಾನ್ಯ ಮನೆತನದಲ್ಲಿ ಹುಟ್ಟಿ ಬೆಳೆದ ಆಕೆ ಪದವಿ ಪಡೆದ ನಂತರ ಕಣ್ಣಿಗೆ ಬಿದ್ದವರ ಕಾಲು ಬಿದ್ದು ಕೈಮುಗಿದು ನೌಕರಿಯೊಂದನ್ನು ಸಂಪಾದಿಸಿದಳು. ತಂದೆಯಂತೂ ಈ ಮೊದಲೇ ತೀರಿಕೊಂಡಿದ್ದ. ನೌಕರಿ ಸಿಕ್ಕ ನಾಲ್ಕು ವರ್ಷಗಳ ಮೇಲೆ ಮಗಳ ಕೈಯಲ್ಲಿ ಸುಖದ ದಿನ ಕಳೆದ ತಾಯಿ ಹೃದಯಾಘಾತದಲ್ಲಿ ಅಸುನೀಗಿದ್ದಳು. ಅಂದಿನಿಂದ ಆಕೆ ಏಕಾಕಿ, ಯಾರದೋ ಪುಣ್ಯದಿಂದ ಅಶ್ವಿನಿ ಬಿಲ್ಡಿಂಗಿನಲ್ಲಿ ಮನೆಯೊಂದನ್ನು ಪಡೆದಳು. ಮೂರನೇ ಮಹಡಿಯಲ್ಲಿ, ಮೊದಲ ಕಂತು ಹದಿನೆಂಟು ಸಾವಿರ. ನಂತರ ವರ್ಷಕ್ಕೆ ಆರು ಸಾವಿರ ಕಟ್ಟುತ್ತ ಹೋಗಬೇಕು ಹನ್ನೆರಡು ವರ್ಷದವರೆಗೆ. ಮನೆಯ ಕಾಲ್ಗುಣವೆಂದು ಕಾಣುತ್ತದೆ. ಮನೆ ಪಡೆದ ವರ್ಷವೇ ಅವಳ ಮದುವೆಯಾಗಿತ್ತು ಚಂದ್ರಮೋಹನನ ಜೊತೆಗೆ.

ಚಂದ್ರಮೋಹನನ ಪ್ರಸಿದ್ಧ ರಾಷ್ಟ್ರೀಯ ಪತ್ರಿಕೆಯೊಂದರಲ್ಲಿ ಮುಖ್ಯ ವರದಿಗಾರನಾಗಿದ್ದ. ಅವನ ಪರಿಚಯವಾದದ್ದು....ಪ್ರಣಯದಲ್ಲಿ. ಪರಿವರ್ತನೆ

ಹೊಂದಿದ್ದು........ ಮದುವೆ ಆದದ್ದು ಎಲ್ಲಾ ಒಂದು ಬಗೆಯ ವಿಚಿತ್ರ ಯೋಗ........

ಅಂದು ಅನುಸೂಯಾ ಆಫೀಸಿನ ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿದ್ದಳು. ಮಳೆಗಾಲ ಒಮ್ಮೆಲೆ ಬಿರುಗಾಳಿಯಿಂದ ಕೂಡಿದ ಮಳೆ ಆರಂಭವಾಯಿತು.... ಅದರ ಹೊಡೆತ ತಾಳಲಾರದೆ ಎಲ್ಲಾದರೂ ಒಂದೆಡೆ ನಿಲ್ಲಲು ಆಸರೆ ಹುಡುಕಿದಳು.... ಪಕ್ಕದಲ್ಲೊಂದು ಶಾಲೆ, ಶಾಲೆ ಬಿಟ್ಟಿದ್ದರೂ ಮಳೆಯಿಂದಾಗಿ ಅರ್ಧಕ್ಕಿಂತ ಹೆಚ್ಚು ಮಕ್ಕಳು ಇನ್ನು ಶಾಲೆಯಲ್ಲಿಯೇ ಗಲಾಟೆ ಮಾಡುತ್ತಿದ್ದರು. ಗುಡುಗು ಮಿಂಚುಗಳಿಂದ ಕೂಡಿದ ಭಾರೀ ಮಳೆ........ ಒಮ್ಮಿಂದೊಮ್ಮೆಲೇ ಕಣ್ಣು ಕೋರೈಸುವಂತೆ ಮಿಂಚೊಂದು ಸುಳಿಯಿತು. ಗಟ್ಟಿಯಾಗಿ ಕಣ್ಣು ಮುಚ್ಚಿದ ಆಕೆ ತಕ್ಷಣ ಭಯದಿಂದ ನಡಗುತ್ತ ಒಳಗೋಡಿದಳು. ಈ ಪರಿ ಮಿಂಚಿನ ಹಿಂದೆ ಸಿಡಿಲು ಇದ್ದೇ ಇರುತ್ತದೆ ಎಂಬುದನ್ನಾಕೆ ಎಲ್ಲೋ ಕೇಳಿದ ನೆನಪು. ಆಕೆಯಿನ್ನೂ ಹತ್ತು ಹೆಜ್ಜೆ ಹೋಗಿರಲಿಲ್ಲ, ಗುಡುಗುಡು ಅನ್ನುತ್ತ ಬೆಂಕಿಯ ಭಾರೀ ಗಾತ್ರದ ಉಂಡೆಯೊಂದು ಶಾಲೆಯ ಮೇಲೆ ಅಪ್ಪಳಿಸಿತು.

ಮರುಕ್ಷಣ ಎಲ್ಲೆಡೆ ಆಕ್ರಂದನ, ರೋದನ, ಕೂಗಾಟ, ಚೀರಾಟ, ಸಿಡಿಲಿಗೆ ತುತ್ತಾದ ಶಾಲೆ, ಅರ್ಧದಷ್ಟು ಕುಸಿದಿದ್ದು ಕೆಲ ಭಾಗ ಬೆಂಕಿಯಿಂದ ಉರಿಯುತ್ತಿತ್ತು. ನೂರಾರು ಮಕ್ಕಳು ಸಿಡಿಲು ಹೊಡೆತಕ್ಕೆ ಕುಸಿದ ಶಾಲೆಯ ಕಟ್ಟಡದ ಅಡಿ ಬಿದ್ದು ನರಳುತ್ತಿದ್ದರು. ಹತ್ತಾರು ಜನರು ಬೆಂಕಿಯಿಂದಾಗಿ, ಸಿಡಿಲಿನಿಂದಾಗಿ ಸುಟ್ಟುಕೊಂಡು ಚೀರಾಡುತ್ತಿದ್ದರು. ಅನುಸೂಯಾಳಿಗೂ ಸಿಡಿಲಿನ ಶಾಖ ತಗಲಿತ್ತು. ಉಟ್ಟಿದ್ದ ಸೀರೆ ಪುರಪುರ ಉರಿಯತೊಡಗಿದಾಗ ಆಕೆ ನೆಲದ ಮೇಲೆ ಬಿದ್ದು ಉರುಳಾಡಿ ನಂದಿಸಿದ್ದಳು. ಆದರೂ ನಾಲ್ಕಾರು ಕಡೆ ಸುಟ್ಟಗಾಯಗಳಾಗಿದ್ದವು. ಕಲ್ಲು, ಇಟ್ಟಿಗೆ, ತಾಗಿ ರಕ್ತ ಸೋರುತ್ತಿತ್ತು. ಇಷ್ಟಾದರೂ ಅವಳು ಅದನ್ನೆಲ್ಲ ಮರೆತು ಮಕ್ಕಳ ಸಹಾಯಕ್ಕೆ ಧಾವಿಸಿದಳು. ಕಲ್ಲು ಮಣ್ಣಿನಡಿ ಸಿಕ್ಕು ಒದ್ದಾಡುತ್ತಿದ್ದ ಹತ್ತಾರು ಮಕ್ಕಳನ್ನು ಹೊರಕ್ಕೆಳೆದಳು.... ಸುಟ್ಟ ಗಾಯಗಳಿಂದ ನರಳುತ್ತಿದ್ದರೂ .. ಪೆಟ್ಟು ತಿಂದು ಕುಂಟುತ್ತಿದ್ದರೂ ಹತ್ತಿಪ್ಪತ್ತು ಮಕ್ಕಳನ್ನು ಒಳಗಿನಿಂದ ಹೊತ್ತು ಹೊರಗೆ ಸುರಕ್ಷಿತ ಸ್ಥಾನಕ್ಕೆ ತಂದು ಹಾಕಿದಳು. ಆಮೇಲೆ ಪೋಲೀಸ್ ಪಡೆ ಅಗ್ನಿಶಾಮಕ ದಳ ಹಾಗೂ ಅಂಬ್ಯೂಲನ್ಸ್ ಬಂದದ್ದು.

ಶಾಲೆಗೆ ಸಮೀಪದಲ್ಲೇ ಒಂದು ಮನೆಯ ಕೋಣೆಯಲ್ಲಿ ವಾಸಿಸುತ್ತಿದ್ದ ಚಂದ್ರಮೋಹನ. ಆತನೂ ಒಂಟಿ, ಚಹ ಕುಡಿಯುತ್ತಿದ್ದ ಆತ ಸಿಡಿಲಿನ

ಅರ್ಭಟ...... ... ಮಕ್ಕಳ ಆಕ್ರಂದನ ಕೇಳಿ ಕೆಮರಾದೊಂದಿಗೆ ಓಡಿಬಂದಿದ್ದ. ಅನುಸೂಯಾಳೊಂದಿಗೆ ಕೈಗೆ ಕೈ ನೀಡಿದ್ದ....ಅದರೊಂದಿಗೆ ಹತ್ತಾರು ಭಾವ ಚಿತ್ರ ತೆಗೆದ....

ಮರುದಿನ ಪತ್ರಿಕೆಯಲ್ಲಿ ಪ್ರಕಟಿಸಿದ ಈ ಸುದ್ದಿ ಸಾವಿರಾರು ಜನರವುನ ಕರಗಿಸಿತು. ಅನುಸೂಯಾಳ ಪ್ರಯತ್ನ, ಸೇವೆ ಎಷ್ಟೋ ಜನರಿಗೆ ಪ್ರೀತಿ ಯನ್ನುಂಟು ಮಾಡಿದವು. ಎಷ್ಟೋ ಜನರು ಸಂಘ ಸಂಸ್ಥೆಯವರು ಆಸ್ಪತ್ರೆಗೆ ಹೋಗಿ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವಳನ್ನು ಅಭಿನಂದಿಸಿದ್ದರು. ಆಕೆ ಗುಣವಾಗಿ ಬಂದ ಮೇಲೆ ಅವಳ ಆಫೀಸಿನ ಜನ ಸಭೆ ಸೇರಿ ಅವಳನ್ನು ಅಭಿ ನಂದಿಸಿದ್ದರು. ಬಾಸ್ ಅವಳ ನೌಕರಿ ಕಾಯಂ ಮಾಡಿ ನೂರು ರೂಪಾಯಿ ಸಂಬಳ ಏರಿಸಿದ್ದ....

ಇದಕ್ಕಿಂತ ಹೆಚ್ಚಾಗಿ ಚಂದ್ರಮೋಹನ ಅವಳಲ್ಲಿ ಆಸಕ್ತನಾಗಿದ್ದ.

ನಿತ್ಯವೂ ಅವರಿಬ್ಬರ ಭೇಟಿಯಾಗುತ್ತಿತ್ತು. ಮೊದಮೊದಲು ಸಂಕೋಚ ವೆನಿಸಿದರೂ ನಂತರ ಆಕೆ ಅವನ ಸ್ವಭಾವ ಅರಿತುಕೊಂಡು ಅವನೊಂದಿಗೆ ಬೆರೆಯಲಾರಂಭಿಸಿದಳು. ಅದೇ ದಿನ ಕಳೆದಂತೆ ಪ್ರೇಮದಲ್ಲಿ ಪರಿವರ್ತನೆ ಹೊಂದಿ ಒಂದು ದಿನ ಪತಿಪತ್ನಿಯಾಗಿ ಒಂದಾದರು. ಚಂದ್ರಮೋಹನ ಕೊಠಡಿ ಬಿಟ್ಟುಕೊಟ್ಟು ಅಶ್ವಿನಿಗೆ ಬಂದು ನೆಲೆಸಿದ. ಅವರ ದಾಂಪತ್ಯ ಹಾಲು ಜೇನಿ ನಂತೆ ಸಾಗಿತು. ಎರಡು ವರ್ಷಗಳಲ್ಲಿ ಅನುಸೂಯಾ ಮುದ್ದಾದ ಮಗು ಆನಂದನನ್ನು ಪತಿಗೆ ಕಾಣಿಕೆಯಾಗಿ ನೀಡಿದಳು. ಇಂದು ಆನಂದನಿಗೆ ಐದು ವರ್ಷ.....

ಅದೇ ಆನಂದ ಇಂದು ಜ್ವರದಿಂದ ಬಳಲುತ್ತಿದ್ದ, ಅದೂ ಸಾಮಾನ್ಯ ಜ್ವರವಲ್ಲ. ವಿಷಮ ಜ್ವರ....ತಿಂಗಳೊಂದರಿಂದ ಚಂದ್ರಮೋಹನ ಆಫೀಸಿಗೆಂದು ಹೋದವನು ಮರಳಿ ಬಂದಿರಲಿಲ್ಲ. ಮೊದಲೆರಡು ದಿನ ಯಾವುದೋ ರಿಪೋರ್ಟ್‌ಗೆ ಆಕಸ್ಮಾತ್ತಾಗಿ ಹೋಗಿರಬಹುದೆಂದು ಯೋಚಿಸಿ ಸುಮ್ಮನಾಗಿ ದ್ದಳು. ಎರಡು ದಿನ ನಾಲ್ಕು ದಿನಗಳಾಗಿ ನಾಲ್ಕು ಎಂಟಾದಾಗ ಚಿಂತೆಯಿಂದ ಅವನ ಆಫೀಸಿಗೆ ಹೋದಳು. ಸಬ್‌ಎಡಿಟರ್ ಅವಳ ಮಾತು ಕೇಳಿ ದಿಗ್ ಭ್ರಮೆ ವ್ಯಕ್ತಪಡಿಸಿದರು. ಎಂಟು ದಿನಗಳ ಹಿಂದೆ ಅವರಿಗೆ ಚಂದ್ರಮೋಹನ ಫೋನುಮಾಡಿ ಹತ್ತು ದಿನಗಳ ರಜೆ ಪಡೆದಿದ್ದ.... ಈಗ ವಿಷಯ ಗಂಭೀರ ವಾಯಿತು. ಅವನ ಶೋಧನೆಗೆ ಪೋಲೀಸರ ಮೊರೆ ಹೋದದ್ದು ವ್ಯರ್ಥ ವಾಯಿತು.

ಆನಂದನ ಒಡನಾಟ ಹೆಚ್ಚಾಗಿ ತಂದೆಯೊಂದಿಗೆ, ಹೀಗಾಗಿ ಆನಂದ ತಂದೆಯ ನೆನಪಿನಲ್ಲೇ ಜ್ವರಪೀಡಿತನಾದ. ಜ್ವರ ಬಿಡದೇ ಇಂದಿಗೆ ಇಪ್ಪತ್ತು ಇಪ್ಪತ್ತೈದು ದಿನಗಳಾಗಿದ್ದವು. ಒಂದೆಡೆ ಪತಿಯ ಕಣ್ಮರೆ, ಇನ್ನೊಂದೆಡೆ ಏಕಮಾತ್ರ ಪುತ್ರ ಆನಂದನ ಬೇನೆಗಳಿಂದಾಗಿ ಆಕೆ ಹುಚ್ಚಿಯಂತಾಗಿದ್ದಳು. ಏನು ಮಾಡಬೇಕೆಂಬುದೇ ತಿಳಿಯದಂತಾಗಿತ್ತು. ಸಮಾಧಾನ ಹೇಳಲು ತವರು ಮನೆಯಿಂದಲೂ ಯಾರೂ ಇರಲಿಲ್ಲ. ಗಂಡನ ಮನೆ ಕಡೆಯಿಂದಲೂ ಇರಲಿಲ್ಲ. ಸದಾ ಆನಂದನ ಬಳಿ ಇದ್ದು ಆರೈಕೆ ಮಾಡಬೇಕು, ಸಮಾಧಾನ ಮಾಡಬೇಕು. ಅದಕ್ಕೆಂದೇ ತಿಂಗಳೊಂದರ ರಜೆ ಪಡೆದಿದ್ದಳು.... ಇಂದು ರಜೆ ಕೊನೆದಿನ.... ಏನು ಮಾಡುವದೆಂದು ಚಿಂತಿಸುತ್ತಿರುವಾಗಲೇ ಕರೆಗಂಟೆ ಬಾರಿಸಿತು. ಚಟಕ್ಕನೆ ಮೇಲೆದ್ದಳು. ಆಸೆಯಿನ್ನೂ ಬತ್ತಿರಲಿಲ್ಲ.

ಪತಿ ಏಕೆ ಇರಬಾರದು? ಎಂಬ ಹುಸಿ ಆಸೆ.... ಕೊನೆಗೆ ಆದದ್ದೂ ಅದೇ ಅವಳ ಆಸೆ ಹುಸಿಯಾಗಿತ್ತು, ಬಂದವ ಚಂದ್ರಮೋಹನ ಅಲ್ಲ ಅಂಚೆಯವ. ಚಂದ್ರಮೋಹನನ ಹೆಸರಿನಲ್ಲೊಂದು ರಿಜಿಸ್ಟರ್ ಪಾರ್ಸಲ್....

ಚಿಕ್ಕಪ್ಯಾಕೆಟ್.... ಅದು ಅವರ ಹೆಸರಿನಲ್ಲಿದ್ದುದರಿಂದ ಅವನೇ ಪಡೆಯ ಬೇಕಾಗಿತ್ತು. ಅಥವಾ ಅವನಿಂದ ಒಪ್ಪಿಗೆ ಪತ್ರವಾದರೂ ಇರಬೇಕಾಗಿತ್ತು. ಎರಡೂ ಇಲ್ಲದ್ದರಿಂದ ಆಕೆಗೆ ಆತ ಪಾರ್ಸಲ್ ನೀಡದೇ ಹತ್ತು ದಿನಗಳ ಕಾಲ ಕಾಯುವದಾಗಿ ತಿಳಿಸಿ ಹೊರಟುಹೋದ. ಮತ್ತೆ ಬಾಗಿಲು ಮುಚ್ಚಿಕಣ್ಣುಂಬ ನೀರು ತಂದು ಬಿಕ್ಕುತ್ತ ಮತ್ತೆ ಬಂದಳು. ಮಗನ ಹತ್ತಿರ, ಕಣ್ಣುಮುಚ್ಚಿ ಕೊಂಡೇ ಕೇಳಿದ ಆನಂದ. "ಮಮ್ಮಿ...ಮಮ್ಮಿ...ಯಾರು ಪಪ್ಪಾನಾ..."

"ಇಲ್ಲ ಮರಿ....ಅಂಚೆಯವ...." ಕಷ್ಟಪಟ್ಟು ದುಃಖನುಂಗಿ ಸಾಮಾನ್ಯ ವಾಗಿ ನುಡಿದಳು.

"ಅಂಚೆಯವ...ಏನು ತಂದ..."

"ನಿನ್ನ ಪಪ್ಪಾ ಇನ್ನೆಂಟು ದಿನಕ್ಕೆ ಬರತಾರಂತೆ..."

"ಹೌದಾ? ನಿಜವಾ ಮಮ್ಮಿ...ಎಲ್ಲಿದೆ ತೋರಿಸು ಕಾಗದ."

"ಕಾಗದ ಅಲ್ಲಾ ಮರಿ...ಆಫೀಸಿಗೆ ಫೋನು ಬಂದಿತ್ತಂತೆ"

"ಫೋನು ಆಫೀಸಿಗೆ ಬಂದಿದ್ರೆ ಪೋಸ್ಟಮನ್ ಯಾಕೆ ಬರಬೇಕು ಹೇಳೋಕ್ಕೆ?"

ಸುಳ್ಳು ಹೇಳುವದು, ಅದೂ ಮಕ್ಕಳ ಮುಂದೆ ಸುಳ್ಳು ಹೇಳುವದು, ಎಷ್ಟು ಕಷ್ಟವೆಂದು ಅವಳಿಗೆ ಅರಿವಾಯಿತು. ಒತ್ತರಿಸಿ ಬಂದ ದುಃಖಕ್ಕೆ ಕಡಿ ವಾಣ ಹಾಕಿದಳು.

"ಹಾಗಲ್ಲ, ಮರಿ...ಅಂಚೆಯವ ಆಫೀಸಿಗೆ ಅಂಚೆ ಕೊಡಲು ಹೋಗಿದ್ದ ನಂತೆ. ಅವನ ಕೈಲಿ ಹೇಳಿ ಕಳಿಸಿದಾರೆ...ಈತ ನಮ್ಮ ಮನೆ ನೋಡಿದಾರೆ ನೋಡು..."

ಈಗ ಆನಂದನಿಗೆ ಸಮಾಧಾನವಾಯಿತು. ಎಂಟು ದಿನಕ್ಕೆ ಡ್ಯಾಡಿ ಬರುತ್ತಾನೆಂಬ ಸುದ್ದಿ ಅವನ ಮುಖದ ಮೇಲೆ ವಿಶೇಷ ಕಳೆ ಮೂಡಿಸಿತು. ಅದರ ಸದುಪಯೋಗಪಡಿಸಿಕೊಂಡಳು ತಾಯಿ. ಒಂದು ಕಪ್ ಹಾಲು ನಾಲ್ಕು ಬಿಸ್ಕಿಟ್ ಅವನ ಹೊಟ್ಟೆಗೆ ಸೇರಿಸಿದಳು...ಹೊಟ್ಟೆಗೆ ಆಹಾರ ಬಿದ್ದಿದ್ದರಿಂದಲೋ ಎಂಟು ದಿನಕ್ಕೆ ಡ್ಯಾಡಿ ಬರುತ್ತಾನೆಂಬ ಸಂಭ್ರಮಕ್ಕೋ ಆನಂದನಿಗೆ ನಿದ್ದೆ ಬಂದಿತೆಂದು ಕಾಣಿಸುತ್ತದೆ. ಆತ ಮಲಗಿದ್ದು ನೋಡಿ ಮೇಲೆದ್ದ ಅನುಸೂಯಾ ಮನೆ ಕೆಲಸ ಮುಗಿಸಲೆಂದು ಒಳನಡೆದಳು...ಅರ್ಧಗಂಟೆಯಲ್ಲಿ ಕೆಲಸ ಮುಗಿಸಿ ಹೊಟ್ಟೆಗೆರೆಡು ತುತ್ತು ಅನ್ನ ಚೆಲ್ಲಿಕೊಂಡು ಪುನಃ ಬಂದಳು ಮಗನ ಬಳಿಗೆ.

ಆನಂದ ಇನ್ನೂ ನಿದ್ರಿಸುತ್ತಿದ್ದ. ಅನುಸೂಯಾ ಬಾಗಿಲು ತೆರೆದು ಹೊರಗೆ ಅಕ್ಕಪಕ್ಕದ ಮನೆಯವರೂ ನಾಚಿ ಹೊರಗೆ ಬಂದು ಮಾತನಾಡುತ್ತ ಕೈ ಕೆಲಸದಲ್ಲಿ ತೊಡಗಿದ್ದರು. ಒಬ್ಬರು ಕಾಯಿಪಲ್ಲೆ ಸೋಸುತ್ತಿದ್ದರೆ, ಒಬ್ಬರು ಅಕ್ಕಿ ಆರಿಸುತ್ತಿದ್ದರೂ ಅನುಸೂಯಾ ಅವರೊಂದಿಗೆ ಕೂಡಿಕೊಂಡಳು. ಅವರಿಗೂ ಸಂತೋಷವಾಯಿತು. ಎಷ್ಟೋ ದಿನಗಳ ನಂತರ ಆಕೆ ಹೊರಗೆ ಬಂದಿದ್ದಳು. ಮಾತಿಗೆ ಆರಂಭವಾಯಿತು.

"ಬನ್ನಿ ಅನುಸೂಯಮ್ಮ, ಮಗೂಗೆ ಹೇಗಿದೆ."

"ಹಾಗೇ ಇದೇರಿ...ನನಗಂತೂ ಏನೂ ತಿಳೀದಂತಾಗಿದೆ."

"ಅದು ಸಹಜ ಅಮ್ಮ, ನೀನಿನ್ನೂ ಗಟ್ಟಿ. ಬೇರೆ ಯಾರೇ ಆಗಿದ್ರು..."

ಇದೇ ರೀತಿ ಮಾತುಕತೆಯಲ್ಲಿ ಅರ್ಧಗಂಟೆ ಕಳೆದಿರಬಹುದು. ಮಲಗಿದ್ದ ಆನಂದ ಎದ್ದ. ಮೈಯಲ್ಲಿ ಸ್ವಲ್ಪ ಶಕ್ತಿ ಬಂದಂತಾಗಿತ್ತು. ಸಾವಕಾಶವಾಗಿ ಎದ್ದು ಹೊರಗೆ ಬಂದ. ಮನೆಯೆಡೆ ಅನುಸೂಯಾ ಬೆನ್ನು ಮಾಡಿಕುಳಿತಿದ್ದಳು. ಉಳಿದವರು ಕೈ ಕೆಲಸಕ್ಕಿಂತ ಹೆಚ್ಚು ಮಾತಿನಲ್ಲಿ ಮಗ್ನರಾಗಿದ್ದರು. ಹೀಗಾಗಿ ಅವನೆಡೆ ಯಾರ ಲಕ್ಷ್ಯವೂ ಇರಲಿಲ್ಲ. ಆತ ಅನುಸೂಯಾಳ ಬೆನ್ನ ಮೇಲೆ ಬಿದ್ದಾಗಲೇ ಎಚ್ಚರ. ಎತ್ತಿ ಮುದ್ದಿಸುತ್ತ ಪಕ್ಕದಲ್ಲಿ ಕುಳ್ಳಿರಿಸಿಕೊಂಡಳು. ಆನಂದ ಗೆಲುವಾಗಿದ್ದ.

"ಆನಂದ ಇಂದು ಗೆಲುವಾಗಿದ್ದಾನೆ ಅನುಸೂಯಮ್ಮ...ನೀವು ನಾಳೆ ಆಫೀಸಿಗೆ ಹೋಗಬಹುದು. ಪಕ್ಕದ ಮನೆಯಾಕೆ ಹೇಳಿದಳು. ಆನಂದ ಮಧ್ಯೆ ಬಾಯಿಹಾಕಿದ "ಆಂಟಿ, ಆಂಟಿ, ಇನ್ನೆಂಟು ದಿನಕ್ಕೆ ಅಪ್ಪ ಬರತಾರೆ. ಇದೀಗ

ಪೋಸ್ಟ್ಮ್ಯಾನ್ ಒಂದು ಹೇಳಿ ಹೋದ.

"ಹೌದಾ... ? ಯಾವಾಗ....? ಎಲ್ಲಿದಾರಂತೆ?"

ನೂರೆಂಟು ಪ್ರಶ್ನೆಗಳು ಬಂದಾಗ ಆಕೆಗೆ, ಉತ್ತರಿಸಲು ಕಷ್ಟವಾಗಿ ಏನೇನೋ ಉತ್ತರಿಸಿ ಮಗನ ನೆನಪು ಮಾಡಿಕೊಂಡು ನೆವ ಹೇಳಿ ಮೇಲೆ ಎದ್ದಳು. "ಏಳು ಮರಿ....ಹೊರಗೆ ಥಂಡಿ ಇದೆ," ಪಕ್ಕದ ಮನೆಯವರ ಕಡೆ ಹೊರಳಿ, "ಬರತೀನಿ....ಆನಂದಗೆ ಈಗಷ್ಟೇ ಜ್ವರ ಇಳಿದಿದೆ. ಹೊರಗಡೆ ಕುಳಿತರೆ, ಮತ್ತೆ ಹೆಚ್ಚಾದರೆ ಗತಿ ಏನು!" ಯಾರ ಉತ್ತರಕ್ಕೂ ಕಾಯದೆ ಭರಭರನೆ ಮನೆ ಸೇರಿ ಬಾಗಿಲು ಮುಚ್ಚಿಕೊಂಡಾಗ ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಮುಂದೆ ಅರ್ಧಗಂಟೆ ಕಳೆದಿರಬಹುದು. ಮಹಿಳಾ ಮೀಟಿಂಗ್ ಮುಗಿ ಯುವ ಹಂತದಲ್ಲಿತ್ತು. ಎರಡನೇ ಮಹಡಿಯಲ್ಲಿದ್ದ ಡಾಕ್ಟರ ಮನೆ ಆಳು ಅನುಸೂಯಾಳನ್ನು ಕರೆಯಲು ಬಂದ. ಬಾಗಿಲ ಗಂಟೆ ಬಾರಿಸಿದ. ಅನುಸೂಯಾ ಬಾಗಿಲು ತೆರೆದಳು. "ನಿಮಗೆ ಫೋನಿದೆ ಕೂಡಲೇ ಬರ ಬೇಕಂತೆ," ಆತನ ಹಿಂದೆ ನಡೆದಳಾಕೆ.

ಹತ್ತು ನಿಮಿಷಗಳಲ್ಲಿ ಓಡುತ್ತ ಆಕೆ ಬಂದಾಗ ಮುಖದ ಮೇಲೆ ಹುಣ್ಣಿಮೆ ಮೂಡಿತ್ತು. ತಾನೇ ಮುಂದಾಗಿ ಗಟ್ಟಿಯಾಗಿ ಹೇಳಿದಳು. "ನಮ್ಮ ಯಜ ಮಾನರ ಫೋನು ಬಂದಿತ್ತು. ಅರ್ಧಗಂಟೆ ಹಿಂದೆ ಬಂದರಂತೆ ಮಗುವನ್ನು ಕರೆದುಕೊಂಡು ಆಫೀಸಿಗೆ ಬರಲು ಹೇಳಿದ್ದಾರೆ, ಈಗ ಗಾಡಿ ಕಳಿಸ್ತಾರಂತೆ."

ಹಾಗೆ ಕುಣಿಯುತ್ತ ಮನೆ ಸೇರಿದಾಗ ಮಹಿಳೆಯರಲ್ಲಿ ಒಬ್ಬಾಕೆ ಉದ್ಗರಿಸಿದಳು. "ಪಾಪ ತುಂಬಾ ಹಣ್ಣಾಗಿದ್ದಾಳೆ. ಅಂತೂ ದೇವರು ಕಣ್ತೆರೆದ."

ಅವರೆಲ್ಲ ಇದೇ ವಿಷಯದ ಬಗ್ಗೆ ಮಾತನಾಡುತ್ತಿರುವಾಗಲೇ ಡ್ರೈವರ ನಂತೆ ಕಾಣುತ್ತಿದ್ದವನೊಬ್ಬ ಮೇಲೆ ಬಂದ ಮನೆ ನಂಬರು ಹೆಸರು ನೋಡುತ್ತ ಚಂದ್ರಮೋಹನ ಎಂದಿದ್ದ ಮನೆ ಬಾಗಿಲು ತಟ್ಟಿದ. ಅನುಸೂಯಾ ತಯಾ ರಾಗಿ ನಿಂತವಳು ಬಾಗಿಲು ತೆರೆದಳು.ಒಂದು ಭರ್ಜರಿ ಸೆಲ್ಯೂಟ್ ನೀಡಿದ ಆತ. "ಗಾಡಿ ಕಳಿಸಿದಾರೆ ಸಾಹೇಬರು" ಅಂದ. ಹೊರಗೆ ಬಂದ ಆಕೆ ಬೀಗ ಹಾಕಿ ಎಲ್ಲರ ಕಡೆ ಹೆಮ್ಮೆಯಿಂದ ನೋಡುತ್ತ ಮೆಟ್ಟಿಲ ಕಡೆ ನಡೆದಳು.

ಈ ಕಡೆ ರಾಷ್ಟ್ರೀಯ ಹೆದ್ದಾರಿ ಮೇಲೆ ಹೇಮಂತನ ಟೊಯೊಟಾ ಕಾರು ಗಂಟೆಗೆ ನೂರಿಪ್ಪತ್ತು ಕಿಲೋಮೀಟರ್ ವೇಗದಲ್ಲಿ ಓಡುತ್ತಿತ್ತು. ಹೇಮಂತನೇ ಗಾಡಿ ನಡೆಸುತ್ತಿದ್ದ. ಆತ ಮೇಲಿಂದಮೇಲೆ ಸೈಡ್ ಮಿರರ್ ನೋಡುತ್ತಿದ್ದ.

ಅದನ್ನು ಗಮನಿಸಿದ ಅಶೋಕ ಹೊರಳಿ ನೋಡಿದ. ಒಂದು ಫರ್ಲಾಂಗ್ ಅಂತರ ದಲ್ಲಿ ಒಂದು ಜೀಪು ಅವರ ಕಾರನ್ನು ಬೆನ್ನಟ್ಟಿ ಬರುತ್ತಿತ್ತು.

"ನಾನದನ್ನು ವಿಚಾರಿಸಿಕೊಳ್ಳಲೇ ರಿವಾಲ್ವರ್ ಕೈಲಿ ಹಿಡಿದು ಕೇಳಿದ ಆತ."

"ಬೇಡ....ಅದಕ್ಕೆ ಸಮಯವಿಲ್ಲ....ನಾನೇ ಏನಾದರೂ ಮಾಡಿ ತಪ್ಪಿಸು ತ್ತೇನೆ....ಸುಮ್ಮನಿರು."

ಅಶೋಕ ಮೌನ ತಾಳಿದ. ಹತ್ತು ನಿಮಿಷ ಅದೇ ರೀತಿ ಕಾರು ಓಡಿತು. ಜೀಪು ಬೆನ್ನ ಹಿಂದೆಯೇ ಇತ್ತು.....ಹೇಮಂತ........ಮಿರರ್ ಕಡೆ ನೋಡುತ್ತ ಚಿಂತಿಸುತ್ತಿದ್ದ. ಆಪಾಗಲೇ ಆ ವಿಚಿತ್ರ ಘಟನೆ ನಡೆಯಿತು: ಕೆಟ್ಟು ನಿಂತಿದ್ದ ಲಾರಿ ಬಳಿ ಜೀಪು ಬರುತ್ತಲೇ ಒಮ್ಮೆ ತೂರಾಡಿದ ಜೀಪು ಭಾರಿ ಗಾತ್ರದ ಮರಕ್ಕೆ ಢೀಕೊಟ್ಟಿತ್ತು. ಹೇಮಂತ ಅದನ್ನು ನೋಡಿ ಮುಗುಳುನಗೆ ನಕ್ಕ.

"ಮೇಜರ್ ಪೀಡೆ ಕಳೆಯಿತು" ಅಶೋಕ ಖುಷಿಯಿಂದ ಕೂಗಿದ.

"ನನಗೆ ಗೊತ್ತು....ಇದೆಲ್ಲ ನಮ್ಮ ಶುಭಚಿಂತನಕನ ಕೆಲಸ."

ಸುಷಮಾ ಮತ್ತು ಅಶೋಕ ಆ ಮಾತು ಕೇಳಿ ಬೆಚ್ಚಿದರು.

ಇನ್ನೂರಾ ಅರವತ್ತೈದು ಕಿಲೋಮೀಟರ್ ದೂರವನ್ನು ಎರಡೂವರೆ ಗಂಟೆಗಳಲ್ಲಿ ಕ್ರಮಿಸಿದ ಹೇಮಂತನ ಕಾರು ಅಶ್ವಿನಿ ಬಿಲ್ಡಿಂಗ್ ಹತ್ತಿರ ಬಂದಾಗ ಅಲ್ಲಿಂದ ಓಡಿದ ಕಾರಿನತ್ತ ಗಮನಹರಿಸಿದ ಅಶೋಕ ಅದರ ನಂಬರು ಅವನಿಗೆ ವಿಚಿತ್ರವೆನಿಸಿತು. ಕಾರು ನಿಲ್ಲಿಸಿದ ಹೇಮಂತ ಸಮಯ ನೋಡಿ ನುಡಿದ. "ಈಗ ಐದೂವರೆ ಗಂಟೆ. ನಾವು ಸಾಕಷ್ಟು ಬೇಗ ಬಂದಿದ್ದೇವೆ. ಥರ್ಡ್‌ಫ್ಲೋರಿಗೆ ನಾವು ಹೋಗಬೇಕಲ್ಲ?"

"ಹೌದು. ಇಪ್ಪತ್ತೇಳನೆ ನಂಬರಿನ ಮನೆ ಚಂದ್ರಮೋಹನದು."

ಲಿಫ್ಟ್ ಇಲ್ಲದ್ದನ್ನು ಗಮನಿಸಿ ಮೂವರೂ ಮೆಟ್ಟಲಿನತ್ತ ನಡೆದರು. ಅನುಸೂಯಾ ಮನೆ ಪಕ್ಕದ ಮನೆ ಕೆಲಸದಾಕೆ ಈ ಮೂವರನ್ನು ಗಮನಿಸಿ ಭಡಭಡನೆ ಎರಡು ಮೂರು ಮನೆಗೆ ಸುದ್ದಿ ಮುಟ್ಟಿಸಿದಳು. ಪ್ರತಿ ಮನೆ ನಂಬರ್ ನೋಡುತ್ತ ಬಂದು ಮೂವರು ಚಂದ್ರಮೋಹನ ಮನೆ ಮುಂದೆ ಬಂದಾಗ ಅದಕ್ಕೆ ಬೀಗ ನೇತಾಡುತ್ತಿತ್ತು.

ಹೇಮಂತನ ಹುಬ್ಬುಗಳು ಗಂಟಾದವು ಕಣ್ಣು ಚಿಕ್ಕದಾದವು.

ಸುಷಮಾ ಅತ್ತಿತ್ತ ನೋಡಿದಳು. ಎರಡು ಮೂರು ಮನೆ ಬಾಗಿಲಿಗೆ ನಿಂತಿದ್ದ ಹೆಂಗಳೆಯರು ಅವಳನ್ನೇ ದಿಟ್ಟಿಸುತ್ತಿದ್ದರು ಅವಳಬಳಿ ಸಾರಿ ಸುಷಮಾ "ಚಂದ್ರಮೋಹನ ಎಲ್ಲಿದ್ದಾರೆ" ಎಂದಳು.

"ಒಂದು ತಿಂಗಳಿಂದ ಅವರು ಊರಲ್ಲಿಲ್ಲ?" ಒಬ್ಬಾಕೆ ಉತ್ತರಿಸಿದಳು.

"ಅವರ ಮನೆಯವರು ಇಲ್ಲವೆ?"

"ಯಾರು ಅನುಸೂಯಮ್ಮನೇ."

"ಹಾಂ....ಹೌದು....ಅವರೇ ತಡವರಿಸಿದಳು ಸುಷಮಾ."

"ಇದೀಗ ಅವರು ಮಗ ಆನಂದನೊಂದಿಗೆ ಹೋದರಲ್ಲ."

"ಎಲ್ಲಿಗೆ?"

"ಆಫೀಸಿಗೆ ಅವರ ಗಂಡ ಫೋನು ಮಾಡಿದ್ದರು....ಅದಕ್ಕೆ...."

ಮುಂದೆ ಮಾತು ಆಡಲಿಲ್ಲ, ಹೇಮಂತ ಧಡಧಡ ಮೆಟ್ಟಿಲೆಡೆ ಓಡಿದ. ಅವನ ವರ್ತನೆ ಅರ್ಥಮಾಡಿಕೊಂಡ ಸಂಗಾತಿಗಳೂ ಸಹ ಅವನ ಹಿಂದೆ ಓಡಿದರು. ತಿಂಗಳ ಹಿಂದೆ ಸತ್ತ ಗಂಡ ಫೋನು ಮಾಡಿ ಗಾಡಿ ಕಳಿಸುವದೆಂದರೆ.... ಇದರಲ್ಲೇನೋ ಮೋಸವಡಗಿದೆ........ತಾವು.....ಕೇವಲಐದು ನಿಮಿಷ ಲೇಟಾಗಿ ಬಂದಿದ್ದೇವೆ. ಅಷ್ಟರಲ್ಲಿ ಆ ಅನಾಹುತ ಘಟಿಸಿದೆ....ಓಡುತ್ತ ಕೆಳಗಡೆ ಬಂದ ಹೇಮಂತ ಅತ್ತಿತ್ತ ಹುಚ್ಚನಂತೆ ನೋಡುತ್ತ ನಿಂತ....ಅಶೋಕನಿಗದು ಅರ್ಥವಾಯಿತು.

"ನಮ್ಮ ಕಾರು ಈ ಕಡೆಯಿಂದ ಬರುತ್ತಲೂ ಇಲ್ಲಿ ನಿಂತಿದ್ದ. ಆ ಅಂಬಾಸಡರ್ ಕಾರು ಹೊರಟಿತು.ಅದರ ನಂಬರ ನೋಡಿದೆ ವಿಚಿತ್ರವೆನಿಸಿತು. ನಾಲ್ಕು ಒಂಭತ್ತುಗಳು ನೈನ್ ನೈನ್ ನೈನ್ ನೈನ್...."

ಹೇಮಂತ ಕೈ ಕೈ ಹಿಸುಕಿಕೊಂಡ ಎಷ್ಟು ಜಾಗ್ರತೆ ತೆಗೆದುಕೊಂಡು ಧಾವಿಸಿ ಬಂದಿದ್ದರೂ ಯಾವ ದುರ್ಘಟನೆ ನಡೆಯಬಾರದಾಗಿತ್ತೋ ಅದು ನಡೆದು ಹೋಗಿತ್ತು.

"ಪೋಲೀಸರಿಗೆ ರಿಪೋರ್ಟ್ ಮಾಡೋಣವೇ?" ಸುಷಮಾ ಕೇಳಿದಳು.

"ಉಪಯೋಗವಾಗುವದಿಲ್ಲ. ಆ ಕಾರು ಕಳ್ಳತನದಿಂದ ತಂದಿದ್ದಾಗಿರುತ್ತದೆ, ಇಲ್ಲವೆ ಅವರ ನಂಬರು ನಕಲಿಯಾಗಿರುತ್ತದೆ."

ಒಮ್ಮೆಲೇ ಭೂಮಿಗಿಳಿದು ಹೋಗಿದ್ದ ಹೇಮಂತ. ಅಶೋಕನೇ ಕಾರು ಚಾಲಕನ ಜಾಗೆಯಲ್ಲಿ ಕುಳಿತ. ಯಾವ ಕಡೆಗೆ ಎನ್ನುವಂತೆ ನೋಡಿದ.

"ನಮ್ಮ ಬಳಿ ಈಗ ಹೆಚ್ಚು ಸಮಯವಿಲ್ಲ. ರಾತ್ರಿ ಶುಭಚಿಂತಕನ ಫೋನು ಬೇರೆ ಬರುವದಿದೆ. ಈ ಕಡೆ ಆಮೇಲೆ ಬಂದರಾಯಿತು. ಈಗ ಮನೆ ಕಡೆ ನಡೆ."

ಕಾರು ಓಡಿಸತೊಡಗಿದ ಅಶೋಕ ಊರಿನೆಡೆ....ಅಶೋಕ ಟೆಲಿಫೋನು ಬೂಥ್ ಇದ್ದಲ್ಲಿ ಕಾರು ನಿಲ್ಲಿಸು,ಮೇಜರ್ ಆದೇಶ ನೀಡಿದ.ಅದರಂತೆ ಒಂದೆರಡ

ಕಿಲೋಮೀಟರ್ ಹೋಗುತ್ತಲೇ ಹೈವೇ ಹೊಟೇಲ್ ಪಕ್ಕದಲ್ಲಿರುವ ಟೆಲಿಫೋನ್ ಬೂಥ್ ಎದುರು ನಿಲ್ಲಿಸಿದ. "ಪೊಲೀಸರಿಗೆ ಫೋನು ಮಾಡಿ ಚಂದ್ರಮೋಹನನ ಹೆಂಡತಿ ಹಾಗೂ ಮಗುವನ್ನೂ ಅಪಹರಿಸಿದ ವಿಷಯ ತಿಳಿಸು. ಪತ್ರಿಕಾ ಆಫೀಸ್‌ನಲ್ಲಿ ಹಾಗೂ ಅಶ್ವಿನಿ ಬಿಲ್ಡಿಂಗ್‌ನಲ್ಲಿ ವಿಚಾರಣೆ ನಡೆಸಲು ಹೇಳು. ಹಾಂ....ನಿನ್ನ ಹೆಸರನ್ನು ಮಾತ್ರ ಹೇಳಬೇಡ."

ಸರಿ ಎಂದು ತಲೆ ಹಾಕಿದ ಅಶೋಕ. ಐದು ಹತ್ತು ನಿಮಿಷಗಳ ನಂತರ ಅಶೋಕ ಮರಳಿ ಬಂದಾಗ ಅವನ ಹಿಂದೆ ಹೊಟೇಲ್ ಹುಡುಗೆ ಚಹ ತರುತ್ತಿದ್ದ ಚಹ ಕುಡಿದು ಪಯಣ ಆರಂಭವಾಯಿತು. ಒಂದು ಒಂದೂ ಕಾಲು ಗಂಟೆ ನಂತರ ಅಶೋಕ ಕಾರಿನ ವೇಗ ತಗ್ಗಿಸಿದ. ರಸ್ತೆ ಪಕ್ಕದಲ್ಲಿದ್ದ ಮರಕ್ಕೆ ಢಿಕ್ಕಿಕೊಟ್ಟ ಜೀಪಿನ ಬಳಿ ಪೊಲೀಸ್ ಗಾಡಿ ವಿಚಾರಣೆ ಆರಂಭವಾಗಿತ್ತು. ನಿಧಾನವಾಗಿ ಕಾರು ಓಡಿಸುತ್ತ ಅಶೋಕ ಜೀಪಿನೆಡೆ ಸೂಕ್ಷ್ಮ ದೃಷ್ಟಿ ಬೀರಿದ. ಜೀಪಿನ ಮುಂದಿನ ಗಾಲಿಯ ಟಯರ್ ಒಡೆದಿತ್ತು. ಆತ ಮುಗುಳ್ನಸಗೆ ನಕ್ಕ ಮೇಜರ್ ಸಹ ಜೀಪಿನೆಡೆಯೇ ನೋಡುತ್ತಿದ್ದುದು ಅವನ ಗಮನಕ್ಕೆ ಬಾರದಿರಲಿಲ್ಲ.

ಮನೆ ತಲುಪಿದಾಗ ಒಂಭತ್ತು ಗಂಟೆ ಕೈಕಾಲು ತೊಳೆದುಕೊಂಡು ಊಟ ಮಾಡಿ ಮುಗಿಸುತ್ತಿದ್ದಂತೆ ಟೆಲಿಫೋನು ಗಂಟೆ ಬಾರಿಸಿತು. ಹೇಮಂತನೇ ಟೇಪ್‌ರಿಕಾರ್ಡರ್ ಗುಂಡಿ ಅದುಮಿ ರಿಸೀವರ್ ಎತ್ತಿದ....ಆ ಕಡೆಯಿಂದ ಶುಭ ಚಿಂತಕ, "ನಮಸ್ಕಾರ ಶುಭಚಿಂತಕರೆ......ಮರದ ಮೇಲೆ ಕುಳಿತು ಜೀಪಿನ ಮುಂದಿನ ಗಾಲಿ ಟಯರಿಗೆ ಗುಂಡು ಹೊಡೆದು ನನ್ನನ್ನು ಹಿಂಬಾಲಿಸುತ್ತ ಬಂದಿರುವವರಿಗೆ ತಕ್ಕ ಶಾಸ್ತಿ ಮಾಡಿದಿರಿ ನಿಮ್ಮ ಸಹಾಯಕ್ಕೆ ವಂದನೆಗಳು.... ನಿಮ್ಮ ನೇರ ಗುರಿಗೆ ಅಭಿನಂದನೆಗಳು "

ಶುಭಚಿಂತಕ ಅವಾಕ್ಕಾದ: "ನೀವಿಷ್ಟು ಶಾರ್ಪ್ ಎಂದು ತಿಳಿದಿರಲಿಲ್ಲ... ಮೇಜರ್ ಈಗಲೇ ನೀವು ಹೊರಡಿ....ಬಾರಾಕೊಟ್ರಿ ರೈಲುಗೇಟಿನ ಬಳಿ ಕಪ್ಪು ಬಣ್ಣದ ಸ್ಟೇಶನ್ ವ್ಯಾಗನ್ ನಿಂತಿರುತ್ತದೆ. ಅಲ್ಲಿ ನಿಮಗಾಗಿ ನಾನು ಕಾಯುತ್ತಾ ಇರುತ್ತೇನೆ....ಹಾಂ....ನೀವು ನಿಮ್ಮ ಜೊತೆ ನಿಮ್ಮ ಸಂಗಡಿಗರನ್ನು ರಿವಾಲ್ವರ್ ರೈಫಲ್ ಮುಂತಾದವನ್ನು ತರಬಹುದು. ನನ್ನ ಅಭ್ಯಂತರವಿಲ್ಲ "

"ನೀವು ನನ್ನ ಶುಭಚಿಂತಕರೆಂದು ಸಿದ್ಧಪಡಿಸಿದ್ದೀರಿ. ಹೀಗಾಗಿ ಅದರ ಅವಶ್ಯಕತೆ ಇಲ್ಲ ಎಂದು ಎನಿಸುತ್ತದೆ. ಹಾಂ, ನಿಮ್ಮ ಪರಿಚಯ ಮಾಡಿ ಕೊಳ್ಳಲು ನನ್ನ ವೀರ ಸಂಗಡಿಗರನ್ನು ಕರೆತರುತ್ತೇನೆ.. ಬೈ."

ರಿಸೀವರ್ ಕೆಳಗಿಟ್ಟು ಟೇಪ್‌ರಿಕಾರ್ಡರ್ ಬಂದು ಮಾಡಿ ಹೊರನಡೆದ. ಹೇಮಂತ ಅಶೋಕ ಸುಷಮಾ ಹಿಂಬಾಲಿಸಿದರು. ಬಾರಾಕೊಟ್ರಿ ರೈಲು ಗೇಟ್

ಬಳಿ ಕಪ್ಪು ಸ್ಟೇಶನ್ ವ್ಯಾಗಿನ್ ಹತ್ತಿರ ಮೇಜರ್ ಕಾರು ನಿಲ್ಲಿಸಿದ............ ಮೂವರೂ ಕೆಳಗಿಳಿದರು. ತಕ್ಷಣವೇ ಸ್ಟೇಶನ್ ವ್ಯಾಗಿನ್ ಬಾಗಿಲು ತೆರೆಯಿತು. "ಹಲೋ ಮೇಜರ್ ಹೇಮಂತ" ಎನ್ನುತ್ತ ಕೆಳಗಿಳಿದ ವ್ಯಕ್ತಿಯೆಡೆ ಮೂವರೂ ನೋಡಿದರು. ಆತನೆಡೆ ನೋಡುತ್ತಲೇ ಮೂವರು ಅಲ್ಲೇ ಕಲ್ಲಿನಂತಾದರು.

*　*　*　*

ಕಪ್ಪು ಸ್ಟೇಶನ್ ವ್ಯಾಗಿನ್ ಬಾಗಿಲು ತಕ್ಷಣ ತೆರೆದಾಗ ಮೂವರೂ ಅಲರ್ಟ್ ಆಗಿದ್ದರು............ ಜೇಬಿನಲ್ಲಿದ್ದ ರಿವಾಲ್ವರ್ ಮೇಲೆ ಬೆರಳು.... ಬಿಗಿಯಾಗಿದ್ದವು.

"ಹಲೋ ಮೇಜರ್ ಹೇಮಂತ" ಎನ್ನುತ್ತ ಕೆಳಗಿಳಿದ ವ್ಯಕ್ತಿಯತ್ತ ಮೂವರೂ ನೋಡಿದರು. ನೋಡುತ್ತಿದ್ದಂತೆ ಅವರು ಅಲ್ಲೇ ಕಲ್ಲಾಗಿ ನಿಂತು ಬಿಟ್ಟರು.

ಸದಾಶಿವ....

ಮಾಜಿ ಸಚಿವ ಸಾಂಬಮೂರ್ತಿಯವರ ಆಪ್ತ ಸಹಾಯಕ ಸದಾಶಿವ.... ಸಾದುಗಪ್ಪು ಬಣ್ಣ ಸುಮಾರು ಎತ್ತರ. ನೇರ ಆದರೆ ಸ್ವಲ್ಪ ಮೊಂಡ ಎನ್ನ ಬಹುದಾದ ಮೂಗು ನಗುಮುಖ. ಗರ್ವ ಅವನ ಹತ್ತಿರ ಸುಳಿದಿರಲಿಲ್ಲ.... ಅವನ ಶುಭಚಿಂತಕ....ಈ ಮೊದಲು ಹತ್ತಾರು ಬಾರಿ ಭೆಟ್ಟಿಯಾಗಿ ಸಾಕಷ್ಟು ಪರಿಚಯವಿದ್ದರೂ ನೇರವಾಗಿ ಬಂದು ಭೆಟ್ಟಿಯಾಗುವದಕ್ಕಿಂತ ಈ ರೀತಿ ರಹಸ್ಯವಾಗಿ ಏಕೆ ವರ್ತಿಸಿದ ಎಂಬುದೇ ಅರ್ಥವಾಗಲಿಲ್ಲ....

"ಏಕೆ ಏನಾಯ್ತು?"

"ಏನಿಲ್ಲ....ನಮ್ಮ ಸಭೆ ಮಿತ್ರ ಎಂದಿನಿಂದ ರಹಸ್ಯಮಯ ವ್ಯಕ್ತಿಯ ರೂಪ ತಳೆದು ಶುಭಚಿಂತಕನಾದ ಎಂದು ಯೋಚಿಸುತ್ತಿದ್ದೇವೆ ಅಷ್ಟೇ...."

ಸದಾಶಿವನೊಂದಿಗೆ ಹೇಮಂತನ ಸಂಗಡಿಗರು ನಗೆಯಲ್ಲಿ ಪಾಲುದಾರ ರಾದರು.

"ಮೇಜರ್ ನೀವು ಕರ್ಮಯೋಗಿಗಳು. ನಿಮಗೆ ಸಮಯ ಅಮೂಲ್ಯ, ಆದಕ್ಕಾಗಿ ನಾನು ವ್ಯರ್ಥಕಾಲಹರಣ ಮಾಡದೇ ನೇರ ವಿಷಯಕ್ಕೆ ಬರುತ್ತೇನೆ. ಇದರಿಂದಾಗಿ ನಿಮ್ಮ ಎಲ್ಲ ಪ್ರಶ್ನೆಗಳಿಗೂ ಉತ್ತರ ದೊರೆಯುತ್ತದೆ."

ಹೇಮಂತನಿಗೆ ಅವನು ಮಾತನಾಡುವ ದಾಟಿ ಮೆಚ್ಚುಗೆಯಾಯಿತು. "ಒಳ್ಳೆಯದು ಹೇಳಿ."

"ನಿಮಗೆ ಫೋನು ಮಾಡಿ ರಂಗಮಹಲ್‌ಗೆಕರೆಸಿದವರ್ಯಾರು? ಎಂಬುದು ನಿಮ್ಮ ಸಮಸ್ಯೆ ಅಲ್ಲವೇ?"

"ಹೌದು ಅದರೊಂದಿಗೆ ಉದ್ದೇಶ ಸಹ ನನಗೆ ಬೇಕಾಗಿದೆ."

"ಉದ್ದೇಶ ಹೊರಗೆಡುವ ಕೆಲಸ ನಿಮ್ಮದು, ನನ್ನದಲ್ಲ."

"ಗುಡ್....ಅರೆ ಯಾರು ಆ ವ್ಯಕ್ತಿ....?"

"ಸಾಂಬಮೂರ್ತಿಗಳು."

"ಆಂ....ಏನೆಂದಿರಿ?"

"ಮಾಜಿ ಸಚಿವ, ಈಗಲೂ ನನ್ನ ಬಾಸ್ ಆಗಿರುವ ಸಾಂಬಮೂರ್ತಿಗಳೇ ಸ್ವತಃ ನಿಮಗೆ ಫೋನು ಮಾಡಿ ರಂಗಮಹಲ್‌ಗೆ ಕರೆಸಿದ್ದರು."

"ಸುಳ್ಳು....ಸುಳ್ಳು...."

"ನನಗೆ ಗೊತ್ತಿತ್ತು, ನೀವು ಈ ರೀತಿ ಹೇಳುತ್ತೀರೆಂದು ನನ್ನ ಮಾತನ್ನು ನಂಬಲು ನಾನು ನಿಮಗೆ ಒತ್ತಾಯಿಸುವದಿಲ್ಲ,ನಿಜ ವಿಷಯ ನಿಮ್ಮ ಮುಂದಿಡು ತ್ತಿದ್ದೇನೆ, ಅಷ್ಟೇ. ಅವರು ಫೋನು ಮಾಡುತ್ತಿದ್ದುದನ್ನು ನಾನೇ ಸ್ವತಃ ನನ್ನ ಕಿವಿಯಿಂದ ಕೇಳಿದ್ದೇನೆ. ಅಲ್ಲದೆ ಅದು ಟೇಪ್‌ಸಹ ಆಗಿದೆ. ನೀವು ಇಷ್ಟಪಟ್ಟರೆ ನೀವು ಹೇಳಿದ ದಿನ, ಹೇಳಿದ ಸಮಯಕ್ಕೆ ಅದನ್ನು ನಿಮಗೆ ಕೇಳಿಸುತ್ತೇನೆ."

ಹೇಮಂತ ಚಿಂತಾಮಗ್ನನಾದ....ಸದಾಶಿವ ಹೇಳಿದ್ದು ನಂಬಲಾಗದಿದ್ದರೂ ಅವರ ಬಳಿ ಸಾಕ್ಷ್ಯಾಧಾರಗಳಿವೆ. ನಂಬಬಹುದು...............ಆದರೆ, ಆದರೆ, ಸಾಂಬಮೂರ್ತಿಗಳು ಹೀಗೇಕೆ ಮಾಡಿದರು? ನನ್ನನ್ನು ದಾರಿಯಿಂದ ಸರಿಸಿದರೆ ಅವರಿಗೆ ಸಿಗುವ ಸೌಭಾಗ್ಯ ಯಾವದು? ಅತ್ಯಂತ ಶಿಸ್ತು, ಉತ್ತಮ ಸಮಾಜ ಸೇವಕರೆಂಬ ಹೆಸರು ಪಡೆದ ಅವರ ಮನದಲ್ಲಿ ಈ ತರಹದ ವಿಷದ ಹೊಗೆ ಹೊರಡಲು ಕಾರಣವೇನು?

"ಮೇಜರ ಇನ್ನೊಂದು ಮಾತು" ಸದಾಶಿವ ಎಚ್ಚರಿಸಿದ.

"ಹೇಳಿ ಸದಾಶಿವ...."

"ಈ ಘಟನೆ ನಡೆದ ದಿವಸ ಹಾಗೂ ಅದಕ್ಕಿಂತ ಮೊದಲು ನಾನು ಊರಲ್ಲೇ ಇರಲಿಲ್ಲ ಎಂದು ಸಾಂಬಮೂರ್ತಿ ಹೇಳಿದ್ದಾರಲ್ಲ."

"ಹೌದು," ಸದಾಶಿವನ ತುಟಿ ಮೇಲೆ ವಿಷ ನಗೆ ಹರಡಿತು.

"ಮತ್ತೆ ಸುಳ್ಳು."

"ಏನು?"

"ಮತ್ತೆ ಸುಳ್ಳು ಹೇಳಿದ್ದಾರೆಂದು ಅವರೆಲ್ಲೂ ಹೋಗಿರಲಿಲ್ಲ, ಇದೇ ಊರಲ್ಲಿದ್ದರು."

"ಇದನ್ನು ಹೇಗೆ ಗಟ್ಟಿಯಾಗಿ ಹೇಳುತ್ತೀರಿ?"

"ಇದಕ್ಕೂ ನನ್ನ ಬಳಿ ಆಧಾರವಿದೆ." ಹೇಮಂತ ವಿಚಾರಮಗ್ನನಾದ.

ಸದಾಶಿವನೇ ಮಾತನಾಡಿದ. "ಇದಕ್ಕಿಂತ ಹೆಚ್ಚಿನ ವಿವರ ತಮಗೆ ತಿಳಿಯಬೇಕಿದ್ದರೆ ದಯವಿಟ್ಟು ಹಂನಗರದ ಆರನೇ ಮೇನ್ ಮೂರನೇ ಕ್ರಾಸಿಗೆ ಹೋಗಿ ಮನೆ ನಂಬರು ಇನ್ನೂರಾ ಎಪ್ಪತ್ತು."

ಮೇಜರ್ ಅವನತ್ತ ಆಶ್ಚರ್ಯದಿಂದ ನೋಡಿದ. "ಇದೆಲ್ಲಾ ನಿಮಗೆ ಹೇಗೆ ಗೊತ್ತು?"

"ನಾನವರ ಆಪ್ತಕಾರ್ಯದರ್ಶಿ ಎಂದು ತಾವು ಮರೆತಂತಿದೆ."

"ಆ ಮನೆಯಲ್ಲಿ ಯಾರಿದ್ದಾರೆ?"

"ಅಲ್ಲಿಗೆ ಹೋದ ಮೇಲೆ ತಾನಾಗಿ ತಿಳಿಯುತ್ತದೆ. ಆದರೂ ನಾನು ಸತ್ಯ ಹೇಳುತ್ತಿದ್ದೇನೆ. ಎಂಬುದಕ್ಕೆ ಅದನ್ನು ಹೇಳುತ್ತೇನೆ...............ಅದೂ ಸಹ ಸಾಂಬಮೂರ್ತಿಗಳ ಮನೆಯೇ ಆದರೆ ಸಧ್ಯ ಅದರ ಒಡತಿ ಕುಮಾರಿ ರತ್ನ ಕುಮಾರಿ...."

"ರತ್ನಕುಮಾರಿ?"

"ಹಾಂ, ಕುಮಾರಿ ರತ್ನಕುಮಾರಿ ವಯಸ್ಸು ಮೂವತ್ತೈದು ಹದಿನಾಲ್ಕು ವರ್ಷಗಳ ಹಿಂದೆ ಆಕೆ ಮಿಸ್ ಬ್ಯೂಟಿಕ್ವೀನ್ ಆಗಿದ್ದಳು. ವಿವರ ಸಾಕಾ? ಇನ್ನೂ ಬೇಕಾ?"

"ನೀವು ತಪ್ಪಿ ಆಪ್ತಕಾರ್ಯದರ್ಶಿಗಳಾಗಿದ್ದೀರಿ" ನನ್ನಂತೆ ಡಿಟೆಕ್ಟಿವ್ ಆಗಬೇಕಾಗಿತ್ತು."

"ನಾನು ನಿಮ್ಮ ದಾರಿಗೆ ಬಂದರೆ ನಿಮ್ಮ ಗತಿ ಏನು ಮೇಜರ್ ಸಾಹೇಬರೇ?"

ಅವನ ವ್ಯಂಗ್ಯೋಕ್ತಿಗೆ ಎಲ್ಲರೂ ನಕ್ಕರು. ಸದಾಶಿವಹೇಮಂತನ ಒಪ್ಪಿಗೆ ಪಡೆದು ಗಾಡಿಯಲ್ಲಿ ಕುಳಿತ. ಸ್ಟೇಶನ್‌ವ್ಯಾಗಿನ್ ಅಲ್ಲಿಂದ ಚಲಿಸಿತು. ಮೂವರ ದೃಷ್ಟಿ ವ್ಯಾನ್ ನಂಬರ್ ಕಡೆ ತಿರುಗಿ ಒಮ್ಮೆಲೆ ಮೂವರ ಮುಖ ಪೆಚ್ಚಾಯಿತು. ವ್ಯಾನಿಗೆ ನಂಬರೇ ಇರಲಿಲ್ಲ.

ರಾತ್ರಿ ಬಹಳವಾಗಿತ್ತು ಉಳಿದಿದ್ದನ್ನು ಮುಂಜಾನೆ ವಿಚಾರಿಸಿದರೆ ಆಯಿತೆಂದು ಮನೆಕಡೆ ನಡೆದರು. ಸುಮಾರು ಹನ್ನೆರಡರವರೆಗೆ ಸದಾಶಿವ ಹಾಗೂ ಸಾಂಬಮೂರ್ತಿಗಳ ಬಗ್ಗೆ ಚರ್ಚೆ ನಡೆಯಿತು. ಸದಾಶಿವ ಈಗಲೂ ಅವರ ಆಪ್ತಕಾರ್ಯದರ್ಶಿಯಾಗಿದ್ದರೂ ಸಹಿತ ಅವರ ಬಗ್ಗೆ ಏಕೆ ವಿಶೇಷ ಮಾಹಿತಿ ನೀಡುತ್ತಿದ್ದಾನೆ. ಆತ ಕೊಟ್ಟ ಗುಪ್ತ ವಿಷಯಗಳು ಎಷ್ಟರ ಮಟ್ಟಿಗೆ ಸತ್ಯ ಎಂಬುದೇ ಮುಖ್ಯ ವಿಷಯವಾಗಿತ್ತು.

ಬಾಯಿಗೆ ಬಲಗೈ ಅಂಗೈ ಅಡ್ಡ ಹಿಡಿದು ಸುಷಮಾ ಆಕಳಿಸಿದಳು.

ಅವಳತ್ತ ಅನುರಾಗ ಪೂರ್ಣ ದೃಷ್ಟಿ ಬೀರಿದ ಹೇಮಂತ, ಅವನ ದೃಷ್ಟಿ ಕಂಡಾಗ ಸುಷಮಾಳಿಗೆ ಬೆಳಗಿನ ಘಟನೆ ನೆನಪಾಯಿತು. ದಿಂಬು ಎತ್ತಿಡುವ ಎಕ್ಸರಸೈಜ್, ಅವಳ ಮುಖ ಒಮ್ಮೆಲೆ ಕೆಂಪು ಕೆಂಪು ಅವರಿಬ್ಬರ ದೃಷ್ಟಿಯಲ್ಲಿಡ ಗಿದ ಭಾವನೆ ಗುರುತಿಸಿದ. "ಅಶೋಕ ರಾತ್ರಿ ಬಹಳವಾಯಿತು. ನಾನಂತೂ ಮಲಗುತ್ತೇನೆ ದಿಂಬಿನೊಡನೆ ಮಾತನಾಡುತ್ತಾ, ನೀವು ಜೀವದ ಬೊಂಬೆ ಯೊಡನೆ ಮಾತನಾಡಿ."

"ಅದು ನಿನ್ನ ಕರ್ಮ," ಪ್ರತ್ಯುತ್ತರ ನೀಡಿದ ಮೇಜರ್.

ಸುಷಮಾ ಖಿಸಕ್ ಎಂದು ನಕ್ಕಳು. ತುಟಿಯ ಮೇಲಿನ ನಗೆ ಹೂ ಅರಳುವ ಮುನ್ನವೇ ಹೇಮಂತ ಮತ್ತೊಂದು ಹೂಮುತ್ತನ್ನಿತ್ತು ಆಲಿಂಗನ ದಲ್ಲಿ ಬಂಧಿಸಿದ.

ಮುಂಜಾನೆ ಸರಿಯಾಗಿ ಒಂಭತ್ತು ಗಂಟೆಗೆ ಮೂವರೂ ಉಪಹಾರ ಸೇವಿಸುತ್ತ ಮುಂದಿನ ಕಾರ್ಯದ ಬಗ್ಗೆ ರೂಪರೇಷೆ ಸಿದ್ಧಪಡಿಸತೊಡಗಿದರು.

"ಮೊದಲು ನಾವು ಹರಿನಗರದಲ್ಲಿರುವ ರತ್ನಕುಮಾರಿಯನ್ನು ಪರೀಕ್ಷಿಸ ಬೇಕು."

"ಸದಾಶಿವ ಹೇಳಿದ್ದು ಎಷ್ಟರ ಮಟ್ಟಿಗೆ ಸತ್ಯ.ಸಾಂಬಮೂರ್ತಿಯವರಿಗೂ ರತ್ನಕುಮಾರಿಗೂ ಇರುವ ಸಮ್ಮಂಧ ತಿಳಿಯುವದು ಅವಶ್ಯ. ಈ ಜವಾಬ್ದಾರಿ ಯನ್ನು ಯಾರು ಹೊರುತ್ತೀರಿ?"

"ನಾನು....ನಾನು...." ಅಶೋಕ ಮತ್ತು ಸುಷಮಾಇಬ್ಬರೂ ಒಮ್ಮೆಲೆ ನುಡಿದರು. ತನ್ನ ಸಂಗಡಿಗರ ಬಗ್ಗೆ ಆತನಿಗೆ ಹೆಮ್ಮೆ ಎನಿಸಿತು.ಕಾಫಿ ಗುಟುಕು ಗಂಟಲಲ್ಲಿರಿಸಿ ಆತ ಹೇಳಿದ.

"ಈ ಕೆಲಸ ಸುಷಮಾ ಮಾಡಲಿ...ಹೆಣ್ಣಿನಿಂದ ಈ ಕೆಲಸಕ್ಕೆ ಅನುಕೂಲ ಹೆಚ್ಚು...."

"ನಿಮ್ಮಿಷ್ಟ," ಅಶೋಕ ಚುಟುಕಾಗಿ ಉತ್ತರಿಸಿದ.

"ಅಷ್ಟೆಂದರೆ ಆಗದು....ನೀನಾಕೆಯ ಬೆಂಗಾವಲಾಗಿ ಹೋಗಬೇಕು."

"ಏಕೆ? ನೀವು ಹೋದರೆ ಹೆಚ್ಚು ಹಿತವಲ್ಲವೇ?"

"ಚೇಷ್ಟೆ ಸಾಕು....ನೀವಿಬ್ಬರೂ ಹೊರಡಿ....ಹಾಂ....ಸುಷಮಾ ನೀನು ಭಿಕ್ಷುಕಿಯಂತೆ ವೇಷ ಧರಿಸು. ಅಶೋಕ ನೀನು ಮಸಾಲೆಯ ಸಾಮಾನು ಮಾರುವವನಾಗಿ ಆಕೆ ಮೇಲೆ ಕಣ್ಣಿಡು ಅರ್ಥವಾಯಿತಲ್ಲ."

"ನೀವೀಗಾಗಲೇ ಒಂದು ಕಣ್ಣು ಇಟ್ಟಿರುವಾಗ........ನಾನು ಕಣ್ಣಿಡುವ ದೆಂದರೆ."

"ಶಟ್‌ಅಪ್ ಅಂಡ್ ಗೆಟ್‌ಔಟ್" ಹೇವುಂತ ಹುಸಿಕೋಪದಿಂದ ನುಡಿದ. .

"ಎಸ್ ಸರ್" ಎನ್ನುತ್ತ ಎರಡೂ ಹಿಮ್ಮಡಜೋಡಿಸಿ ಒಂದು ಭರ್ಜರಿ ಸೆಲ್ಯೂಟ್ ಅಶೋಕ ನೀಡಿದಾಗ ಸುಷಮಾ ಮತ್ತು ಮೇಜರ್ ಇಬ್ಬರೂ ನಕ್ಕರು.

ಬೆಳಗಿನ ಹತ್ತೂಕಾಲು....ಹರಿನಗರದ ಪ್ರತಿಯೊಂದು ಮನೆಯಲ್ಲಿಯೂ ಗಡಿಬಿಡಿ ಅವಸರ....ಮಕ್ಕಳನ್ನು ಶಾಲೆಗೆ ಕಳಿಸುವ, ಪತಿಗಳಿಗೆ ಊಟ ನೀಡುವ ಗಡಿಬಿಡಿ ಗೃಹಣಿಯರಿಗೆ.

"ಕಾಲೇಜಿಗೆ ಹೋಗುವ ಕನ್ಯೆಯರಿಗೆ ಮೇಕಪ್ ಚಪಲ....ಕೆಲಸಕ್ಕೆ ಹೋಗುವ ಗಂಡಸರಿಗೆ ಒಂದು ಬಗೆ ಸಿಡುಕು....ಹೆಂಡತಿ ಜೊತೆ ಹಾಯಾಗಿದ್ದ ಈಗ ಆರೆಂಟು ಗಂಟೆ ಹೊರಗೆ ಹೋಗಬೇಕಲ್ಲ. ಮನೆಯೊಳಗೆ ಆಫೀಸು ಇದ್ದರೆ ಎಷ್ಟು ಒಳ್ಳೆದಿತ್ತು? ಎಂದು ಯೋಚಿಸುತ್ತ ಪ್ಯಾಂಟಿಗೆ ತಕ್ಕ ಶರಟು ಶರಟಿಗೆ ತಕ್ಕ ಟೈ, ಟೈಗೆ ತಕ್ಕ ಶೂ, ಶೂಗೆ ತಕ್ಕ ಸಾಕ್ಸ್ ಸಿಗದಾಗಲು ಪ್ರಾಣ ಪ್ರಿಯ ಪತ್ನಿಯನ್ನು ಕೂಗಿ ಬೈಯುವದು....ಇವೆಲ್ಲಾ ಸೇರಿ ಒಂದು ಬಗೆಯಿಂದ ಗೊಂದಲದ ವಾತಾವರಣ ಇದೆಲ್ಲವನ್ನೂ ಕಿವಿಗೆ ಹಾಕಿಕೊಳ್ಳದೇ ಸ್ಥಿತಪ್ರಜ್ಞ ನಾಗಿ ಕುಳಿತ. ಕಾಲೇಜ ಹೀರೋ....ಇಂದು ಹೇಗೆ ಹುಡಿಗಿಯರನ್ನು ಕಾಡಿಸು ವದು....ಯಾರಿಗೆ ಲೆಟರ ಬರೆಯುವದು....ಯಾರ ಪರ್ಸ್ ಎಗರಿಸಿ ಆಯಿಸ್-- ಕ್ರೀಮು ತಿನ್ನುವದು....?ಮ್ಯಾಟಿನಿ ಇತ್ಯಾದಿ ಶೋಗೆ ಯಾರನ್ನು ಪಟಾಯಿಸು ವದು ಮುಂತಾದ ಯೋಜನೆ ತಲೆಯಲ್ಲಿ, ಕಣ್ಣೆದುರು ಸುಂದರ ಹುಡುಗಿಯ ಫೋಟೋ....ಕಣ್ಣುಗಳಲ್ಲಿ ನೀಗದ ಕನಸುಗಳು."

ಇಂಥ ವಾತಾವರಣದಲ್ಲೇ ಎಲ್ಲಿಡೆ ಕರ್ಕಶ ಧ್ವನಿ ಮೊಳಗಿತು.

"ಅಮ್ಮಾ....ಮ್ಮಾ....ಮ್ಮಾ....ಭಿಕ್ಷೆ ನೀಡಿ ತಾಯಿ....ಹದಿನಾರು ದಿನ ಗಳ ಜ್ವರದಿಂದ ಬಳಲ್ತಾ ಇದೇನೆ...ಬಿಸಿಬಿಸಿಅನ್ನ ನೀಡಿ ತಾಯಿ...ಅಮ್ಮಾ.... ಅಮ್ಮಾ...."

ಈ ಧ್ವನಿಯ ಹಿಂದೆಯೇ ಮತ್ತೊಂದುಗಲ್ಲಿಯಿಂದ ಗಟ್ಟಿಯಾಗಿ ಕೇಳಿತು ಗುಡುಗಿನಂಥ ಧ್ವನಿ....

"ಶಾಜೀರಿಗಿ, ಲವಂಗ, ದಾಲಚಿನ್ನಿ....ಹವೀಜ....ಪತ್ರಿ....ಮೊಗ್ಗು.... ಹೂವಾ ಬೇಕೇನ್ರೀ. "

ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದ ಹರಿನಗರದ ಜನ ಹೊಸಬಗೆಯ ಈ ಎರಡೂ ಧ್ವನಿ ಕೇಳಿ ಬೆಚ್ಚಿದರು... ಹೌದು....ಈ ಬಗೆಯ ಧನಿ ಅವರು ಕೇಳೇ ಇರಲಿಲ್ಲ....ಕುತೂಹಲ ಮೂಡಿ ಈ ಪರಿಯ ಧ್ವನಿ ಹೊರಡಿಸುವವರನ್ನು

ನೋಡಲು ಬಾಗಿಲು ಕಿಟಕಿ ತೆರೆದು ಇಣುಕ ತೊಡಗಿದರು.

"ಅಮ್ಮಾ....ತಾಯಿ....ಜ್ವರದಿಂದ ಸಾಯ್ತಾ ಇದೀನಿ....ಬಿಸಿಬಿಸಿ ಅನ್ನ ನೀಡಿ."

"ಗೃಹಿಣಿಯರ ಹುಬ್ಬುಗಳು ಗಂಟಿಕ್ಕಿದವು. ಏನು....? ಬಿಸಿಬಿಸಿ ಅನ್ನ ನೀಡಬೇಕೆ....? ಇದೆಂಥ ಭಿಕ್ಷೆ....ಬಿಸಿ ಬಿಸಿ ಅನ್ನ ಬೇಡುವಷ್ಟು ಧೈರ್ಯ ವಾದರೂ ಎಂತಹದು....?"

ಯಾರೀಕೆ? ಬುಬ್ಬುಣಗಿತ್ತಿ....ಯಾರೀಕೆ ಮಹಾರಾಣಿ....ಎಂದೆನ್ನುತ್ತ ತಮ್ಮ ತಮ್ಮ ಕೆಲಸಕಾರ್ಯ ಅಲ್ಲೇ ಬಿಟ್ಟು ಗೇಟಿಗೆ ಬಂದು ನಿಂತರು....ಎಡ ಹೆಗಲಿಗೆ ಹರಿದ ಜೋಳಿಗೆ ಬಲಗೈಯಲ್ಲಿ ಅಲ್ಯುಮಿನಿಯಂ ತಟ್ಟೆ,ಕಾಲಲ್ಲಿ ಹರಿದ ಚಪ್ಪಲಿಗಳು....ಕೆದರಿದ ಕೂದಲು ಅಲ್ಲಲ್ಲಿ ಹರಿದ ಸ್ವಲ್ಪ ಉತ್ತಮ ಸೀರೆ ಕುಪ್ಪುಸ."

ಎಲ್ಲ ಹೆಣ್ಣುಮಕ್ಕಳ ಕಣ್ಣುಗಳಲ್ಲಿ ಮತ್ಸರ ಕಿಡಿ ಕಾರಿತು.

"ಏನು ಧಾಡಿ ಇವಳಿಗೆ...........ಕೈಕಾಲು ಗಟ್ಟಿಮುಟ್ಟಾಗಿದ್ದು ಭಿಕ್ಷೆ ಬೇಡ್ತಿದಾಳೆ."

"ಪಾಪ! ಜ್ವರವಂತೆ!"

"ಜ್ವರವೇನು....? ಒಸುರಿ ಇರಬೇಕು."

"ಆದ್ರೆ ಬಿಸಿ ಅನ್ನ ಬೇಡ್ತಿದಾಳೆ....ಹೂಂ...."

ತಲೆಗೊಂದು ಮಾತನಾಡುತ್ತಿರುವಾಗಲೇ ಸುಮಮಾ ಭಿಕ್ಷುಕಿಯ ನಟನೆ ಯನ್ನು ಅತೀ ದಕ್ಷತೆಯಿಂದ ನೆರವೇರಿಸುತ್ತ ಮನೆ ಮನೆಗೂ ಬಂದು ಬೇಡಿ ದಳು. ಠಿಸ್....ಫುಸ್....ಮಾಡಿದ ಅವರೆಲ್ಲ "ಹೋಗೇ ಮುಂದೆ ಹೋಗು! ಬಿಸಿ ಅನ್ನ ಇಲ್ಲಿ ನಡೆ ಏನೂ ಇಲ್ಲ ಮುಂದೆ ಹೋಗು...."ಎಂದು ಥರಥರವಾಗಿ ಹಂಗಿ ಸುತ್ತ ಒಳ ನಡೆದರು ಹೆಣ್ಣುಮಕ್ಕಳು ಒಳಸೇರುವದನ್ನೇ ಕಾಯುತ್ತಿದ್ದ ಅವರ ಪತಿಯಂದಿರು ಗೇಟಿಗೆ ಧಾವಿಸಿದರು.

ಆಹಾ....ಎಂಥಾ ರೂಪ!

ಎಂಥಾ ಅಂಗಸೌಷ್ಟವ!!

ಭಿಕ್ಷುಕಿಯಾದರೇನಾಯಿತು? ಎಂಥಾ ಸೌಂದರ್ಯ....!!!

ಮನದಲ್ಲೇ ತಮ್ಮ ತಮ್ಮ ಹೆಂಡಂದಿರನ್ನು ಶಪಿಸುತ್ತ....ಜೇಬಿಗೆ ಕೈ ಹಾಕಿ ಎಂಟಾಣೆ ಒಂದು ರೂಪಾಯಿ ನಾಲ್ಕಾಣೆ ಕೈಗೆ ಸಿಕ್ಕ ನಾಣ್ಯ ಎಸೆದು ಹಲ್ಲುಗಿಂಜಿದರು ಅವರೆಲ್ಲರಿಗೂ ಮೋಹಕವಾಗಿ ನಮಸ್ಕರಿಸುತ್ತ ಆಕೆ ಮುನ್ನಡೆ ದಾಗ ಓಣಿಯ ತಿರುವುಗಳಲ್ಲೇ ಮರೆಯಾಗುವವರೆಗೆ ನೋಡುತ್ತಿದ್ದು, ನಂತರ

ತಣ್ಣನೆಯ ಉಸಿರು ಬಿಟ್ಟು ತಮ್ಮ ಆಫೀಸಿನತ್ತ ಧಾವಿಸಿದರು ಗಂಡಸರೆಲ್ಲ....

ಅದಾದ ಮರುಕ್ಷಣವೇ....ಮಸಾಲೆ....ಮಸಾಲೆ ಸಾಮಾನ್ರೀ ಬಾಯಿ.... ಜೀರಿಗೆ, ಸಾಸ್ವಿ..........ಶಾಜೀರಿಗಿ,ದಾಲಚಿನ್ನಿ, ಪತ್ರಿ....ಬೇಕೇನ್ರೀ....ಎಂದ ಕಂಚಿನ ಕಂಠ....ಅಡಿಗೆ ಮನೆ ಸೇರಿದ ಮಹಿಳೆಯರು ಹೊರಗೆ....ಮಸಾಲೆ ಸಾಮಾನು ಅಂದ್ರೆ ಕೇಳಬೇಕೆ? ಮಸಾಲೆ ಯಾರಿಗೆ ಬೇಡ....

"ಅವ್ವಯ್ಯ....ಎಂಥಾ ಚೆಂದ ಅದಾನ?"

"ಮೈ ನೋಡು....ಕೈ ನೋಡು....ಎಷ್ಟು ಗಟ್ಟಿಮುಟ್ಟು ಅದಾನ?"

"ಮೂಗು ಕಣ್ಣು ಎಲ್ಲಾ ತದ್ರೂಪ ಕಾಮಣ್ಣ."

ಮಹಿಳೆಯರು ಅವನನ್ನು ಹಸಿಹಸಿಯಾಗಿ ತಿನ್ನುವಂತೆ ನೋಡಿದರು. ಆತ ಕೇಳಿದ್ದಕ್ಕೆ ಕೇಳಿದಷ್ಟು ಕೊಟ್ಟು ಕೊಟ್ಟಿದ್ದನ್ನು ಇಸಿದುಕೊಂಡರು. ಹಣ ಎಣಿಸಿ ಬಕ್ಕಣಕ್ಕೆ ಸೇರಿಸಿ ಆತ ಮುಂದೆ ನಡೆದಾಗ ಅವನೊಂದಿಗೆ ತಮ್ಮ ಪತಿ ದೇವರನ್ನು ಹೋಲಿಸಿ ಕರಕರ ಹಲ್ಲು ಕಡಿದು ರಪ್ ರಪ್ ಬಾಗಿಲು ಮುಚ್ಚಿ ಕೊಂಡರು....ಆ ಸಪ್ಪಳ ಅವಳ ಪತಿ ಮಹರಾಯರು ಕೇಳಿದ್ದರೆ ಎದೆಗುಂಡಿಗೆ ಡಬ್ ಅನ್ನುತ್ತಿತ್ತೇನೋ....

ಸುಮಮಾ ಆರನೇ ಕ್ರಾಸಿಗೆ ಬಂದಳು. ಎಡಬಲಕ್ಕೆ ನೋಡಿದಳು. ಇನ್ನೂರಾ ಅರವತ್ತು, ಅರವತ್ತೊಂದು....ಹಾಗಾದರೆ ಇನ್ನೂರಾ ಎಪ್ಪತ್ತು ತುಂಬಾ ದೂರದಲ್ಲಿಲ್ಲ. ತಾನು ಗುರಿಗೆ ಸಮೀಪ ಬಂದಿರುವೆ ಎನಿಸಿ, ಜಾಗ್ರತ ಳಾದಳು ಕೀರಲು ಕಂಠದಲ್ಲಿ ಚೀರುತ್ತ ಮುನ್ನಡೆಯತೊಡಗಿದಳು.

"ತಾಯೀ....ಯೀ........ಅಮ್ಮಾ....ಮ್ಮಾ....ಆ....ಆ....ಜ್ವರ ಬಂದೈತೆ ಬಿಸಿಬಿಸಿ ಅನ್ನ ನೀಡಿ....ಪುಣ್ಯ....ಬಂದೀತು...."

ಮೂಗು ಮುರಿದವರು ಹಲವರು, ಬೈದವರು ಕೆಲವರು....ಎಲ್ಲ ಸಹಿಸಿ ಕೊಂಡು ಮುನ್ನಡೆದಳು. ಇನ್ನೂರಾ ಅರವತ್ತೊಂಬತ್ತು ಬೀಗಹಾಕಿದ ಮನೆ ಮುಂದಿನದೇ ಇನ್ನೂರಾ ಎಪ್ಪತ್ತು ಹಾಗೇ ಮುಂದೆ ದೃಷ್ಟಿ ಬೀರಿದಳು. ಅದರ ಮುಂದಿನ ಮನೆಗೂ ಬೀಗ ಮಧ್ಯ ಇರುವದೊಂದೇ ಮನೆ. ಇನ್ನೂರಾ ಎಪ್ಪತ್ತು ರತ್ನಕುಮಾರಿಯ ಮನೆ....ಮಾಜಿ ಸಚಿವ ಸಾಂಬಮೂರ್ತಿಗಳ ಗುಪ್ತಗೃಹ.... ಧ್ವನಿಯನ್ನು ಏರಿಸಿ ಕರುಣೆ ಬರುವಂತೆ ಕೂಗಿದಳು.

"ಅಮ್ಮಾ....ಜ್ವರ ಬಂದೈತೆ ತಾಯಿ....ಬಿಸಿ ಅನ್ನ ಸಾರು ನೀಡಿ ..."

"ಅವಳ ಕಣ್ಣುಗಳಲ್ಲಿ ಮಿಂಚು ಸುಳಿಯಿತು. ರತ್ನಕುಮಾರಿ ಮನೆ ಬಾಗಿಲು ತೆರೆಯಿತು. ಅರೆ ಇದೇನು....? ಬಾಗಿಲಲ್ಲಿ ಕಂಡಾಕೆ ರತ್ನಕುಮಾರಿ ಅಲ್ಲ....ನಲವತ್ತು ನಲವತ್ತೈದು ವರ್ಷಗಳ ಆರೋಗ್ಯಕಾಯದ ಮಧ್ಯಮ

ವಯಸ್ಸಿನಾತ....ತಲೆತುಂಬ ಕಪ್ಪು ಕೂದಲು....ಬಹುಶಃ ಬಣ್ಣ ಹೊಡೆಸಿರ ಬೇಕು. ಮೀಸೆ ಇಲ್ಲವೇ ಇಲ್ಲ! ಎಲ್ಲಾ ಬೋಳು. ದಪ್ಪವಾದ ಕಪ್ಪುಹುಬ್ಬು.... ಬಿಗಿದ ತುಟಿ....ಮಿಂಚು ಕಣ್ಣುಗಳು....ಬಿಳಿಲುಂಗಿ......ಮೇಲೆ ತೋಳಿಲ್ಲದ ಬನಿಯನ್."

"ಏಯ್ ಬಾ ಇಲ್ಲಿ" ಆತ ಕೂಗಿದ....ಸುಷಮಾ ಬೆಚ್ಚಿದಳು .. ಇಂಥ ಧ್ವನಿ ಬೇರೆ ಎಲ್ಲೋ ಕೇಳಿದ ನೆನಪು ಥಟ್ಟನೆ ನೆನಪಾಯಿತು. ಕನ್ನಡ ಚಿತ್ರಗಳ ಖಳನಾಯಕ ಸುಂದರಕೃಷ್ಣ ಅರಸ ಕಂಚಿನ ಕಂಠ....ಸರಕ್ಕನೇ ಅವನತ್ತ ನೋಡಿದಳು ಅಲ್ಲ....ಅಲ್ಲ....ಆತ ಸುಂದರಕೃಷ್ಣ ಅರಸ ಅಲ್ಲ....ಧ್ವನಿ ಮಾತ್ರ ಹಾಗೇ ಇತ್ತು.

"ಏನು ಯಜಮಾನ್ರೇ."

"ಬಿಸಿಬಿಸಿ ಅನ್ನ ಇಲ್ಲ.... ಚಪಾತಿ ಪಲ್ಯ ಇದೆ ಬೇಕಾ?"

ಸುಷಮಾ ಬೇಕಂತಲೇ ತುಟಿಗಳ ಮೇಲೆ ನಾಲಿಗೆ ಆಡಿಸಿದಳು.

"ಪುಣ್ಯ ಬರುತ್ತೆ ಕೊಡಿ ಸಾವಕಾರ್ರೆ,"

"ಹಾಗಾದ್ರೆ ಹಿತ್ತಲ ಬಾಗಿಲಿಗೆ ಬಾ."

ಅವಳಿಗೂ ಅದೇ ಬೇಕಾಗಿತ್ತು. ಏನಾದರೂ ಮಾಡಿ ಮನೆಯೊಳಗೆ ಪ್ರವೇಶ ಪಡೆಯಬೇಕಾಗಿತ್ತು ……………..ಆ ಅವಕಾಶ ತಾನಾಗಿ ಸಿಕ್ಕರೆ ಬಿಡಲಿಕ್ಕಾದೀತೇ?

"ಆಯ್ತು ಸೋಮಿ?"

ಆತ ಮುಂದಿನ ಬಾಗಿಲು ಮುಚ್ಚಿಕೊಂಡು ಒಳಗೆ ಹೋದ. ಸುಷಮಾ ಹಿತ್ತಲ ಬಾಗಿಲಿಗೆ ಬಂದಳು. ಬಾಗಿಲು ತೆರೆದಿತ್ತು. ಅತ್ತಿತ್ತ ನೋಡಿದಳು, ಎಡ ಬಲಕ್ಕೆ ಬೀಗಹಾಕಿದ ಮನೆಗಳು....ನರಪಿಳ್ಳೆ ಸಹ ಇರಲಿಲ್ಲ. ಸರಕ್ಕನೇ ಒಳಗೆ ನಡೆದಳು. ಎದುರಿಗೆ ಪಾತ್ರೆಗಳು ತಟ್ಟೆ," ಐದಾರು ಚಪಾತಿ, ಪಲ್ಯ.

ಹಿಂದೊಂದು ನೆರಳು ಸರಿದಂತಾಯಿತು ಮಿಂಚಿನ ವೇಗದಲ್ಲಿಹೊರಳಿದಳು. ಆದರೂ ತಡವಾಗಿತ್ತು....ಹಿತ್ತಲುಬಾಗಿಲು ಮುಚ್ಚಿ ಯಜಮಾನ ಬೋಲ್ಟು ಏರಿಸಿ ಹೊರಳಿದ.

ಅವನ ದೃಷ್ಟಿ ಕಂಡು ಸುಷಮಾ ಭೂಮಿಗಿಳಿದು ಹೋದಳು. ಹಸಿಹಸಿ ಯಾಗಿ ತಿನ್ನುವ ಕ್ರೂರ ಕಾಮುಕ ನೋಟ ಅವಳ ಕೈಯಲ್ಲಿರುವ ಚಪಾತಿ ಪಲ್ಯದ ತಟ್ಟೆ ಹಾಗೇ ಜಾರಿ ಕೆಳಗೆ ಬಿತ್ತು.

* * * *

**ಸು**ಷಮಾ ಎರಡನೇ ತುದಿಯಲ್ಲಿ ಮರೆಯಾಗುವದನ್ನು ಕಂಡ ಅಶೋಕ

ಅವಳಿಗೆ ಬೆಂಗಾವಲಾಗುವ ಉದ್ದೇಶದಿಂದ ಮಸಾಲೆ ಸಾಮಾನುಗಳ ಗಂಟನ್ನು ಹೆಗಲಿಗೇರಿಸಿಕೊಂಡು ಕಂಚಿನ ಕಂಠದಲ್ಲಿ ಕೂಗುತ್ತ ಮುನ್ನಡೆದ...."ಮಸಾಲೆ ಸಾಮಾನ್ರೀ ಬಾಯರ...ಜೀರಿಗಿ, ಶಾಜೀರಿಗೆ, ಮೆಣಸು, ಪತ್ರಿ, ದಾಲಚಿನ್ನಿ ಲವಂಗ...ಬೇಕೇನ್ರಿ..."

"ಏಯ್ ಮಸಾಲೀ...."

ಕೋಗಿಲೆ ಉಲಿದಂಥ ಕಂಠ ಕರೆಯಿತು. ಸುಷಮಾಳನ್ನು ಹಿಂಬಾಲಿಸ ಬೇಕಾಗಿದ್ದರಿಂದ ಮನಸ್ಸಿದ್ದರೂ ಅತ್ತ ಲಕ್ಷ್ಯ ಕೊಡದೆ ಸರಸರನೆ ಮುನ್ನಡೆದ. ಮತ್ತೆ ಉಲಿಯಿತು ಕೋಗಿಲೆ: "ಏಯ್ ಮಸಾಲೇ....ಬಾಯಿಲ್ಲಿ..."

ಅಶೋಕನ ಕಾಲುಗಳಿಗೆ ಮೊಳೆ ಜಡಿದಂತಾಯಿತು. ಮುಂದೆ ಹೆಜ್ಜೆ ಕಿತ್ತಲೇ ಇಲ್ಲ. ಹೊಗಳಿ ನಿಂತು ಧ್ವನಿ ಬಂದತ್ತ ದೃಷ್ಟಿಸಿದ...ದೃಷ್ಟಿ ಅಲ್ಲೇ ನೆಟ್ಟಿತು...

ಅವಳ ಕಂಠ ಕೋಗಿಲೆಯದಾಗಿದ್ದರೂ ಆಕೆ ಕೋಗಿಲೆಯಂತಿರಲಿಲ್ಲ. ಮಂಜಿನಲ್ಲಿ ಮಿಂದ ಪುಷ್ಪದಂತೆ ಅವಳು ಕಂಗೊಳಿಸುತ್ತಿದ್ದಳು...ಅತೀ ಹೆಚ್ಚೆಂದರೆ ಹದಿನೆಂಟು ಹತ್ತೊಂಭತ್ತರಏರುಜವ್ವನೆಯವಳು ಕಪ್ಪು ಬಟ್ಟಲು ಕಂಗಳು. ರಾತ್ರಿಯ ಕತ್ತಲೆಗಿಂತಲೂ ಕಪ್ಪಾದ ನೀಳಕೇಶರಾಶಿ....ತೊಟ್ಟಿದ್ದು ಸಾಮಾನ್ಯ ದರ್ಜೆಯ ಉಡುಪಾಗಿದ್ದರೂ ಅವಳು ಅಸಾಧಾರಣ ರೂಪವತಿ ಯಾಗಿದ್ದಳು...ಅಶೋಕ ಅವಳಷ್ಟು ರೂಪವತಿಯನ್ನು ಕಂಡೇ ಇರಲಿಲ್ಲ.... ಭರಭರನೆ ಅವಳತ್ತ ಹೆಜ್ಜೆ ಹಾಕಿದವ ಗಕ್ ಎಂದು ನಿಂತುಬಿಟ್ಟ.......ಕೊರಳ ಲ್ಲಿಯ ಮಂಗಳಸೂತ್ರ ಕಣ್ಣಿಗೆ ಬಿದ್ದಾಗ ಆತ ಕಲ್ಲಾದ ಅಲ್ಲೇ...

"ನಿನ್ನನ್ನೇ ಕರೆದದ್ದು....ಬಾ..." ಆಕೆ ಮೃದುವಾಗಿ ಅಷ್ಟೇ ಮೋಹಕ ವಾಗಿ ಕರೆದಳು.

ಮಂತ್ರಮುಗ್ಧನಾದ ಆತ ಒಂದೊಂದೇ ಹೆಜ್ಜೆ ಇಡುತ್ತ ಬಾಗಿಲ ಬಳಿ ಒಂದು ನಿಂತ....

"ಮಸಾಲೆ ಸಾಮಾನು ತೋರಿಸು." ಆಕೆ ತುಂಟ ನಗೆ ಸೂಸುತ್ತಲೇ ಕೇಳಿದಳು.

ಅಶೋಕ ಅವಳ ದೃಷ್ಟಿಯಲ್ಲಿದ್ದ ತೃಷೆ ಗುರುತಿಸಿದ, ಅವಳ ಹಸಿಹಸಿ ಯಾದ ತುಟಿಗಳನ್ನು ಗುರುತಿಸಿದ. ಏರಿಳಿಯುತ್ತಿದ್ದ ಎದೆಯ ಭಾವ ಅರಿತ... ಮುಂದೇನೋ ಅನಾಹುತ ಕಾದಿದೆ, ಬೇಗ ಇಲ್ಲಿಂದ ಜಾಗ ಖಾಲಿ ಮಾಡ ಬೇಕೆಂದು ಯೋಚಿಸುತ್ತಿದ್ದಂತೆ ಆಕೆ ನುಡಿದಳು: "ಹಾಂ...ನೀನಿಲ್ಲಿ ಬಂದು ಕೂಡು ಸೋಫಾದ ಮೇಲೆ ನಾನೀಗಲೆ ಬಂದೆ..."

ಅಶೋಕ ಅತ್ತಿತ್ತ ನೋಡುತ್ತ ಜಾಗ್ರತವಾಗಿ ಸೋಫಾದ ಬಳಿ ಬಂದ. ಒಳ ಕೋಣೆಯ ಬಳಿ ಸದ್ದಾಯಿತು...ಮಿಂಚಿನ ವೇಗದಲ್ಲಿ ಆತ ಹೊರಳಿದ. ಕಣ್ಣುಗಳು ಒಡೆಯುವಂತೆ ಅರಳಿದವು. ಅರ್ಧ ಬಾಗಿಲು ಮುಚ್ಚಿದ ಕೋಣೆ ಮಧ್ಯದ ಸೀನಲ್ಲಿ ಆಕೆ ಬಟ್ಟೆ ಬದಲಿಸುವದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವನ ದೇಹ ಬೆವರಿನಿಂದ ತೊಪ್ಪನೆ ತೊಯ್ದು ಹೋಯಿತು.

ಅಷ್ಟರಲ್ಲಿ ಹೊರಗಡೆ ಗೇಟಿನ ಸದ್ದಾಯಿತು. ಮೈಮೇಲೆ ಟಾವೆಲು ಹಾಕಿಕೊಂಡು ಬಾಗಿಲು ತೆರೆದು ಹೊರಗೋಡಿ ಬಂದಳು. ಆ ರಮಣಿ.... ಸುಮಾರು ಐವತ್ತು ಐವತ್ತೈದು ವರ್ಷಗಳ ರೋಗಿಷ್ಟನೊಬ್ಬ ಕೆಮ್ಮುತ್ತ ಒಳಬಂದ. ಗಾಬರಿಯಿಂದ ಆಕೆ, "ಏಕೆ? ಏನಾಯ್ತು?" ಎಂದು ಕೇಳಿದಳು.

"ಆಫೀಸಿನಲ್ಲಿ ಕೆಲಸ ಮಾಡಲಾಗುತ್ತಿಲ್ಲ........ಅರ್ಧ ದಿನ ರಜೆ ಹಾಕಿ ಬಂದೆ..."

ಹಿ.....ಹಿ.....ಹಿ....ಎಂದು ಅಸಹ್ಯವಾಗಿ ನಕ್ಕ ಆತ ಅವಳನ್ನು ತಬ್ಬಿಕೊಳ್ಳಲು ಮುಂದಾದ.

ಅಶೋಕ ಕಣ್ಣಿಗೆ ಬೀಳುತ್ತಲೂ ಬೆಕ್ಕಿನಂತೆ ದುರುಗುಟ್ಟಿ ಕೇಳಿದ: "ಯಾರೀತ? ಇಲ್ಲೇಕೆ ಬಂದಿದಾನೆ."

"ಮಸಾಲೆ ಮಾರುವವ....ಮಸಾಲೆ ಸಾಮಾನು ಬೇಕಾಗಿತ್ತು."

"ಒಳಗಡೆ ಇವನದೇನು ಕೆಲಸ ಹೊರಹಾಕು ಹೂಂ..."

ಮೂಡ್ ಹಾಳಾದುದಕ್ಕೆ ದುಮುದುಮು ಉರಿಯುತ್ತ ಆತ ಒಳನಡೆದ. ಆಕೆ ಅಶೋಕನೆಡೆ ಪುಳಕ ತುಂಬಿದ ಅತೃಪ್ತಿ ನೋಟ ಬೀರಿ ಗೋಗರೆದಳು.

"ಪ್ಲೀಜ್...ಈಗ ನೀನು ಹೋಗು....ಸಂಜೆ ನಾಲ್ಕಕ್ಕೆ ಬಾ....ಆಗ ಈ ಮುದಿಗೂಬೆ ಇರದು."

ಅಶೋಕನಿಗೂ ಅಯ್ಯೋ ಪಾಪ! ಎನಿಸಿತು. ಮಂಗನ ಕೈಯಲ್ಲಿಯ ಮಾಣಿಕ್ಯದಂತೆ ಈ ಹದಿಹರೆಯದ ಸುಂದರಿ ಆ ಮುದಿಯನ ಕೈಯಲ್ಲಿ ಸಿಲುಕಿಕೊಂಡಿದ್ದಳು. ಎಂಥ ಅಸಹಾಯಕ ಪರಿಸ್ಥಿತಿ...? ಮನದಲ್ಲೇ ಅವಳ ದುರ್ದೈವಕ್ಕೆ ಹಳಿದುಕೊಳ್ಳುತ್ತ ಹೊರಬಂದ ಅಶೋಕ. .ಅವನ ಹಿಂದೆ ಬಾಗಿಲು ಮುಚ್ಚಿದ್ದು ಕೇಳಿಸಿತು...ಅಶೋಕ ಕೂಗುತ್ತ ಹರಿನಗರದ ಆರನೇ ಮೇನ್ ಮೂರನೇ ಕ್ರಾಸಿಗೆ ಬಂದ...ಈಗಾತತನ್ನ ಗುರಿಯ ಹತ್ತಿರ ಬಂದಿದ್ದ. ಸುಷಮಾ ಇಲ್ಲೆಲ್ಲೋ ಇರಬೇಕು. ಮೊದಲು ಆಕೆ ಎಲ್ಲಿದ್ದಾಳೆ, ಎಂಬುದನ್ನು ಕಂಡು ಹಿಡಿಯಬೇಕಾಗಿತ್ತು. ಜೋರಾಗಿ ಕೂಗಿದ, "ಮಸಾಲೆ ಸಾಮಾನ್ರೀ ಬಾಯಾರ ಮಸಾಲೆ ಸಾಮಾನು..."

ಒಂದು ಕ್ಷಣ ತಡೆದ...ಪ್ರತ್ಯುತ್ತರವಾಗಿ ಸುಷಮಾಳ ಭಿಕ್ಷೆ ಬೇಡುವ ಧ್ವನಿ ಕೇಳಿ ಬರಲಿಲ್ಲ. ಅವನ ಹುಬ್ಬುಗಳು ಗಂಟಾದವು. ಹದ್ದಿನ ಅತ್ತಿತ್ತ ದೃಷ್ಟಿ ಬೀರುತ್ತ ಮುನ್ನಡೆದ. "ಮಸಾಲೆ ಸಾಮಾನ್ರೀ ಬಾಯಾರ..."

ಈ ಮೊದಲು ಮಾತನಾಡಿಕೊಂಡಂತೆ ಪ್ರತಿಯಾಗಿ ಸುಷಮಾಳ ಭಿಕ್ಷೆ ಬೇಡುವ ಕಂಠ ಕೇಳಿಬರದಾಗಲೂ ಎಲ್ಲೋ ಏನೋ ತಪ್ಪಿದೆ ಎಂದುಕೊಂಡ ಅಶೋಕ. ಇಬ್ಬರೂ ಬೇರೆ ಬೇರೆಯಾಗುವ ಮುನ್ನ ಸಂಪರ್ಕವಿಟ್ಟುಕೊಳ್ಳಲು ಮಾತನಾಡಿಕೊಂಡಿದ್ದರು. ಒಬ್ಬರಾದ ಮೇಲೊಬ್ಬರು ಪ್ರತ್ಯುತ್ತರವಾಗಿ ಕೂಗುತ್ತಿರಬೇಕು. ಇದರಿಂದಾಗಿ ಅವರಿದ್ದ ಜಾಗೆಯ ಬಗ್ಗೆ ತಿಳಿಯುತ್ತದೆ... ಬೆಂಗಾವಲಾಗಿರಲು ಅನುಕೂಲವಾಗುತ್ತದೆ ಕಷ್ಟದ ಸಮಯದಲ್ಲಿ ಸಹಾಯಕ್ಕೆ ಧಾವಿಸಬಹುದು ಎಂದು ಆದರೆ ಈಗ.. ?

ಸುಷಮಾಳ ಪ್ರತ್ಯುತ್ತರ ಬರುತ್ತಿಲ್ಲ. ಅಂದ ಮೇಲೆ ಆಕೆ ತೊಂದರೆಯಲ್ಲಿ ಸಿಲುಕಿಕೊಂಡಿರಲು ಸಾಕು. ಆಕೆ ಎಲ್ಲಿರಬಹುದು? ಅಶೋಕ ಮೈ ಎಲ್ಲಾ ಕಣ್ಣಾಗಿ ಅವಳನ್ನು ಹುಡುಕಲು ಮುಂದಾದ. ಮೊದಲೊಂದು ಕ್ಷಣ ತಾನು ನಿಂತು ಪರೀಕ್ಷಿಸಿದ.

ಹರಿನಗರದ ಆರನೇ ಮೇನ್ ಎಡಬಲಕ್ಕೂ ಅಂತರಬಿಟ್ಟು ಸಾಲಾಗಿ ಕಟ್ಟಿದ ಸುಂದರ ಆರ್.ಸಿ.ಸಿ. ಮನೆಗಳು ಪ್ರತಿ ಮನೆಗೂ ಕಂಪೌಂಡ್ ಗೋಡೆ. ತೆಂಗಿನ ಮರಗಳು, ಮಾವು, ಸಂಪಿಗೆ ಮರಗಳು, ಹೆಚ್ಚು ಕಡಿಮೆ ಎಲ್ಲಾ ಮನೆ ಬಾಗಿಲುಗಳು ಮುಚ್ಚಲ್ಪಟ್ಟಿದ್ದವು. ಗಂಡಸರನ್ನೂ ಆಫೀಸಿಗೂ ಮಕ್ಕಳನ್ನು ಸ್ಕೂಲಿಗೂ, ಅಟ್ಟಿದ ಮನೆಯೊಡತಿ ಹಾಯಾಗಿ ಉಸಿರುಬಿಟ್ಟು ರೂಮಿನಲ್ಲಿ ಗುಣಗುಡುತ್ತ ಸಿಂಗರಿಸಿಕೊಳ್ಳುತ್ತಿರಬೇಕು. ಅಥವಾ ಸ್ನಾನ ಮಾಡುತ್ತಿರಬೇಕು. ಇಲ್ಲ ಹಾಸಿಗೆಯ ಮೇಲೊರಗಿ ಶೃಂಗಾರ ರಸಭರಿತವಾದ ಕಾದಂಬರಿಯಲ್ಲಿ ಮುಖ ಹುದುಗಿಸಿರಬೇಕು. ಅದೂ ಇಲ್ಲಾಂದ್ರೆ ಕನ್ನಡಿಯ ಮುಂದೆ ಕುಳಿತು ತನ್ನ ತಾನೇ ಅವಲೋಕಿಸಿಕೊಳ್ಳುತ್ತಿರಬೇಕು. ಮುಚ್ಚಿದ ಬಾಗಿಲು ನೋಡುತ್ತ ಹಾಗೇ ಮುಂದೆ ಬಂದ. ಅವನ ದೃಷ್ಟಿ. ನಂಬರುಗಳ ಮೇಲೆ ಕೇಂದ್ರೀಕೃತವಾಗಿತ್ತು. ಇನ್ನೂರಾ ಅರವತ್ತಾರು....ಅರವತ್ತೇಳು.... ಅರವತ್ತೆಂಟು...ಅರವತ್ತೊಂಬತ್ತು. ಹಾಂ...ಇನ್ನೂರಾ ಎಪ್ಪತ್ತು...ಅವನಿಗೆ ಬೇಕಾದ ಬೇಟೆ, ಮನೆ...ಮಾಜಿ ಮಿಸ್ ಇಂಡಿಯಾ ರತ್ನಕುಮಾರಿಯ ಮನೆ. ಆ ಮನೆಗೆ ಬೀಗ ಹಾಕಿದೆ ಅವನ ಹುಬ್ಬುಗಳು ಗಂಟಿಕ್ಕಿದವು.ಪಕ್ಕಕ್ಕೆ ದೃಷ್ಟಿ ಹರಿಸಿದ ಇನ್ನೂರಾ ಎಪ್ಪತ್ತೊಂದು ಮಾತ್ರ ಬೀಗ ಹಾಕಿಲ್ಲ.ಅರವತ್ತೊಂಭತ್ತು ಹಾಗೂ ಎಪ್ಪತ್ತು ಎರಡಕ್ಕೂ ಬೀಗ...! ಹಾಗಾದರೆ ಸುಷಮಾ ಎಲ್ಲಿ?

ಇನ್ನೂರಾ ಎಪ್ಪತ್ತರ ಮುಂದೆ ನಿಂತು ಜೋರಾಗಿ ಕೂಗಿದ, "ಶಾಜೀರಗಿ ಲವಂಗ, ದಾಲಚಿನ್ನಿ, ಮೆಣಸು...ಮಸಾಲೆ ಸಾಮಾನ್ರೀ...ಬಾಯಾರ..." ಎಲ್ಲಿಂದಲೂ ಉತ್ತರ ಬರಲಿಲ್ಲ. ಮತ್ತೆ ಎರಡು ಮೂರು ಬಾರಿ ಕೂಗಿದರೂ ನಿಶ್ಚಿತ ಉತ್ತರ ಬರಲಿಲ್ಲ. ಅವನ ಮನ ಅಳುಕಿತು. ಖಂಡಿತವಾಗಿ ಸುಷಮಾ ಯಾವುದೋ ಅಪಾಯದಲ್ಲಿ ಸಿಲುಕಿಕೊಂಡಿದ್ದಾಳೆ. ಎಂದು ಖಾತ್ರಿಯಾಯಿತು ಮುಂದೇನು ಮಾಡುವದೆಂದು ಯೋಚಿಸುತ್ತಿರುವಂತೆ ಇನ್ನೂರಾಎಪ್ಪತ್ತೊಂದನೆ ಮನೆ ಬಾಗಿಲು ತೆರೆಯಿತು.

"ಅಶೋಕ ಅತ್ತ ಹೊರಳಿದ ಮರುಕ್ಷಣನೇ ನಿರಾಶೆಯ ಉಸಿರೊಂದನ್ನು ಬಿಟ್ಟ. ಬಾಗಿಲಲ್ಲಿ ಅರವತ್ತು ಅರವತ್ತೈದು ವರ್ಷಗಳ ವೃದ್ಧೆಯೊಬ್ಬಳು ಕಾಣಿಸಿಕೊಂಡಳು, ಹುಬ್ಬಿಗೆ ಕೈ ಇಟ್ಟು ಅತ್ತಿತ್ತ ನೋಡಿ ಅಶೋಕ ಕಣ್ಣಿಗೆ ಬೀಳುತ್ತಲು ನಡಗುವ ಕಂಠದಲ್ಲಿ ಕರೆದಳು," ಏಯ್...ಮಸಾಲೀ........ಬಾ ಇಲ್ಲಿ..."

ಮನಸಿರದಿದ್ದರೂ ಸುಷಮಾಳ ಬಗ್ಗೆ ಅಜ್ಜಿಯಿಂದ ವಿಷಯ ತಿಳಿಯ ಬಹುದೆಂದುಕೊಂಡು, "ಬಂದೆ...ಇರೀ ಅಜ್ಜಿ..." ಎಂದ...ಮುದುಕಿಗೆ ರೇಗಿತು.

"ಅಜ್ಜಿಯಂತೆ ಅಜ್ಜಿ. ನಾ ಏಕೆ ನಿನ್ನ ಅಜ್ಜಿ ಆದೇನು? ನನಗಿನ್ನೂ..." ಮುದುಕಿಯ ಮಾತಿಗೆ ನಗೆ ಬಂತು. ತಡೆದುಕೊಂಡು ಜೋಳಿಗೆ ಹೆಗಲಿಗೇರಿಸಿ ನಡೆದ. "ಒಳಗೆ ಬಾ...ಬಿಸಿಲಿಗೆ ನನ್ನ ಕಣ್ಣು ಕಾಣೂದಿಲ್ಲ."

"ಅರೆ. ನಿಮಗಿನ್ನೂ ವಯಸ್ಸೇ ಆಗಿಲ್ಲ ಅಂದ್ರಿ. ಈಗ ಕಣ್ಣು ಕಾಣೂ ದಿಲ್ಲ ಅಂತೀರಲ್ಲ."

"ಬಾಯಿ ಮುಚ್ಚಿಕೊಂಡು ವ್ಯಾಪಾರ ಮಾಡು...ಎಷ್ಟು ಬೇಕೋ ಅಷ್ಟೇ ಮಾತು ಹಾಂ...ಭಾ."

ಮುದುಕಿ ಜೋರಾಗಿದ್ದಾಳೆ ಎಂದುಕೊಂಡ. ಒಳಗೆ ಹೋಗಬೇಕೋ ಬೇಡವೋ ಎಂದು ಯೋಚಿಸಿದ...ಹಿಂದಿನ ಗಲ್ಲಿಯಲ್ಲಾದ ಅನುಭವ ನೆನಪಿಗೆ ಬಂದಿತು. ಈಕೆಯೇನೂ ಹರೆಯದ ಹುಡುಗಿಯಲ್ಲ. ಚಿಂತಿಸುವ ಅವಶ್ಯಕತೆ ಇಲ್ಲ. ಎಂದು ನಿರ್ಧರಿಸಿ ಒಳಗೆ ಕಾಲಿಟ್ಟ. ಅಚ್ಚರಿಯಿಂದ ಕಣ್ಣರಳಿಸಿದ....ಒಳಗಿನ ಕೋಣೆಯಲ್ಲಿ ಒಂದೂ ಕುರ್ಚಿ ಅಥವಾ ಟೀಪಾಯ್ ಇರಲಿಲ್ಲ. ನೆಲದ ತುಂಬೆಲ್ಲ ಹಾಸಿದ ಮೆತ್ತನೆಯ ಕೆಂಪು ಕಂಬಳಿ. ಗೋಡೆಗೆ ಸಾಲಾಗಿಟ್ಟ ಬಿಳಿ ಬಣ್ಣದ ದಿಂಬು ಹಾಗೂ ಲೋಡುಗಳು ತಾನೆಲ್ಲೋ ಸಂಗೀತ ಕಾರ್ಯ ಕ್ರಮಕ್ಕೆ ಬಂದಂತೆನಿಸಿತು. ಒಳಗಿನ ಬಾಗಿಲೆಡೆ ಮುಖ ಮಾಡಿ ಕೇಳಿದ, "ಅಮ್ಮಾವ್ರು...ಏನೇನೇ ಬೇಕ ಹೇಳ್ರಿ..."

ಮುಸಿ ಮುಸಿ ನಗುತ್ತ ಬಂದ ಅದೇ ವೃದ್ಧೆ ಮುಂಬಾಲಿಗೆ ಅಡ್ಡಲಾಗಿ ನಿಂತು ಹೇಳಿದಳು.

"ನೀನೂ ಭಾಳ ಚಾಲಾಕ ಇದ್ದೀ ಏಳು."

"ಏನಂದ್ರೀ..."

"ಏನಿಲ್ಲ. ಜೋಳಿಗಿ ಮೂಲ್ಯಾಗಿಟ್ಟು ಬಂದ ಕೆಲಸಾ ನೋಡಿಕೋ."

"ನಾ ಬಂದದ್ದು ಮಸಾಲಿ ಸಾಮಾನು ಮಾರಾಕ್ರೀ."

"ಹೌದೌದು ನಂಗೆಲ್ಲ ಗೊತ್ತದ...ಇಲ್ಲಿ ಬರೋವ್ರೆಲ್ಲಾರೂ ನಿನ್ನ ಹಂಗೇ ಬರತಾರ.....ಸೀರೀ ಮಾರೋವ್ರು. ಆಯಿಸ್ಕ್ರೀಮ್ ಮಾರಾವ್ರು.....ಭಾಂಡಿ ಮಾರಾವ್ರು..."

"ನಿಮಗೆಲ್ಲೋ ತಪ್ಪು ಕಲ್ಪನಾ ಆಧಂಗ ಕಾಣಸ್ತದ...ನಾ ಹೋಗ್ತೀನಿ ಬಿಡ್ರಿ."

"ಯಾಕ? ಮಾಲು ನೋಡೋದಿಲ್ಲೇನು?"

"ಯಾವ ಮಾಲ್ರೀ."

"ನಿನ್ನ ಕಡೀ ಮಾಲಲ್ಲ. ನನ್ನ ಕಡೀದು. ನೋಡದ ಹಿಂಗ ಗಡಿಬಿಡಿ ಮಾಡಿದ್ರ ಹೆಂಗ?"

ಮುಂದೆ ಅವನಿಗೆ ಮಾತನಾಡಲು ಆಸ್ಪದ ಕೊಡಲೇ ಇಲ್ಲ ಮುದುಕಿ. ಒಳಗೆ ನೋಡುತ್ತ ಕೂಗು ಹಾಕಿದಳು. "ಏನ್ ಮಾಡಾಕತ್ತೀರಿ? ಮುತ್ತು ಪೋಣಿಸಲಿಕ್ಕ ಹತ್ತೀರೇನು? ಅಶೋಕನಿಗೆ ಅರ್ಥವಾಗದಿದ್ದರೂ ಇಲ್ಲೇನೋ ಗುಟ್ಟಿದೆ ಎಂದೆನಿಸದಿರಲಿಲ್ಲ. ಆತನ ಬಳಿ ಯೋಚಿಸಲು ಸಮಯ ಇರಲಿಲ್ಲ. ಮುದುಕಿಯ ಗುಟುರು ಮುಗಿಯುವದಕ್ಕೂ ಒಳಗಿನಿಂದಹದಿನೆಂಟು ಇಪ್ಪತ್ತು ವರ್ಷದ ತರುಣಿಯೊಬ್ಬಳು ಹೊರಗೆ ಬಂದಳು. ಅಶೋಕನೆಡೆ ಮೋಹಕವಾಗಿ ನಕ್ಕು "ಹಾಯ್" ಎಂದಳು. ಮಂಗನಂತೆ ಪೆಚ್ಚು ಮುಖ ಮಾಡಿದ ಅಶೋಕ ಮುದುಕಿಯತ್ತ ನೋಡಿದ.

"ಪಸಂದಾಗದಿದ್ರೆ ಬೇಡ ಬೇರೆ ತೋರಿಸ್ತೇನೆ."

ಮುಂದೆ ಆರಂಭವಾಯಿತು. ಲಲನಾಮಣಿಯರ ಪರೇಡ್. ಸೀರೆ ಉಟ್ಟವಳು, ಫ್ರಾಕ್ ತೊಟ್ಟವಳು, ಸಲ್ವಾರ್ ಉಟ್ಟವಳು, ಮಿಡಿ ಧರಿಸಿದವಳು. ಕೇವಲ ಲಂಗ ದಾವಣಿ ಅಷ್ಟೇ ಅಲ್ಲ. ಕೊನೆ ಕೊನೆಗೆ ಪ್ಯಾಂಟ್ ಧರಿಸಿ ಬಂದವಳೂ ಸೇರಿ ಹದಿನೈದು ಇಪ್ಪತ್ತು ಜನ ಹುಡುಗಿಯರು ಅಶೋಕನೆದುರು ಬಂದು ತಮ್ಮ ದೇಹ ಸೌಂದರ್ಯದ ಪ್ರದರ್ಶನ ಮಾಡಿ ಹೋದರು. ಅಷ್ಟು ವೇಳೆಯಲ್ಲಿ ಆಗಲೇ ಅಶೋಕನಿಗೆ ತಾನೆಲ್ಲಿ ಬಂದು ಸಿಕ್ಕಿ ಹಾಕಿಕೊಂಡಿರುವೆ

ಎಂದರ್ಥವಾಗಿತ್ತು. ಅಲ್ಲಿಂದ ಪಾರಾಗಲು ಯೋಚಿಸತೊಡಗಿದ.

"ಇಲ್ಲಿದ್ರೆ ನಂಗ ಹುಚ್ಚ ಹಿಡಿತೈತಿ. ನಾ ಹೊಂಟೆ."

ಜೋಳಿಗೆ ಹೆಗಲಿಗೇರಿಸುತ್ತಿದ್ದಂತೆ ಬೆನ್ನ ಮೇಲೆ ರಪ್ ಎಂದು ಪೆಟ್ಟು ಬಿತ್ತು. ಹೊರಳಿ ನೋಡಿದ. ಟೊಂಕಕ್ಕೆ ಸೆರಗು ಸುತ್ತಿದ ಮುದುಕಿ ಕೈಬಳೆ ಮೇಲೇರಿಸುತ್ತ ಕೇಳಿದಳು.

"ಎಲ್ಲಿಗೆ ಹೋಗ್ತೀ...ಪುಕ್ಕಟ ಮಾಲು ನೋಡಿ ಪಾರಾಗಬೇಕು ಅಂತೀ ಏನು?"

"ಯಾವ ಮಾಲು? ಏನು ವಿಶೇಷ?"

"ನಾಟಕ ಮಾಡಬ್ಯಾಡ. ಇಷ್ಟು ಹುಡಿಗ್ಯಾರನ್ನ ನೋಡಿ ಹಂಗ ಹೋಗಟೆಲ್ಲಾ..."

"ನಾ ಹುಡಿಗ್ಯಾರನ್ನ ನೋಡ್ಲಿಕ್ಕೆ ಬಂದಿದ್ದಿಲ್ಲ. ಮಸಾಲಿ ಮಾರಲಿಕ್ಕೆ ನಾ."

"ಬಾಯ್ಮುಚ್ಚು...ಇಲ್ಲೆ ಎಲ್ಲಾರೂ ಬರೋದು ನಿನ್ನ ಹಂಗ."

"ಬಾಯಾರ...ನನ್ನ ಮಾತ ಕೇಳ್ರೀ...ನಂಗೇನೂ ಗೊತ್ತಿಲ್ಲ. ನಾ ಮಸಾಲಿ ಮಾರಲಿಕ್ಕೆ ಬಂದಾಂವ."

"ನನಗೆಲ್ಲಾ ಗೊತ್ತದ. ಅಪ್ಪ ಹುಡಿಗ್ಯಾರ್ನ ನೋಡೀ....ಯಾರನ್ನಾರ ಪಾಸ ಮಾಡಿ ಮಜಾ ಮಾಡು."

"ಅಯ್ಯೋ..ರಾಮ ರಾಮ..ನಾ ಮದಿವಿ ಆದಾಂವ.. ಮನ್ಯಾಗ ಹೆಂಡ್ತಿ ಇದ್ದಾಳೆ...ಆಕೀಗೆ ಮೋಸಾ ಮಾಡಿದ್ರೆ ನರಕಕ್ಕೆ ಹೋಗ್ತೇನಿ."

"ಹಂಗಾರ, ನೀ ಇಪ್ಪತ್ತ ಹುಡಿಗ್ಯಾರ್ನ ನೋಡಿದಿ....ಸಾವಿರರೂಪಾಯಿ ಇಟ್ಟ ಹೊರಗಹೋಗ."

ಅಶೋಕನ ಹತ್ತಿರ ರೂಪಾಯಿಗೇನು ಕಡಿಮೆ ಇರಲಿಲ್ಲ...ಜೋಳಿಗೆಯ ಗುಪ್ತ ಖಾನೆಯಲ್ಲಿ ರೂಪಾಯಿ ಪಿಸ್ತೂಲು...ಐಡೆಂಟಿ ಕಾರ್ಡ್ ಎಲ್ಲಾ ಇದ್ದವು ತೆಗೆಯಲು ಆಗದು ಅಷ್ಟೇ...

"ನನ್ನ ಹತ್ರ ಅಷ್ಟು ರೂಪಾಯಿ ಇಲ್ರೀ. ಇದ್ರೂ ನಾ ಕೊಡತಿದ್ದಿಲ್ಲ. ಹುಡಿಗ್ಯಾರನ್ನ ನೋಡೋ ಶೋಕಿ ನನಗಿಲ್ಲ...ನೀವಾಗೇ ತೋರಿಸಿದ್ರೆ ನಾ ಏನ ಮಾಡ್ಲಿ? ನಾ ಹೊಂಟೆ."

ನೆಲಕ್ಕೆ ಬಿದ್ದಿದ್ದ ಜೋಳಿಗೆಯನ್ನು ಪುನಃ ಎತ್ತಿ ಭರಭರನೆ ಬಾಗಿಲಿಗೆ ಬಂದವ ಎದುರಿಗೆ ಗೋಡೆಯಂತೆ ಬಂದು ನಿಂತ ಇಬ್ಬರು ರಾಕ್ಷಸರನ್ನು ಕಂಡು ಗಕ್ಕನೆ ನಿಂತ. ಚಿಕ್ಕ ಪರ್ವತದಂತಿದ್ದ ಇಬ್ಬರೂ ಅವನತ್ತ ನೋಡಿ ಕುತ್ಸಿತ ನಗೆ

ಬೀರಿದರು.

"ಯಾರು ನೀವು.... ದಾರಿ ಬಿಡ್ರಿ" ಅಶೋಕ ಗದರಿಸಿದ.

"ಈ ಮನಿಗೆ ಬಂದವ್ರ ಯಾರೂ ನಿನ್ನಂಗ ವಾಪಸಾಗಿಲ್ಲ.... ಬಾಯಿ ಸಾಹೇಬ್ರು ಹೇಳಿದಂಗ ಮಾಡು..... ಇಲ್ಲದಿದ್ರ ಕೈಕಾಲು ಮುರದು ಭಾವ್ಯಾಗ ಒಗೀತೀವಿ...."

ಮಂಗನಂತೆ ಮುಖ ಮಾಡಿ ಸುತ್ತಲೂ ನೋಡಿದ ಅಶೋಕ....

ಒಂದು ಮಾತು ಅರ್ಥವಾಗಿತ್ತು. ಇಲ್ಲಿದ್ದವರ್ಯಾರೂ ಸಾಮಾನ್ಯರಲ್ಲ.... ಎಲ್ಲಾ ಅರಿತೇ ಈ ರೀತಿ ವರ್ತಿಸುತ್ತಿದ್ದಾರೆ. ಇವರಿಗೆ ದುಡ್ಡು ಬೇಕಾಗಿಲ್ಲ.... ನನ್ನನ್ನೂ ಬಲೆಯಲ್ಲಿ ಕೆಡವಲೆಂದೇ ಕಾಯುತ್ತಿದ್ದಾರೆ.ಬಹುಶಃ ಸುಷಮಾ ಸಹ ಇದೇ ರೀತಿ ಬಲೆಯಲ್ಲಿ ಬಿದ್ದಿರಬೇಕು. ನಮ್ಮಿಬ್ಬರ ವಿಷಯ ತಿಳಿದುಕೊಂಡೇ ನಮಗಿಂತ ಮೊದಲು ನಮಗಾಗಿ ಕಾಯುತ್ತಿದ್ದಾರೆಂದರೆ ಇವರಿಗೆ ನಮ್ಮಿಬ್ಬರ ಬರುವಿನ ಬಗ್ಗೆ ಮೊದಲೇ ಸಂದೇಶ ಬಂದಿರಲು ಸಾಕು.... ಈ ಸಂದೇಶ ಕಳಿಸಿದ ವರಾರಿರಬಹುದು?

"ಯಾಕೆ ನಿಂತಿ ಮಂಕನಂಗ? ಏನೈತಿ ವಿಚಾರ?"

"ನಿಮಗೆ ಸಾವಿರ ರೂಪಾಯಿ ಬೇಕಲ್ಲ?.... ತಡೀರಿ ಕೊಡತೀನಿ"

"ಏನಂದಿ? ಸಾವಿರ ರೂಪಾಯಿ ಕೊಡ್ತೀಯಾ?"

"ಹೌದು. ಅದರ ಹೊರ್ತು ಬ್ಯಾರೆ ದಾರಿ ಇಲ್ಲ ನಂಗ........ ರೂಪಾಯಿ ತಗೊಂಡು ನನ್ನ ಬಿಡ್ತೀರಿ ಹೌದಿಲ್ಲೋ?"

"ನಿನ್ನ ಹತ್ರ ಸಾವಿರ ರೂಪಾಯಿ ಎಲ್ಲಿಂದ ಬರತಾವು?"

"ಅದೆಲ್ಲಾ ನಿಮಗ್ಯಾಕ?........ ನಾ ವ್ಯಾಪಾರಾ ಮಾಡಾಂವ ಅಂತ ಗೊತ್ತಿಲ್ಲೇನು?"

"ಮಸಾಲಿ ವ್ಯಾಪಾರ ಮಾಡಾಂವ ನೀನು .. ಸಾವಿರ ರೂಪಾಯಿ ಅವ ಅಂದ್ರ...."

ಜೋಳಿಗೆಯಿಂದ ರೂಪಾಯಿ ತೆಗೆದು ಎಣಿಸಿ ಕೊಡಹತ್ತಿದ ಅಶೋಕ. ಎಲ್ಲಾ ಐದು ಹತ್ತರ ನೋಟುಗಳು. ಮಧ್ಯೆ ಮಧ್ಯೆ ಒಂದು ಎರಡರ ನೋಟು ಅವರಿಬ್ಬರೂ.... ಹಣ ಎಣಿಸುವಾಗ ಅವರೆಡೆ ನೋಡಿ ಎಚ್ಚರಿಕೆಯಿಂದ ಮತ್ತೊಂದು ಜೋಳಿಗೆಗೆ ಕೈ ಹಾಕಿ ಪಿಸ್ತೂಲ ಹೊರತೆಗೆದ ಅಶೋಕ.

"ಹಾಂ ... ತಗೊಳ್ಳಿ ಸಾವಿರ ಆತು...."

ಇಬ್ಬರೂ ಹಣಕ್ಕಾಗಿ ಕೈಚಾಚಿದವರು ಪಿಸ್ತೂಲು ಕಾಣುತ್ತಲೂ ಬೆಚ್ಚಿ ಹಿಂದೆ ಸರಿದರು.

"ಈಗ ಹೇಳು ಸುಷಮಾ ಎಲ್ಲಿ?"

"ಯಾವ ಸುಷಮಾ?"

"ನನಗಿಂತ ಮೊದಲು ಬಂದ ಭಿಕ್ಷುಕಿ...."

"ಭಿಕ್ಷುಕಿ."

"ಹಾಂ ಅವಳೇ ಸುಷಮಾ. ಎಲ್ಲಿ ಅವಳು?"

"ನಮಗೆ ಅವಳ ಬಗ್ಗೆ ತಿಳಿದಿಲ್ಲ. ನಿಜವಾಗಿಯೂ?"

"ನಿಮಗೆ ತಿಳಿಯದಿದ್ದರೆ ಅಮ್ಮಾ ಅವರಿಗೆ ತಿಳಿದಿರಬೇಕಲ್ಲ?"

ಅಮ್ಮಾ ಅವರ ಕಡೆ ಹೊರಳಿದ ಅಶೋಕ. ಆಶ್ಚರ್ಯ? ಅಮ್ಮಾ ಅವರು ಯಾವಾಗಲೋ ಅಲ್ಲಿಂದ ಮಾಯವಾಗಿದ್ರು....ಅದೇ ಕ್ಷಣ ಪಿಸ್ತೂಲು ಹಿಡಿದಿದ್ದ ಕೈ ಮೇಲೆ ಭಾರಿ ಏಟು 'ಹಾ' ಎಂದು ನೋವಿನಿಂದ ಕಿರುಚಿದ ಅಶೋಕ. ಪಿಸ್ತೂಲ ಆಗಲೇ ಜಾರಿ ಬಿದ್ದಿತ್ತು. ಅವರಿಬ್ಬರೂ ಅವನ ಮೇಲೆ ಆಕ್ರಮಣ ಮಾಡಿದ್ದರು.

ಮೇಲೆ ನೆಗೆದ ಅವರಿಬ್ಬರನ್ನು ತಡೆದ ಅಶೋಕ ಬಲಗಾಲಿನಿಂದ ಒಬ್ಬನ ಕಿಬ್ಬೊಟ್ಟೆಗೆ ಒದ್ದು ಗರ್‍ರನೆ ತಿರುಗಿ ಬಲಗೈ ಮುಷ್ಠಿಯಿಂದ ಇನ್ನೊಬ್ಬನ ದವಡೆಗೆ ಬಾರಿಸಿದ. ಏಕ ಕಾಲದಲ್ಲಿ ಅವರಿಬ್ಬರೂ ವಿಕಾರವಾಗಿ ಚೀರಿಕೊಂಡು ನೆಲಕಚ್ಚಿದರು. ಒಬ್ಬ ಹೊಟ್ಟೆ ಹಿಡಿದುಕೊಂಡು ನರಳುತ್ತಿದ್ದರೆ ಇನ್ನೊಬ್ಬ ಬಾಯಿಯಿಂದ ಸೋರುತ್ತಿದ್ದ ರಕ್ತ ಒರಸಿಕೊಳ್ಳುತ್ತಿದ್ದ....

"ಈಗ ಹೇಳಿ.... ಎಲ್ಲಿ ಸುಷಮಾ?"

"ನಮಗೆ ತಿಳಿಯದು"

"ಹಾಗಾದರೆ ಯಾರಿಗೆ ತಿಳಿದಿದೆ?"

"ನನಗೆ ಮಿಸ್ಟರ ಅಶೋಕ"....ಗಡಸು ಸ್ತ್ರೀ ಕಂಠ ಕೇಳಿತು ಹಿಂದಿನಿಂದ. ನಿಧಾನವಾಗಿ ಹೊರಳಿದ ಅಶೋಕ. ಅದೇ ವೃದ್ಧೆ.... ಕೆಲವು ನಿಮಿಷಗಳ ಹಿಂದೆ ಅಶೋಕನನ್ನು ಒಳಕರೆದವಳು.

ಈಗ,ಕೇವಲ ಹದಿನೆಂಟು ಇಪ್ಪತ್ತು ವರ್ಷದ ತರುಣಿಯಾಗಿ ನಿಂತಿದ್ದಳು.

"ನೀನೋ.... ನನಗೆ ಮೊದಲೇ ಸಂಶಯ ಬಂದಿತ್ತು.... ನೀನು ವೃದ್ಧೆ ಅಲ್ಲವೆಂದು".

"ಹೇಗೆ ಸಂಶಯ ಬಂದಿತ್ತು".

"ನೀನು ಮೇಕಪ್ ಮಾಡಿಕೊಂಡಿದ್ದರೂ ಗಟ್ಟಿಯಾಗಿ ಸೆಟೆದು ನಿಂತ ನಿನ್ನ ಸ್ತನದ್ವಯಗಳನ್ನು ನೋಡಿದಾಗಲೇ ನಾನೆಂದುಕೊಂಡಿದ್ದೆ...."

ಒಮ್ಮಿಂದೊಮ್ಮೆಲೆ ಆಕೆ ನಾಚಿದಳು.... ಕೈಲಿ ಹಿಡಿದಿದ್ದ ಕೆಂಪು ರಬ್ಬರ್

ಚೆಂಡನ್ನು ನೋಡುತ್ತ ನಾಲಿಗೆ ಕಚ್ಚಿದಳು. ಇದೇ ಸುಸಂಧಿ ಎಂದುಕೊಂಡ ಅಶೋಕ. ಚಂಗನೆ ಹಾರಿ ಕೆಳಗೆ ಬಿದ್ದಿದ್ದ ಪಿಸ್ತೂಲ ಎತ್ತಿಕೊಂಡ.

ಅವನ ಜಾಣ್ಮೆ ಉಪಯೋಗಕ್ಕೆ ಬರಲಿಲ್ಲ.

ಪಿಸ್ತೂಲನ್ನು ಅವಳೆಡೆ ಹೊರಳಿಸುವ ಮುನ್ನ ಆಕೆ ಕೈಲಿದ್ದ ಚೆಂಡನ್ನು ಅವನೆಡೆ ಬೀಸಿದ್ದಳು.... ರಬ್ಬರ ದಾರದಿಂದ ಕಟ್ಟಲ್ಪಟ್ಟ ಚೆಂಡು 'ಸುಂಯಿ' ಎಂದು ಹಾರಿಬಂದು ಅವನ ಹಣೆಗೆ ಮುತ್ತಿಟ್ಟಿತು.

ಸುತ್ತಿಗೆಯಿಂದ ಬಾರಿಸಿದಷ್ಟು ವೇದನೆ. ಚೀರಿಕೊಂಡ ಅಶೋಕ.

ಆತ ನೋಡುತ್ತಿದ್ದಂತೆ ಚೆಂಡು ಪುನಃ ಆ ರಮಣಿಯ ಕೈ ಸೇರಿತ್ತು.

ಕಣ್ಣಿಗೆ ಕತ್ತಲೆ ಬಂದಂತಾಗಿ ಪಿಸ್ತೂಲ ಕೈಯಿಂದ ಜಾರಿತು. ಆತ ಧರಾಶಾಹಿಯಾಗುವ ಮೊದಲು ಎಡಗೈಯಲ್ಲಿದ್ದ ವಾಚಿನ ತಿರುಪನ್ನು ಬಲಗೈ ಬೆರಳುಗಳು ಹಿಡಿದು ಎಳೆದಿದ್ದವು. ಪೀಂ....ಪೀಂ....ಪೀಂ.... ಎಂಬ ಸುಮಧುರ ಧ್ವನಿ ಕೇಳಿ ಬರಲಾರಂಭಿಸಿತು. ಚಿಗರೆಯಂತೆ ಜಿಗಿಯುತ್ತ ಬಂದ ಆ ರಮಣಿ ವಾಚಿನ ತಿರುಪನ್ನು ಮತ್ತೆ ಮೊದಲಿನಂತೆ ಒತ್ತಿ ಕೂಡಿಸಿದಾಗ ಸುಮಧುರ ಸಂಗೀತ ಪೀಂ....ಪೀಂ . ಪೀಂ.... ಸದ್ದು ನಿಂತಿತು.... ಎದೆಯ ಮೇಲೆ ಕೈ ಇಟ್ಟುಕೊಂಡ ಆಕೆ. "ಓ ದೇವರೇ........ ಟ್ರಾನ್ಸ್‌ಮಿಟರ ವಾಚಿನ ಸದ್ದು ಮೇಜರ ಕೇಳದಿರಲಿ" ಎಂದು ಉದ್ಗರಿಸಿದಳು.

* * * *

ಸುಮಾರು ಎರಡು ಗಂಟೆಗಳಿಂದ ಮೇಜರ ವಿಭಿನ್ನ ಭಾಷೆಯ ಬೇರೆ ಬೇರೆ ಪತ್ರಿಕೆಗಳನ್ನು ಆಮೂಲಾಗ್ರವಾಗಿ ಪರೀಕ್ಷಿಸುತ್ತಿದ್ದ. ಅವನ ದೃಷ್ಟಿಗೆ ಮಹತ್ವದ್ದೆನ್ನಿಸಿದ ಸುದ್ದಿಗಳಿಗೆ ಕೆಂಪು ಶಾಯಿಯಿಂದ ಗುರುತು ಹಾಕಿ ಅದನ್ನು ಪಕ್ಕದಲ್ಲಿಡುತ್ತಿದ್ದ. ಹೀಗಾಗಿ ವಿಶೇಷವೆನಿಸುವ ಹದಿನೆಂಟು ಪತ್ರಿಕೆಗಳು ಅವನ ಗಮನ ಸೆಳೆದವು.ಪ್ರತಿಯೊಂದನ್ನು ಮತ್ತೆ ಮತ್ತೆ ಓದಿದ. ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾದವು ಒಂದೇ ಬಗೆಯ ಸುದ್ದಿಗಳು.

'ಪಾಕಿಸ್ತಾನದ ವಿಮಾನ ದುರಂತ– ಇನ್ನೂರಾ ಐವತ್ತು ಸಾವು.'

'ಅಮೇರಿಕೆ ವಿಮಾನ ಸ್ಫೋಟ-- ಮೂರುನೂರಾ ಹದಿನೆಂಟು ಸಾವು.'

'ಚೀನಾ ವಿಮಾನ ಅಗ್ನಿಗಾಹುತಿ– ಯಾತ್ರಿಗಳೆಲ್ಲರೂ ಜೀವಂತ ಭಸ್ಮ.'

ಈ ಎಲ್ಲಾ ದುರಂತಗಳು ನಡೆದದ್ದು ಭಾರತದಲ್ಲಿಯೇ. ಕೆಲ ವಿಮಾನ ಆಕಾಶಕ್ಕೇರುವ ಮುನ್ನ ಸ್ಫೋಟಿಸಿದ್ದರೆ ಇನ್ನೂ ಕೆಲವು ಆಕಾಶದಲ್ಲಿ ಎಲ್ಲವನ್ನೂ ಓದಿ ಚಿಂತಾಕ್ರಾಂತನಾದ ಹೇಮಂತ. ಅಂತರರಾಷ್ಟ್ರೀಯ ರಾಜಕಾರಣದ ಬಗ್ಗೆ

ಯೋಚಿಸಿದಾಗ ಭಾರತ ಪಾಕಿಸ್ತಾನ ಸಮ್ಮಂಧ ಸರಿಯಾಗಿರಲಿಲ್ಲ. ಚೀನಾನೂ ಅಷ್ಟೇ. ಅಮೇರಿಕ ಭಾರತದ ಮಿತ್ರನಂತೆ ವರ್ತಿಸಿದರೂ ಪಾಕಿಸ್ತಾನಕ್ಕೆ ಸಮರ ವಿಮಾನ ಹಾಗೂ ಯುದ್ಧೋಪಕರಣಗಳನ್ನು ಒದಗಿಸುತ್ತಿತ್ತು. ಈ ದುರಂತ ಗಳಿಂದ ಪಾಕಿಸ್ತಾನ ಹಾಗೂ ಚೀನಾ ಭಾರತದ ರಾಜನೈತಿಕ ಸಮ್ಮಂಧ ಕಡಿದುಕೊಳ್ಳುವದಲ್ಲದೇ ಯುದ್ಧ ಮಾಡಲೂ ಸಹ ಮುಂದಾಗಬಹುದಿತ್ತು. ಅದಲ್ಲದೇ ಪ್ರಬಲ ರಾಷ್ಟ್ರವೆನಿಸಿದ ಅಮೇರಿಕೆ ಸಹ ಭಾರತಕ್ಕೆ ಎಚ್ಚರಿಕೆ ನೀಡ ಬಹುದಿತ್ತು.

ಸಧ್ಯದ ಮಟ್ಟಿಗೆ ಇದಾವದೂ ಆಗಿರಲಿಲ್ಲ. ಈ ರೀತಿ ಆಗಬಹುದೆಂದು ಕೊಂಡ ಭಾರತ ಸರಕಾರ ಈ ವಿಮಾನ ದುರಂತದ ಬಗ್ಗೆ ವಿಚಾರಣೆ ನಡೆಸಲು ವಿಶ್ವಸಂಸ್ಥೆಯಿಂದ ತಾನು ನೆರವು ಪಡೆಯುವದಾಗಿ ಹೇಳಿ ಸಧ್ಯದಲ್ಲೇ ವಿಶೇಷ ಜ್ಞರು ಭಾರತಕ್ಕೆ ಬರುವರೆಂದೂ ತಿಳಿಸಿತ್ತು.

ಈಗ ಚಾಂಗಲಿನ್ ಹೇಳಿದ ಮಾತು ಅವನಿಗೆ ಅರ್ಥವಾಯಿತು. ಭಾರತದಲ್ಲಿ ರಕ್ತದ ಹೊಳೆ ಹರಿಸಲು ನಾನು ಬಂದಿದ್ದೇನೆ.

'ನಿಮ್ಮ ದೇಶದ ಮಿತ್ರರೇ ನನಗೆ ಸಾವಿರಕೋಟಿ ಡಾಲರ್ ನೀಡಿದ್ದಾರೆ.'

ವಿಮಾನ ದುರಂತಗಳ ಮೂಲಕ ಭಾರತದ ರಾಜನೈತಿಕ ಸಮ್ಮಂಧಕ್ಕೆ ಕೊಡಲಿ ಏಟು ನೀಡಿ ಆಮೇಲೆ,ಭಾರತದಲ್ಲೇ ಅಶಾಂತಿ, ಅಪಹರಣ, ಮತೀಯ ಗಲಭೆಗಳ ಮೂಲಕ ತಲೆನೋವು ನೀಡುವ ಉದ್ದೇಶ ಆತನದು. ಆಗ ಸರಕಾರ ಹೊರಗಿನ ಅಪಾಯ ಎದುರಿಸಲು ಸಿದ್ಧತೆ ನಡೆಸಬೇಕೋ ಅಥವಾ ಒಳಗಿನ ಆಂತರಿಕ ಗಲಭೆ ಕಡೆ ಲಕ್ಷ್ಯ ಕೊಡಬೇಕೋ?.... ಈ ಇಬ್ಬಗೆಯ ತೊಳಲಾಟ ದಲ್ಲೇ ಶಾಂತಿ ಸುವ್ಯವಸ್ಥೆ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಅಸ್ಥಿರಗೊಳಿ ಸುವ ಯೋಚನೆ ಆತನದು.

ಭಲೆ ಎಂದ ಮನದಲ್ಲಿ.

ಅವನ ಈ ತಂತ್ರಕ್ಕೆ ಅಡ್ಡಿ ಬರುವವರ ಹೆಸರಿನಲ್ಲಿ ಮೊದಲನೆಯದೇ ಈತನದು. ಈತನ ಸಂಗಡಿಗರದು. ಅದಕ್ಕಾಗಿ ಆಕ್ರಮಣ.

'ಹೂಂ' ಎನ್ನುತ್ತಾ ಎದ್ದು ನಿಂತ ಹೇಮಂತ.

ಮಸಕು ಮಸಕಾಗಿದ್ದ ಸಮಸ್ಯೆ ಈಗ ತಿಳಿಯಾಗಿತ್ತು.ಆತ ತಿಳಿದಂತೆ ಚಾಂಗಲಿನ್ ಸುಮ್ಮನೆ ಕುಳಿತಿರಲಿಲ್ಲ.

ಆಸ್ಪತ್ರೆಯಲ್ಲಿದ್ದಾಗ ಅವರ ಗೊಡವೆಗೆ ಬಾರದೆ ಈ ವಿಮಾನ ದುರಂತ ಗಳಿಗೆ ಕೈ ಹಾಕಿದ್ದ ಏಕೆ?....

ತಾನು ಬದುಕಿರುವೆ ಎಂದು ತಿಳಿದಾಗ ಪುನಃ ಆಕ್ರಮಣ ಮಾಡಬೇಕಾ

ಗಿತ್ತಲ್ಲ, ಆ ರೀತಿ ಆತ ಮಾಡಲಿಲ್ಲ... ಏಕೆ? ಹೇಮಂತ ಮುಗುಳು ನಗೆ ನಕ್ಕ. ಉತ್ತರ ಹೊಳೆದಿತ್ತು.

ಭಯ!

ಸಾವಿನ ಉಡಿಯಲ್ಲಿ ಆಟವಾಡಿ ಬಂದ ಹೇಮಂತ ಈಗ ಕೆರಳಿದ ಸರ್ಪ ವಾಗಿದ್ದಾನೆ. ಅವನ ಸಮೀಪ ಹಾಯುವುದೂ ಸಾವಿಗೆ ಸಂದೇಶ ನೀಡಿದಂತೆ ಎಂದಾತ ಅರಿತಿದ್ದ. ಆದಕ್ಕಾಗಿ ಹೇಮಂತನ ಲಕ್ಷ್ಯವನ್ನು ಬೇರೆಡೆ ಸೆಳೆಯುವ ದಕ್ಕಾಗಿ ಈ ಅಪಘಾತಗಳಿಗೆ ಹೆಚ್ಚು ಗಮನನೀಡಿದ್ದ....

ಹಾಗಾದರೆ ಈ ವಿಮಾನ ಅಪಘಾತ ಸಹ ಅಷ್ಟು ಮಹತ್ವದ್ದಲ್ಲ....

ಇವುಗಳಿಗಿಂತಲೂ ಅಪಾಯಕಾರಿಯಾದದ್ದು ಯಾವದು?

ಯೋಚಿಸುತ್ತ ಕಿಚಿನ್‌ಗೆ ಬಂದ.ಫ್ರಿಜ್‌ನಿಂದ ಬೀರ್‌ಟಿನ್.ತೆಗೆದು ಸೀಲ್ ಒಡೆದು ಹಾಗೇ ಬಾಯಿಗೆ ಅಂಟಿಸಿಕೊಂಡು ತನ್ನರೂಮಿಗೆ ಬಂದ. ಟಿ ವಿ ಸ್ವಿಚ್ ಆನ್ ಮಾಡಿದ. ಬಿ.ಬಿ.ಸಿ. ವಾರ್ತೆ ಆರಂಭವಾಗಿತ್ತು. ಆರಾಮ ಕುರ್ಚಿಯಲ್ಲಿ ಒರಗಿ ಆಲಿಸತೊಡಗಿದ. ವಾರ್ತೆ ಮುಗಿ ಮುಗಿಯುತ್ತಿದ್ದಂತೆ ಬಂದ ತಾಜಾ ಸುದ್ದಿ, ಲಿಬಿಯಾ ದೇಶದ ಬೋಯಿಂಗ ವಿಮಾನ ಬೆಂಗಳೂರು ವಿಮಾನ ನಿಲ್ದಾಣದಿಂದ ಮೇಲೇರುತ್ತಿದ್ದಂತೆ ಅಗ್ನಿಗಾಹುತಿಯಾಯಿತು. ಅದರಲ್ಲಿದ್ದ ಇನ್ನೂರಾಐವತ್ತು ಯಾತ್ರಿಕರಲ್ಲಿ ಒಬ್ಬರೂ ಉಳಿದಿರಲಿಲ್ಲ. ಅಲ್ಲದೆ ಇರಾಣದ ರಾಯಭಾರಿಯೊಬ್ಬರು ತಮ್ಮ ಕುಟುಂಬದ ಆರು ಜನರೊಂದಿಗೆ ಅದರಲ್ಲಿ ಪ್ರಯಾಣಿಸುತ್ತಿದ್ದರು. ಅವರೂ ಸಹ.

ಟಿ ವಿ ಆರಿಸಿ ಬಾಲ್ಕನಿಗೆ ಬಂದ ಹೇಮಂತ.

ಪರಿಸ್ಥಿತಿ ಹದಗೆಡುವ ಸೂಚನೆ ಕಂಡುಬರತೊಡಗಿತು.

ಚೀನಾ,ಪಾಕಿಸ್ತಾನ,ಅಮೇರಿಕ, ಲಿಬಿಯಾ ದೇಶದ ವಿಮಾನಗಳ ಆಹುತಿ ಅದರೊಂದಿಗೆ ಇರಾಣದ ರಾಜತಾಂತ್ರಿಕರ ಕುಟುಂಬದ ಸರ್ವಸದಸ್ಯರ ಮರಣ. ಎಂಥಾ ಗಂಭೀರ ವಿಷಯ! ಒಂದೇ ಬಾರಿ ಪಾಕಿಸ್ತಾನ, ಚೀನಾ, ಅಮೇರಿಕಾ, ಲಿಬಿಯಾ ಹಾಗೂ ಇರಾಣ ಭಾರತದ ಶತ್ರುಗಳಾದರೆ ಮುಂದೆ ಗತಿ?....

ಸರಸರನೆ ಟೆಲಿಫೋನು ಇದ್ದಲ್ಲಿಗೆ ಬಂದ ಮೇಜರ್. ವಿಮಾನ ನಿಲ್ದಾಣದ ಕಂಟ್ರೋಲ್ ರೂಮಿಗೆ ಫೋನು ಮಾಡಿದ.

ರಿಸೀವರ್ ಎತ್ತಿದವರು ಕ್ಯಾಪ್ಟನ್ ಸತೀಶ.

ಮೇಜರ್ ವಿಮಾನ ದುರಂತದ ಬಗ್ಗೆ ವಿಚಾರಿಸಿ. ಅಲ್ಲಿದ್ದ ಭದ್ರತಾ ಸಿಬ್ಬಂದಿಯನ್ನು ಹೊರಗೆ ಬಿಡದಂತೆ ಸೂಚನೆ ನೀಡಿದ. ತಾನು ಸಧ್ಯವೇ ಬರು ವದಾಗಿ ಹೇಳಿ ಬಟ್ಟೆತೊಡಲಾರಂಭಿಸಿದ.

ಪೀಂ.... ಪೀ.... ಪೀಂ.... ಸುಮಧುರ ಸಂಗೀತ.

ಮೇಜಿನ ಮೇಲಿದ್ದ ಅವರ ಟ್ರಾನ್ಸ್ಮಿಟರ್ ವಾಚಿನಿಂದ.

ಎರಡೇ ಹಾರಿಕೆಗೆ ಬಂದು ವಾಚು ಕೈಗೆ ತೆಗೆದುಕೊಂಡ. ಸಂಗೀತ ನಿಂತು ಹೋಗಿತ್ತು. ಕರೆ ಮತ್ತೆ ಬರಬಹುದೆಂದು ಹತ್ತು ಹದಿನೈದು ನಿಮಿಷ ಕಾಯ್ದರೂ ಬರದಾಗ ಏನೋ ಅಚಾತುರ್ಯ ನಡೆದಿದೆ ಎಂದು ಊಹಿಸಿ ಮನೆಯಿಂದ ಹೊರಬಂದ.... ಅವನ ಕಾರು ಗೇಟಿಗೆ ಬರುತ್ತಿದ್ದಂತೆ ಕಾವಲುಗಾರ ಬಹದ್ದೂರ ಸಿಂಗ್ ಸೆಲ್ಯೂಟ್ ನೀಡಿದ. ಅವನ ಬಳಿ ಕಾರು ನಿಲ್ಲಿಸಿ ಸೂಚನೆ ನೀಡಿದ.

"ಬಹದ್ದೂರ ಗೇಟಿಗೆ ಬೀಗ ಹಾಕಿ ನೀನು ಆಫೀಸಿನಲ್ಲಿ ಕುಳಿತರು.ಫೋನು ಬಂದರೆ ವಿಚಾರಿಸು".

ಆತ ತಲೆಯಾಡಿಸುತ್ತಿದ್ದಂತೆ ಕಾರು ರಸ್ತೆಗೆ ಬಂದಿತ್ತು. ಸೈಡ್ ಮಿರರಲ್ಲಿ ಬಹದ್ದೂರ ಗೇಟಿಗೆ ಬೀಗ ಹಾಕುತ್ತಿರುವದು ಕಾಣಿಸಿತು....ಯೋಚನಾಕ್ರಾಂತ ನಾದ ಮೇಜರ್ ಕಾರಿನ ವೇಗ ಹೆಚ್ಚಿಸಿದ....

ಏರಪ್ಪೋರ್ಟಿನಿಂದ ಸುಮಾರು ಒಂದು ಫರ್ಲಾಂಗ್ ಅಂತರದಲ್ಲೇ ಕಾರು ನಿಲ್ಲಿಸಬೇಕಾಯಿತು. ಅಲ್ಲಿಂದ ಸಾಲಾಗಿ ವಾಹನಗಳು ನಿಂತಿದ್ದವು.ಆ ಕಡೆಯಿಂದ ಪೋಲೀಸ್ ವಾಹನಗಳು ಅಂಬ್ಯುಲನ್ಸ್ ಮುಂತಾದವು ಸೈರನ್ ಬಾರಿಸುತ್ತ ಬರುತ್ತಿದ್ದವು. ಸಮಾಚಾರ ವಿಭಾಗದವರು, ಛಾಯಾಚಿತ್ರಗ್ರಾಹಕರು ಎಲ್ಲಾ ಸೇರಿ ಒಂದು ಬಗೆಯ ಗೊಂದಲ. ಅಷ್ಟೇ ಭಯದ ವಾತಾವರಣ. ಎಲ್ಲರ ಮಧ್ಯೆ ದಾರಿ ಮಾಡಿಕೊಂಡು ಪ್ರವೇಶದ್ವಾರದೆದುರು ಬಂದ ಮೇಜರ್.ಅಲ್ಲಿ ನೂರಾರು ಜನರ ಸಮೂಹ ಹತ್ತಾರು ಬಗೆಯ ಧ್ವನಿಗಳು. ಆಕ್ರೋಶ, ಆಕ್ರಂದನ.... ಆಕ್ಷೇಪಣೆಯ ಮಾತುಗಳು.... ಅವರೆಲ್ಲರಿಗೂ ಒಂದೇ ಬಗೆಯ ಉತ್ತರ ನೀಡು ತ್ತಿರುವ ಅಧಿಕಾರಿಗಳು ನಿಧಾನವಾಗಿ ದಾರಿ ಮಾಡಿಕೊಳ್ಳುತ್ತ ಮುಖ್ಯದ್ವಾರದೆ ದುರು ಬಂದು ನಿಂತ ಮೇಜರನನ್ನು ರಕ್ಷಣಾ ಅಧಿಕಾರಿ ಹುಬ್ಬೇರಿಸಿ ನೋಡಿದ. ಮೆಲುವಾಗಿ ಅವನಿಗೆ ನಮಸ್ಕರಿಸಿದ. ಇಂಥ ವಿಶೇಷ ಸಂದರ್ಭಗಳಿಗೇ ಎಂದು ಇರಿಸಿದ ತನ್ನ ಸ್ಪೇಶಲ್ ಕಾರ್ಡ ಅವನ ಮುಂದೆ ಹಿಡಿದ.

ಭೂ, ಜಲ, ವಾಯು ಈ ತ್ರಿಪಡೆಗಳಿಗೆ ಸೇರಿದಂತೆ ಇವನನ್ನು ಎಲ್ಲೂ ತಡೆಯದಿರಲು ರಾಷ್ಟ್ರಪತಿಯವರು ನೀಡಿದ ಪಾಸ್....ಅದನ್ನು ನೋಡುತ್ತಲೂ ಒಮ್ಮೆಲೆ ಬದಲಾದ ಅಧಿಕಾರಿ ಭರ್ಜರಿ ಸೆಲ್ಯೂಟ ನೀಡಿದ. ಬಾಗಿಲು ತೆರೆದ. ಅವನಿಗೆ ಧನ್ಯವಾದ ಹೇಳಿ ಕಾರ್ಡನ್ನು ಜೇಬಿಗಿಳಿಸಿ ಒಳನಡೆದ ಮೇಜರ.

ಒಳಗೂ ಸಹ ಅದೇ ಬಗೆಯ ವಾತಾರಣ. ಅತ್ತಿಂದಿತ್ತ ಓಡಾಡುತ್ತಿರುವ ಸಿಬ್ಬಂದಿ ಎಲ್ಲರ ಮುಖದ ಮೇಲೂ ಶೋಕ.... ದುಗುಡ.... ಭಯ. ಕಿರುಚು

ತ್ತಿರುವ ಫೋನುಗಳು....ನೇರವಾಗಿ ಕಂಟ್ರೋಲ್‌ರೂಮಿಗೆ ಬಂದ. ಮೇಜರ ನನ್ನು ಮತ್ತೊಮ್ಮೆ ವಿಶೇಷ ರಕ್ಷಣಾ ಪಡೆಯ ಅಧಿಕಾರಿ ತಡೆದ. ಅಲ್ಲೂ ಅದೇ ಕಾರ್ಡು ಉಪಯೋಗಕ್ಕೆ ಬಂತು. ಗೌರವದಿಂದ ಒಳಗೆ ಕಳುಹಿಸಿಕೊಟ್ಟ ಅಧಿಕಾರಿ....

ಕ್ಯಾಪ್ಟನ್ ಸತೀಶ್ ಸಪ್ಪೆ ಮುಖದೊಂದಿಗೆ ಮೇಜರನನ್ನು ಸ್ವಾಗತಿಸಿದ. ಅವನೊಡನೆ ಔಪಚಾರಿಕವಾಗಿ ಮಾತನಾಡುತ್ತಾ ಎಲ್ಲಾ ವಿಷಯ ತಿಳಿದು ಕೊಂಡ ಮೇಜರ್, ವಿಮಾನವನ್ನು ಅರ್ಧಗಂಟೆ ಮೊದಲುಸಂಪೂರ್ಣ ಪರೀಕ್ಷಿಸ ಲಾಗಿತ್ತು. ಭಾರತೀಯ ಸಿಬ್ಬಂದಿ ಜೊತೆಗೆ ಲಿಬಿಯಾದಅಧಿಕಾರಿಗಳೂ ಅದರಲ್ಲಿ ದ್ದರು ಮುಂದಿನ ಪ್ರಯಾಣಕ್ಕೆ ಬೇಕಾದ ಫ್ಯೂಯೆಲ್ ಸಹ ತುಂಬಲಾಗಿತ್ತು. ಎಲ್ಲಾ ಪ್ರಯಾಣಿಕರ ಚೆಕಿಂಗ್ ಸಹ ಸಾವಧಾನವಾಗಿ ನಡೆಸಲಾಗಿತ್ತು.

ಹೀಗಿದ್ದೂ ಈ ದುರ್ಘಟನೆ ನಡೆದದ್ದು ದಿಗ್ಭ್ರಮೆ ಹುಟ್ಟಿಸಿತ್ತು. ವಿಮಾನ ಚಾಲಕ ಫ್ರಾಂಕ್ವಿನ್ ಎಂದೂ ಅವನಿಗೆ ಸಹಾಯಕನಾದವ ಜಿಮ್ ಎಂದೂ ತಿಳಿದುಬಂದಿತು. ಸಂರಕ್ಷಣಾ ಪಡೆಯ ಜೀಪಿನಲ್ಲಿ ಕುಳಿತ ಹೇಮಂತ ಅಪಘಾತ ನಡೆದ ಸ್ಥಳಕ್ಕೆ ಬಂದ....ಎಲ್ಲೆಡೆ ರುದ್ರಭೀಕರ ದೃಶ್ಯ. ಇನ್ನೂ ಉರಿಯುತ್ತಿರುವ ವಿಮಾನದ ಅವಶೇಷಗಳು....ಛಾಯಾಗ್ರಾಹಕರು ದೂರ ದರ್ಶನ ಸಿಬ್ಬಂದಿಯುವರಲ್ಲದೆ ಎಲ್ಲೆಡೆ ತುಂಬಿದ ರಕ್ಷಣಾ ದಳದವರು.

"ಪಾಪ! ಒಂದು ನಿಮಿಷ ಮೊದಲು ಫ್ರಾಂಕ್‌ವಿನ್‌ಗೆ ಮನೆಯಿಂದ ಫೋನು ಬಂದಿತ್ತಂತೆ...."

ಸರಕ್ಕನೆ ಧ್ವನಿ ಬಂದ ಕಡೆ ಹೊರಳಿದ ಹೇಮಂತ. ನಾಲ್ಕನೇ ವರ್ಗಕ್ಕೆ ಸೇರಿದ ಸಿಬ್ಬಂದಿಯುವರಿಬ್ಬರು ಮಾತನಾಡುತ್ತಿದ್ದರು. ಹೇಮಂತ ಅವರ ಬಳಿ ಬಂದು ಅವರಲ್ಲೊಬ್ಬನ ಬೆನ್ನು ಮುಟ್ಟಿ, "ಕ್ಷಮಿಸಿ ನಿಮ್ಮೊಂದಿಗೆ ಮಾತನಾಡ ಬೇಕಿತ್ತು" ಎಂದ. ಅವರಿಬ್ಬರೂ ಬೆಚ್ಚಿ ಅವನತ್ತ ನೋಡಿದರು. ಭಯ ತುಂಬಿದ ಕಣ್ಣುಗಳಿಂದ. "ಹೆದರಬೇಡಿ....ನನ್ನಿಂದ ನಿಮಗೆಯಾವ ಅಪಾಯವೂ ಇಲ್ಲ." ಹೇಮಂತ ಧೈರ್ಯ ನೀಡಿದ.

"ನೀವು ಯಾರು?"

"ನಂಬಿದರೆ ಮಿತ್ರ....ನಂಬದಿದ್ದರೆ ಶತ್ರು."

"ನಿಮಗೇನು ಬೇಕು?"

"ಇದೀಗ ನೀನು ಹೇಳಿದೆಯಲ್ಲ....ಒಂದೇ ನಿಮಿಷಕ್ಕೆ ಮೊದಲುಫ್ರಾಂಕ-ವಿನ್‌ಗೆ ಮನೆಯಿಂದ ಟೆಲಿಫೋನು ಬಂದಿತ್ತು ಅಂತ."

"ಹೌದು."

"ಫೋನು ಯಾರು ಮಾಡಿದ್ದರು?"

"ಅವನ ಮನೆಯಾಕೆ."

"ಎಲ್ಲಿಂದ."

"ತಿಳಿಯದು."

"ಈ ಸುದ್ದಿ ಪ್ರಾಂಕವಿನ್‌ಗೆ ಗೊತ್ತಾಯಿತೆ?"

"ನನಗೆ ಗೊತ್ತಿಲ್ಲ."

"ಮತ್ತೆ ಈ ವಿಷಯ ನಿನಗೆ ಯಾರು ಹೇಳಿದರು."

"ಮಾರ್ಟಿನ್."

"ಮಾರ್ಟಿನ್ ಯಾರು?"

"ನನ್ನಂತೆ ಒಬ್ಬ ಕೆಲಸಗಾರ."

"ಎಲ್ಲಾ ವಿವರವಾಗಿ ಹೇಳು" ನೂರರ ಒಂದು ನೋಟು ಅವನೆಡೆ ಚಾಚಿದ ಹೇಮಂತ. ಅದರತ್ತ ಆಶೆಯಿಂದ ನೋಡಿದ ಆತ.

"ಹೂಂ, ಇದು ನಿನಗೇ, ಇನ್ನೂ ಒಂದು ಕೊಡ್ತೇನೆ."

"ನಾನು ಕೆಲಸದ ಮೇಲಿದ್ದೆ. ಮಾರ್ಟಿನ್ ಓಡತೊಡಗಿದ್ದ. ಏಕೆಂದು ನಾನು ವಿಚಾರಿಸಿದೆ. ಪ್ರಾಂಕವಿನ್‌ಗೆ ಫೋನು ಬಂದಿದೆಯಂತೆ ಮನೆಯಿಂದ ಅದನ್ನು ತಿಳಿಸಲು ಹೊರಟಿರುವೆ."

"ಮುಂದೆ."

"ನಾನು ಸುಮ್ಮನಾದೆ. ಐದಾರು ನಿಮಿಷಗಳ ನಂತರ ಮಾರ್ಟಿನ್ ಮರಳಿ ಬಂದ. ವಿಮಾನ ಆಗಲೇ ಮೇಲೆ ಹಾರುವದರಲ್ಲಿತ್ತು. ಏನಾಯ್ತು ಎಂದು ಕೇಳಿದೆ....ಏನೋ ಆತ ಹೇಳಿದ ನನಗೆ ಕೇಳಿಸಲಿಲ್ಲ."

"ಏಕೆ?"

"ಅಷ್ಟರಲ್ಲಿ ವಿಮಾನ ಮೇಲೆ ಹಾರುತ್ತಿದ್ದಂತೆ ಸ್ಫೋಟಗೊಂಡಿತ್ತು."

ಹೇಮಂತ ಒಂದು ಕ್ಷಣ ಮೌನವಾಗಿದ್ದು ಕೇಳಿದ.

"ನಿನ್ನ ಹೆಸರೇನು?"

"ಶಂಕರ್....ಈತನದು ನಾರಾಯಣ"

"ನೀವಿಲ್ಲೇ ಕೆಲಸ ಮಾಡುತ್ತೀರಾ?"

"ಹೌದು...ಬಿ ವಿಭಾಗದಲ್ಲಿ."

"ಸರಿ...."ಈ ವಿಷಯ ಮತ್ತೆ ಯಾರ ಮುಂದೂ ಹೇಳಬೇಡಿ, ಹೇಳಿದರೆ ನೀವು ಪ್ರಾಣ ಕಳೆದುಕೊಳ್ಳುತ್ತೀರಿ." ಎಚ್ಚರಿಸಿದ ಹೇಮಂತ. ಅವರೆಡೆ ಮತ್ತೊಂದು ನೂರರ ನೋಟು ನೀಡಿ ಜೀಪಿನೆಡೆ ನಡೆದ. ಅವರಿಬ್ಬರ ಮುಖದ

ಮೇಲೆ ಪ್ರೇತ ಕಳೆ ಸುರಿಯುತ್ತಿತ್ತು. ನೂರರ ಎರಡೂ ನೋಟುಗಳನ್ನು ಜೇಬಿಗಿಟ್ಟುಕೊಳ್ಳುವ ಚೈತನ್ಯವೂ ಅವರಲ್ಲಿರಲಿಲ್ಲ.

ಆಫೀಸಿನಲ್ಲಿ ಮಾರ್ಟಿನ್ ವಿಳಾಸ ಪಡೆಯಲು ಮೇಜರ್ ತೊಂದರೆಯೇನೂ ಆಗಲಿಲ್ಲ. ಕ್ಯಾಪ್ಟನ್ ಸತೀಶ ಮಾತ್ರ ಅಚ್ಚರಿಯಿಂದ ಅವನೆಡೆ ನೋಡಿದ್ದು ನಿಜ. ಅದಕ್ಕುತ್ತರ ಮುಗುಳು ನಗೆಯೊಂದೇ.

ಹೊರಗೆ ಬಂದ ಹೇಮಂತ ನಿಧಾನವಾಗಿ ತನ್ನ ಕಾರಿನತ್ತ ನಡೆದ. ಅಕ್ಕಪಕ್ಕದಲ್ಲಿ ನಿಂತಿದ್ದ ಎಷ್ಟೋ ವಾಹನಗಳು ಮಾಯವಾಗಿದ್ದವು....ಅವನ ಕಾರು ದೂರದಲ್ಲಿ ಕಾಣಿಸುತ್ತಿತ್ತು. ಅವನ ಕಾರಿನ ಮುಂದೆ ಮತ್ತೆರಡು ವಾಹನಗಳು. ಮೇಜರ ಮಾರ್ಟಿನ್ ಬಗ್ಗೆ ಯೋಚಿಸುತ್ತ ನಡೆದಿದ್ದ....ಕಣ್ಣಿನ ಮೇಲೆ ಪ್ರಕಾಶ ಕಿರಣ ಬಿದ್ದಂತಾಯಿತು ಇದೆಲ್ಲಿಂದ? ಎಂದು ಅಂದುಕೊಳ್ಳುತ್ತ ಎದುರು ತನ್ನ ಕಾರಿನೆಡೆ ನೋಡಿದ....ಕೊನೆಯಲ್ಲಿ ನಿಂತ ವಾಹನದ ಬಳಿಗೆ ಫಳಫಳ ಏನೋ ಹೊಳೆದಂತಾಯಿತು.

ಹೇಮಂತನ ಮೈ ಜುಂ ಎಂದಿತ್ತು. ಕಣ್ಣಿನ ಮೇಲೆ ಬಿದ್ದ ಪ್ರಕಾಶ ಕಿರಣ ಏನೆಂದು ಹೊಳೆದಿತ್ತು. ರೈಫಲ್‌ಗೆ ಜೋಡಿಸಿದ ಮೇಲೆ ಸೂರ್ಯನಪ್ರಕಾಶ ಬಿದ್ದು ಅದು ಪ್ರತಿಫಲಿಸಿತ್ತು.

ಮುಂದಿನ ಕ್ಷಣ ಗಬಕ್‌ನೆ ಆತ ನೆಲಕಚ್ಚಿದ.

ನೆಲಕಚ್ಚಿದ ಕ್ಷಣವೇ ಮೇಲ್ಭಾಗದಲ್ಲಿ 'ಸುಂಯ್' ಎಂಬ ಯಾವುದೋ ಒಂದು ವಸ್ತು ಹಾಯ್ದು ಹೋಗಿ, ಅದರೊಂದಿಗೆ ಹಿಂದಿನಿಂದ ಯಾರೋ ವಿಕಾರ ಕಂಠದಲ್ಲಿ ಕಿರುಚಿಕೊಂಡದ್ದು ಕೇಳಿಸಿತು. ಆದರೂ ಆತ ನಿಶ್ಚಲವಾಗಿ ಬಿದ್ದುಕೊಂಡಿದ್ದ. ದೂರದಲ್ಲಿ ವಾಹನವೊಂದು ಸ್ಟಾರ್ಟ ಆಗಿ ವೇಗವಾಗಿ ಓಡಿದ ಸದ್ದು ಬಂದ ಮೇಲೆ ಎದ್ದು ನಿಂತ.

ಅವನ ಕಾರ ಮುಂದಿದ್ದ ವಾಹನ ದೂರ ಓಡುತ್ತಿತ್ತು. ಹಿಂದೆ ಹೊರಳಿ ನೋಡಿದ. ಹತ್ತಾರು ಜನ ಒಂದೆಡೆ ಗುಂಪಾಗಿ ನೆರೆದಿದ್ದರು. ಪೋಲೀಸರು ರಕ್ಷಣಾ ದಳದವರು ಅತ್ತ ಓಡಿಬರುತ್ತಿದ್ದರು· ಅಲ್ಲಿ ನಡೆದಿದ್ದೇನೆಂಬುದು ಅವನಿಗೆ ಅರ್ಥವಾಗಿತ್ತು. ಅವನಿಗೆಂದು ಗುರಿ ಇಟ್ಟಿದ್ದ ರೈಫಲ್ ಗುಂಡು ಅವನ ಹಿಂದಿದ್ದ ಯಾರನ್ನೋ ಬಲಿ ತೆಗೆದುಕೊಂಡಿತ್ತು.

ಹೇಮಂತ ಮತ್ತೊಂದು ಬಾರಿ ಸಾವಿಗೆ ಕೈಕೊಟ್ಟಿದ್ದ. ತನ್ನ ಕಾರನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಒಳಗೆ ಕುಳಿತಾಗ ಅವನ ತಲೆಯಲ್ಲ ಒಂದೇ ಸಮಸ್ಯೆ ಕಾಡುತ್ತಿತ್ತು.

ತನ್ನ ಮೇಲೆ ಆಕ್ರಮಣಮಾಡಿದವರಾರು? ಉದ್ದೇಶವೇನು? ಮಾರ್ಟಿನ್

ನನ್ನ ತಲುಪಲಾಗದಂತೆ ಮಾಡಲೋ?

ಅಥವಾ

ರತ್ನಕುಮಾರಿಯನ್ನು ಸಂಧಿಸದಿರಲೆಂದೋ....?

* * * *

ಮಾರ್ಟಿನ್ ಮನೆಗೆ ಹೋಗುವ ವಿಚಾರ ಬಿಟ್ಟುಕೊಟ್ಟ ಹೇಮಂತ. ತನ್ನ ಗುರಿ ತಪ್ಪಿದೆ ಎಂದು ತಿಳಿದ ಮೇಲೆ ಅವನ "ರೈಫಲ್ ಮಿತ್ರ" ಅಲ್ಲಿ ತನ್ನ ದಾರಿ ಕಾಯುತ್ತಿರುತ್ತಾನೆ. ಎಂಬ ವಿಚಾರದೊಂದಿಗೆ ಮನೆಗೆ ಹೋಗಿ ಅಶೋಕ ಅಥವಾ ಸುಷಮಾರಿಂದ ಏನಾದರೂ ಸಂದೇಶ ಬಂದಿದೆಯೇ ಎಂದು ವಿಚಾರಿಸಬೇಕಾಗಿತ್ತು. ಅದಕ್ಕಾಗಿ ನೇರವಾಗಿ ಮನೆ ಕಡೆ ಬಂದ. ಗೇಟಿಗೆ ಬೀಗ ಹಾಕಿತ್ತು. ಅವನ ಅಣತಿಯಂತೆ ಬಹಾದ್ದೂರ್ ಆಫೀಸಿನಲ್ಲಿ ಕುಳಿತಿದ್ದ.... ಜೋರಾಗಿ ಕಾರಿನ ಹಾರ್ನ್ ಬಾರಿಸಿದ. ಒಂದೇ ನಿಮಿಷದಲ್ಲಿ ಬಹದ್ದೂರ ಓಡುತ್ತ ಬರುತ್ತಿರುವದು ಕಾಣಿಸಿತು. ಆತ ಗೇಟು ತೆರೆದಾದ ಮೇಲೆ ಮೆಲ್ಲನೆ ಕಾರು ಒಳಗೆ ತಂದ.

"ಸಾಬ್....ಯಾರ ಫೋನೂ ಇಲ್ಲ...." ಬಹದ್ದೂರ ನುಡಿದ.

ಯಾವ ಉತ್ತರವನ್ನೂ ಕೊಡದೆ ಪೋರ್ಟಿಕೋದಲ್ಲಿ ಕಾರು ತಂದು ನಿಲ್ಲಿಸಿ ಭಾರವಾದ ಮನದೊಂದಿಗೆ ಆತ ಕೆಳಗಿಳಿದತನ್ನ ಮೇಲೆ ನಡೆದ ರೈಫಲ್ ದಾಳಿ....ಅಶೋಕ ಹಾಗೂ ಸುಷಮಾರಿಂದ ಯಾವ ಸುದ್ದಿಯೂ ಬಾರದಿರುವದು ಇವೆರಡೂ ಅವನ ಮೇಲೆ ಪರಿಣಾಮ ಬೀರಿದ್ದವು. ಆತ ಚಿಂತಿತನಾಗಿದ್ದ.

ತನ್ನ ಬಗೆಗಲ್ಲ.... ತನ್ನ ಸಂಗಡಿಗರ ಬಗೆಗೆ....

ಇಬ್ಬರೂ ಒಬ್ಬರಿಗಿಂತ ಒಬ್ಬರು ಮಿಗಿಲು. ಹೀಗಿರುವಾಗ ಇಬ್ಬರೂ ಹೇಗೆ ಕಾಣೆಯಾಗಿದ್ದಾರೆ. ಸಂಪರ್ಕ ಏಕೆ ಬಳಸಲಿಲ್ಲ. ಇಷ್ಟು ಹೊತ್ತಾದರೂ ಏಕೆ ಮರಳಲಿಲ್ಲ" ಒಂದು ಗಂಟೆ ಹಿಂದೆ ಟ್ರಾನ್ಸ್‌ಮೀಟರ ವಾಚಿನಲ್ಲಿ ಗಂಟೆ ಬಾರಿಸಿದ್ದು ಯಾರ ವಾಚಿನಿಂದ? ಸುಷಮಾಳಿಗೆ ಅಪಾಯ ಒದಗಿದರೆ ಅಶೋಕ ಸಹಾಯಕ್ಕಿದ್ದ. ಅವನಿಗೆ ತೊಂದರೆ ಎದುರಾದಲ್ಲಿ ಸುಷಮಾ ಇದ್ದಳು. ಹೀಗಿರುವಾಗ ಇಬ್ಬರೂ ಅಪಾಯದಲ್ಲಿ ಸಿಲುಕುವದೆಂದರೆ ಏನರ್ಥ?

ಹೊಟ್ಟೆ ಹಸಿದಿದ್ದರೂ ಮನಸ್ಸಾಗದ್ದರಿಂದ ಹಾಗೇ ಹಾಸಿಗೆ ಮೇಲೆ ಒರಗಿದ್ದ. ಮೇಲಿಂದಮೇಲೆ ಗಡಿಯಾರದತ್ತ, ಟೆಲಿಫೋನಿನತ್ತ ದಿಟ್ಟಿಸುತ್ತಿದ್ದ. ಏನೋ ನಿರೀಕ್ಷೆ. ಸಂಜೆ ಐದಾದಾಗ ನಿರೀಕ್ಷೆ ಹುಸಿಯಾಯಿತು. ಆತ ಮೇಲೆದ್ದ. ಮೊದಲೊಂದು ಕಪ್ ಸ್ಟ್ರಾಂಗ್ ಕಾಫಿ ಕುಡಿದು ಹೊರನಡೆದ. ಎರಡೇ ನಿಮಿಷ

ಗಳಲ್ಲಿ ಅವನ ಮಾರುತಿ ಸುಜುಕಿ ಹರಿನಗರದಲ್ಲಿ ಓಡತೊಡಗಿತು.

ಆರನೇ ಮೇನ್‌ಗೆ ಬಂದು ಮರದಡಿ ಕಾರು ನಿಲ್ಲಿಸಿದ. ಲಾಕ್ ಮಾಡಿ ಕೋಟು ಹೆಗಲಮೇಲೆ ಚೆಲ್ಲಿಕೊಂಡು ಹರಿನಗರದ ಒಂದೆರಡು ಮೇನ್‌ಗಳಲ್ಲಿ ಸಂಚರಿಸಿದ, ಅಡ್ಡಾಡಿದ. ಎಲ್ಲೂ ಸುಷಮಾ ಆಗಲಿ,ಅಶೋಕ ಆಗಲಿ ಕಾಣಬರಲಿಲ್ಲ. ಅವರ ಧ್ವನಿಯೂ ಕೇಳಿ ಬರಲಿಲ್ಲ. ನಾಲ್ಕಾರು ಜನರನ್ನು ವಿಚಾರಿಸಿದಾಗ ಬೆಳಗಿನ ಸಮಯ ಇಬ್ಬರೂ ಅಲ್ಲಿದ್ದರು ಎಂಬುದಾಗಿ ಒಂದಿಬ್ಬರು ನುಡಿದರು.

ಒಂದು ಮಾತು ಸ್ಪಷ್ಟವಾಗಿತ್ತು.

ಇಬ್ಬರೂ ತಮ್ಮ ನಿಶ್ಚಿತ ಕೆಲಸದಲ್ಲಿ ನಿರತರಾಗಿದ್ದಾಗಲೇ ಮಾಯವಾಗಿದ್ದರು.

ಯಾರನ್ನೋ ಹಿಂಬಾಲಿಸಿಕೊಂಡು ಹೋದರೋ ಅಥವಾ ಇವರನ್ನೇ ಯಾರಾದರೂ ಅಪಹರಿಸಿದರೋ?

ಹಿಂಬಾಲಿಸುವ ವಿಚಾರವಾಗಿದ್ದರೆ ಒಬ್ಬರು ಹೋಗಬಹುದಿತ್ತು........ ಹಾಗಾದರೆ....ಮುಂದಾತ ಯೋಚಿಸಲಿಲ್ಲ.

ಗಡಸು ಮುಖದೊಡನೆ ದುರ್ವಾಸರ ಅವತಾರ ತಾಳಿ ಆರನೇ ಮೇನ್ ಮೂರನೇ ಕ್ರಾಸ್‌ನಲ್ಲಿರುವ ಇನ್ನೂರಾ ಎಪ್ಪತ್ತನೇ ಮನೆಯತ್ತ ನಡೆದ........ ಮಿಸ್ ಇಂಡಿಯಾ ಆಗಿದ್ದ ರತ್ನಕುಮಾರಿ ಕಡೆಗೆ. ಅವಳಿಂದಲೇ ಅಲ್ಲವೇ ಈ ಅವಾಂತರ? ಅವಳನ್ನೇ ವಿಚಾರಿಸಿದರಾಯ್ತು....ಅವಳ ಮನೆಯೆದುರು ಒಂದು ನಿಂತು ನೋಡಿದ. ಎಡಬಲದ ಅಂದರೆಇನ್ನೂರಾ ಅರವತ್ತೊಂಭತ್ತು. ಇನ್ನೂರಾ ಎಪ್ಪತ್ತೊಂದು ಎರಡೂ.ಮನೆಗಳಿಗೆ ಬೀಗನೇತಾಡುತ್ತಿದ್ದವು. ರತ್ನಕುಮಾರಿಯ ಮನೆ ಬಾಗಿಲು ಮುಚ್ಚಿತ್ತು. ಒಂದು ಬಾರಿ ಬಲಗೈ ಬೆರಳುಗಳನ್ನು ತನ್ನ ಕ್ರಾಪಿನಲ್ಲಿ ಆಡಿಸಿಕೊಂಡ ಮೇಜರ ಗೇಟು ತೆರೆದು ಬಾಗಿಲಿಗೆ ಬಂದು ಕರೆಗಂಟೆ ಗುಂಡಿ ಅದುಮಿದ. ಒಳಗಡೆ ಡಿಂಗಡಾಂಗ್ ಸಂಗೀತ ಕೇಳಿಸಿತು. ಒಂದೆರಡು ಕ್ಷಣಗಳ ನಿರೀಕ್ಷೆ ನಂತರ ಮತ್ತೊಂದು ಬಾರಿ ಗುಂಡಿ ಅದುಮಿದ. ತಕ್ಷಣ ಬಾಗಿಲು ತೆರೆಯಿತು. ಅದರೊಂದಿಗೆ "ಫವು" ಸೆಂಟ್ ಹಾಗೂ ಪೌಡರಿನ ಮೋಹಕ ಸುಗಂಧ ನಾಸಿಕ ಪ್ರವೇಶಿಸಿತು. ತಲೆಎತ್ತಿ ನೋಡಿದ ಹೇಮಂತ ಅವಾಕ್ಕಾದ. ಅವನೆದುರು ಅತ್ಯಂತ ರೂಪವತಿಯಾದ ಸಮತೋಲ ದೇಹ ಸಂಪತ್ತು ಹೊಂದಿದ ಧೃಢ ರಮಣಿಯೊಬ್ಬಳು ನಿಂತಿದ್ದಳು. ಅವಳೇ ರತ್ನಕುಮಾರಿ ಇರಬಹುದೆಂದು ಆತ ಯೋಚಿಸಿದ.

ಜಾರ್ಜೆಟ್ ಸೀರೆ ಉಟ್ಟು ಮೇಲೆ ಬಿಳಿ ಸಿಲ್ಕ ದುಂಡುಕೊರಳಿನ ಬ್ಲೌಜ್ ಧರಿಸಿದ ಆಕೆ ಬಾಬ್‌ಕಟ್ ಮಾಡಿಸಿಕೊಂಡಿದ್ದಳು ಬೋರಂಗಿಯಷ್ಟೇ ಕಪ್ಪಾದ

ದುಂಡು ಕಣ್ಣುಗಳು ಕಾಮನಬಿಲ್ಲಿನಂಥ ಹುಬ್ಬು. ಚಿಕ್ಕದಾದರೂ ಸುಂದರವಾದ ನಾಸಿಕ ತುಸು ದಪ್ಪ ಎನ್ನಬಹುದಾದ ತುಟಿಗಳು. ಮಾಟಾದ ಗದ್ದ.... ಬಿಳಿ ಮಿಶ್ರಿತ ಕೆಂಪು ಬಣ್ಣ. ಐದು ಘೂಟು ಮೂರು ನಾಲ್ಕು ಇಂಚು ಎತ್ತರ. ಸುಂದರವಾದ ಮೈಕಟ್ಟು.

ಸಾಕಷ್ಟು ಕೆಳಗಿಳಿದ ರೌಂಡ್ ಕೊರಳಿನಿಂದ ಹೊರಗೆ ಇಣುಕುತ್ತಿರುವ ದುಂಡು ಕುಚಗಳು....ಅವನ ದೃಷ್ಟಿ ಎರಡೂ ಕುಚಗಳ ಮಧ್ಯೆ ಉಂಟಾದ ಕಣಿವೆಯಂಥ ಪ್ರದೇಶದಲ್ಲೇ ನೆಟ್ಟಿತ್ತು.

"ಎಸ್....ತಾವು ಯಾರು?" ಇಂಪಾದ ಕಂಠದ ಒಡತಿಯಿಂದ ಬಂದಿತು ಪ್ರಶ್ನೆ....ಮೇಜರ್ ಧರೆಗಿಳಿದಿದ್ದ. ಆಕೆಯತ್ತ ನೋಡಿದ. ತನ್ನ ಸೌಂದರ್ಯ ಅವನ ಮೇಲೆ ಬೀರಿದ ಪ್ರಭಾವ ಕಂಡು ಹೆಮ್ಮೆದ ಆಕೆ ಮತ್ತೊಂದು ಬಾರಿ ಕೇಳಿದಳು, "ತಾವು ಯಾರು? ಏನಾಗಬೇಕು."

"ಓಹ್ ಕ್ಷಮಿಸಿ....ತಮ್ಮ ಅಗಾಧ ಸೌಂದರ್ಯ ನನ್ನನ್ನು ಮೂಕನನ್ನಾಗಿ ಮಾಡಿಸಿತು."

ಆಕೆ ಮತ್ತೊಮ್ಮೆ ಬೀಗಿದಳು ಹೆಮ್ಮೆಯಿಂದ.

"ನನ್ನ ಹೆಸರು ಟಾಮ್....ಮುಂಬಯಿಯಿಂದ ಬಂದಿರುವೆ."

ಆಕೆ ಅವನತ್ತ.....ಅಚ್ಚರಿಯಿಂದ ನೋಡಿದಳು. ಅದರೊಂದಿಗೆ ಕೌತುಕ ಬೇರೆ.

"ತಾವು ರತ್ನಕುಮಾರಿ ಅಲ್ಲವೇ...? ಈ ಹಿಂದೆ....ಮಿಸ್ ಇಂಡಿಯಾ."

ಬೇಕಂತಲೇ ಮಾತನ್ನು ಅರ್ಧಕ್ಕೆ ನಿಲ್ಲಿಸಿದ.

"ಹೌದು....ನಾನೇ....ಬನ್ನಿ ಒಳಗೆ" ಆಕೆ ಅಹ್ವಾನಿಸಿ ಒಳ ನಡೆದಳು. ಆತ ಅವಳ ಹಿಂದೆಯೇ ನಡೆದ. ಆಹಾ! ಎಂಥ ನಿಲುವು....ಎಂಥ ನಡೆ....ನಿಜವಾಗಿಯೂ ಇವಳು ಅಪ್ಸರೆಯೇ ಎಂದುಕೊಂಡ ಮನದಲ್ಲಿ.

ಸಿಟೌಟ್ ದಾಟಿ ಡ್ರಾಯಿಂಗ್ ರೂಮಿಗೆ ಬಂದಾಗ ಆತ ದಂಗಾದ.ಎಂಥ ಅಭಿರುಚಿ ರತ್ನಕುಮಾರಿಯದು!

ನಾಲ್ಕೂ ಗೋಡೆಗಳ ಮೇಲೆ ರಾರಾಜಿಸುತ್ತಿರುವ ಸುಂದರ ತೈಲ ವರ್ಣದ ಕಲಾಕೃತಿಗಳು ಮಧ್ಯದಲ್ಲಿ ಕಪ್ಪು ಮರದಲ್ಲಿ ತಯಾರಿಸಿದ ಸುಂದರ ಪೀಠೋಪಕರಣಗಳು. ನೆಲಕೆ, ಹಾಸಿದ ಮೆತ್ತನೆಯ ಕಂಬಳಿ....ಟಿ.ವಿ.... ಫೋನೂ....ಫ್ರಿಜ್....ಕಿಟಕಿ ಬಾಗಿಲುಗಳಿಗೆ ತಿಳುವಾದ ರೇಶಿಮೆ ಪರದೆ.

"ಕುಳಿತುಕೊಳ್ಳಿ,...." ಎಂದಾಗ ಕುಳಿತುಕೊಂಡ ಆತ.

"ತಮ್ಮ ಹೆಸರು ಏನಂದಿರಿ? ತಾನೂ ಕುಳಿತುಕೊಳ್ಳುತ್ತ ಕೇಳಿದಳಾಕೆ."

"ಟಾಮ್....ಟಾಮ್ ಡಿಸೋಜಾ...."

ಕಿಲಕಿಲನೆ ನಕ್ಕಳಾಕೆ....ಹೇಮಂತನ ಮುಖ ಪೆಚ್ಚಗಾಯಿತು ಏಕೆ ಎಂಬಂತೆ ಅವಳತ್ತ ನೋಡಿದ.

"ನೀವು ಸುಳ್ಳು ಹೇಳುತ್ತಿದ್ದೀರಿ?" ನಿರ್ಭಿಡೆಯಿಂದ ನುಡಿದಳಾಕೆ.

"ಏಕೆ? ನನ್ನ ಹೆಸರು ಟಾಮ್ ಅಲ್ಲವೇ?"

"ಅಲ್ಲವೇ ಅಲ್ಲ....ನಿಮ್ಮಷ್ಟು ಆಕರ್ಷಕ ಸುಂದರ ಪುರುಷನ ಹೆಸರು ಇದಾಗಿರಲು ಸಾಧ್ಯವೇ ಇಲ್ಲ...." ಸ್ಪಷ್ಟವಾಗಿಆಕೆನುಡಿದಾಗ ಹೇಮಂತ ಬೆಚ್ಚಿ ಬೀಕಾಯಿತು. ಶಾಲೀನತೆಯಿಂದ ಆಕೆ ಅವನ ಹೆಸರು ಟಾಮ್ ಅಲ್ಲ ಎಂದು ಹೇಳುವದರೊಂದಿಗೆ ಅವನ ಪುರುಷ ಸೌಂದರ್ಯವನ್ನು ಹೊಗಳಿದ್ದಳು. ಹೇಮಂತನ ತುಟಿಗಳು ಗೋಲವಾದವು. "ಹಾಗಾದರೆ ನೀವೇ ಹೇಳಿ....ನನ್ನ ಹೆಸರು ಏನಿರಬಹುದು?"

"ಹೇಳಲೇ?" ಹುಬ್ಬು ಮೇಲಕ್ಕೆತ್ತಿ ಆಕೆ ಕೇಳಿದಾಗ ಇನ್ನೂ ಸುಂದರ ವಾಗಿ ಕಂಡಳು.

"ಹೇಳಿ ನನಗೇನೂ ಅಭ್ಯಂತರವಿಲ್ಲ."

"ನಿಮ್ಮ ಹೆಸರು ಟಾಮ್ ಡಿಸೋಜಾ ಬದಲು...."

ಆಕೆ ಅರ್ಧಕ್ಕೆ ನಿಲ್ಲಿಸಿದಾಗ ಹೇಮಂತ ಅವಳತ್ತ ನೋಡಿದ....ಹೇ ಎಂಬಂತೆ, "ಮೇಜರ್ ಹೇಮಂತ ಎಂದು ಇದ್ದರೆ ಹೇಗೆ?"

ಮತ್ತೆ ಪ್ರಶ್ನಾರ್ಥಕದಲ್ಲೇ ಆಕೆ ಉತ್ತರಿಸಿದಾಗ ಆಕೆಯ ಜಾಣ್ಮೆಗೆ ತಲೆ ದೂಗಿದ ಹೇಮಂತ ಮುಗುಳುನಗುತ್ತ ಉತ್ತರಿಸಿದ.

"ಕರೆಕ್ಟ್....ನೂರಕ್ಕೆ ನೂರು ನಿಮ್ಮ ಮಾತು ಸತ್ಯ; ನನ್ನ ಹೆಸರು ಟಾಮ್ ಅಲ್ಲ. ಮೇಜರ್ ಹೇಮಂತ...."

"ಹಾಗಾದರೆ ಸುಳ್ಳು ಹೆಸರು ಹೇಳಲು ಕಾರಣ?"

"ನಿಮ್ಮ ಸೌಂದರ್ಯದಷ್ಟೇ ನಿಮ್ಮ ಬುದ್ಧಿಮತ್ತೆಯೂ ಪ್ರಖರವಾಗಿದೆಯೇ ಎಂದು ಪರೀಕ್ಷಿಸುವದು."

ಆಕೆ ಮತ್ತೊಮ್ಮೆ ಮುಕ್ತವಾಗಿ ನಕ್ಕಳು....ಹೇಮಂತನ ಪ್ರಶಂಸೆಯ ಮಾತು ಅವಳನ್ನು ಪುಳಕಿತಗೊಳಿಸಿತ್ತು.

"ಇರಿ ಬಂದೆ....ಕುಡಿಯಲು ಕೋಲ್ಡ್ ಏನಾದರೂ ತರುತ್ತೇನೆ."

"ಕಾಫಿ....ಕೋಲ್ಡ್ ಕಾಫಿ...."

"ಕೋಲ್ಡ್ ಬೀರ್ ಬೇಡವೇ?...."

"ಬೇಡ."

"ಏಕೆ....ನನ್ನಿಂದ ಭಯವೆ?"

"ನಿಮ್ಮಿಂದ ಭಯವಿಲ್ಲ ನನ್ನ ಚಾರಿತ್ರ್ಯ ರಕ್ಷಣೆಗಾಗಿ....

"ಅಂದರೆ ನಾನಷ್ಟು ಭಯಂಕರಳೇ?"

"ಹೌದು."

"ಏನೆಂದಿರಿ?"

"ಖಂಡಿತವಾಗಿಯೂ ನೀವು ಭಯಂಕರವಾಗಿದ್ದೀರಿ....? ನಿಮ್ಮ ರೂಪ ಸೌಂದರ್ಯ....ಒಂದು ಪ್ರಜ್ವಲ ಜ್ವಾಲೆ....ನನ್ನಂಥ ಪಾಮರನಿಂದ ಅದನ್ನು ಸಹಿಸಲು ಸಾಧ್ಯವೇ?"

ಒಮ್ಮಿಂದೊಮ್ಮೆಲೆ ರತ್ನಕುಮಾರಿ ಅಧೋಮುಖಿಯಾದಳು. ಅವಳನ್ನು ಇಷ್ಟು ಸುಂದರವಾಗಿ ಯಾರೂ ವರ್ಣಿಸಿದ್ದಿಲ್ಲ. ಅವಳ ಮನೋಹೃದಯದಲ್ಲಿ ಮಧುರ ಝೇಂಕಾರದ ತರಂಗಗಳು ವ್ಯಾಪಿಸಿ ಮೂಕಳನ್ನಾಗಿಸಿದವು.

"ಮೇಡಂ....ಕಾಫಿ....ಕೋಲ್ಡ್...." ಹೇಮಂತ ಅವಳನ್ನು ಎಚ್ಚರಿಸಿದ.

"ಓಹ್....ಸಾರಿ. ಇದೀಗ ಬಂದೆ...." ಅವಳು ಒಳನಡೆದಳು.

ಸುಮಾರು ಒಂದು ನಿಮಿಷ ಪಾತ್ರೆಗಳ ಸದ್ದು. ಅನಂತರ ಸುಂದರವಾದ ಟ್ರೇದಲ್ಲಿ ಚೈನಾದ, ಪಿಂಗಾಣಿ ದೊಡ್ಡ ಮೊಗ್ಗಿನೊಂದಿಗೆ ರತ್ನಕುಮಾರಿ ಒಳ ಬಂದಳು. ಹೇಮಂತ ಒಂದು ಕ್ಷಣ ಬೆರಗಾದ....ಈ ಒಂದು ನಿಮಿಷದ ಅವಧಿ ಯಲ್ಲಿ ಆಕೆ ಕೋಲ್ಡ್ ಕಾಫಿ ತಯಾರಿಸಿ ತರುವದಲ್ಲದೇ ತನ್ನ ಪೋಷಾಕನ್ನೂ ಸಹ ಬದಲಿಸಿದ್ದಳು. ಜಾರ್ಜೆಟ್ ಸೀರೆ, ಸಿಲ್ಕ್ ಬ್ಲೌಜ್ ಬದಲು ಈಗವಳ ಮೈಮೇಲಿದ್ದುದು. ಪಾರದರ್ಶಕ ನೈಟಿ....ತಿಳಿನೀಲಿ ಬಣ್ಣದ್ದು....ಪಾರದರ್ಶಕ ಬಟ್ಟೆಯೊಳಗಿಂದ ಅವಳ ಸುಂದರ ಸುಪುಷ್ಟ ದೇಹ ಸ್ಪಷ್ಟವಾಗಿ ಕಾಣುತ್ತಿತ್ತು. ಅವಳು ಸ್ಪ್ರೇಮಾಡಿಕೊಂಡಿದ್ದ 'ಸೆಂಟ್' ಮತ್ತುಬರಿಸುವಂತಿತ್ತು. ತನ್ನ ಮೇಲೆ ಆಕೆ "ಮೇನಕೆಯು" ಬಲೆ ಬೀಸುತ್ತಿದ್ದಾಳೆಂಬುದನ್ನು ಊಹಿಸಿದ ಮೇಜರ ತಾನು ಹೆಚ್ಚು ಜಾಗೃತನಾಗಿರಬೇಕೆಂದುಕೊಂಡ. ಅವಳು ನೀಡಿದ ಕೋಲ್ಡ ಕಾಫಿ ಮೊಗ್ಗಿಗೆ ತುಟಿ ತಗುಲಿಸಿ ಒಂದು ಗುಟುಕು ಗಂಟಲಲ್ಲಿಳಿಸಿ ಕೇಳಿದ. "ನಾನು ಮೇಜರ ಹೇಮಂತ ಎಂದು ನಿಮಗೆ ಹೇಗೆ ತಿಳಿಯಿತು?"

ಸಮ್ಮೋಹನಗೊಳಿಸುವ ನಗೆ ಅವಳ ತುಟಿಗಳ ಮೇಲೆ ಲಾಸ್ಯವಾಡಿತು. "ನನ್ನಂಥವಳನ್ನು ಪರವಶಗೊಳಿಸುವ ಪುರುಷೋಚಿತ ಸೌಂದರ್ಯ ಮೇಜರ ಹೇಮಂತನಿಗಲ್ಲದೇ ಬೇರೆ ಯಾರಿಗೆ ಇರಲು ಸಾಧ್ಯ?"

ಹೇಮಂತ ಅವಾಕ್ಕಾದ ಅವಳವಾತನಾಡುವ ಜಾಣ್ಮೆ ಕಂಡು.ಸರಿಯಾಗಿ ಅವನ ಶೈಲಿಯಲ್ಲೇ ಆಕೆ ಉತ್ತರಿಸಿದ್ದಳು. ಹೇಮಂತ ನಿರುತ್ತರನಾದುದನ್ನು

ಕಂಡ ಆಕೆ ವಿಜಯದ ನಗೆಯೊಂದಿಗೆ ಹೇಳಿದಳು, "ನಿಮ್ಮನ್ನು ಹೆಚ್ಚು ಹೊತ್ತುಗೊಂದಲದಲ್ಲಿ ಕೆಡುವುವ ಉದ್ದೇಶ ನನಗಿಲ್ಲ....ನಿಮ್ಮ ಬರವು ನನಗೆ ಮೊದಲೇ ತಿಳಿದಿತ್ತು."

"ಹೌದಾ?"

"ಹೇಗೆಂದು ಕೇಳಲಿಲ್ಲವಲ್ಲ?"

"ನೀವಾಗಿಯೇ ಹೇಳುತ್ತೀರೆಂದುಕೊಂಡೆ ಅಷ್ಟೇ......." ಆತ ನಗುತ್ತ ಉತ್ತರಿಸಿದ.

"ನಿಜ....ಸಾಂಬಮೂರ್ತಿಯವರು ಫೋನು ಮಾಡಿ ತಿಳಿಸಿದ್ದರು."

"ಹೌದಾ?" ಗಾಬರಿಯಿಂದ ಕೇಳಿದ ಹೇಮಂತ.

"ಏಕಿಷ್ಟು ಗಾಬರಿ, ಇಂದು ಬೆಳಿಗ್ಗೆ ಅವರೇ ಸ್ವತಃ ಫೋನು ಮಾಡಿ ಹೇಳಿದರು. ಇಂದು ನಾನು ಬರುವದಿಲ್ಲ. ಬಹುಶಃ ಮೇಜರ ಹೇಮಂತ ಬರಬಹುದು. ಅವರ ಮುಂದೆ ಯಾವ ವಿಷಯವನ್ನೂ ಮುಚ್ಚಿಡಬೇಡ...."

ರತ್ನಕುಮಾರಿ ಯಾವ ವಿಷಯವನ್ನೂ ಮುಚ್ಚಿಡಬೇಡ....ಎಂಬಲ್ಲಿ ಹೆಚ್ಚು ಒತ್ತು ಕೊಟ್ಟು ತುಂಟನಗೆ ಸೂಸಿದ್ದು ಕಂಡು ಅವನ ಮೈ ಜುಂ ಎಂದಿತು. ಗಟಗಟನೆ ಕಾಫಿ ಕುಡಿದು ಮೇಲೆದ್ದ. ಅವನತ್ತ ನೋಡಿ ಒಂದು ಬಾರಿ ತನ್ನೆರಡೂ ಕೈಗಳನ್ನು ಮೇಲೆಕ್ಕೆತ್ತಿ ಆಕಳಿಸಿದ, ಆಕೆ ಉನ್ಮಾದಭರಿತ ಧ್ವನಿಯಲ್ಲಿ ಕೇಳಿದಳು.

"ಏಕೆ? ಹೊರಟುಬಿಟ್ಟಿರಲ್ಲ....ಬಂದ ಕೆಲಸವಾಯಿತೇ?"

"ಓಹ್...."

ಚುಟುಕಿನಲ್ಲಿ ಉತ್ತರಿಸಿದ ಹೇಮಂತ ಬಾಗಿಲತ್ತ ನಡೆದ.

"ಇರಿ ಒಂದು ನಿಮಿಷ" ರತ್ನಕುಮಾರಿ ಒಳನಡೆದಳು.

ಅದೇ ಕ್ಷಣ ಆಕೆ ಮೆಲುವಾಗಿ ಚೀರಿದ್ದು ಕೇಳಿಸಿತು. ಮಿಂಚಿನ ವೇಗದಲ್ಲಿ ಒಳಗೆ ಹಾರಿದ. ಬಂದ ಆತ ತಟಸ್ಥನಾಗಿ ಅಲ್ಲೇ ನಿಂತುಬಿಟ್ಟ, ಅವನ ಉಸಿರು ಸ್ತಬ್ಧವಾಗಿತ್ತು.

ಅವನೆದುರು ಜನ್ಮಜಾತ ಸ್ಥಿತಿಯಲ್ಲಿ ನಿಂತಿದ್ದಳು ರತ್ನಕುಮಾರಿ....

* * * *

ಜನ್ಮಜಾತ ಸ್ಥಿತಿಯಲ್ಲಿ ತನ್ನೆದುರು ನಿಂತು ಮೋಹಕ ನಗೆಸೂಸುತ್ತಿರುವ ಕಲಿಯುಗದ ಮೇನಕೆ. ಮಿಸ್ ರತ್ನಕುಮಾರಿಯನ್ನು ಕಂಡ ಹೇಮಂತ ತನ್ನನ್ನು ತಾನೇ ಮರೆತುಬಿಟ್ಟ. ನಿಂತಲ್ಲೇ ಶಿಲೆಯಂತಾದ ವಿಜಯದ ನಗೆಯೊಂದನ್ನೆಸೆದು ಎರಡು ಮೂರು ಹೆಜ್ಜೆ ಹಾಕಿದಳು. ಮೇಜರನ ಪುಟ್ಟ

ಹೃದಯ ಹಾರಿ ಬಾಯಿಗೆ ಬಂದಂತಾಯಿತು. ನಗ್ನ ದೇಹದ ಅಂಗುಲ ಅಂಗುಲದಲ್ಲಿ ಭಗವಂತ ಎಂಥ ಮಾದಕತೆಯನ್ನು ತುಂಬಿರುವನಲ್ಲ ಎಂದುಕೊಂಡ. ಅವಳು ಒಂದೊಂದೇ ಹೆಜ್ಜೆ ಇಟ್ಟಾಗ ಲಯಬದ್ಧವಾದ ಅಲುಗಿದ ಕುಂಭ ಕುಚಗಳು ಮನದಲ್ಲಿ ಬಿರುಗಾಳಿ ಎಬ್ಬಿಸಿದವು. ರತ್ನಕುಮಾರಿ ನೀಳವಾಗಿ ಕೈಗಳನ್ನು ಚಾಚಿ ಅವನ ಹೆಗಲಮೇಲಿಟ್ಟಳು. ಅವಳ ದೃಷ್ಟಿ ಅವನ ದೃಷ್ಟಿಯೊಂದಿಗೆ ಬೆರೆತಾಗ ಅವನ ಮೈಜುಂ ಎಂದಿತು....ಅವಳ ಮೃದುವಾದ ಬೆರಳುಗಳು ಪೊದೆಯಂಥ ಕಪ್ಪು ಕೂದಲಲ್ಲಿ ಆಡಿದಾಗ ಹೇಮಂತ ರೋಮಾಂಚಿತನಾದ. ಆಕೆ ತನ್ನೆರಡೂ ಹಿಮ್ಮಡಿಗಳನ್ನು ಮೇಲೆತ್ತಿ ತುದಿಗಾಲ ಮೇಲೆ ನಿಂತಾಗ ಅವನ ತುಟಿಗಳಿಗೆ ಅವಳ ತುಟಿಗಳು ಹತ್ತಿರವಾದವು. ಹೇಮಂತನ ತಲೆಯನ್ನು ತುಸುವಾಗಿ ತನ್ನತ್ತ ಬಾಗಿಸಿದಳು. ಹೇಮಂತನ ತುಟಿಗಳು ರತ್ನಕುಮಾರಿಯ ತುಟಿಗಳ ಮೇಲೆ ಮುದ್ರೆಯೊತ್ತಿದವು....ಮೋಸಂಬಿ ಹಣ್ಣನ್ನು ಚೀಪುವಂತೆ ಆಕೆ ಅವನ ತುಟಿ ಚೀಪತೊಡಗಿದಳು. ಅದರೊಂದಿಗೆ ಅವಳ ಎರಡೂ ಕೈಗಳು ಅವನ ಮೈತುಂಬಾ ಅಡ್ಡಾಡತೊಡಗಿದವು.

"ಠಣ್....ಣ್....ಣ್....ಎಂಬ ಕರ್ಕಶವಾದ ಅದರಲ್ಲಿ ಸ್ವಲ್ಪಮಟ್ಟಿಗೆ ಇಂಪು ಬೆರೆಸಿದ ಧ್ವನಿ ಕೇಳಿಸುವದರೊಂದಿಗೆ ಅದರ ಹಿಂದೆಯೇ "ಠಪ್" ಎಂದು ಕರ್ಕಶ ಧ್ವನಿಗೆ ಹೇಮಂತ ಒಮ್ಮೆಲೆ ಎಚ್ಚರಗೊಂಡ....ಏನು ನಡೆಯುತ್ತಿದೆ ಎಂದರ್ಥವಾಗಿ ಎರಡೂ ಕೈಗಳಿಂದ ರತ್ನಕುಮಾರಿಯನ್ನು ನಿದಾರ್ಕ್ಷಿಣ್ಯವಾಗಿ ಹಿಂದಕ್ಕೆ ತಳ್ಳಿದ....ಏದುಸಿರುಬಿಡುತ್ತಿದ್ದ ರತ್ನಕುಮಾರಿ ಅಪ್ರತಿಭಳಾದಳು.

"ಇದೇನಿದು ಡಾರ್ಲಿಂಗ್?" ಮಾದಕ ಕಂಠದಲ್ಲಿ ಉಲಿಯುತ್ತ ಮತ್ತೆ ಅವನನ್ನು ಸಮೀಪಿಸಿದಳು. ಅಷ್ಟರಲ್ಲಿ ಮೇಜರ ಸುಧಾರಿಸಿಕೊಂಡಿದ್ದ. ಅವಳ ಸಮ್ಮೋಹಿನಿಯಿಂದ ಆತ ಹೊರಬಂದಿದ್ದ.

ಹತ್ತಿರ ಬಂದಿದ್ದ ಅವಳನ್ನು ದೂರ ಸರಿಸಿ ಗಡಸು ಕಂಠದಲ್ಲಿ ನುಡಿದ. "ಇಲ್ಲಿಯವರೆಗೂ ನಡೆದ ನಾಟಕ ಸಾಕು....ಬಟ್ಟೆ ತೊಟ್ಟು ಸಭ್ಯಳಾಗಿ ಬಾ."

"ನಿಮ್ಮ ವರ್ತನೆ ಸಭ್ಯತನದ್ದಲ್ಲ ಮೇಜರ್...."

"ಮಾತು ಸಾಕು....ಬೇಗ ಬಟ್ಟೆ ತೊಟ್ಟುಕೊ."

"ಒಲಿದು ಬಂದ ಅಪ್ಸರೆಯನ್ನು...."

"ಶಟಪ್...."

ಅಲ್ಲಿಯೇ ಮುದ್ದೆಯಾಗಿ ಬಿದ್ದಿದ್ದ ಅವಳ ನೈಟಗೌನನ್ನು ಎತ್ತಿ ಅವಳೆಡೆ ಎಸೆದ. ಇನ್ನು ತನ್ನಾಟ ಅವನ ಮುಂದೆ ನಡೆಯಲಾರದೆಂದು ಅರಿತ ಆಕೆ ಮೌನವಾಗಿ ಗೌನ ಧರಿಸಿ ಅವನನ್ನು ಹಿಂಬಾಲಿಸಿದಳು.

ಡ್ರಾಯಿಂಗ ರೂಮಿಗೆ ಬಂದ ಹೇಮಂತ ಸೋಫಾದಲ್ಲಿ ಆಸೀನನಾದ. ಅವನ ಎದುರಿಗಿನ ಕುರ್ಚಿಯಲ್ಲಿ ರತ್ನಕುಮಾರಿ ಕುಳಿತಳು.

"ಮಿಸ್ ರತ್ನಕುಮಾರಿ...."

ಆಕೆ ತಲೆ ಎತ್ತಿ ಅವನೆಡೆ ನೋಡಿದಳು. ಆ ದೃಷ್ಟಿಯಲ್ಲಿ ಮಾದಕತೆ ಇರಲಿಲ್ಲ....ಹಸಿವು ಇರಲಿಲ್ಲ....ಸಮ್ಮೋಹಿನಿಯೂ ಇರಲಿಲ್ಲ....ಮುಗ್ಧತೆ ಇತ್ತು.

"ಸುಷಮಾ ಎಲ್ಲಿ?"

ಅವಳ ಹುಬ್ಬುಗಳು ಅಚ್ಚರಿಯಿಂದ ಮೇಲೇರಿದವು. ಉತ್ತರಿಸಲಿಲ್ಲ.

"ಅಶೋಕ ಎಲ್ಲಿ?"

ಅವಳ ಮುಖಭಾವ ಬದಲಾಯಿತು.

"ಯಾವ ಸುಷಮಾ....? ಯಾರು ಅಶೋಕ? ನನಗೊಂದೂ ತಿಳಿಯದು"

"ನನ್ನ ಅಸಿಸ್ಟಂಟ್ ಸುಷಮಾ ಹಾಗೂ ಅಶೋಕರ ಬಗ್ಗೆ ನಿನಗೆ ತಿಳಿದಿಲ್ಲವೇ?"

"ತಿಳಿದಿದೆ. ಅವರಿಗೂ ನೀವು ಕೇಳುತ್ತಿರುವವರಿಗೂ ಏನು ಸಮ್ಬಂಧ?"

"ಅವರಿಬ್ಬರ ಒಂದೇ. ನಾನು ಕೇಳುತ್ತಿದ್ದುದು ಅವರನ್ನೇ."

"ಅದು ನಿಮಗೇ ಗೊತ್ತು .."

"ನಿನಗೆ ಗೊತ್ತಿಲ್ಲವೇ?"

"ನನಗೆ ಹೇಗೆ ಗೊತ್ತು? ನಾನು ತ್ರಿಕಾಲಜ್ಞಾನಿಯಲ್ಲ."

"ಒಗಟಿನ ಮಾತು ಬೇಡ. ಇಂದು ಬೆಳಿಗ್ಗೆ ನಾನು ಅವರಿಬ್ಬರನ್ನೂ ನಿನ್ನನ್ನು ಪಂಶೋಧಿಸಲು ಕಳಿಸಿದ್ದೆ...."

"ಹೌದೆ? ಅಚ್ಚರಿಯಿಂದ ಕೇಳಿದಳು ಆಕೆ."

"ಅವರಿಬ್ಬರೂ ತಿರುಗಿ ಬಂದಿಲ್ಲ."

ಹೇಮಂತ ಅವಳ ಮುಖವನ್ನೇ ದಿಟ್ಟಿಸಿದ. ಯಾವ ಬದಲಾವಣೆಯೂ ಕಾಣಲಿಲ್ಲ.

"ಅವರಿಬ್ಬರೂ ಎಲ್ಲಿ?"

"ನನಗೆ ತಿಳಿಯದು."

"ಅವರು ನಿನ್ನಲ್ಲಿಗೆ ಬರಲಿಲ್ಲವೆ?"

"ಇಲ್ಲ."

"ಚೆನ್ನಾಗಿ ನೆನಪು ಮಾಡಿಕೊ....ಸುಷಮಾ ಭಿಕ್ಷುಕಿ ವೇಷದಲ್ಲಿದ್ದಳು, ಆತ ಮಸಾಲೆ ಸಾಮಾನು ಮಾರುವವರ ವೇಷದಲ್ಲಿದ್ದ."

"ನನಗೆ ತಿಳಿಯದು."

"ಅವರಿಬ್ಬರೂ ಇಲ್ಲಿ ಬರಲಿಲ್ಲವೆ?"

"ಖಂಡಿತವಾಗಿಯೂ ಇಲ್ಲ."

"ನಾನಿಲ್ಲಿಗೆ ಬರುವ ಮೊದಲು ಎಲ್ಲಡೆ ವಿಚಾರಿಸಿರುವೆ ಬೆಳಿಗ್ಗೆ ಇಬ್ಬರೂ ಹರಿನಗರದಲ್ಲಿದ್ದರು ಎಂದು ತಿಳಿದಿದೆ."

"ಇರಬಹುದು....ನನ್ನ ಬಳಿ ಬಂದಿಲ್ಲ... "

"ನೀನು ಗಂಟೆ ಅರ್ಧಗಂಟೆ....ಹೊರಗೆ ಹೋಗಿದ್ದೆಯಾ?"

"ಇಲ್ಲ....ಎಂಟು ಗಂಟೆಗೇ ನನಗೆ ಸಾಂಬಮೂರ್ತಿಗಳು ಫೋನು ಮಾಡಿ ನೀವು ಬರುತ್ತೀರಿ ಎಂದು ತಿಳಿಸಿದರು. ನಾನು ನಿಮಗಾಗಿ ಕಾದಿದ್ದ ಅಷ್ಟೇ."

ಅವಳು ನಿಜ ಹೇಳುತ್ತಿದ್ದಾಳೆ ಎನಿಸಿತು. ಆತ ಹೊರಬಂದ....ಅವಳು ಹಿಂಬಾಲಿಸಿದಳು.

ಸೂರ್ಯ ಹಿಮ್ಮೆಟ್ಟತೊಡಗಿದ್ದ. ವಿಜಯ ದುಂದುಭಿಯೊಂದಿಗೆ ಕತ್ತಲೆ ಪ್ರವೇಶಿಸತೊಡಗಿತ್ತು. ಪ್ಯಾಂಟಿನ ಎರಡೂ ಜೇಬುಗಳಿಗೆ ಕೈ ಇಳಿಸಿ ಎಡಬಲಕ್ಕೆ ನೋಡಿದ. ನರಪಿಳ್ಳೆಯ ಸುಳಿವಿಲ್ಲ....ಪಕ್ಕದ ಮನೆಗಳಬಾಗಿಲು ಕಿಟಕಿ ಮುಚ್ಚಿದ್ದವು. ಹಾಗೆ ಒಂದು ಬಾರಿ ರತ್ನಕುಮಾರಿ ಮನೆ ಸುತ್ತು ಹೊಡೆದ....ಏನೂ ಸುಳಿವು ದೊರೆಯಲಿಲ್ಲ. ಅಸಮಾಧಾನದಿಂದ ಕುದಿದ ಆತ. ಕಣ್ಣಿಗೆ ಮುದ್ದೆ ಮುದ್ದೆಯಾಗಿ ಬಿದ್ದಿದ್ದ ಅಲ್ಯುಮಿನಿಯಂ ಒಟ್ಟಲೊಂದು ಕಾಣಿಸಿತು ಬಲಗಾಲಿನಿಂದ ಜಾಡಿಸಿ ಒದ್ದ 'ಠಣ್....ಪ್!'

ಎಂಬ ವಿಚಿತ್ರ ಸಪ್ಪಳದೊಂದಿಗೆ ತುಸುದೂರ ಹಾರಿದ ಅದು ಕಂಪೌಂಡ ಗೋಡೆಗೆ ತಗಲಿ ಅಲ್ಲೇ ಕೆಳಗೆ ಬಿದ್ದಿತು....

ಗೇಟಿನವರೆಗೆ ಬಂದ ಹೇಮಂತ ಹೊರಳಿನಿಂತ....ರತ್ನಕುಮಾರಿ ಅವನತ್ತಲೇ ನೋಡುತ್ತಿದ್ದಳು. ದೃಷ್ಟಿಯಲ್ಲಿ ಅಪಾರ ಗೌರವ ಮೂಡಿತ್ತು.

"ನಾನು ಹೊರಡುತ್ತೇನೆ." ಮೃದು ಸ್ವರದಲ್ಲಿ ಹೇಮಂತ ನುಡಿದ.

"ಮತ್ತೆ ಯಾವಾಗ ಬರುತ್ತೀರಿ?" ತುಂಟತನದಿಂದ ಆಕೆ ಕೇಳಿದಳು.

"ನೀನು ಅಪರಾಧಿ ಎಂದು ತಿಳಿದರೆ ಬಂಧಿಸಲು ಬರುತ್ತೇನೆ."

"ನಿಮ್ಮಿಂದ ಕೋಳ ತೊಡಿಸಿಕೊಳ್ಳಲು ನನಗೆ ಸಂತೋಷವಾಗುತ್ತದೆ."

ಹೇಮಂತ ಉತ್ತರಿಸಲಿಲ್ಲ. ಹೊರಬಂದುಬೀದಿಗೆ ಕೂಡಿದ. ಅವನ ಕಾರು ನಿಂತಲ್ಲೇ ನಿಂತಿತ್ತು. ಒಂದೆರಡು ನಾಯಿಗಳು ಅದರ ಮೇಲೆ ಕಾಲೆತ್ತುತ್ತಿದ್ದವು. ಅವನ ಬೂಟುಗಳ ಸಪ್ಪಳಕ್ಕೆ ದೂರ ಓಡಿದವು. ವಾಚಿನೆಡೆ ದೃಷ್ಟಿ ಹರಿಸಿದ. ಆರೂವರೆಗೆ ಸಮೀಪಿಸಿತು. ಯೋಚನಾ ಕಡಲಲ್ಲಿ ಮುಳುಗಿದ್ದ ಆತ ನಿಧಾನವಾಗಿ ಕಾರು ನಡೆಸತೊಡಗಿದ.

ರತ್ನಕುಮಾರಿ....

ಸಾಂಬಮೂರ್ತಿಗಳ ವೇಶ್ಯೆಯಾಗಿದ್ದರೂ ಕಪಟೆಯಾಗಿರಲಿಲ್ಲ. ಆಕೆ ಅವನ ಮುಂದೆ ಎಲ್ಲಾ ಬಿಚ್ಚಿ ತೋರಿಸಿದ್ದಳು. ಯಾವುದನ್ನೂ ಮುಚ್ಚಿ ಇಟ್ಟಿರಲಿಲ್ಲ. ಆಕೆ ಮಾಜಿ ಸಚಿವ ಸಾಂಬಮೂರ್ತಿಗಳ 'ಕೀಪ್' ಎಂದು ಹೇಳಿದವ ಅವರ ಆಪ್ತಕಾರ್ಯದರ್ಶಿ ಸದಾಶಿವ. ಸಾಂಬಮೂರ್ತಿಗಳು ರತ್ನಕುಮಾರಿ ಬಗ್ಗೆ ತುಟಿಬಿಚ್ಚಿರಲೇ ಇಲ್ಲ. ಹೀಗಿರುವಾಗ ರತ್ನಕುಮಾರಿಗೆ ಫೋನು ಮಾಡಿ ಪೂರ್ವ ಸೂಚನೆ ಹೇಗೆ ನೀಡಿದರು? ಅವರಿಗೆ ಹೇಗೆ ತಿಳಿಯಿತು?

"ಸಾಂಬಮೂರ್ತಿಗಳ ಜೀವನದ ದರ್ಶನ ಮಾಡಿಸಿದವ ಸದಾಶಿವ.ಅವನಿಗೆ ಮಾತ್ರ ಈ ವಿಷಯ ತಿಳಿದಿತ್ತು. ಅವನೇನಾದರೂಸಾಂಬಮೂರ್ತಿಗಳ ಮುಂದೆ ಇದರ ಬಗ್ಗೆ ಬಾಯಿಬಿಟ್ಟನೋ....? ಛೆ....ಛೆ...ಅದು ಹೇಗೆ ಸಾಧ್ಯ?"

ಹೇಮಂತನ ಕಾರು ನೇರವಾಗಿ ಮಾಜಿ ಸಚಿವ ಸಾಂಬಮೂರ್ತಿಗಳ ಮನೆ ಮುಂದೆ ಬಂದು ನಿಂತಿತು. ಬಂಗಲೆ ಎದುರು ಮೂರು ನಾಲ್ಕು ಜನ ಕಾರ್ಯಕರ್ತರು ನಿಂತುಕೊಂಡು ಗುಸುಗುಸು ಮಾತನಾಡುತ್ತಿದ್ದರು. ಹೇಮಂತನ ಕಾರು ನಿಲ್ಲುತ್ತಲೂ ಅವರ ಮಾತು ನಿಂತಿತು. ಅವರೆಲ್ಲ ಅವನತ್ತಲೇಕುತೂಹಲದಿಂದ ನೋಡತೊಡಗಿದರು. ಅವರೆಡೆ ಒಂದು ಬಾರಿ ಸೂಕ್ಷ್ಮ ದೃಷ್ಟಿ ಎಸೆದ ಮೇಜಗನ ಒಳನಡೆದ. ಒಳಗೂ ಅದೇ ದೃಶ್ಯ...ಅಲ್ಲೊಂದು ಇಲ್ಲೊಂದು ಚಿಕ್ಕ ಚಿಕ್ಕ ಗುಂಪು. ಗುಸುಗುಸು ಮಾತು.

ಏನೋ ನಡೆದಿದೆ ಎಂದುಕೊಂಡ ಮನದಲ್ಲಿ.

ಆಫೀಸಿನೊಳಗೆ ಕಾಲಿರಿಸಿದ. ಸದಾಶಿವ ಇರಲಿಲ್ಲ. ಬೇರೆ ಯಾರೋ ಒಬ್ಬರು ಫೋನಿನಲ್ಲಿ ಮಾತನಾಡುತ್ತಿದ್ದರು. ಒಂದರ್ಧ ನಿಮಿಷ ಕಾಯ್ದ ಹೇಮಂತ ರಿಸೀವರ ಕೆಳಗಿರಿಸಿ ಆತ ಮೇಜರ ಕಡೆನೋಡಿ ಕೇಳಿದ, "ಹೇಳಿ ಸರ್ ಏನಾಗಬೇಕಿತ್ತು?"

"ಸಾಂಬಮೂರ್ತಿಗಳನ್ನು ನೋಡಬೇಕಾಗಿತ್ತು."

"ಸಾರಿ ಸರ್...ಅವರನ್ನು ನೋಡುವ ಹಾಗಿಲ್ಲ."

"ತುಂಬಾ ಅರ್ಜಂಟ್ ಇದೆ."

"ಏನಿದ್ದರೂ ಆಗದು ಸರ್...ಕ್ಷಮಿಸಿ" ಹೇಮಂತ ಜೇಬಿನಿಂದ ತನ್ನ ಕಾರ್ಡು ತೆಗೆದು ಅವನ ಮುಂದೆ ಇರಿಸಿ ಹೇಳಿದ.

"ಈಗ ಹೇಳಿ ಸಾಧ್ಯವೋ ಅಸಾಧ್ಯವೋ?"

ಕಾರ್ಡನ್ನು ನೋಡಿ ಬೆಚ್ಚಿದ ಆತ ವಿಷಾದ ಬೆರೆತ ಧ್ವನಿಯಲ್ಲಿ ಗೋಗರೆದ, "ಕ್ಷಮಿಸಿ ಸರ್. ನಾನು ಹೊಸದಾಗಿ ಬಂದಿದ್ದೇನೆ...ತಮ್ಮನ್ನು ನೋಡಿರ

ಲಿಲ್ಲ....ಒಂದು ಬಾರಿ ಡಾಕ್ಟರರನ್ನು ವಿಚಾರಿಸಿ ಹೇಳುತ್ತೇನೆ...." ಪುನಃ ಆತ ಟೆಲಿಫೋನ ಕಡೆ ಕೈಚಾಚಿದಾಗ ಹೇಮಂತ ಗೊಂದಲದಲ್ಲಿ ಬಿದ್ದ.

ಸಾಂಬಮೂರ್ತಿಗಳ ಭೆಟ್ಟಿಗೆ ಡಾಕ್ಟರ ಒಪ್ಪಿಗೆ ಏಕೆ? ಈ ಮೊದಲು ಎಷ್ಟೋ ಬಾರಿ ಬಂದಿದ್ದರೂ ಈ ರೀತಿ ಆಗಿರಲಿಲ್ಲವಲ್ಲ....

"ಸರ್ ದಯವಿಟ್ಟು ಕ್ಷಮಿಸಿ, ಡಾಕ್ಟರ ಒಪ್ಪಿಗೆ ಕೊಡ್ತಾ ಇಲ್ಲ."

ರಿಸೀವರ್ ಕೆಳಗಿರಿಸಿ ಆತ ನುಡಿದಾಗ ಮೈ ಎಲ್ಲಾ ಉರಿದರೂ ತಡೆದು ಕೊಂಡು ಶಾಂತವಾಗಿಯೇ ಮೇಜರ್ ಆತನನ್ನು ಕೇಳಿದ, "ಸಾಂಬಮೂರ್ತಿಗಳ ಭೆಟ್ಟಿಗೆ ಡಾಕ್ಟರ ಒಪ್ಪಿಗೆ ಏಕೆ ಬೇಕು?"

"ವಿಷಯ ತಮಗೆ ಗೊತ್ತಿಲ್ಲವೆ?" ಉತ್ತರದ ಬದಲು ಮರಳಿ ಪ್ರಶ್ನೆಯೇ ಬಂದಿತು.

"ಯಾವ ವಿಷಯ?"

"ಸಾಂಬಮೂರ್ತಿಗಳ ಆರೋಗ್ಯದ ವಿಷಯ?"

"ಗೊತ್ತಿಲ್ಲ."

"ಅದಕ್ಕೇ ಈ ರೀತಿ ಆಡುತ್ತಿದ್ದೀರಿ..ಅವರಿಗೆ ಹೃದಯಾಘಾತವಾಗಿತ್ತು. ಹೀಗಾಗಿ ನರ್ಸಿಂಗ್ ಹೋಮಿಗೆ ಸೇರಿಸಲಾಗಿದೆ."

"ಎಂದು?"

"ಎರಡು ದಿನಗಳ ಹಿಂದೆ."

"ಇಂಪಾಸಿಬಲ್....ಇಂದು ಬೆಳಿಗ್ಗೆ ತಾನೇಅವರುಫೋನು ಮಾಡಿದ್ದರು."

ಹೇಮಂತ ಹುಸಿಗುಂಡು ಹಾರಿಸಿದ.

"ಸಾಧ್ಯವಿಲ್ಲ ಸರ್....ಇಂದು ಸಾಯಂಕಾಲದವರೆಗೂ ಅವರು ಪ್ರಜ್ಞಾಹೀನ ರಾಗಿದ್ದರು. ನಿಮಗೆ ಯಾರೋ ಫೂಲ್ ಮಾಡಿದ್ದಾರೆ."

ಮೇಜರ ಚಿಂತಾಕ್ರಾಂತನಾದ. ಹಾಗಾದರೆ ರತ್ನಕುಮಾರಿ ಸುಳ್ಳು ಹೇಳಿದಳೆ? ಎರಡು ದಿನಗಳಿಂದ ಪ್ರಜ್ಞೆ ಕಳೆದುಕೊಂಡು ನರ್ಸಿಂಗ್ ಹೋಮಿನಲ್ಲಿ ರುವ ಸಾಂಬಮೂರ್ತಿಗಳು ಇಂದು ಮುಂಜಾನೆ ಅವಳಿಗೆ ಫೋನು ಮಾಡಿದ್ದು ಹೇಗೆ? ಚಿಂತೆಯ ಸಂಕೋಲೆಯಿಂದ ಹೊರಬರಲು ಒಂದು ಬಾರಿ ತಲೆಕೊಡವಿ ಕೇಳಿದ.

"ನನಗೆ ಆಸ್ಪತ್ರೆ ವಿಳಾಸ ತಿಳಿಸಿ."

"ಸಾರಿ ಸರ್....ನನಗೆ ಆ ಅಧಿಕಾರವಿಲ್ಲ."

"ಓಕೆ...."

"ಹೇಮಂತ ಮೇಲೆದ್ದು ಹೊರನಡೆದ.

ಸಮಸ್ಯೆ ಬರಬರುತ್ತ ಜಟಿಲವಾಗುತ್ತ ನಡೆಯಿತು.

ರತ್ನಕುಮಾರಿಯು ಕಡೆ ಗುಪ್ತ ವೇಷದಲ್ಲಿ ನಡೆದ ಅಶೋಕ ಹಾಗೂ ಸುಷಮಾ ರಹಸ್ಯಮಯವಾಗಿ ಕಣ್ಮರೆಯಾಗಿದ್ದರು. ತಾನು ಅವಳನ್ನು ಸಂಪರ್ಕಿಸಿದಾಗ ಆಕೆಗೆ ತನ್ನ ಬರವು ಮೊದಲೇ ತಿಳಿದಿತ್ತು. ಸಾಂಬಮೂರ್ತಿಗಳೇ ಸ್ವತಃ ಬೆಳಿಗ್ಗೆ ಫೋನುಮಾಡಿ ಹೇಳಿದ್ದರುಎಂದಳು. ಆದರೆ ಸಾಂಬಮೂರ್ತಿಗಳು ಎರಡು ದಿನಗಳಿಂದ ಪ್ರಜ್ಞೆ ಇಲ್ಲದೆ ಆಸ್ಪತ್ರೆಯಲ್ಲಿದ್ದಾರೆ.ಯಾವುದುಸತ್ಯ? ಯಾರು ಮಿಥ್ಯ ನುಡಿಯುತ್ತಿದ್ದಾರೆ? ಒಂದು ಮಾತಂತೂ ಸತ್ಯವಾಗಿತ್ತು. ಏನೇ ಘಟಿಸಲಿ ಅದರ ಸಮ್ಬಂಧ ಸಾಂಬಮೂರ್ತಿಯವರೊಂದಿಗಿತ್ತು.

ಅವರೇ ಈ ಸಮಸ್ಯೆಗೆ ಮೂಲರೇ ಅಥವಾ ಅವರನ್ನು ಈ ಸುಳಿಯಲ್ಲಿ ಸಿಲುಕಿಸಲಾಗುತ್ತಿದೆಯೇ....?

ಹೇಮಂತ ಪೋರ್ಟಿಕೋದಲ್ಲಿ ಕಾರು ನಿಲ್ಲಿಸಿ ಕಿಚನ್‌ಗೆ ಬಂದ. ಫ್ರಿಜ್ ನಿಂದ ಬೀರ್ ಟಿನ್ ತೆಗೆದುಕೊಂಡು ಒಂದೇ ಬಾರಿಗೆ ಕುಡಿದು ಮುಗಿಸಿ ಬೆಡ್ ರೂಂಗೆ ನಡೆದ. ತಲೆ ಭಾರವಾಗಿತ್ತು....ಹಾಗೇ ಹಾಸಿಗೆ ಮೇಲೆ ಉರುಳಿದ.... ಅವನ ಕಣ್ಣುಗಳು ನಿಧಾನವಾಗಿ ಮುಚ್ಚಿಕೊಂಡವು.

ಮೂಗಿಗೆ ಒಂದು ಬಗೆಯ ಘಾಟು ವಾಸನೆ ಬಡಿದು ಗಂಟಲು ಕೆರೆಯ ತೊಡಗಿತು. ಹೇಮಂತ ಕಣ್ತೆರೆದ....ಗಪ್ ಎಂದು ಕತ್ತಲೆ ಕಣ್ಣಿಗೆ ರಾಚಿತು. ಒಂದೆರಡು ಕ್ಷಣ ತಾನೆಲ್ಲಿದ್ದೇನೆ ಎಂದು ಧ್ಯಾನಿಸಿಕೊಂಡು ಮೇಲೆದ್ದ....ಸ್ವಿಚ್ ಅದುಮಬೇಕೆಂದು ಕೈಚಾಚಿದ....ಚಾಚಿದ ಕೈ ಸರಕ್‌ನೇಹಿಂದಕ್ಕೆಳೆದುಕೊಂಡ. ಅವನ ದೃಷ್ಟಿ ಬೆಡ್‌ರೂಮಿನ ಕಿಟಕಿಯಿಂದಾಚೆ ಗಾಜನ್ನು ಸೀಳಿಹೋಯಿತು. ಚಿಕ್ಕ ಬೆಂಕಿಯುಂಡೆಯೊಂದು ಉರಿದು ಉರಿದು ತಣ್ಣಗಾಗುತ್ತಿತ್ತು. ಅದು ಸಿಗರೇಟಿನ ಬೆಂಕಿ ಎಂದು ತಿಳಿಯಿತು...........ಅದರ ಹೊಗೆಯೇ ಅವನನ್ನು ಎಚ್ಚರಿಸಿದ್ದು.

ಯಾರೋ ಬೆಡ್‌ರೂಮ್ ಹಿಂದೆ ಅವಿತುಕೊಂಡು ಕುಳಿತಿದ್ದರು........ ಯಾರಿರಬಹುದು?

ಸಪ್ಪಳವಾಗದಂತೆ ಮೆಲ್ಲನೆ ಮೇಲೆದ್ದ ಆತ. ಜೇಬಿಗೆ ಕೈಯನ್ನು ಹಾಕಿ ರಿವಾಲ್ವರ್ ಹೊರತೆಗೆದ. ಬೆಕ್ಕಿನ ಹೆಜ್ಜೆಯಲ್ಲಿ ಹಿತ್ತಲಬಾಗಿಲು ತೆರೆದು ಹೊರಗೆ ಕಾಲಿರಿಸಿದ· ಎಲ್ಲೆಡೆ ಕತ್ತಲೆ....ಆದರೂ ಅಂಗುಲ ಅಂಗುಲದ ಪರಿಚಯವಿದ್ದ ಆತ ಒಳ್ಳೆ ಕುಶಲ ಓಟಗಾರನಂತೆ ತುದಿಗಾಲ ಮೇಲೆ ಮುಂದಕ್ಕೆ ಧಾವಿಸಿದ.... ಬೆಡ್‌ರೂಮ ಹಿಂಭಾಗಕ್ಕೆ ಬಂದು ಸುತ್ತಲೂ ದಿಟ್ಟಿಸಿದ.

ಈಗವನಿಗೆ ಸಿಗರೇಟಿನ ಬೆಂಕಿ ಎಲ್ಲೂ ಕಾಣಲಿಲ್ಲ.

ಐದಾರು ನಿಮಿಷಗಳವರೆಗೆ ಆತ ಎಲ್ಲೆಡೆ ಸುತ್ತಾಡಿದ....ಸಿಗರೇಟಿನ ತುಂಡಾಗಲಿ, ಸಿಗರೇಟು ಸೇದುತ್ತ ಅವಿತುಕೊಂಡು ಕುಳಿತಿದ್ದ ವ್ಯಕ್ತಿಯಾಗಲಿ ಅವನಿಗೆ ಕಾಣದಾಗಲು ನಿರಾಶನಾಗಿ ಮನೆಯೊಳಗೆ ನಡೆದ.

ತಾನೇನಾದರೂ ಕನಸು ಕಂಡೆನೋ ಎಂಬ ಸಂಶಯ.

ಒಳಗೆ ಬಂದವ ಒಂದೊಂದಾಗಿ ಎಲ್ಲಾ ದೀಪ ಉರಿಸುತ್ತ ಬಂದ. ಬೆಡ್ ರೂಮ್ ಬಳಿ ಬಂದವ ಸರ್ಪ ತುಳಿದವರಂತೆ ಗಕ್ಕನೇ ನಿಂತುಬಿಟ್ಟ. ಅವನ ನಾಸಿಕ ಸಿಗರೇಟಿನ ಹೊಗೆಯನ್ನು ಆಘ್ರಾಣಿಸಿತ್ತು. ಅವನ ಬೆಡ್‌ರೂಮಿನಿಂದ ಸಿಗರೇಟಿನ ಹೊಗೆ ಬರುತ್ತಿತ್ತು.

ಅಂದ ಮೇಲೆ ಹೊರಗಿದ್ದ ವ್ಯಕ್ತಿ ಈಗ ಒಳಗೆ ಬಂದಿದ್ದ....

ರಿವಾಲ್ವರ್ ಕುದುರೆ ಮೇಲೆ ಬೆರಳು ಇರಿಸಿ ಆತ ಒಂದೊಂದೇ ಮೆತ್ತಗಿನ ಹೆಜ್ಜೆ ಒಳಗೆ ಇರಿಸುತ್ತಿದ್ದಂತೆ ಗಡಸು ಕಂಠ ಕೇಳಿಸಿತು.

"ರಿವಾಲ್ವರ್ ಉಪಯೋಗ ಬೇಕಾಗಿಲ್ಲ ಮೇಜರ್. ನಾನು ನಿಮ್ಮನ್ನು ಕಾಣಲೆಂದೇ ಬಂದಿದ್ದೇನೆ....ತಿಳಿಯಿತೇ?"

ಮರುಕ್ಷಣ 'ಟಿಕ್' ಎಂಬ ಸಪ್ಪಳದೊಂದಿಗೆ ಅವನ ಬೆಡ್‌ರೂಮು ಪ್ರಕಾಶ ದಿಂದ ಬೆಳಗಿತು.

* * * *

ಮೇಜರನ ಬೆಡ್‌ರೂಮು 'ಝಗ್....' ಎಂದು ಪ್ರಕಾಶಮಾನವಾಗಿ ಬೆಳಗಿತು.

"ಬನ್ನಿ....ಮೇಜರ್....ನಿಮ್ಮ ರೂಮಿನಲ್ಲಿ ನಿಮ್ಮನ್ನೇ ನಾನು ಸ್ವಾಗತಿಸುತ್ತಿದ್ದೇನೆ."

ಈ ಬಾರಿಗೆ ಕಂಠ ಮುನ್ನಿನಷ್ಟು ಗಡುಸಾಗಿರಲಿಲ್ಲ. ಹೀಗಾಗಿ ಆ ಕಂಠ ದೊಡೆಯರು ಯಾರೆಂಬುದನ್ನು ಮೇಜರ್ ಊಹಿಸಿದ. ರಿವಾಲ್ವರನ್ನು ಯಥಾ ಸ್ಥಾನದಲ್ಲಿರಿಸಿ ಒಳಗಡಿಯಿಟ್ಟ. "ಮಿಸ್ಟರ್ ಸದಾಶಿವ....ನೀವು ನನ್ನ ಬೆಡ್ ರೂಮಿಗೂ ಬರುತ್ತೀರೆಂದು ನಾನೆಂದುಕೊಂಡಿರಲಿಲ್ಲ."

"ಕ್ಷಮಿಸಿ ಮೇಜರ, ನನಗೆ ಬೇರೆ ದಾರಿಯೇ ಇರಲಿಲ್ಲ. ನಿಮ್ಮನ್ನು ಅರ್ಜಂಟಾಗಿ ಕಾಣಬೇಕಾಗಿತ್ತು. ಅದಕ್ಕಾಗಿ ಬಂದೆ. ಬಂಗಲೆ ಪೂರ್ಣವಾಗಿ ಕತ್ತಲೆಯಲ್ಲಿ ಮುಳುಗಿತ್ತು. ಕಳ್ಳನಂತೆ ಹಿಂಭಾಗಕ್ಕೆ ಬಂದೆ. ಕಿಟಕಿ ದಾರಿ ಸಿಗಲಿಲ್ಲ. ಸುತ್ತು ಹಾಕಿದೆ....ಬಾಗಿಲು ತೆರೆದಿತ್ತು ಬಂದು ಆಸೀನನಾದೆ."

"ನಿಮ್ಮ ಅದೃಷ್ಟ ಚೆನ್ನಾಗಿದೆ. ನಾನೇನಾದರೂ ಗುಂಡು ಹಾರಿಸಿದ್ದರೆ."

"ಹುತಾತ್ಮನಾಗುತ್ತಿದ್ದೆ ಅಷ್ಟೆ." ಜೋರಾಗಿ ನಕ್ಕು ಸದಾಶಿವ ನುಡಿದ.

"ಮೇಜರ್ ನಿಮ್ಮಂಥವರ ಕೈಯಲ್ಲಿ ಸಾವು ಪಡೆಯಲೂ ಪುಣ್ಯಮಾಡಿರಬೇಕು."

"ಜೋಕ್ಸ್ ಬೇಡ.ಸದಾಶಿವ ಅರ್ಜಂಟ್ ಎಂದಿರಿ ಫೋನೇಕೆ ಮಾಡಲಿಲ್ಲ?"

"ಅಪಾಯ ಮೇಜರ್....ಅಪಾಯ...."

"ಎಂಥ ಅಪಾಯ?"

"ನಿಮ್ಮ ಫೋನು ಟೇಪ್ ಮಾಡಲಾಗಿದೆ. ನಾನು ಎರಡು ಬಾರಿ ಪ್ರಯತ್ನಿಸಿರುವೆ. ನೀವು ರಿಸೀವರ್ ಎತ್ತುತ್ತಲೂ ಬೇರೊಂದೆಡೆ ಯಾರೋ ಫೋನು ಎತ್ತಿದ ಸಪ್ಪಳ ಕೇಳಿಸಿತು. ಅದಕ್ಕಾಗಿ ಯಾವ ಮಾತೂ ಆಡದೇ ನೇರವಾಗಿ ಇಲ್ಲಿಗೇ ಬಂದೆ."

ಸರಸರನೆ ಹೇಮಂತ ಫೋನು ಇದ್ದಲ್ಲಿಗೆ ಬಂದು ಎತ್ತಿದ........ಸಣ್ಣ ಸ್ಕ್ರೂಡ್ರೈವರ್‌ದಿಂದ ಸ್ಕ್ರೂ ಸಡಿಲಿಸಿದ. ಕೆಳಭಾಗ ಬೇರೆಯಾಯಿತು. ಕೆಳಗಡೆ ಇದ್ದ ಚಿಕ್ಕ ಯಂತ್ರವನ್ನು ಕಂಡು ಆತ ಬೆಚ್ಚಿಬಿದ್ದ. ಸದಾಶಿವನ ಮಾತು ನಿಜವಾಗಿತ್ತು. ಆ ಚಿಕ್ಕ ಯಂತ್ರವನ್ನು ಬಿಚ್ಚಿ ಹೊರಗೆ ತೆಗೆದು ಕೆಳಭಾಗ ಮೊದಲಿನಂತೆ ಜೋಡಿಸಿದ.

"ನೀವು ಯಾವುದನ್ನೂ ಸುಲಭವಾಗಿ ಒಪ್ಪುವವರಲ್ಲ."

"ನಮ್ಮ ವೃತ್ತಿಯಲ್ಲಿ ಜೀವಂತವಿರಬೇಕೆಂದರೆ ಜಾಗ್ರತೆವಹಿಸಲೇಬೇಕು ಸದಾಶಿವ."

"ಒಪ್ಪಿದೆ."

"ಈಗ ಹೇಳಿ....ಏನು ವಿಷಯ?"

"ರತ್ನಕುಮಾರಿ ಸಿಕ್ಕಳೆ?"

"ಹಾಂ."

"ನನ್ನ ಮಾತು ಸತ್ಯವೆಂದು ತಿಳಿಯಲಿಲ್ಲವೇ?"

"ಹೂಂ."

"ಹೇಗಿದ್ದಾಳೆ?"

"ಅಂದರೆ?"

"ರತ್ನಕುಮಾರಿ ಹೇಗಿದ್ದಾಳೆ ಎಂದೆ."

"ಅಂದವಾಗಿದ್ದಾಳೆ."

"ಬರೀ ಅಂದವೇ?"

"ಅಂದರೆ?"

"ಕೇವಲ ಅಂದ ನೋಡಿ ಬಂದಿರೋ ಇಲ್ಲ....ಸವಿದು ಬಂದಿರೋ?"

"ವ್ಯಂಗ್ಯದ ವಕಾಲತು ಬೇಡ ಸದಾಶಿವ. ನನ್ನ ಸ್ವಭಾವ ನಿಮಗೆ ಚೆನ್ನಾಗಿ ಗೊತ್ತಿದೆ."

"ಸಾರಿ...."

"ಸರಿ....ನೀವು ಆಸ್ಪತ್ರೆಗೆ ಹೋಗಿಲ್ಲವೇ?"

"ಯಾವ ಆಸ್ಪತ್ರೆಗೆ?"

ಹೇಮಂತ ಬೆಚ್ಚಿ ಬಿದ್ದ....ಸಾಂಬಮೂರ್ತಿಗಳ ವಿಷಯ ಆವರ ಆಪ್ತ ಕಾರ್ಯದರ್ಶಿಗೇ ತಿಳಿದಿಲ್ಲವೆಂದು.

"ವಿಷಯ ನಿಮಗೆ ಗೊತ್ತಿಲ್ಲವೆ?"

"ಯಾವ ವಿಷಯ?"

"ನಿಮ್ಮ ಬಾಸ್‌ಗೆ ಹೃದಯಾಘಾತವಾದದ್ದು."

"ಹೃದಯಾಘಾತ? ಅದೂ ನನ್ನ ಬಾಸ್‌ಗೆ?" ಹೋ....ಹೋ....ಎಂದು ಅಟ್ಟಹಾಸದೊಂದಿಗೆ ಜೋರಾಗಿ ನಕ್ಕ ಸದಾಶಿವ. ನಕ್ಕು ನಕ್ಕು ಅವನ ಕಣ್ಣುಗಳಲ್ಲಿ ನೀರು ಕಾಣಿಸಿಕೊಂಡಿತು.

"ಇದೇನಿದು ನಿಮ್ಮ ಹಾಸ್ಯ....? ಸ್ವಲ್ಪ ಸೀರಿಯಸ್ ಆಗಿ ಮಿಸ್ಟರ್."

"ಮೇಜರ, ನಿಮಗೆಲ್ಲೋ ತಪ್ಪು ಕಲ್ಪನೆಯಾಗಿದೆ."

"ಅಪ್ಪಟ ಸುಳ್ಳು, ಹೃದಯವಿದ್ದವರಿಗೆ ಮಾತ್ರ ಹೃದಯಾಘಾತವಾಗುತ್ತದೆ." ಹೇಮಂತ ಆವಾಕ್ಕಾಗಿ ಕಲ್ಲಿನಂತೆ ಕುಳಿತುಬಿಟ್ಟ....ಸದಾಶಿವನೇ ಮುಂದುವರೆಸಿದ. "ನನ್ನ ಬಾಸ್ ಮೊದಲ ದರ್ಜೆಯ ಖದೀಮ....ನೀಚ.... ಸೀಳುನಾಲಿಗೆಯವ....ಅವನನ್ನೆಂದೂ ನಂಬಬಾರದು....ಆತ ಆಡುವದೊಂದು ಮಾಡುವದೊಂದು........" ಮೇಜರ್ ಆವಾಗಲೂ ಮಾತನಾಡಲಿಲ್ಲ. "ಈಗ ನಿಮಗೆ ಹೃದಯಾಘಾತವಾಗಿದೆ ಎಂಬ ಸಂಶಯ ನನಗೆ ಬರುತ್ತಿದೆ."

"ಅಂತೂ ನನಗೆ ಹೃದಯವಿದೆ ಎಂದು ನೀವು ಒಪ್ಪಿದಿರಲ್ಲ?"

ಒಬ್ಬರ ಮಾತಿಗೆ ಇನ್ನೊಬ್ಬರು ಜೋರಾಗಿ ನಕ್ಕರು.

"ಹೂಂ ಮೇಜರ್....ಈಗ ಹೇಳಿ ವಿಷಯವೇನು?"

ಹೇಮಂತ ಎಲ್ಲಾ ಹೇಳಿ ಮುಗಿಸಿಯಾದ ಮೇಲೆ ಒಂದು ನಿಮಿಷ ಸದಾಶಿವ ಗಂಭೀರವಾಗಿ ಯೋಚಿಸಿ ಹೇಳಿದ. "ನನಗೆ ಅಶೋಕ ಮತ್ತು ಸುಷಮಾರ ಬಗ್ಗೆ ಮಾತ್ರ ಏನೂ ತಿಳಿಯದು. ಇನ್ನೂ ನನ್ನ ಬಾಸ್ ಮಾತ್ರ ಗುಂಡುಕಲ್ಲಿನ ಹಾಗೆ ಗಟ್ಟಿಮುಟ್ಟಾಗಿದ್ದಾನೆ ಎಂದು ಮಾತ್ರ ಹೇಳಬಲ್ಲೆ."

"ಎಲ್ಲಿದ್ದಾರೆ ಸಾಂಬಮೂರ್ತಿಗಳು."

"ನನ್ನ ಹೆಸರನ್ನು ಎಲ್ಲೂ ಹೇಳಬಾರದು. ಅಂದರೆ ಮಾತ್ರ ನಾ ಬಾಯಿ ಬಿಡುವೆ."

"ನಾನು ಪ್ರಮಾಣಮಾಡಿ ಹೇಳುತ್ತೇನೆ....ನಿಮ್ಮ ಹೆಸರು ಎಲ್ಲೂ ಹೊರ ಬರಲಾರದು."

"ಸರಿ ಹಾಗಾದರೆ....ಬರೆದುಕೊಳ್ಳಿ

"ಅವಶ್ಯಕತೆಯಿಲ್ಲ....ಹೇಳಿ."

"ಇಲ್ಲಿಂದ ಅಳ್ನಾವರ ರೋಡಿನಲ್ಲಿ ಸುಮಾರು ಹದಿನೆಂಟು ಕಿಲೋ ಮೀಟರ್ ಹೋದರೆ ಒಂದು ಸಾ ಮಿಲ್ ಸಿಗುತ್ತದೆ. ಅದರ ಗೇಟಿಗೆ ದೊಡ್ಡ ದೊಂದು ಬೀಗಹಾಕಿದೆ. ಬೀಗಹಾಕಿದೆ ಎಂದು ಮರಳಬೇಡಿ, ಹೇಗಾದರೂ ಮಾಡಿ ಒಳಗೆ ಪ್ರವೇಶಿಸಿ, ಅಲ್ಲೇನಿದೆ ಎಂದು ನಿಮಗೇ ತಿಳಿಯುತ್ತದೆ."

"ಅಲ್ಲಿ ಸಾಂಬಮೂರ್ತಿಗಳಿದ್ದಾರೆ. ಗುಂಡು ಕಲ್ಲಿನ ಹಾಗೆ ಗಟ್ಟಿಮುಟ್ಟಾಗಿದ್ದಾರೆ ಅಷ್ಟೇ ತಾನೇ?"

"ಅದಕ್ಕಿಂತ ಹೆಚ್ಚಾದ ವಿಷಯ ಒಂದಿದೆ."

"ಏನದು?"

ಕುತೂಹಲದಿಂದ ಮೇಜರ ಕೇಳಿದಾಗ ನಕ್ಕು ಸದಾಶಿವ ನುಡಿದ. "ಅಲ್ಲಿಗೆ ಹೋದ ಮೇಲೇ ತಿಳಿಯುತ್ತದೆ."

"ಅಂತೂ ಗುಟ್ಟು ಬಿಟ್ಟುಕೊಡದಿರುವಲ್ಲಿ ನೀವು ಮಹಾ ನಿಸ್ಸೀಮರು.

"ನಿಮ್ಮಷ್ಟು ಅಲ್ಲ."

"ನಾನೇನು ಮುಚ್ಚಿಟ್ಟಿದ್ದೇನೆ."

"ರತ್ನಕುಮಾರಿ ಮನೆಯಲ್ಲಿ ದೊರೆತ ಆತಿಥ್ಯದ ಬಗ್ಗೆ ಮಾತೇ ಆಡ್ತಿಲ್ಲ

"ಅದೂ ಸಹ ನಿಮಗೇ ಗೊತ್ತಿದೆಯಲ್ಲ."

ಹೇಮಂತ ಅರ್ಥಗರ್ಭಿತವಾಗಿ ನುಡಿದಾಗ ಸದಾಶಿವನ ಬಾಯಿಗೆ ಬೀಗ ಬಿದ್ದಂತಾಯಿತು. "ಸರಿ....ನಾನಿನ್ನು ಬರುತ್ತೇನೆ" ಆತ ಮೇಲೆದ್ದ. ಅವನನ್ನು ಕಳಿಸಲು ಹೇಮಂತ ಪೋರ್ಟಿಕೋದವರೆಗೂ ಬಂದ. "ಮತ್ತೆ ನೀವು ಹೋಗೋದಿಲ್ವೆ?" ಸದಾಶಿವ ತಡೆಯಲಾರದೇ ಕೇಳಿದ.

"ಎಲ್ಲಿಗೆ?"

"ಸಾಂಬಮೂರ್ತಿಗಳ ಭೇಟಿಗೆ." ಹೇಮಂತ ಮನದೊಳಗೇ ನಕ್ಕು, ಇಲ್ಲ ಅದಕ್ಕಿಂತ ಅವಶ್ಯಕವಾದ ಕೆಲಸ ಒಂದಿದೆ...." ಚುಟುಕಾಗಿ ನುಡಿದ.

ಸಪ್ಪೆಮುಖದೊಂದಿಗೆ ಸದಾಶಿವ ಬೀಳ್ಕೊಟ್ಟ. ಸುಮಾರು ಅರ್ಧಗಂಟೆ ವರೆಗೆ ಹೇಮಂತ ಮನೆಯಿಂದ ಹೊರಬರಲಿಲ್ಲ. ಮೊದಲು ಮನೆ ತುಂಬಾ

ಓಡಾಡಿ ಎಲ್ಲ ದೀಪ ಉರಿಸಿದ. ಕಿಚನ್‌ಗೆ ಬಂದು ಸ್ವಲ್ಪ ತಿಂಡಿ ತಿಂದು ಕಾಫಿ ಕುಡಿದ. ಆಮೇಲೆ ತನ್ನ ಕೋಣೆಗೆ ಬಂದು ಬಟ್ಟೆ ಬದಲಿಸಿ ತುಸು ಮೇಕಪ್ ಮಾಡಿಕೊಂಡ....ಕತ್ತಲಲ್ಲಿ ಈಗವನನ್ನು ಮೇಜರ್ ಹೇಮಂತ ಎಂದು ಸುಲಭ ವಾಗಿ ಗುರುತಿಸುವಂತಿರಲಿಲ್ಲ. ಆಮೇಲೆ ಡ್ರಾಯಿಂಗ್ ರೂಮಿಗೆ ಬಂದು ಟಿ.ವಿ ಆನ್ ಮಾಡಿ ಹಾಲ್ ದೀಪ ಆರಿಸಿದ. ಹೊರಗಡೆಯಿಂದ ನೋಡುವವರಿಗೆ ಒಳಗಡೆಯವರು ಟಿ.ವಿ. ನೋಡುತ್ತ ಕುಳಿತಿದ್ದಾರೆ ಎಂಬ ಕಲ್ಪನೆಬರುತ್ತಿತ್ತು. ಆಮೇಲೆ ಹೊರಬಾಗಿಲಿಗೆ ಬಂದು ಸಪ್ಪಳವಾಗದಂತೆ ಬಾಗಿಲು ತೆರೆದು ಇಣುಕಿ ನೋಡಿದ ಒಂದು ನಿಮಿಷ ಬಿಟ್ಟು ಸರಕ್ಕನೇ ಹೊರಬಂದು ಬಾಗಿಲು ಮುಚ್ಚಿ ಎಡಭಾಗದ ಮರಗಳತ್ತ ಓಡಿದ. ಒಂದೊಂದೇ ಮರದ ಕೆಳಗೆ ಹಾಯುತ್ತ ಕಂಪೌಂಡ್ ಗೋಡೆ ಬಳಿ ಬಂದು ಅದನ್ನು ಹಾರಿ ರಸ್ತೆಗೆ ಬಂದ. ತುಸು ಸುತ್ತು ಹೊಡೆದು ತನ್ನ ಮನೆಯ ಗೇಟಿಗೆ ದೂರದಲ್ಲಿ ನಿಂತು ನೋಡಿದಾಗ ಬಲಬದಿಗೆ ಸುಲಭವಾಗಿ ಕಾಣಿಸಿದಂತೆ ಮರಗಳ ಕೆಳಗಿದ್ದ ಕಪ್ಪುಆಕೃತಿ ಕಂಡು ನಕ್ಕ. ಅದು ಮಾರುತಿ ಜಿಪ್ಸಿ ಎಂದವನಿಗೆ ತಿಳಿದಿತ್ತು.

ಸುಮಾರು ಒಂದು ಫರ್ಲಾಂಗ್ ದೂರ ಬಂದಾಗ ಟ್ಯಾಕ್ಸಿಯೊಂದು ದೊರೆಯಿತು....ಅದರಲ್ಲಿ ಕುಳಿತುಕೊಳ್ಳುತ್ತ ಅಳ್ವಾರ ರೋಡಿಗೆ ನಡೆ ಎಂದ. ನಗರವನ್ನು ಹಿಂದಕ್ಕೆ ಹಾಕಿ ನಿರ್ಜನ ಪ್ರದೇಶಕ್ಕೆ ಕಾರು ಬಂದಾಗ ಡ್ರೈವರ್ ಅವನತ್ತ ಹೊರಳಿದ. ಅದರರ್ಥ ತಿಳಿದುಕೊಂಡ ಮೇಜರ, "ಹಾಗೇ ಮುಂದೆ ನಡೆ. ನಾನು ಹೇಳುವವರೆಗೂ ನಿಲ್ಲಬೇಡ" ಎಂದ. ಗಕ್ಕನೆ ಟ್ಯಾಕ್ಸಿ ನಿಂತು ಬಿಟ್ಟಿತು.

"ಏಕೆ?"

"ಸಾಬ್, ನಾನೊಲ್ಲೆ...."

"ಹೆದರಬೇಡ....ನಾನು ನಿನಗೇನೂ ಅಪಾಯ ಮಾಡಲಾರೆ."

"ಸಾಬ್....ಕ್ಷಮಿಸಿ....ಮುಂದೆ ನಾನು ಬರೋದಿಲ್ಲ."

ಹೇಮಂತನಿಗೆ ಅವನ ಮೇಲೆ ಕೋಪ ಬರಲಿಲ್ಲ. ನಿರ್ಜನ ಜಾಗೆಗೆ ಬಂದು ಡ್ರೈವರ್‌ನನ್ನು ಕೊಂದು ಅವನ ಬಳಿ ಇದ್ದದ್ದನ್ನೆಲ್ಲ ಬಳಿದುಕೊಂಡು ಟ್ಯಾಕ್ಸಿ ಓಡಿಸಿಕೊಂಡು ಹೋದ ಹಲವಾರು ಉದಾಹರಣೆಗಳಿದ್ದವು. ಅದಕ್ಕಾಗಿ ಆತ ನಿರಾಕರಿಸುತ್ತಿದ್ದ.

"ನಿನ್ನ ಹೆಸರೇನು?"

"ರಾಜು ಸಾಬ್."

"ನೀನು ಹೇಮಂತ ಎಂಬ ಹೆಸರು ಕೇಳಿದ್ದೀಯಾ?"

"ಯಾವ ಹೇಮಂತ ಸಾಬ್?"

"ಮೇಜರ ಹೇಮಂತ?"

"ಓಹ್....ಕೇಳಿದ್ದೇನೆ. ಅವರ ಹೆಸರು ಯಾರಿಗೆ ಗೊತ್ತಿಲ್ಲ."

"ನಾನೇ ಅವನು."

"ಆಂ . ಏನೆಂದಿರಿ ಸಾಬ್."

ಬೆಚ್ಚಿಬಿದ್ದು ಆತ ಕೇಳಿದಾಗ ಹೇಮಂತ ತನ್ನ ಫೋಟೋ ಇದ್ದ ಗುರುತಿನ ಚೀಟಿ ತೋರಿಸುತ್ತ ಹೇಳಿದ. "ನಾನೇ ಹೇಮಂತ....ಈಗ ಮೇಕಪ್‌ನಲ್ಲಿದ್ದೇನೆ....ಬೇಕೆಂದರೆ ಇದನ್ನು ನಿನ್ನ ಬಳಿ ಇಟ್ಟುಕೊ...."

"ಇಟ್ಟುಕೊಳ್ತೀನೆ ಸಾಬ್....ನಿಮ್ಮ ಮೇಲಿನ ಅವಿಶ್ವಾಸಕ್ಕಲ್ಲ........ ಪ್ರೀತಿಗಾಗಿ...."

ಮುಂದಾತ ಟ್ಯಾಕ್ಸಿ ಓಡಿಸತೊಡಗಿದ ಅತೀಉತ್ಸಾಹದಿಂದ....ಹೇಮಂತ ಎಡಬಲಕ್ಕೆ ಕಣ್ಣಾಡಿಸುತ್ತಿದ್ದ....ರಾತ್ರಿ ಸಮಯ ಎಡಬಲಕ್ಕೆ ಕಾಡು.... ಕಾರಿನ ದೀಪದ ಬೆಳಕಿಗೆ ಸಿಕ್ಕು ಕಕ್ಕಾಬಿಕ್ಕಿಯಾಗುತ್ತಿರುವ ಹೆಗ್ಗಣ, ಕಾಡು ಬೆಕ್ಕು ಆಗಾಗ ಕಣ್ಣಿಗೆ ಬೀಳುತ್ತಿದ್ದವು. ಒಂದು ಸರ್ಪವೂ ಸಹ ದರ್ಶನ ಕೊಟ್ಟಿತು. ಹಾಗೇ ಪಯಣ ಮುಂದುವರೆಯಿತು...."ಹಾಂ ಇಲ್ಲೇ ನಿಲ್ಲಿಸು" ಎಂದ ಹೇಮಂತ. ಗಾಡಿ ನಿಂತಿತು...."ನಿಧಾನವಾಗಿ ಹಿಂದಕ್ಕೆ ತೆಗೆದುಕೊ" ಎಂದ....ಟ್ಯಾಕ್ಸಿ ಹಿಂದಕ್ಕೆ ಬಂದಿತು. ಸರಿ ಇಲ್ಲೇ ಇರಲಿ...."

ಕಾರಿನಿಂದ ಕೆಳಗಿಳಿದ ಹೇಮಂತ ರಾಜು ಬಳಿಬಂದ.

"ನಿನಗೆ ಹೆದರಿಕೆ ಆಗೋದಿಲ್ಲ ತಾನೇ?"

"ಇಲ್ಲ ಸರ್...." ಸಾಬ್ ಬದಲಾಗಿ ಆತ 'ಸರ್'ಎಂದು ಸಂಬೋಧಿಸಿದ್ದ.

"ಗುಡ್. ಒಂದು ಗಂಟೆಗಿಂತ ಹೆಚ್ಚು ಸಮಯ ಕಳೆದರೆ 'ನಾನು ಮರಳಿ ಬರದಿದ್ದರೆ ನೀನು ಮರಳಿ ಹೋಗು....ಸಮೀಪದ ಪೊಲೀಸ್ ಠಾಣೆಗೆ ಈ ವಿಷಯದ ಬಗ್ಗೆ ರಿಪೋರ್ಟ್ ಮಾಡು ತಿಳೀತಾ...."

"ಸರಿ ಸರ್" ಆತ ಧೈರ್ಯದಿಂದ ತಲೆಯಾಡಿಸಿದ.

ಮೇಜರ್ ಬಲಬದಿಯ ಪೊದೆಗಳ ಕಡೆ ನಡೆದ. ಕೋಟ್ ಜೇಬಿಗೆ ಕೈ ಹಾಕಿ ಎರಡು ವಸ್ತುಗಳನ್ನು ಹೊರತೆಗೆದ! ಒಂದು ರಿವಾಲ್ವರ ಆದರೆ, ಇನ್ನೊಂದು ಪೆನ್‌ಟಾರ್ಚ್. ಬಲಗೈಲಿ ರಿವಾಲ್ವರ, ಎಡಗೈಲಿ ಪೆನ್‌ಟಾರ್ಚ್ ಹಿಡಿದು ಪೊದೆ ಸರಿಸುತ್ತ ಮುನ್ನಡೆದ....ಸ್ವಲ್ಪ ದೂರ ಹೋಗುತ್ತಲೂತಂತಿಯ ಬೇಲಿ ಎದುರಾಯಿತು. ಎರಡು ತಂತಿಗಳನ್ನು ಹಿಡಿದು ಒಂದನ್ನು ಮೇಲಕ್ಕೆ ಇನ್ನೊಂದನ್ನು ಕೆಳಗೆ ಒತ್ತಿ ಮಧ್ಯದಿಂದ ಪಾರಾಗಿ ಮುಂದೆ ನಡೆದ. ಐದಾರು

ನಿಮಿಷಗಳಲ್ಲಿ ದೊಡ್ಡದಾದ ಸಾ ಮಿಲ್ ಕಟ್ಟಡದ ಸಮೀಪ ಆತ ಬಂದಿದ್ದ. ಅದರ ಸುತ್ತಲೂ ರಾಶಿ ರಾಶಿಯಾಗಿ ಎತ್ತಬೇಕತ್ತ ನಾಟುಗಳು ಬಿದ್ದಿದ್ದವು. ಕಟ್ಟಡದ ಒಂದೆಡೆ ದೀಪದ ಪ್ರಕಾಶ ಕಾಣಿಸಿತು. ಪೆನ್‌ಟಾರ್ಚ್ ನಂದಿಸಿ ಅದನ್ನು ಜೇಬಿಗಿಳಿಸಿ ಆ ಪ್ರಕಾಶದತ್ತ ನಡೆದ.

ಕಟ್ಟಡದ ಹೊರಗೆ ಯಾರೂ ಇರಲಿಲ್ಲ....ಹೇಮಂತ ನಿಧಾನವಾಗಿ ಒಂದೊಂದೇ ಹೆಜ್ಜೆ ಇಡುತ್ತ ಒಳಗೆ ನಡೆದ. ಒಂದು ಹಾಲ್ ದಾಟಿದ ಮೇಲೆ ಮೆಲುವಾಗಿ ಮಾತನಾಡುವದು ಕೇಳಿಬರಲಾರಂಭಿಸಿತು. ಆ ಧ್ವನಿಯ ಜಾಡು ಹಿಡಿದು ನಡೆಯುತ್ತ ಮುಚ್ಚಿದ ಬಾಗಿಲಿನ ಕೋಣೆ ಎದುರು ಬಂದು ನಿಂತ. ಬಾಗಿಲು ಒಳಗಿಂದ ಚಿಲಕ ಹಾಕಿರಲಿಲ್ಲ. ತುಸು ತೆರೆದಿದ್ದರಿಂದಾಗಿ ಬೆಳಕಿನ ಕಿರಣ ಅದರ ಜೊತೆ ಧ್ವನಿಗಳೂ ಸಹ ಕೇಳಿಬರುತ್ತಿದ್ದವು ಬಾಗಿಲಿಗೇ ಬಂದು ನಿಂತು ಆಲಿಸಿದ. "ತಿನ್ನಿ ಡಾರ್ಲಿಂಗ್...." ತುಂಬಾ ಸೆಕ್ಸಿಯಾಗಿದ್ದ ಹೆಣ್ಣಿನ ಧ್ವನಿ ಕೇಳಿಸಿತು. ಅವನ ಮೈ ಎಲ್ಲಾ ಜುಂ ಎಂದಿತು. ಅದು ರತ್ನಕುಮಾರಿ ಧ್ವನಿ.

"ಸಾಕು....ನಂಗೆ ಸಾಕು" ಮಗುವಿನಂತೆ ಮಾತನಾಡಿದ ಗಡಸುಕಂಠ.... ಅರೆ ಇದು ಸಾಂಬಮೂರ್ತಿಗಳದು.

ಇಬ್ಬರೂ ಒಳಗಿದ್ದಾರೆ ಎಂದುಕೊಳ್ಳುತ್ತ ರಿವಾಲ್ವರ್ ಹಿಡಿತ ಬಿಗಿಗೊಳಿಸಿ, ಬಾಗಿಲ ಮೇಲೆ 'ಧಡಾರ್' ಎಂದು ಒದ್ದು, ಅದು ತೆರೆಯುತ್ತಲೂ ಒಳಗೆ ನೆಗೆದ. ಎದುರಿಗೇ ಕರಿಮರದಲ್ಲಿ ಮಾಡಿದ ಮಂಚ. ಮಂಚದ ಮೇಲೆ ಹಾಸಿದ ಬೆಡ್....ಗೋಡೆಗೆ ಆನಿಸಿಟ್ಟ. ದಿಂಬಿಗೆ ಒರಗಿ ಸಾಂಬಮೂರ್ತಿಗಳು ಮಂಚದ ಮೇಲೆ ಒರಗಿದ್ದರು. ಬಾಗಿಲಿಗೆ ಬೆನ್ನು ಮಾಡಿ ಕುಳಿತಿದ್ದ ರತ್ನ-ಕುಮಾರಿ ಆ ಭಾರೀ ಸಪ್ಪಳಕ್ಕೆ ಬೆಚ್ಚಿಬಿದ್ದು ಮಂಚದ ಮೇಲೆ ಎದ್ದುನಿಂತಳು.

"ಅಯ್ಯೋ ದೇವರೇ" ಎಂದು ಉದ್ಗರಿಸಿ ಹೇಮಂತ ಕಣ್ಣುಮುಚ್ಚಿದ.

ಆಕೆ ಪೂರ್ತಿ ನಗ್ನವಾಗಿದ್ದಳು. ಅದೇ ಸಂಧಿ ಸಾಧಿಸಿ ತೆರೆದಿದ್ದ ಕಿಟಕಿಯಿಂದ ರತ್ನಕುಮಾರಿ ಹೊರಗೆ ನೆಗೆಯುವುದಕ್ಕೂ ಕಣ್ತೆರೆದ ಹೇಮಂತ ಅತ್ತ ಗುಂಡು ಹಾರಿಸಿದ....

ಗುಂಡು ಗುರಿ ತಾಕದು ಎಂದು ಗೊತ್ತಿದ್ದರೂ ಅಭ್ಯಾಸ ಬಲದಿಂದ ಆತ ರಿವಾಲ್ವರ ಕುದುರೆ ಎಳೆದಿದ್ದ. ಗುಂಡು ಅವಳಿಗೆ ತಾಕಲಿಲ್ಲ ನಿಜ.ಆದರೆ ಗುಂಡಿನ ಸಪ್ಪಳಕ್ಕೆ ಸಾಂಬಮೂರ್ತಿಗಳು ಒಮ್ಮೆಲೆ ವಿಕಾರವಾಗಿ ಕಿರುಚಿಕೊಂಡು ಮೂರ್ಛಿತರಾದರು. ಮೊದಲು ಕಿಟಕಿಯನ್ನು ಮುಚ್ಚಿ ಆಮೇಲೆ ಅವರತ್ತ ಗಮನಹರಿಸಿದ ಹೇಮಂತ ಟೀಪಾಯ್ ಮೇಲಿದ್ದ ಜಗ್ ಎತ್ತಿ ಪೂರ್ತಿ ಜಗ್

ನೀರನ್ನು ಅವರ ಮುಖಕ್ಕೆ ಹೊಡೆದಾಗ"ಅಹ್....ಹ....ಹಾ"ಎಂದು ಕೂಗುತ್ತ ಅವರು ಎಚ್ಚರ ಹೊಂದಿದರು.

ಮೊದಲು ಮುಖದ ಮೇಲಿನ ನೀರು ಒರೆಸಿಕೊಂಡು ಸುತ್ತಲೂ ನೋಡುತ್ತ ಕೇಳಿದರು.

"ನಾನೆಲ್ಲಿದ್ದೇನೆ? ನಾನೆಲ್ಲಿದ್ದೇನೆ."

"ನೀವಿನ್ನೂ ಸತ್ತಿಲ್ಲ....ಜೀವಂತವಾಗಿ ಭೂಮಿಯ ಮೇಲೆ ಇದ್ದೀರಿ."

ವ್ಯಂಗ್ಯವಾಗಿ ನುಡಿದ ಹೇಮಂತ ಅವನತ್ತ ನೋಡಿದ ಅವರು ಗಾಬರಿಯಾದರು.

"ಯಾರು ನೀನು....? ನನ್ನನ್ನು ಇಲ್ಲಿಗೇಕೆ ಕರೆತಂದೆ?"

"ಮಿಸ್ಟರ್ ಸಾಂಬಮೂರ್ತಿಗಳೇ....ನಾನು ನಿಮ್ಮನ್ನು ಕರೆತಂದಿಲ್ಲ.... ನೀವಾಗಿಯೇ ಇಲ್ಲಿ ಬಂದಿದ್ದೀರಿ...ನಾನು ನಿಮ್ಮನ್ನು ಹುಡುಕಿ ಬಂದೆ...ಅಷ್ಟೆ."

"ನೀನಾರು?"

"ನಾನು ಹೇಮಂತ. ಮೇಜರ ಹೇಮಂತ."

"ಯಾರು...ಹೇಮಂತ...ನೀವಾ...?ನೀವು ಇಲ್ಲೇಕೆ?"

"ನನ್ನ ಮಾತು ಆಮೇಲೆ ಮೊದಲು ನಿಮ್ಮದಾಗಲಿ...ನಿಮಗೆ ಹೃದಯಾಘಾತವಾಗಿತ್ತು. ಎರಡು ದಿನಗಳಿಂದ ನರ್ಸಿಂಗ್ ಹೋಮಿನಲ್ಲಿದ್ದೀರಿ. ಅಂಥವರು ಇಲ್ಲಿ ಹೇಗೆ ಬಂದಿರಿ?"

"ನನಗೆ ಹೃದಯಾಘಾತವೇ? ಇಲ್ಲವಲ್ಲ ನಾನು ಚೆನ್ನಾಗಿದ್ದೇನೆ."

"ಮತ್ತೆ ನಿಮ್ಮ ಪಿ.ಎ. ಹೇಳಿದನಲ್ಲ."

"ಯಾರು ಸದಾಶಿವನೆ?"

"ಅಲ್ಲ ಇನ್ನೊಬ್ಬ."

"ನನಗೆ ಬೇರೆ ಪಿ.ಎ. ಯಾರೂ ಇಲ್ಲ...ನಿನ್ನೆ ತಾನೇ ನಾನು ಬೆಳಗಾವಿಗೆ ಹೋಗಿದ್ದೆ ಇನ್ನೂ ಮನೆ ಸಹ ಮುಟ್ಟಿಲ್ಲ."

"ಹೌದಾ?" ಅಪ್ರತಿಭನಾಗಿ ಹೇಮಂತ ಕೇಳಿದ...ಸದಾಶಿವ ಹಾಗೂ ಅವರ ಬಾಸ್ ಸಾಂಬಮೂರ್ತಿಗಳ ವಿಚಿತ್ರವರ್ತನೆ ಅವನಿಗೆ ಅರ್ಥವಾಗಲಿಲ್ಲ.

"ಇರಲಿ...ನೀವು ಇಲ್ಲಿಗೆ ಹೇಗೆ ಬಂದಿರಿ ಹೇಳಿ..."

"ಅವರು ಬಾಯಿ ತೆರೆಯುವ ಮುನ್ನವೇ ವಿಚಿತ್ರ ಶಬ್ದ ಕೇಳಿಸಿತು. ಅದರೊಂದಿಗೆ ಹೊರಗಡೆ ಬಿದ್ದ ಬೆಳಕಿನಿಂದಾಗಿ ಹೇಮಂತ ಬಾಗಿಲು ತೆರೆದು ಹೊರಗೆ ಧಾವಿಸಿದ. ಕಕ್ಕಾಬಿಕ್ಕಿಯಾಗಿದ್ದ ಸಾಂಬಮೂರ್ತಿಗಳೂ ಸಹ ಅವನ ಹಿಂದೆಯೇ ಓಡಿದರು.

ಹೇಮಂತ ಹೊರಗೋಡಿ ಬಂದಾಗ ವಿಚಿತ್ರ ಶಬ್ದ ಮಾಡುತ್ತಿದ್ದ ಆದು ದೂರ ಹೊರಟು ಹೋಗಿತ್ತು. ಒಂದು ಕೆಂಪುದೀಪ ಮಾತ್ರ ಕತ್ತಲಲ್ಲಿ ಮಿನು ಗುತ್ತ ಮಿನುಗುತ್ತ ಮರೆಯಾಯಿತು.

"ಏನದು........? ಏನಾಯ್ತು..... .?" ಏದುಸಿರು ಬಿಡುತ್ತ ಕೇಳಿದರು ಸಾಂಬಮೂರ್ತಿಗಳು.

"ಅದೊಂದು ಸ್ಕೂಟರ್. ಸೈಲೆನ್ಸರ ಕಳಚಿದೆ ಅಷ್ಟೆ........ನಿಮ್ಮ ರತ್ನಕುಮಾರಿ ನಮಗಿಬ್ಬರಿಗೂ ಕೈಕೊಟ್ಟು ಫರಾರಿಯಾದಳು."

"ನನ್ನ ರತ್ನಕುಮಾರಿಯೇ...? ಯಾರವಳು?"

"ರತ್ನಕುಮಾರಿ........ನಿಮ್ಮ ಕೀಪ್....ಹರಿನಗರದಲ್ಲಿ ನೀವೇ ಅವಳಿಗೆ ಮನೆ ಮಾಡಿಕೊಟ್ಟಿದ್ದೀರಿ...ಅವಳೂ ನಿಮಗೆ ಗೊತ್ತಿಲ್ಲವೆ?"

"ಸುಳ್ಳು...ಸುಳ್ಳು. ನನಗೆ ರತ್ನಕುಮಾರಿ ಅಂದರೆ ಯಾರೋ ಗೊತ್ತಿಲ್ಲ. ಹರಿನಗರದ ಮನೆಯೂ ಗೊತ್ತಿಲ್ಲ. ಯಾರೋ ನನ್ನ ಚಾರಿತ್ರ್ಯವಧೆಗಾಗಿ."

"ಬಾಯಿಮುಚ್ಚಿ...ನಿಮ್ಮ ರಾಜಕೀಯ ಭಾಷಣ ಇಲ್ಲಿ ಆರಂಭಿಸಬೇಡಿ. ನನಗೆಲ್ಲಾ ಚೆನ್ನಾಗಿ ಗೊತ್ತಿದೆ...ನೀವು ಯಾರು? ಏನು ಅಂತ...ಮೊದಲು ಹೇಳಿ ನೀವು ಇಲ್ಲಿ ಹೇಗೆ ಬಂದಿರಿ.''

"ನಿನ್ನೆ ಬೆಳಗಾವಿಗೆ ನಾನು ಹೋಗಿದ್ದೆ ನನ್ನ ಸಮ್ಮಂಧಿಕರ ಬಳಿ. ಇಂದು ಸಂಜೆ ನನಗೆ ಫೋನು ಬಂದಿತು."

''ಯಾರಿಂದ?''

"ಅರೆ ನೀವು ಹೀಗೇಕೆ ಕೇಳುತ್ತಿದ್ದೀರಿ........ನೀವೇ ಅಲ್ಲವೇ ಫೋನು ಮಾಡಿದ್ದು.''

"ನಾನಾ?''

"ಹೌದು.ನೀವೇ ಫೋನು ಮಾಡಿ ಕೂಡಲೇ ಬರುವಂತೆ ಈ ಸಾ ಮಿಲ್ಲಿನ ವಿಳಾಸ ತಿಳಿಸಿದಿರಿ...ನಾನು ಬಂದೆ..."

''ಆಮೇಲೆ.''

"ಇಲ್ಲಿ ಯಾರೂ ಇರಲಿಲ್ಲ...ಒಳಗಿನ ಕೋಣೆಗೆ ಹೋದೆ. ಬಾಗಿಲು ತೆರೆದೆ ಎದೆ ಧಸ್ ಎಂದಿತು.''

"ಏಕೆ...? ಏನಾಯ್ತು?''

''ಸುಂದರವಾದ ಹೆಣ್ಣೊಂದು ಬತ್ತಲೆಯಾಗಿ ನಿಂತು ನನ್ನತ್ತನೋಡುತ್ತ ಬಾ ರಾಜಾ ನಾನು ನಿನಗಾಗಿ ಕಾಯುತ್ತಿದ್ದೇನೆ...." ಎಂದಿತು. ನಾನವಳತ್ತ ನೋಡಿದೆ. ಅವಳ ಕಣ್ಣುಗಳನ್ನು ನೋಡುತ್ತಲೂ ಮೈಯಲ್ಲಿ ವಿದ್ಯುತ್ ಹರಿ

ದಂತಾಯಿತು. ಮುಂದೇನಾಯಿತೋ ತಿಳಿಯದು. ನನಗೆ ಎಚ್ಚರ ಬಂದದ್ದು ಗುಂಡಿನ ಸಪ್ಪಳ ಕೇಳಿದಾಗಲೇ."

"ಓಹ್....ನೀವು ಸಮ್ಮೋಹಿನಿಗೆ ಒಳಗಾಗಿದ್ದೀರಿ."

"ಸಮ್ಮೋಹಿನಿಯಾ?"

"ಹೌದು.ನಿಮ್ಮೆದುರು ನಿಂತು ಆಕೆ ನಿಮ್ಮನ್ನು ಸಮ್ಮೋಹಿನಿಗೊಳಪಡಿಸಿದಳು. ನೀವು ನಿಜ ಹೇಳಿ, ಸುಳ್ಳು ಹೇಳಬೇಡಿ. ಆಕೆ ರತ್ನಕುಮಾರಿ ಅಲ್ಲವೇ ಆಕೆಯ ಜೊತೆಗೆ ನಿಮಗೆ ಸಮ್ಬಂಧವಿಲ್ಲವೇ? ಹರಿನಗರದಲ್ಲಿ ನೀವು ಆಕೆಗೆ ಮನೆ ಮಾಡಿಕೊಟ್ಟಿಲ್ಲವೇ?"

"ಇದೆಲ್ಲಾ ಸುಳ್ಳು....ನಿಮಗೆ ಯಾರು ಹೇಳಿದರು?"

"ಯಾರು ಹೇಳಿದರು ಎಂಬುದು ಮುಖ್ಯವಲ್ಲ, ನಿಜವೋ ಸುಳ್ಳೋ ಎಂಬುದು ಮುಖ್ಯ..."

"ನನಗಂತೂ ಒಂದೂ ತಿಳಿಯದು.ಅದಿರಲಿ, ಇಲ್ಲಿಗೆ ನೀವುಹೇಗೆ ಬಂದಿರಿ? ನಾನಿಲ್ಲಿರುವದು ನಿಮಗೆ ಹೇಗೆ ತಿಳಿಯಿತು?"

"ನಿಮಗೆ ಯಾರು ಫೋನು ಮಾಡಿದರೋ ಅವರೇ ನನಗೂ ಇಲ್ಲಿಗೆ ಬರುವಂತೆ ತಿಳಿಸಿದರು," ಗುಪ್ತವಾಗಿ ಉತ್ತರಿಸಿದ.

"ಓಹ್ ಇದು ಸದಾಶಿವನ ಕಿತಾಪತಿ" ಎಂದು ಸಾಂಬಮೂರ್ತಿಗಳು ಉದ್ಗರಿಸಲು ಹೇಮಂತನ ತುಟಿಗಳು ಗೋಲವಾದವು.

ಅನಂತರ ಇಬ್ಬರೂ ಒಳಗೆ ಬಂದರು. ಒಂದೊಂದಾಗಿ ಎಲ್ಲ ದೀಪ ಉರಿಸಿದ ಹೇಮಂತ. ಎಲ್ಲಾ ಕಡೆ ಜಾಲಾಡಿಸಿದ, ಎಂಟು ಹತ್ತು ಮರದ ಪೆಟ್ಟಿಗೆಗಳು ಕಂಡು ಬಂದವು. ಎಲ್ಲದಕ್ಕೂ ದೊಡ್ಡ ದೊಡ್ಡ ಬೀಗ. ಒಂದು ಬೀಗಕ್ಕೆ ಒಂದು ರಿವಾಲ್ವರ ಗುಂಡು ತಗಲುತ್ತಲೂಕಳಚಿಬಿದ್ದಿತು. ಪೆಟ್ಟಿಗೆಯ ಬಾಗಿಲು ತೆರೆದಾಗ ಹೇಮಂತ ಬೆಚ್ಚಿಬಿದ್ದ....ಅದರ ತುಂಬಾ ರಿವಾಲ್ವರ್, ಪಿಸ್ತೂಲ ಹಾಗೂ ರೈಫಲ್‌ಗಳು....ಎಲ್ಲಾ ಪರದೇಶದಿಂದ ಬಂದವು....ಅಲ್ಲಿದ್ದ ಎಲ್ಲಾ ಪೆಟ್ಟಿಗೆಗಳಲ್ಲಿ ಅವೇ ಇರಬೇಕು ಎಂದುಕೊಂಡ ಹೇಮಂತ. ಅಲ್ಲಿಗೆ ಬಂದ ಕೆಲಸ ಮುಗಿದಂತಾಗಿತ್ತು. ಸಾಂಬಮೂರ್ತಿಗಳೊಂದಿಗೆ ಹೊರಬಂದ. ಸಮಯ ನೋಡಿದ ಆತ ಒಳಗೆ ಬಂದು ಮುಕ್ಕಾಲು ಗಂಟೆ ಕಳೆದಿತ್ತು. ರಾಜುವಿಗೆ ಕೊಟ್ಟ ಸಮಯ ಮುಗಿಯುತ್ತ ಬಂದಿದ್ದರಿಂದ ಹೊರಗೆ ಓಡಿದ. ಅವನ ಹಿಂದೆ ಸಾಂಬಮೂರ್ತಿಗಳು.

ಈಗ ಗೇಟಿನ ಬಾಗಿಲು ಎರಡೂ ತೆರೆದಿದ್ದವು. ರತ್ನಕುಮಾರಿ ಬಳಿ ಕೀಲಿ ಇತ್ತೇನೋ. ಹಾಗೇ ಹೊರಗೆ ಬಂದು ಟ್ಯಾಕ್ಸಿ ಇದ್ದಲ್ಲಿಗೆ ಬಂದ.

"ಬಂದಿರಾ ಸರ್" ರಾಜು ಕೇಳಿದ.

"ಹಾಂ....ರಾಜು........ಸ್ಕೂಟರ್ ಮೇಲೆ ಯಾರಾದರೂ ಹೋದದ್ದು ಕಂಡಿತಾ?"

"ಹೌದು ಸರ್. ಒಂದು ಹೆಣ್ಣು....ಆಕೆ ಮೈಮೇಲೆ ಬಟ್ಟೆಯೇ ಇರಲಿಲ್ಲ. ಆಕೆ ಸ್ಕೂಟರ್ ಮೇಲೆ ಹೋದಳು...........ನಾನು ಹೆಡ್‌ಲೈಟ್ ಆನ್ ಮಾಡಿ ನೋಡಿದೆ."

"ಸರಿ ನೀನೂ ಅವಳು ಹೋದ ಕಡೆ ನಡೆ."

ಸಾಂಬಮೂರ್ತಿಗಳೊಂದಿಗೆ ಹೇಮಂತ ಹಿಂದೆ ಕುಳಿತ. ಟ್ಯಾಕ್ಸಿ ಓಡ ತೊಡಗಿತು. ಸುಮಾರು ಒಂದು ಕಿಲೋಮೀಟರ್ ಬಂದಿರಬಹುದು ಅಷ್ಟೇ.... ಪಕ್ಕದಲ್ಲಿ ಅನಾಥವಾಗಿ ಬಿದ್ದಿದ್ದ ಸ್ಕೂಟರ ಕಾಣಿಸಿತು. ರಾಜು ಕಾರು ನಿಲ್ಲಿಸಿದ. ಹೇಮಂತ ಕೆಳಗಿಳಿದು ಅದರ ನಂಬರ ಗುರುತು ಹಾಕಿಕೊಂಡು ನಾಲ್ಕು ಹೆಜ್ಜೆ ಮುಂದೆ ಸಾಗಿದ. ನಾಲ್ಕು ಚಕ್ರಗಳ ವಾಹನವೊಂದರ ಗಾಲಿ ಗುರುತು ಕಂಡು ಬಂದವು. ಮುಂಭಾಗದಲ್ಲಿ ಎರಡು ಗಾಲಿಗಳ ಮಧ್ಯೆ ಹಸಿಹಸಿಯಾಗಿ ಬಿದ್ದಿದ್ದ ಎಣ್ಣೆ ಗುರುತು.

"ಈಗರ್ಥವಾಯಿತು. ಆವಳಿಗಾಗಿ ಯಾರೋ ಇಲ್ಲಿ ಕಾರಿನೊಂದಿಗೆ ಕಾಯುತ್ತಿದ್ದರು. ಆಕೆ ಸ್ಕೂಟರ ಮೇಲೆ ಬಂದಿದ್ದಳು ಅಂತ ಕಾಣುತ್ತದೆ. ಅದನ್ನಲ್ಲೇ ಬಿಟ್ಟುಹೋಗಿದ್ದಾರೆ."

ತನ್ನಷ್ಟಕ್ಕೆ ತಾನೇ ಅಂದುಕೊಂಡ ಹೇಮಂತ. ಕಾರಿನಲ್ಲಿ ಕುಳಿತು ಕೊಳ್ಳುತ್ತ ಹೇಳಿದ "ಈಗ ನೇರವಾಗಿ ಸಿಟಿಕಡೆಗೆ...."

ಅರ್ಧಗಂಟೆಯಲ್ಲಿ ಅವರು ನಗರಕ್ಕೆ ಬಂದರು. ಮೊದಲು ಸಾಂಬಮೂರ್ತಿ ಗಳನ್ನು ಅವರ ಮನೆಯೆದುರು ಇಳಿಸಿದ ಹೇಮಂತ ತನ್ನ ಮನೆ ಕಡೆ ನಡೆದ. ಗೇಟಿಗೆ ಟ್ಯಾಕ್ಸಿ ನಿಲ್ಲಿಸಿ, ನೂರರ ಮೂರು ನೋಟು ಅವನ ಜೇಬಿಗೆ ತುರುಕಿ "ಥ್ಯಾಂಕ್ಸ್" ಎಂದಾಗ ರಾಜು ಉಬ್ಬಿ ಹೋಗಿದ್ದ.

ಟ್ಯಾಕ್ಸಿ ಹೋಗುತ್ತಲೂ ಹೇಮಂತ ಮರದಡಿ ನಿಲ್ಲಿಸಿದ್ದ ಆ ಮಾರುತಿ ಜಿಪ್ಸಿಯತ್ತ ಬಂದ. ಬ್ಯಾಟರಿ ಬೆಳಕು ಒಳಗೆ ಚೆಲ್ಲಿದಾಗ ಡ್ರೈವರ ಸೀಟಿ ನಲ್ಲಿ ಕುಳಿತು ತೂಕಡಿಸುತ್ತಿದ್ದಾತ ಬೆಚ್ಚಿಬಿದ್ದ.

"ಏಯನ್ ಹೊರಡಿನ್ನು....ನಿನ್ನ ಡ್ಯೂಟಿ ಮುಗಿಯಿತು."

"ಆಂ. ಆಂ....? ಆತ ತಬ್ಬಿಬ್ಬಾದ."

"ಹೋಗಿ ಸದಾಶಿವನಿಗೆ ಹೇಳು ನಾನು ಮಲಗಿದ್ದೆ....ಏನಾಯ್ತೋ ತಿಳಿ ಯದು ಅಂತ."

ಮನೆಯೊಳಗೆ ಬಂದ ಹೇಮಂತ ಮೊದಲು ಮಾಡಿದ ಕೆಲಸವೆಂದರೆ ಎಸ್. ಪಿ. ನಾಗರಾಜ ಅವರಿಗೆ ಫೋನು ಮಾಡಿದ್ದು. ದೀರ್ಘ ನಿದ್ರೆಯಲ್ಲಿದ್ದ ಅವರು ಹೇಮಂತನ ಧ್ವನಿಗೆ ಪೂರ್ಣ ಎಚ್ಚತ್ತರು. ಅವರಿಗೆ ಸಾ ಮಿಲ್ ವಿಳಾಸ ತಿಳಿಸಿ ಅಲ್ಲಿದ್ದ ಎಲ್ಲಾ ಶಸ್ತ್ರಾಸ್ತ್ರ ವಶಪಡಿಸಿಕೊಳ್ಳುವಂತೆ ತಿಳಿಸಿ ರಿಸೀವರ್ ಕೆಳಗಿಟ್ಟ ಹೇಮಂತ. ಆಮೇಲೆ ಇನಸ್ಪೆಕ್ಟರ್ ಪಾಟೀಲರ ಸರದಿ. ಅವರಿಗೆ ಕೂಡಲೇ ನಾಲ್ಕಾರುಕಾನಸ್ಟೇಬಲ್‌ರೊಡನೆ ಬರಲುತಿಳಿಸಿ ಆತ ಬಾತ್‌ರೂಮ್ ಪ್ರವೇಶಿಸಿದ....ಸ್ನಾನ ಮಾಡುತ್ತಿರುವಾಗ ಅವನಿಗೆ ಸುಷಮಾ ಹಾಗೂ ಅಶೋಕರದೇ ಚಿಂತೆ. ಅವರಿಬ್ಬರೂ ಎಲ್ಲಿಗೆ ಹೋದರು? ಯೋಚಿಸುತ್ತಿರುವಂತೆ ಕೈಲಿದ್ದ ಚೊಂಬು ಜಾರಿ ಕೆಳಗೆ ಬಿದ್ದು ಸದ್ದುಮಾಡಿತು. ಅದನ್ನೆತ್ತಿಕೊಳ್ಳು ತ್ತಿರುವಂತೆ ಹೇಮಂತನ ಕಣ್ಣುಗಳಲ್ಲಿ ಮಿಂಚೊಂದು ಸುಳಿದುಹೋಯಿತು. ಇದೇ ಸಪ್ಪಳ ಹೋಲುವ ಸಪ್ಪಳ ಆತ ಕೇಳಿದ್ದ........ಈ ಹಿಂದೆ

ರತ್ನಕುಮಾರಿಯ ಚೀತ್ಕಾರ ಕೇಳಿಒಳಗಾತಧಾವಿಸಿದ್ದ.ಆಕೆ ಅವನೆದುರು ನಗ್ನಳಾಗಿ ನಿಂತಿದ್ದಳು. ಅವಳ ಕಣ್ಣಿನ ಸಮ್ಮೋಹಿನಿಗೆಆತ ಒಳಗಾದವ ಎಚ್ಚರ ಹೊಂದಿದ್ದ,ಇದೇ ಸಪ್ಪಳಕ್ಕೆ ಅಂದರೆ ಧಾತುವೊಂದುನೆಲಕ್ಕೆ ಬಿದ್ದಾಗಿನ ಸಪ್ಪಳ. ಆಮೇಲೆ ಆತ ಹೊರಗೆ ಬಂದಿದ್ದ. ಹೊರಗಡೆ ಏನೂ ದೊರೆತಿರಲಿಲ್ಲ. ಸಿಕ್ಕದ್ದು ಮುದ್ದೆ ಮುದ್ದೆಯಾದ ಅಲ್ಯುಮಿನಿಯಂ ಬಟ್ಟಲು. ಅದನ್ನಾತ ಕಾಲಿನಿಂದ ಜೋರಾಗಿ ಒದ್ದಿದ್ದ. ಇದೇ ರೀತಿ ಸಪ್ಪಳ. ಆ ಅಲ್ಯುಮಿನಿಯಂ ಲೋಟಾ ಅಥವಾ ಬಟ್ಟಲು ಅಲ್ಲಿಗೆ ಹೇಗೆ ಬಂದಿತು? ಅದು ಯಾರದು?

ಒಮ್ಮಿಂದೊಮ್ಮೆಲೆ ಉತ್ತರ ಹೊಳೆಯಿತು. ಸುಷಮಾ ಹೋದದ್ದು ಭಿಕ್ಷುಕಿಯಾಗಿ ಅಂದ ಮೇಲೆ ಅದು ಭಿಕ್ಷುಕಿಯ ಬಟ್ಟಲು.

"ಓಹ್ ದೇವರೆ, ಸುಷಮಾ ಅಲ್ಲೇ ಎಲ್ಲೋ ಒಂದು ಕಡೆ ಇದ್ದಳು. ಅವ ಳಿಗೆ ತಾನು ಬಂದದ್ದು ತಿಳಿದಿತ್ತು. ಸಂಜ್ಞಾ ರೂಪದಲ್ಲಿ ಆಕೆ ಅದನ್ನು ಎಸೆದಿದ್ದಳು."

ಮುಸುಕು ಮುಸುಕಾಗಿದ್ದ ಚಿತ್ರ ನಿಚ್ಚಳವಾಯಿತು.

ಸರಸರನೆ ಸ್ನಾನ ಮಾಡಿ ಉತ್ಸಾಹದಿಂದ ಹೊರಬಂದ ಹೇಮಂತ. ತನ್ನ ಸಂಗಡಿಗರು ಎಲ್ಲಿರಬಹುದೆಂದಾತನಿಗೆ ಸಂಶಯಬಂದಿತು. ಆತ ಬಟ್ಟೆ ತೊಟ್ಟು ಕೊಂಡು ಹೊರಬರುವದಕ್ಕೂ ಇನಸ್ಪೆಕ್ಟರ ಪಾಟೀಲರ ಜೀಪು ಪೋರ್ಟಿಕೋದಲ್ಲಿ ಬಂದು ನಿಲ್ಲುವದಕ್ಕೂ ಸರಿಹೋಯಿತು. ಅವರಿಗೆ ಕೆಳಗೆ ಇಳಿಯಲು ಕೊಡದೇ ಅವರ ಬದಿಯಲ್ಲೇ ಕುಳಿತ ಮೇಜರ ಹೇಳಿದ "ಹರಿನಗರ."

ಜೀಪು ಓಡತೊಡಗಿತ್ತು ಹರಿನಗರದತ್ತ ಆರನೇ ಮೇನ್, ಮೂರನೇ

ಕ್ರಾಸ್. ಇನ್ನೂರಾ ಎಪ್ಪತ್ತನೇ ಮನೆ ಎದುರು ನಿಲ್ಲಿಸಿದ 'ಹೇಮಂತ. ಎಲ್ಲರೂ ಕೆಳಗಿಳಿದರು. ಗೇಟು ತೆರೆದು ರತ್ನಕುಮಾರಿ ಮನೆ ಮುಂದೆ ಬಂದ ಹೇಮಂತ ಬಾಗಿಲಿಗೆ ಬೀಗ ನೇತಾಡುತ್ತಿತ್ತು. ಮಾಸ್ಟರ ಕೀದಿಂದ ಬೀಗ ತೆರೆದು ಒಳಗೆ ಕಾಲಿಟ್ಟ. ದೀಪ ಬೆಳಗಿಸಿದಾಗ ಬರಿದಾದ ಮನೆ ಸ್ವಾಗತಿಸಿತು. ಸಾಯಂಕಾಲ ಆತ ಬಂದಾಗ ಶೃಂಗಾರ-ವೈಭವಗಳ ತವರು ಮನೆಯಾಗಿದ್ದ, ಅದೀಗ ಬಿಕೋ ಅನ್ನುತ್ತಿತ್ತು....ಅದರ ನೆನಪಿಗಾಗಿ ಆದರೂ ಒಂದೂ ವಸ್ತು ಅಲ್ಲಿರಲಿಲ್ಲ....

ಹೇಮಂತ ಹೊರಬಂದ....ಸುತ್ತಲೂ ಅಡ್ಡಾಡಿದ....ಹುಡುಕಾಡಿದ. ಅವನೆಣಿಕೆಯಂತೆ ಆಗಿತ್ತು. ಕಾಲಿನಿಂದ ಒದ್ದ ಮುದ್ದೆ ಮುದ್ದೆಯಾದ ಅಲ್ಯುಮಿನಿಯಂ ಬಟ್ಟಲು ಈಗ ಅಲ್ಲಿರಲಿಲ್ಲ.

ಇನ್ನೂರಾ ಅರವತ್ತೊಂಭತ್ತು ಹಾಗೂ ಇನ್ನೂರಾ ಎಪ್ಪತ್ತೊಂದು ಎರಡೂ ಬೀಗ ಹಾಕಿದ್ದವು. ಅವೆರಡೂಮನೆಯತ್ತ ನೋಡಿ, ಹೇಮಂತ ನಿರಾಶನಾಗಿ ನುಡಿದ "ಬನ್ನಿ ಇನಸ್ಪೆಕ್ಟರ....ಹಕ್ಕಿ ಹಾಗಿಹೋಗಿವೆ."

ಎಲ್ಲರೂ ಜೀಪಿನೊಳಕ್ಕೆ ಕುಳಿತುಕೊಳ್ಳುತ್ತಿದ್ದಂತೆ ಜೀಪು ಬಂದ ದಾರಿಯಲ್ಲೇ ವೇಗವಾಗಿ ಸಾಗಿಹೋಯಿತು.ಜೀಪು ಹೋಗಿ ಸುಮಾರು ಹತ್ತು ಹದಿನೈದು ನಿಮಿಷಗಳು ಕಳೆದಿರಬಹುದು, ಚಟಕ್‌ನೆ ಇನ್ನೂರಾ ಅರವತ್ತೊಂಭತ್ತನೇ ಮನೆಯಲ್ಲಿ ದೀಪ ಹತ್ತಿಕೊಂಡಿತು. ಅದರ ಮರುಕ್ಷಣ ಇನ್ನೂರಾ ಎಪ್ಪತ್ತೊಂದರ ಮನೆಯಲ್ಲೂ ಕೂಡ ದೀಪ ಬೆಳಗಿತು. ಮುಂಬಾಗಿಲಿಗೆ ಬೀಗ ವಿದ್ದರೂ ಹಿಂದಿನ ಬಾಗಿಲು ತೆರೆದುಕೊಂಡು ಇಬ್ಬರು ಹೊರಬಂದರು. ಒಂದು ಗಂಡಾದರೆ ಇನ್ನೊಂದು ಹೆಣ್ಣು ಗೇಟಿಗೆ ಬಂದು ನಿಂತು ಸುತ್ತಲೂ ನೋಡಿದ. ಇಬ್ಬರೂ ಒಳನಡೆದಳು. ಐದಾರು ನಿಮಿಷಗಳಲ್ಲಿ ಒಂದೊಂದು ಮನೆಯಿಂದ ಅಶೋಕ ಹಾಗೂ ಸುಷಮಾ ಇಬ್ಬರೂ ಹೊರಬಂದರು. ಇಬ್ಬರ ಕೈಗಳನ್ನು ಹಿಂದಕ್ಕೆ ಮಾಡಿ ಕಟ್ಟಲಾಗಿತ್ತು. ಅವರಿಬ್ಬರ ಹಿಂದೆ ಈ ಮೊದಲು ಬಂದವರೇ ಪಿಸ್ತೂಲ ಹಿಡಿದು ಬರುತ್ತಿದ್ದರು....ನಾಲ್ವರು ಗೇಟಿನಬಾಗಿಲು ತೆರೆದು ಹೊರಗೆ ಬರುವದಕ್ಕೂ ನಾಲ್ವರ ಮುಖದ ಮೇಲೆ ಪ್ರಕಾಶಮಾನವಾದ ಬ್ಯಾಟರಿ ಬೆಳಕು ಬೀಳುವದರೊಂದಿಗೆ ಗಡಸುಕಂಠ ಕೇಳಿಸಿತು.

"ಎಚ್ಚರ ನಿಮ್ಮನ್ನು ಸುತ್ತುವರಿದಿದ್ದೇವೆ. ಓಡಲು........ಯತ್ನಿಸಿದರೆ ಗುಂಡಿಗೆ ಆಹುತಿಯಾಗುತ್ತೀರಿ...."

ಅದು ಮೇಜರನ ಧ್ವನಿ ಎಂದು ಅಶೋಕ ಮತ್ತು ಸುಷಮಾ ಅರಿತರು.

ಮುಂದೆ ಬಂದ ಮೇಜರ ಹಾಗೂ ಇನಸ್ಪೆಕ್ಟರ ಪಾಟೀಲ ಅದರ ಹಿಂದಿದ್ದವರನ್ನು ಬಂಧಿಸಿ ಪಿಸ್ತೂಲು ಕಸಿದುಕೊಂಡರು. ಮಂದಿನ ಗಳಿಗೆ ಅವರಿಬ್ಬರೂ

ಬಂದಿಗಳಾಗಿದ್ದರೆ ಸುಷಮಾ ಅಶೋಕ ಬಿಡುಗಡೆ ಹೊಂದಿದ್ದರು. ಒಂದೇ ಜೀಪಿನಲ್ಲಿ ಎಲ್ಲರಿಗೂ ಸ್ಥಳಾವಕಾಶವಾಗುವಂತಿರಲಿಲ್ಲ. ಹೀಗಾಗಿ ಎಲ್ಲಾ ಪೊಲೀಸ್ ಕಾನಸ್ಟೇಬಲ್‌ರಿಗೆ ಕೆಳಗಿಳಿಸಿ, ಒಂದು ಬಾರಿರಾತ್ರಿಗಸ್ತು ಮುಗಿಸಿಕೊಂಡುಬರುವಂತೆ ಆದೇಶ ನೀಡಿದರು ಪಾಟೀಲ. ಹಿಂಬದಿಗೆ ಅಶೋಕ ಸುಷಮಾ. ಹಾಗೂ ಇಬ್ಬರು ಬಂದಿಗಳು ಮುಂದೆ, ಪಾಟೀಲ ಹಾಗೂ ಹೇಮಂತರನ್ನು ಕುಳ್ಳಿರಿಸಿಕೊಂಡು ಓಡತೊಡಗಿತು ಹೇಮಂತನ ಮನೆಯತ್ತ.

ಪಾಟೀಲರ ಜೊತೆ ಔಪಚಾರಿಕವಾಗಿ ಒಂದೆರಡುಮಾತಾಡಿದ ಹೇಮಂತ ಬಿಸಿ ಬಿಸಿ ಕಾಫಿಯೊಂದಿಗೆ ಅವರಿಗೆ ಸತ್ಕರಿಸಿದ. ಅವರು ಹೊರಟು ನಿಂತಾಗ ಒಂದೆರಡು ಅವಶ್ಯಕ ಕೆಲಸಗಳನ್ನು ಹೇಳಲು ಮರೆಯಲಿಲ್ಲ.

"ನನಗೆ ನಾಳೆ ಸಂಜೆಯೊಳಗಾಗಿ, ಮಿಸ್ ಇಂಡಿಯಾ ರತ್ನಕುಮಾರಿ ಬಗ್ಗೆ, ಪಂಜಾಬದ ಹಿಂದಿನ ಮುಖ್ಯಮಂತ್ರಿಗಳ ಅಳಿಯ ಸುನೀಲ ಕಟಾರಿಯಾ ಬಗ್ಗೆ ಹಾಗೂ 'ಚಾಂಗಚಿನ್' ಬಗ್ಗೆ ವಿಶೇಷ ಮಾಹಿತಿ ಬೇಕು."

"ಸರಿ ನಾನು, ತಾವು ಹೇಳಿದ ಮಾಹಿತಿ ಸಂಗ್ರಹಿಸಿಕೊಂಡು ನಾಳೆರಾತ್ರಿ ತಮ್ಮ ಬಳಿ ಬರುತ್ತೇನೆ."

"ಗುಡ್....ರಾತ್ರಿಯಊಟ ನಮ್ಮೊಂದಿಗೇ...."

"ಥ್ಯಾಂಕ್ಸ್."

ಅವರಿಗೆ ವಂದಿಸಿ ಪಾಟೀಲರು ಹೊರಡುತ್ತಿದ್ದಂತೆ ಸುಷಮಾ ಒಂದೇ ಹಾರಿಕೆಗೆ ಹೇಮಂತನ ಬಾಹುಗಳಲ್ಲಿ ಬಂದಿದ್ದಳು. ನೋಡಿಯೂ ನೋಡದವನಂತೆ ಅಶೋಕ ಅಲ್ಲಿಂದ ಜಾರಿಕೊಂಡ ತನ್ನ ರೂಮಿಗೆ.

ಮುಂಜಾನೆ ಸರಿಯಾಗಿ ಒಂಭತ್ತು ಗಂಟೆಗೆ ಮೂವರುಒಂದೆಡೆ ಸೇರಿದರು ಡೈನಿಂಗ್ ಟೇಬಲ್ ಬಳಿ ತಿಂಡಿ ತಿನ್ನುತ್ತ ಮೂವರೂ ತಮ್ಮ ತಮ್ಮ ಅನುಭವ ಹಂಚಿಕೊಂಡರು. ಕಾಫಿ ಕುಡಿಯುತ್ತ ಹೇಮಂತ ಹೇಳಿದ.

"ನಾವು ಮೂವರೂ ಫೂಲ್ ಆಗುತ್ತಿದ್ದೇವೆ. ಕಾಣದ ಕೈಗಳಿಗೆ ಸಿಲುಕಿಸಿ ನಮ್ಮನ್ನು ಕುಣಿಸುತ್ತಿದ್ದಾರೆ. ಮುಖ್ಯ ಗುರಿ ಬೇರೆಲ್ಲೋ ಇದೆ. ನಾವು ಅದರಿಂದ ತುಂಬಾ ದೂರದಲ್ಲಿ ತೊಳಲಾಡುತ್ತಿದ್ದೇವೆ. ಬೇಕೆಂತಲೇ ನಮ್ಮನ್ನು ಅದರಿಂದ ದೂರ ದೂರ ಬಹಳ ದೂರ ಒಯ್ಯುತ್ತಿದ್ದಾರೆ ಅನಿಸುತ್ತಿದೆ."

"ಯಾವ ಗುರಿಯಿಂದ?" ಸುಷಮಾ ಕೇಳಿದಳು.

"ಅದಿನ್ನೂ ನಿಚ್ಚಳವಾಗಿಲ್ಲ. ಆದರೆ ಯಾರು ನಮ್ಮನ್ನು ಮೂರ್ಖರನ್ನಾಗಿ ಮಾಡಿ ದೂರ ಒಯ್ಯುತ್ತಿದ್ದಾರೆಂದು ಅರ್ಥವಾಗುತ್ತಿದೆ."

"ಯಾರವರು?" ಈ ಬಾರಿ ಕೇಳಿದವ ಅಶೋಕ.

"ಬೇರೆ ಯಾರೂ ಅಲ್ಲ, ಸಾಂಬಮೂರ್ತಿಗಳು."

"ಆಂ....ಏನೆಂದಿರಿ?"

ಕಾಫಿ ಬಟ್ಟಲನ್ನು ಅರ್ಧಕ್ಕೆ ಕೆಳಗಿಟ್ಟು ಸುಷಮಾ, ಅಶೋಕ ಇಬ್ಬರೂ ಒಂದೇ ಬಾರಿ ಕೇಳಿದರು.

"ಹೌದು. ಸಾಂಬಮೂರ್ತಿಗಳೇ ನಮ್ಮನ್ನು ಆಡಿಸುತ್ತಿದ್ದಾರೆ....ಅವರಿಗೆ ಸಹಾಯಕವಾಗಿದ್ದಾರೆ ಸದಾಶಿವ, ಅವರ ಆಪ್ತಕಾರ್ಯದರ್ಶಿ." ಹೇಮಂತನ ಮಾತು ಕೇಳುತ್ತಿದ್ದಂತೆ ಅವರಿಬ್ಬರ ಬಾಯಿಯಿಂದ ಯಾವ ಮಾತೂ ಹೊರಡಲಿಲ್ಲ," ಹೇಮಂತನೇ ಮುಂದುವರೆಸಿದ. "ಸಾಂಬಮೂರ್ತಿ ಹಾಗೂ ಸದಾಶಿವ ಇಬ್ಬರೂ ಒಂದೇ ಆಗಿದ್ದಾರೆ. ಮೇಲೆ ಮಾತ್ರ ಸದಾಶಿವ ಅವರ ವೈರಿಯಂತೆ ನಟಿಸುತ್ತಿದ್ದಾನೆ, ಅವರಿಬ್ಬರ ಉದ್ದೇಶ ಒಂದೇ ಆಗಿದೆ...."

"ಏನದು?"

"ಸಾಧ್ಯವಿದ್ದಷ್ಟು ನಮ್ಮನ್ನು ಗೊಂದಲದಲ್ಲಿ ಕೆಡವುದು,ಒಂದೆಡೆ ಕುಳಿತು ನಿಶ್ಚಿಂತೆಯಿಂದ ಯೋಚಿಸದಂತೆ ಮಾಡುವದು."

"ಇವರಿಂದ ಅವರಿಗೇನು ಲಾಭವಿದೆ?" ಅಶೋಕ ಕೇಳಿದ.

"ಇದೆ....ಇದಕ್ಕಿಂತ ಮೊದಲು ನಾವು ಒಂದು ತಪ್ಪು ಮಾಡಿದ್ದೇವೆ. ನಾವು ಪ್ರೆಸ್ ರಿಪೋರ್ಟರ್ ಚಂದ್ರಮೋಹನನನ್ನು ಮರೆತೇಬಿಟ್ಟಿದ್ದೇವೆ."

"ಹೌದಲ್ಲ," ಅಶೋಕ ಉದ್ಗರಿಸಿದ.

"ಮೇಜರ ನನಗೊಂದು ಸಂಶಯ" ಸುಷಮಾ ನುಡಿದಳು.

ಹೇಮಂತ ಹಾಗೂ ಅಶೋಕ ಅವಳತ್ತ ನೋಡಿದರು.

"ಚಂದ್ರಮೋಹನನಿಂದ ದೂರ ಇರಿಸಲೆಂದೇ ಈ ನಾಟಕವು ಏಕೆ ನಡೆಯುತ್ತಿರಬಾರದು?"

ಸಟಕ್‌ನೆ ಎದ್ದು ನಿಂತ ಹೇಮಂತ....

ಸುಷಮಾ ನಿಜವಾದ ರಹಸ್ಯ ಹೊರಗೆಡವಿದ್ದಳು.

* * * *

ಅನುಸೂಯಾ....

ಗಂಭೀರ ಚಿಂತೆಯಲ್ಲಿ ಮುಳುಗಿದ್ದಳು. ಅವಳಲ್ಲಿ ಮಗುವಿನೊಂದಿಗೆ ಬಂದಿಯಾಗಿ ಎಷ್ಟು ದಿನ ಕಳೆದಿವೆ ಎಂಬ ಕಲ್ಪನೆಯೂ ಅವಳಿಗಿರಲಿಲ್ಲ. ಅಂದು ಚಂದ್ರಮೋಹನನ ಆಫೀಸಿನಿಂದ ಫೋನು ಬಂದದ್ದು....ಅವಳನ್ನು ಕರೆಯಲು ಕಾರು ಕಳಿಸಿದ್ದು....ತಾನೂ ಎಷ್ಟೋ ದಿನಗಳ ನಂತರ ಪತಿಯನ್ನುನೋಡುತ್ತೇ

ನಲ್ಲ....ಎಂಬ ಸಂಭ್ರಮದಲ್ಲಿ ಕಾರು ಏರಿದ್ದು, ಒಳಗೆ ಕುಳಿತುಕೊಳ್ಳುತ್ತಲೂ ಒಂದು ಬಗೆಯ ಸುಗಂಧ ಮೂಗಿಗೆ ಬಡಿದದ್ದು, ಕಣ್ಣುಗಳು ತನ್ನಷ್ಟಕ್ಕೆ ತಾನೇ ಮುಚ್ಚಿಕೊಂಡಿದ್ದು. ಇಷ್ಟೇ ಅವಳಿಗೆ ನೆನಪಿದ್ದುದ್ದು ಮುಂದೆ ಎಚ್ಚರ ವಾದಾಗ ಈ ಕೋಣೆಯಲ್ಲಿದ್ದಳು. ಎಲ್ಲಕ್ಕಿಂತ ಅವಳಿಗೆ ಹೆಚ್ಚಿನ ಆಶ್ಚರ್ಯ ವಾದದ್ದು ಅಪಹರಣಕಾರರಿಂದ ಇನ್ನೂವರೆಗೂ ಅವಳಿಗೂ ಯಾವದೇ ರೀತಿಯ ಹಿಂಸೆಯಾಗಲಿ, ಕಿರುಕುಳವಾಗಲೀ ಆಗಿರಲಿಲ್ಲ. ಅವಳ ಮನನೋಯಿಸುವಂಥ ಚಿಕ್ಕ ಘಟನೆ ಸಹ ನಡೆದಿರಲಿಲ್ಲ. ಎಲ್ಲರೂ ಅವಳನ್ನೂ ತುಂಬಾ ಗೌರವದಿಂದ ನೋಡಿಕೊಳ್ಳುತ್ತಿದ್ದರು. ನಗುನಗುತ್ತ ಮಾತನಾಡುತ್ತಿದ್ದರು. ಮಗುವಿ ನೊಂದಿಗೆ ಮಗುವಿನಂತೆ ಆಡಿ ನಲಿಸುತ್ತಿದ್ದರು. ಆಟಿಕೆಗಳ ರಾಶಿಯನ್ನೇ ತಂದು ಹಾಕಿದ್ದರು. ತಿಂಡಿ ತಿನಿಸುಗಳಿಗಂತೂ ಕಡಿಮೆಯೇ ಇರಲಿಲ್ಲ... .... ಸಮಯಕ್ಕೆ ಸರಿಯಾಗಿ ಊಟ–ತಿಂಡಿ ಹೊರಗಿನಿಂದ ತಂದುಕೊಡುತ್ತಿದ್ದರು. ರೂಮಿನಲ್ಲೇ ಬಾಥರೂಮು ಇದ್ದುದರಿಂದ ಸ್ನಾನಕ್ಕೂ ಚಿಂತೆ ಮಾಡುವಂತಿರ ಲಿಲ್ಲ. ಟಿ.ವಿ. ವಿ.ಸಿ.ಪಿ. ಕ್ಯಾಸೆಟ್ ಎಲ್ಲಾ ಇದ್ದೂ ಒಂದು ಬಗೆಯ ಐಷಾರಾ ಮಿನ ಜೀವನ ಅವಳಿಗೊದಗಿತ್ತು. ಅದನ್ನೆಲ್ಲ ಯಾರು ಕಳಿಸುತ್ತಿದ್ದರು? ಎಲ್ಲಿಂದ? ಏಕೆ? ಒಂದೂ ತಿಳಿಯದು!

ಹೀಗಾಗಿ ಅವಳು ಚಿಂತಿತಳಾಗಿದ್ದಳು. ತನ್ನಂಥ ಸುಂದರತರುಣಿಯನ್ನು ಅಪಹರಿಸಿದಾಗ ನಡೆಯುವ ಘಟನೆಗಳ ಬಗ್ಗೆ ಅವಳಿಗೆ ಚೆನ್ನಾಗಿ ತಿಳಿದಿತ್ತು. ಅಂಥ ಘಟನೆ ಅವಳ ಹತ್ತಿರ ಸಹ ಸುಳಿದಿರಲಿಲ್ಲ. ಅವಳನ್ನು ಮುಟ್ಟುವ ಸಾಹಸವನ್ನೂ ಮಾಡಿರಲಿಲ್ಲ. ಪ್ರತಿಯೊಬ್ಬರೂ "ತಂಗಿ" ಎಂದೇ ಸಂಬೋಧಿ ಸುತ್ತಿದ್ದರು.

ಇವರೆಂಥಹ ಜನ? ಇವರ ಮನದಲ್ಲೇನಿದೆ? ಇಷ್ಟು ಒಳ್ಳೆಯ ಜನ ನನ್ನ ಅಪಹರಣ ಏಕೆ ಮಾಡಿದರು? ನನ್ನಿಂದ ಅವರಿಗೇನಾಗಬೇಕಾಗಿದೆ?

ಒಂದೂ ಅವಳಿಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಸುಮಾರಾಗಿ ಎಲ್ಲ ರನ್ನು ಆಕೆ ವಿಚಾರಿಸಿದ್ದಳು. ಅವರೆಲ್ಲ ನಗುತ್ತ...."ತಂಗೀ, ಅದೆಲ್ಲ ನಿನಗೇಕೆ? ನಿನಗೇನಾದರೂ ತೊಂದರೆ ಇದ್ದರೆ ಹೇಳು. ಮುಂದೆ ಎಲ್ಲಾ ಗೊತ್ತಾಗುತ್ತದೆ" ಎಂದೇ ನುಡಿದಿದ್ದರು. ಆ ದಿವಸ ಇನ್ನೂವರೆಗೂ ಬಂದಿರಲಿಲ್ಲ.

ಆ ದಿನದ ನಿರೀಕ್ಷೆಯಲ್ಲಿದ್ದಳು ಆಕೆ....ಅದರೊಂದಿಗೆ ಪತಿ ಚಂದ್ರ ಮೋಹನನ ಬಗ್ಗೆ ನೂರೆಂಟು ಕೆಟ್ಟ ವಿಚಾರಗಳು. ಎಷ್ಟು ಪ್ರಯತ್ನಿಸಿದರೂ ಅವಳ ಮನದಿಂದ "ಏನೋ ಅನಿಷ್ಟ ನಡೆದಿದೆ. ನಿನ್ನ ಪತಿ ಜೀವಿಸಿಲ್ಲ" ಎಂಬು ದನ್ನು ತೆಗೆದುಹಾಕಲು ಸಾಧ್ಯವಾಗುತ್ತಿರಲಿಲ್ಲ.

ಇಷ್ಟು ಸುಖ ವೈಭವದ ಮಧ್ಯೆಯೂ ಅವಳು ಹುಚ್ಚಿಯಂತಾಗಿದ್ದಳು.

ರೂಮಿನ ಕರೆಗಂಟೆ ಬಾರಿಸಿತು. ಬಾಗಿಲು ತೆರೆದಳು. ಎದುರಿಗೆ ತಿಂಡಿಯ ಪ್ಲೇಟ ಹಾಗೂ ಕಾಫಿ ಬಟ್ಟಲುಗಳೊಂದಿಗೆ ನಿತ್ಯದ ಸೇವಕ ನಿಂತಿದ್ದ. ಮುಗುಳು ನಗೆ ನಗುತ್ತ.

"ನಮಸ್ಕಾರ ತಂಗಿ....ಈ ಮುಂಜಾವು ನಿಮಗೆ ಶುಭವಾಗಲಿ."

ಆತ ಒಳಬಂದ....ನಿದ್ರಿಸುತ್ತಿದ್ದ ಮಗುವಿನೆಡೆ ನೋಡಿದ.

"ನೀವೊಬ್ಬರೇ ತಿಂಡಿ ತಿಂದು ಕಾಫಿ ಕುಡಿಯಿರಿ, ಮಗುವಿಗೆ ಆಮೇಲೆ ಮತ್ತೆ ತರುತ್ತೇನೆ."

"ಬೇಡ....ನಿನಗೇಕೆ ತೊಂದರೆ."

"ತೊಂದರೆಯಲ್ಲಿಯದು ಬಂತು?" ನಮ್ಮ ಕೆಲಸವೇ ಇದು.

"ಇನ್ನೂ ಎಷ್ಟು ದಿವಸ?"

"ಗೊತ್ತಿಲ್ಲ....ಬಾಸ್ ಹೇಳುವವರೆಗೂ."

"ಯಾರು ನಿಮ್ಮ ಬಾಸ್?"

"ಅದನ್ನು ನಾನು ಹೇಗೆ ಹೇಳಲಿ....? ಆದ್ರೆ ಒಂದು ಮಾತು ಅವರಿಂದು ಬರುತ್ತಾರೆ."

"ಹೌದಾ ಏಕೆ?"

"ನಿಮ್ಮ ಭೆಟ್ಟಿಗೆ."

"ಸಂತೋಷ....ಅವರನ್ನೇ ವಿಚಾರಿಸುತ್ತೇನೆ."

"ಅದು ಒಳ್ಳೆಯದು...."

ಆತ ಹೊರಟುಹೋದ. ಅನುಸೂಯಾ ಮನಸ್ಸಿರದಿದ್ದರೂಬದುಕಬೇಕಲ್ಲ ನನಗಾಗಿ ಅಲ್ಲದಿದ್ದರೂ, ಅಮಾಯಕ ಮಗುವಿಗಾಗಿ ಎಂದುಕೊಳ್ಳುತ್ತ ತಿಂಡಿ ತಿಂದು ಕಾಫಿ ಕುಡಿದಳು. ಖಾಲಿ ಕಪ್ಪು ಕೆಳಗಿಟ್ಟಿರಲಿಲ್ಲ. ಬಾಗಿಲ ಕೊಂಡಿ ತೆಗೆದ ಸಪ್ಪಳವಾಯಿತು....ಅತ್ತ ನೋಡಿದ ಆಕೆಗೆ ಒಂದು ಕ್ಷಣ ಭಯವಾದರೂ ಮುಂದೆ ಆ ಭಯ ಅಚ್ಚರಿಯಲ್ಲಿ ಬದಲಾಯಿತು. ಪೂರ್ತಿ ಕಡು ನೀಲಿ ಬಣ್ಣದ ಸೂಟು ಧರಿಸಿ ತಲೆಯ ಮೇಲೆ ಬಿಳಿ ಹ್ಯಾಟು ಧರಿಸಿದ ಆ ವ್ಯಕ್ತಿ ಮುಖ ಕಾಣ ದಂತೆ ಬಿಳಿವಸ್ತ್ರ ಸುತ್ತಿಕೊಂಡಿತ್ತು. ತನ್ನ ಗುರುತಿಸಬಾರದೆಂದಿರಬೇಕು. ಆತ ಒಳಗೆ ಬರುವದಕ್ಕೂ ಬಾಗಿಲು ಮುಚ್ಚಿಕೊಂಡಿತು.ಅನುಸೂಯಾಕಡೆನೋಡಿದ ಆತ. ಕೇವಲ ಎರಡು ಕಪ್ಪು ಬಣ್ಣದ ಗೋಲಿಗಳಷ್ಟೇ ಕಂಡವು ಅವಳಿಗೆ.

"ಅನುಸೂಯಾ....ಹೇಗಿರುವೆ?"

ವಾತ್ಸಲ್ಯ ತುಂಬಿದ ಧ್ವನಿಯಲ್ಲಿ ಬಂದ ಪ್ರಶ್ನೆಗೆ ಅನುಸೂಯಾ ಪುಲಕಿತ

ಳಾದಳು. ಎಷ್ಟು ಪ್ರೀತಿ ಮಮತೆ ತುಂಬಿದೆಯಲ್ಲ ಈ ವಾಣಿಯಲ್ಲಿ....ಇಂಥವರೇಕೆ ನನ್ನನ್ನು ಅಪಹರಣ ಮಾಡಿದರು....? ಅನುಸೂಯಾ ಎದ್ದು ನಿಂತಳು. ಅವಳಿಗೆ ತಿಳಿಯದಂತೆ ಆಕೆ ಅವರ ಬಳಿ ನಡೆದು ಕಾಲಿಗೆರಗಿದ್ದಳು. ಅವಳ ಈ ವರ್ತನೆಗೆ ಮುಸುಕುಧಾರಿ ವ್ಯಕ್ತಿ ಅಪ್ರತಿಭನಾಗಿ ಒಂದು ಹೆಜ್ಜೆ ಹಿಂದೆ ಸರಿದು ಉದ್ಗರಿಸಿದ.

"ಛೀ....ಛೀ....ಇದೇನು ಮಾಡುತ್ತಿರುವೆ."

"ಏನಿಲ್ಲ, ನಿಮ್ಮ ಮಾತು ಕೇಳುತ್ತಲೂ ನಮಸ್ಕರಿಸಬೇಕೆನಿಸಿತು........ ತಪ್ಪಾಯ್ತೆ?"

"ಇಲ್ಲ....ನೀನು ನನ್ನ ಮಗಳ ಸರಿಸಮಾನವಿರುವಾಗ ತಪ್ಪೆಲ್ಲಿಂದ?"

"ಸರಿ....ನನ್ನದೊಂದು ಪ್ರಶ್ನೆ."

"ಒಂದಲ್ಲ. ನಿನ್ನ ನೂರು ಪ್ರಶ್ನೆಗಳಿಗೂ ನೀನೇ ಉತ್ತರ ಕೊಡಬಲ್ಲೆ. ಎಲ್ಲದಕ್ಕೂ ಉತ್ತರ ನಿನ್ನ ಬಳಿ ಇದೆ. ನೀನು ಮನಸ್ಸು ಮಾಡಿದರೆ ನೀನು ಇಂದೇ ಈಗಲೇ ಇದೇ ಕ್ಷಣ ಹೊರಗೆ ಹೋಗಬಲ್ಲೆ."

"ಹೌದಾ?"

"ಹೌದು...."

"ಹೇಗೆ?"

"ನನ್ನ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಟ್ಟರಾಯ್ತು.''

"ಕೇಳಿ ಹಾಗಾದರೆ?"

''ಚಂದ್ರಮೋಹನ ನಿನ್ನ ಮುಂದೆ ಹೇಳಿದ ರಹಸ್ಯ ಯಾವುದು?"

"ನನಗೆ ಅವರು ಯಾವ ರಹಸ್ಯವನ್ನೂ ಹೇಳಿಲ್ಲ."

"ನೆನಪು ಮಾಡಿಕೊ. ರಹಸ್ಯವೆಂದು ಹೇಳದಿದ್ದರೂ ನಿನಗೆ ಅಚ್ಚರಿ ಅನಿಸುವ ಯಾವದಾದರೂ ವಸ್ತು ತಂದುಕೊಟ್ಟಿದ್ದನೆ?"

"ಇಲ್ಲವಲ್ಲ."

"ನೀನು ನಮ್ಮೊಂದಿಗೆ ಸಹಕರಿಸುತ್ತಿಲ್ಲ ಮಗಳೆ....ನಿನಗೆ ತಿಳಿದಂತೆ ನಾವು ಕೆಟ್ಟವರಲ್ಲ....ನಿನ್ನನ್ನು ಕೆಟ್ಟ ರೀತಿಯಿಂದ ನಡೆಸಿಕೊಂಡಿಲ್ಲ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಈ ರೀತಿ ಮಾಡಲಾಗಿದೆ."

"ನಾನು ನಿಜ ಹೇಳುತ್ತಿದ್ದೇನೆ. ನನಗೆ ಅವರೇನೂ ಹೇಳಿಲ್ಲ. ಅವರನ್ನು ನೋಡದೇ ತಿಂಗಳೇ ಉರುಳಿವೆ."

"ಆತ ಹೋದ ಮೇಲೆ ಫೋನು ಟೆಲಿಗ್ರಾಂ ಅಥವಾ ಪತ್ರ ಏನಾದರೂ."

"ಇಲ್ಲ. ನನ್ನನ್ನಿಲ್ಲಿ ಕರೆತರುವಾಗ ಅವರ ಫೋನಿದೆ....ಆಫೀಸಿನಲ್ಲಿದ್ದಾರೆ

ಎಂದದ್ದಷ್ಟೇ ಗೊತ್ತು."

"ಅದನ್ನು ಮಾಡಿದವರು ನಾವೇ. ನಿನ್ನ ಕಲ್ಯಾಣಕ್ಕಾಗಿ ಹೇಳುತ್ತಿದ್ದೇವೆ. ಇನ್ನೊಂದು ಗಂಟೆ ಬಿಟ್ಟು ಬರುತ್ತೇವೆ. ಚೆನ್ನಾಗಿ ನೆನಪು ಮಾಡಿಕೊ. ಯಾವ ದಾದರೂ ವಿಚಿತ್ರ ಅಥವಾ ಅದ್ಭುತ ಎಂದು ಕಂಡ ವಸ್ತುವಿನ ಬಗ್ಗೆ ಅಥವಾ ಘಟನೆ ಬಗ್ಗೆ ತಿಳಿದಿದ್ದರೆ ಹೇಳು..................ಇದನ್ನು ನಿನ್ನ ಒಳ್ಳೆಯದಕ್ಕೆ ಹೇಳುತ್ತಿದ್ದೇನೆ."

ಆತ ಹೊರಟುಹೋದ....ಅನುಸೂಯಾ ಹಾಸಿಗೆಯ ಮೇಲೆ ಉರುಳಿ ಯೋಚನೆಯ ಕಡಲಲ್ಲಿ ಮುಳುಗಿದಳು. ಆನಂದ ಎದ್ದು ಅವಳ ಮಡಿಲಿಗೆ ಬಿದ್ದಾಗಲೇ ಎಚ್ಚರ.

"ಎದ್ದಿಯಾ....ಬಾಯಿ ತೊಳೆದುಕೊಂಡು ಬಾ ಕಾಫಿ ಕುಡಿಯುವಂತೆ."

ತಡಮಾಡದೇ ಆನಂದ ಬಾತ್‌ರೂಮಿನತ್ತ ನಡೆದ. ಅನುಸೂಯಾ ಕರೆಗಂಟೆ ಬಾರಿಸಿದಳು. ಬಾಗಿಲು ತೆರೆದು ಮೊದಲು ಬಂದವನೇ ಒಳಗೆ ಕಾಲಿಟ್ಟ. ಅವನ ದೃಷ್ಟಿ ಹಾಸಿಗೆಯತ್ತ ಹರಿಯಿತು. ಅಲ್ಲಿ ಮಗುವಿರಲಿಲ್ಲ. ಆತ ತಿಳಿದುಕೊಂಡು ಅನುಸೂಯಾಗಿಂತ ಮೊದಲೇ ನುಡಿದ. "ಗೊತ್ತಾಯ್ತು. ಇದೀಗ ಬಂದೆ," ಆಕೆ ಅವನೆಡೆ ಮೆಚ್ಚುಗೆಯಿಂದ ನೋಡಿದಳು.

ಆನಂದ ಬಂದು ಅಲ್ಲಿ ಟಾವೆಲುಗಳಿದ್ದರೂ ತಾಯಿ ಸೀರೆ ಸೆರಗಿಗೆ ಮುಖ ಒರಸಿಕೊಂಡು ಅವಳ ಬಳಿ ಕುಳಿತು ಬೆರಳು ಎಣಿಸಲಾರಂಭಿಸಿದ.

"ಏನು ಮಾಡುತ್ತಿರುವೆ?''

"ಅಪ್ಪ ಬರುವ ದಿನ ಎಣಿಸುತ್ತಿದ್ದೇನೆ."

"ಆಂ?'' ಅನುಸೂಯಾ ಹೌಹಾರಿ ಕೇಳಿದಳು.

"ಹೌದು ಮತ್ತೆ. ನೀನೇ ಹೇಳಿದ್ದೆಯಲ್ಲ ಎಂಟು ದಿನಕ್ಕೆ ಬರತಾರೆ ಅಂತ ಇಂದಿಗೆ...."

ಮಾತು ಅರ್ಧಕ್ಕೇ ನಿಂತಿತು. ಮುಂದೆ ಟಿಫಿನ್ ಹಿಡಿದು ಬಂದ ಆತ. ಅವನ ಹಿಂದೆ ಪುನಃ ಮುಸುಕಿನ ಮನುಷ್ಯ ಆಗಮಿಸಿದ. ಹೆದರಿದ ಆನಂದ ತಾಯಿಯ ತೆಕ್ಕೆಗೆ ಬಂದ.

"ಹೆದರಬೇಡ ಮಗು ನಾನು ನಿನ್ನ ತಾತ'' ಆತ ಸಮಾಧಾನಪಡಿಸಿದ.

ಆನಂದ ಆಚ್ಚರಿಯಿಂದ ಅವನತ್ತ ನೋಡಿದ. ಹೆದರಿಕೆ ಬರಲಿಲ್ಲ. ಧ್ವನಿ ಯಲ್ಲಿಯ ಭಯ ಓಡಿಸಿತು.

ಆನಂದ ಮೊದಲು ಬರದಿದ್ದರೂ ಅವನ ಪ್ರೀತಿಯ ಒತ್ತಾಯದ ಕಡೆಗೆ ಮುಂದೆ ಬಂದು ತಿಂಡಿ ಮೆಲ್ಲಲಾರಂಭಿಸಿದ. ಅವನ ಗಲ್ಲ...ಗದ್ದ...ತಲೆ ಸವರಿದ

ಆ ಮನುಷ್ಯ, ಆನಂದನಿಗೆ ಹಿತವೆನಿಸಿತು. ತಂದೆಯಪ್ರೀತಿ ದೊರೆಯದೇತಿಂಗಳು ಗಳೇ ಕಳೆದಿದ್ದವು....ಆತಮುದಗೊಂಡ....ಮುಸುಕಿನ ಮನುಷ್ಯ ಅನುಸೂಯಾ ಳತ್ತ ಹೊರಳಿದ.

"ಏನಾದರೂ ನೆನಪಾಯಿತೇನಮ್ಮ."

"ಇಲ್ಲ" ಆಕೆ ತಲೆಯಾಡಿಸಿದಳು.

"ಚಂದ್ರಮೋಹನ ಯಾವಾಗ ಬರುತ್ತೇನೆಂದು ಹೇಳಿದ್ದು ಗೊತ್ತಿಲ್ಲವೆ?"

ತಿಂಡಿ ತಿನ್ನುತ್ತಿದ್ದ ಆನಂದ ತಟಸ್ಥನಾಗಿ ಒಮ್ಮೆಲೆ ನುಡಿದ."ನಂಗೊತ್ತು ನಂಗೆ...."

"ಆನಂದ....ಸುಮ್ಮಿರು...." ಅನುಸೂಯಾ ಗಾಬರಿಯಾಗಿ ಹೆದರಿದಳು.

ಮುಸುಕುಧಾರಿಯ ಕಣ್ಣುಗಳು ಮಿನುಗಿದವು. ಅನುಸೂಯಾಳತ್ತ ಹೊರಳಿದ. ಆತ ತಣ್ಣನೆಯ ಧ್ವನಿಯಲ್ಲಿ ಗದರಿದ.

"ಇಲ್ಲಿಯವರೆಗೂ ನಿನ್ನೊಂದಿಗೆ ಪ್ರೀತಿಯಿಂದ ನಡೆದುಕೊಂಡಿದ್ದೇವೆ. ಅದು ಬದಲಾಗಬೇಕೆಂಬ ಆಶೆ ನಿನಗಿದ್ದರೆ ತೆಪ್ಪಗಿರು."

ಅನುಸೂಯಾ ಬೆಕ್ಕಿನ ಮರಿಯಂತೆ ಅಲ್ಲೇ ಮುದ್ದೆಯಾದಳು.

"ಹೇಳು ಮಗು, ಡ್ಯಾಡಿ ಯಾವಾಗ ಬರತಾರೆ."

ಆನಂದ ಸ್ವಲ್ಪ ಯೋಚಿಸಿ ಕೇಳಿದ "ನಾವು ಈ ಕೋಣೆಗೆ ಬಂದು ಎಷ್ಟು ದಿನಗಳಾದವು?"

"ನಾಲ್ಕು ದಿನ....ಏಕೆ?"

"ಹಾಗಾದರೆ ಇನ್ನೂ ನಾಕು ದಿನ ಬೇಕು."

"ಹೌದೆ? ನಿನಗೆ ಹೇಗೆ ಗೊತ್ತು?"

"ಅಂಚೆಯವ ಬಂದು ಹೇಳಿದ ಎಂಟು ದಿನಕ್ಕೆ ಪಪ್ಪಾ ಬರತಾರೆ ಅಂತ."

"ಇದನ್ನ ನಿನಗೆ ಯಾರು ಹೇಳಿದರು?"

"ಅಮ್ಮ...."

ದೊಡ್ಡ ಕೆಲಸ ಮಾಡಿದವರಂತೆ ಹೆಮ್ಮೆಯಿಂದ ನುಡಿದ ಆನಂದ ಮತ್ತೆ ತಿಂಡಿಯತ್ತ ಆಕರ್ಷಿತನಾದ....ಮುಸುಕುಧಾರಿ ಮೇಲಕ್ಕೆದ್ದ.

ಮಕ್ಕಳು ಎಂದೂ ಸುಳ್ಳು ಹೇಳುವದಿಲ್ಲ....ನಿನಗೆಲ್ಲಾ ತಿಳಿದಿದ್ದರೂ ಹೇಳಲಿಲ್ಲ. ಹೀಗೆಅಂತ ನನಗೆ ನಿನ್ನ ಮೇಲೆ ಕೋಪವಿಲ್ಲ....ನೀನು ನಿನ್ನ ಪತಿಯ ಮಾತಿನಂತೆ ನಡೆದುಕೊಂಡಿರುವೆ....ನನಗೆ ನಿನ್ನ ಬಗ್ಗೆ ಹೆಮ್ಮೆ ಇದೆ...."

ಆತ ಹೊರಟುಹೋದ....ಅನುಸೂಯಾ ದಿಂಬಿನಲ್ಲಿ ಮುಖ ಹುದುಗಿಸಿ ಬಿಕ್ಕಲಾರಂಭಿಸಿದಳು. ಪತಿಗೆ ಕೊಟ್ಟ ವಚನ ಮುರಿದಿತ್ತು....ನಡೆಯಬೇಕಾ

ದದ್ದು ಅವಳಿಂದ ವಿಧಿ ನಡೆಸಲಿಲ್ಲ....ಸ್ವಲ್ಪ ಹೊತ್ತು ಬಿಟ್ಟು ಮೇಲೆದ್ದ ಆಕೆ ಬಾತ್‌ರೂಮಿಗೆ ಹೋಗಿ ಸ್ನಾನ ಮಾಡಿ ಬಂದಳು. ಅಷ್ಟರಲ್ಲಿ ಟೇಬಲ್ ಮೇಲೆ ನಾಲ್ಕು ಪತ್ರಿಕೆಗಳು ಬಂದು ಬಿದ್ದಿದ್ದವು. ಒಂದೊಂದಾಗಿ ನೋಡುತ್ತಿದ್ದಂತೆ ಹೇಮಂತನ ಬಗ್ಗೆ ಇದ್ದ ಲೇಖನ ಕಂಡು ಓದಲಾರಂಭಿಸಿದಳು.

ಆಕೆ ಆ ಲೇಖನ ಓದಿ ಮುಗಿಸಿದಾಗ ಮೇಜರ ಹೇಮಂತ ಅವಳಿಗೆ ದೇವ ಮನುಷ್ಯನಾಗಿ ಕಂಡ. ಅವಳ ಕಷ್ಟವನ್ನು ದೂರ ಮಾಡುವ ಏಕೈಕ ವ್ಯಕ್ತಿಯಾಗಿ ಕಂಡ. ಮನದಲ್ಲೇ ದೇವರನ್ನು ಸ್ಮರಿಸಿ ಹೇಮಂತನ ಭೆಟ್ಟಿ ಮಾಡಿಸು ಎಂದು ಕೈಮುಗಿದಳು.

ಇತ್ತ ಅನುಸೂಯಾ ಹೇಮಂತನನ್ನು ನೆನೆಸಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತಿರುವಾಗಲೇ ಅತ್ತ ಹೇಮಂತ ಡ್ರೈನಿಂಗ್ ಟೇಬಲ್ ಬಳಿ ಕುಳಿತು ತನ್ನ ಆಪ್ತರೊಂದಿಗೆ ಅನುಸೂಯಾ ಬಗ್ಗೆ ಯೋಚಿಸುತ್ತಿದ್ದ.

"ನನಗೆ ನನ್ನ ಬಗ್ಗೆ ಜಿಗುಪ್ಸೆಯಾಗುತ್ತಿದೆ. ನಾನು ಈ ರೀತಿ ಮೂರ್ಖನಾಗಬಾರದಿತ್ತು." ಅವನ ಮಾತಿಗೆ ಆವಾಕ್ಕಾದ ಸುಷಮಾ ಹಾಗೂ ಅಶೋಕ ಅವನತ್ತ ನೋಡಿದರು.

"ನನ್ನ ಮಾತು ಸತ್ಯ. ಈ ಕೇಸಿನಲ್ಲಿ ನಾನಿಲ್ಲಿಯವರೆಗೂ ಮೂರ್ಖತನದ ಕೆಲಸ ಮಾಡಿರುವೆ."

"ನನಗೆ ಅರ್ಥವಾಗಿಲ್ಲ ನಿಮ್ಮ ಮಾತು" ಸುಷಮಾ ಉಸುರಿದಳು.

"ಮುಖ್ಯ ವಿಷಯ ಬೇರೆಯೇ ಇದೆ. ಅದರಿಂದ ದೂರ ಓಡಿಸಲು ನಮ್ಮನ್ನು ಬೇಕೆಂತಲೇ ದೂರದೂರ ಒಯ್ಯುತ್ತಿದ್ದಾರೆ."

"ಯಾರು?"

"ನನಗೆನಿಸುವ ಮಟ್ಟಿಗೆ ಸಾಂಬಮೂರ್ತಿಗಳು ನಮ್ಮನ್ನು ಬುಗುರಿಯಂತೆ ಆಟ ಆಡಿಸುತ್ತಿದ್ದಾರೆ. ಸದಾಶಿವ, ರತ್ನಕುಮಾರಿ ಎಲ್ಲರೂ ಅವರ ಹಸ್ತಕರೇ ಇದನ್ನು ಈ ಮೊದಲೇ ಹೇಳಿರುವೆ."

"ಇದರಿಂದ ಅವಳಿಗಾಗುವ ಲಾಭ?" ಅಶೋಕ ಪ್ರಶ್ನಿಸಿದ.

"ಮುಖ್ಯ ವಿಷಯದಿಂದ ದೂರ ಒಯ್ಯುವದೇ ಉದ್ದೇಶ."

"ಅಂದರೆ....ಇವರೂ ಅಪರಾಧಿಗಳ ಸಹಾಯಕರೆಂದಾಯಿತು."

"ಖಂಡಿತವಾಗಿ....ನಾವು ಅವಳನ್ನು ಅವರ ಮಾತನ್ನು ನಂಬಿ ಕೆಟ್ಟಿದ್ದೇವೆ ಸುಷಮಾ ಸಾಂಬಮೂರ್ತಿಗಳಿಗೆ ಫೋನು ತೆಗೆದುಕೊ..........ಅವರಿಲ್ಲದಿದ್ದರೆ ಸದಾಶಿವನ ಬಗ್ಗೆ ವಿಚಾರಿಸು."

ಎರಡು ನಿಮಿಷಗಳಲ್ಲಿ ಸುಷಮಾ ಉತ್ತರಿಸಿದಳು.

"ಇಬ್ಬರೂ ಊರಲ್ಲಿಲ್ಲ. ಸಾಂಬಮೂರ್ತಿಗಳು ರಾತ್ರಿ. ಸದಾಶಿವ ನಾಳೆ ಮುಂಜಾನೆ ಬರುತ್ತಾರಂತೆ."

"ಸರಿ....ನಾಳೆ ನಮ್ಮೊಂದಿಗೆ ತಿಂಡಿಗೆ ಬರಲು ಆಹ್ವಾನಿಸು...."

ಆತ ಮೇಲೆದ್ದ....ಸುಷಮಾ ಮತ್ತೆ ಫೋನಿನತ್ತ ಸರಿದಳು.

ಆ ದಿನವೂ ನೀರಸವಾಗಿ ಕಳೆಯಿತು. ಮೇಜರ್ ತನ್ನ ರೂಮು ಸೇರಿ ಬಾಗಿಲು ಮುಚ್ಚಿದವ..:.ಹೊರಗೆ ಬಂದಿದ್ದು ರಾತ್ರಿಗೇ. ಮಧ್ಯಾಹ್ನ ಆತ ಊಟಕ್ಕೂ ಹೊರಬರಲಿಲ್ಲ. ರೂಮಿನೊಳಗೇ ತರಿಸಿಕೊಂಡ.

ಬೆಳಗಾಯಿತು.

ಒಂಭತ್ತು ಗಂಟೆಗೆ ಸರಿಯಾಗಿ ಬಂದವ ಸದಾಶಿವ....ಅವನ ನಂತರ ಸಾಂಬಮೂರ್ತಿಗಳು. ಒಬ್ಬರನ್ನೊಬ್ಬರು ನೋಡಿ ಗುರುಗುಟ್ಟಿದರು. ಅಶೋಕ ಬಂದದ್ದರಿಂದ ಅದು ಮುಂದುವರೆಯಲಿಲ್ಲ. ಹೇಮಂತ, ಸುಷಮಾ, ಬರುತ್ತಲೂ ನಮಸ್ಕಾರ ಕುಶಲ, ಸಮಾಚಾರಗಳಾದ ನಂತರ ಟಿಫಿನ್ ಆರಂಭವಾಯಿತು. ಎರಡು ನಿಮಿಷ ಕಳೆದಿರಲಿಲ್ಲ. ಬಹಾದ್ದೂರಸಿಂಗ್ ಒಳಬಂದ.

"ಸಾಬ್ ಟೆಲಿಗ್ರಾಂ...."

ಹೇಮಂತ ಫಾರ್ಮಿಗೆ ಸಹಿ ಮಾಡಿ ಅವನ ಕೈಗೆ ನೀಡಿ ಟೆಲಿಗ್ರಾಂ ಒಡೆದು ಓದತೊಡಗಿದ....ಎಲ್ಲರೂ ಅವನತ್ತಲೇ ನೋಡತೊಡಗಿದ್ದರು. ಅಷ್ಟ ರಲ್ಲೇ ಟೆಲಿಫೋನ್ ಗಂಟೆ ಬಾರಿಸಿತು....ಹತ್ತಿರವಿದ್ದ ಹೇಮಂತ ರಿಸೀವರ್ ಎತ್ತಿದ.

"ಹಲೋ ಹೇಮಂತ ಸ್ಪೀಕಿಂಗ್" ಮುಖ ಬಿಳುಚಿಕೊಂಡಿತು. ರಿಸೀವರ ಕೆಳಗಿಟ್ಟ.

"ಏನಾಯ್ತು? ಮೇಜರ."

"ಅಮೇರಿಕಾದಲ್ಲಿರುವ ನನ್ನ ಅಂಕಲ್‌ಗೆ ಹಾರ್ಟ ಅಟ್ಯಾಕ್ ಆಗಿದೆ ಯಂತೆ. ನನಗೆ ಕೂಡಲೇ ಬರಲು ತಿಳಿಸಿದ್ದಾರೆ."

"ಹಾಗಾದರೆ ನೀವು ಹೊರಡುತ್ತೀರಾ?"

"ಹೌದು ನನ್ನ ಸಂಗಡಿಗರನ್ನು ಕರೆದೊಯ್ಯುತ್ತೇನೆ.''

"ಮತ್ತೆ ಮರಳಿ ಬರುವುದು?"

"ಒಂದೆರಡು ತಿಂಗಳುಗಳಾಗಬಹುದು."

"ಹಾಗಾದರೆ ನಮ್ಮ ಗತಿ."

"ದೇವರೇ ಗತಿ...." ಹೇಮಂತ ಮೇಲೆದ್ದ.ಯಾರಿಗೂ ತಿಂಡಿ ರುಚಿಸಲಿಲ್ಲ. ಸಾಂಬಮೂರ್ತಿ ಮೊದಲು, ಆಮೇಲೆ ಸದಾಶಿವ ಹೊರಟುಹೋದರು.

"ಹಾಗಾದರೆ ನಾವು ಮೂವರು ಅಮೇರಿಕಾಕ್ಕೆ ಹೊರಡುವದೇ?"

"ಹೌದು.... ಆದರೆ • ಅಮೇರಿಕಾಗಲ್ಲ" ನಗುತ್ತ ಹೇಮಂತ ಅಶೋಕನಿಗೆ ಉತ್ತರಿಸಿದ.

"ಅಂದ್ರೆ?" ಸುಷಮಾ ತಟಕ್ಕನೇ ಕೇಳಿದಳು.

"ನಾವು ಹೊರಡುವದು ಟಿಕೆಟ್ ಪಡೆಯುವುದು ಅಮೇರಿಕಾಕ್ಕೆ ಆದ್ರೆ ಅರ್ಧ ದಾರಿಯಲ್ಲೇ ಮರಳಿ ಬರುವದು ಛದ್ಮವೇಷದಲ್ಲಿ."

ಇಬ್ಬರೂ ಕೌತುಕದಿಂದ ಅವನತ್ತ ನೋಡಿದರು.

"ಇಷ್ಟುದಿನ ಮುಸುಕಿನ ಮರೆಯಲ್ಲಿರುವಅಪರಾಧಿ ನನ್ನನ್ನು ನಿಮ್ಮನ್ನು ಆಟವಾಡಿಸುತ್ತಿದ್ದ ಇಂದಿನಿಂದ ನಾನಾತನನ್ನು ಆಡಿಸುತ್ತೇನೆ."

ಅಶೋಕ ಹಾಗೂ ಸುಷಮಾರ ಮುಖದ ಮೇಲೆ ಮಿಂಚು ಸುಳಿಯಿತು. ಇಬ್ಬರೂ ಕೂಡಿ ಒಂದೇ ಬಾರಿಗೆ ಕೇಳಿದರು.

"ಹಾಗಾದರೆ ನಮ್ಮದು ತಂತ್ರಕ್ಕೆ ತಂತ್ರವೋ?"

"ತಪ್ಪು, ತಂತ್ರಕ್ಕೆ ಮರುತಂತ್ರ...." ಎಂದು ಜೋರಾಗಿ ಮೇಜರ್ ಉತ್ತರಿಸಿದಾಗ ಗೊಳ್ ಎಂದು ಎಲ್ಲರೂ ನಕ್ಕರು.

* * * *

ಬೃಂದಾವನ ಲಾಜ್.

ದೇಶದ ಪ್ರಸಿದ್ಧ ಪಂಚತಾರಾ ಹೊಟೆಲ್ಲುಗಳಲ್ಲಿ ಒಂದಾದ ಬೃಂದಾವನ್ ತನ್ನ ವಿಶಿಷ್ಟ ಸೇವೆ, ಶುಚಿರುಚಿ ಭೋಜನ ಹಾಗೂ ಸುಂದರ ಸುಖಾಸೀನ ಕೋಣೆಗಳಿಂದಾಗಿ ಅಲ್ಪಾವಧಿಯಲ್ಲಿ ದೊಡ್ಡ ಹೆಸರು ಗಳಿಸಿತ್ತು. ಹೇಮಂತ ಯಾವಾಗಲೂ ಅಲ್ಲೇ ತಂಗುತ್ತಿದ್ದ. ಈಗಲೂ ಸಹ. ಅಂತರವಿಷ್ಟೇ ಈ ಬಾರಿ ಛದ್ಮವೇಷದಲ್ಲಿ ಎರಡು ರೂಮುಗಳನ್ನು ಬಾಡಿಗೆ ಪಡೆದು ಒಂದರಲ್ಲಿ ಅಶೋಕ ಇನ್ನೊಂದರಲ್ಲಿ ಹೇಮಂತ ಸುಷಮಾ ಉಳಿದುಕೊಂಡಿದ್ದರು. ಬೆಳಗಿನ ತಿಂಡಿ ಮುಗಿಸಿಬಂದ ಮೂವರೂ ಮಂತ್ರಾಲೋಚನೆಯಲ್ಲಿ ತೊಡಗಿದರು.

"ನಿಮ್ಮ ಅಂಕಲ್ ಎಂದುಹುಟ್ಟಿಕೊಂಡರು........?" ಅಶೋಕ ಹಾಸ್ಯ ಮಾಡಿದ.

"ಎಂದು ಅವರಿಗೆ ಹಾರ್ಟ್ ಅಟ್ಯಾಕ್ಆಯಿತೋ ಅಂದೇ ಹುಟ್ಟಿದರು?"

ಮೇಜರನ ಮಾತಿಗೆ ಅಶೋಕ, ಸುಷ್ಮಾ ಇಬ್ಬರೂ ನಕ್ಕರು.

"ನನ್ನ ಉದ್ದೇಶವೇನೆಂದು ನಿಮಗೆ ಅರ್ಥವಾಗಿರಬೇಕಲ್ಲ?" ಒಮ್ಮಿಂದೊಮ್ಮೆಲೆ ಗಂಭೀರವಾಗಿ ಹೇಮಂತ ಪ್ರಶ್ನಿಸಿದ.

"ಓಹೋ........ನೀವು ಸಾಂಬಮೂರ್ತಿ ಹಾಗೂ ಸದಾಶಿವರಿಗೆ ಡಾಜ್ ನೀಡಿದಿರಿ".

"ಇಷ್ಟೇನಾ?" ಅಶೋಕನ ಉತ್ತರಕ್ಕೆ ಸಮಾಧಾನಪಡದೇ ಕೇಳಿದ ಮೇಜರ.

"ನೀವು ಅವರಿಬ್ಬರನ್ನೂ ಹಿಂದೆ ಸರಿಸಿ ಅವರಿಗೆ ತಿಳಿಯದಂತೆ ಕಾರ್ಯ ನಡೆಸಲು ಉದ್ದೇಶಿಸಿದ್ದೀರಿ", ಸುಷಮಾ ನುಡಿದಳು.

"ಗುಡ್, ನಿನ್ನ ಊಹೆ ನಿಜವಾದದ್ದು. ಅವರೇ ನಮ್ಮನ್ನು ಇಲ್ಲಿಯ ವರೆಗೂ ಫೂಲ್ ಮಾಡುತ್ತ ಬಂದಿದ್ದಾರೆ. ಅವರು ಕುಣಿಸಿದಂತೆ ನಾವು ಕುಣಿದಿದ್ದೇವೆ".

"ಇದರಿಂದ ಅವರಿಗೇನಾಗಬೇಕಾಗಿದೆ?"

"ಅಶೋಕ....ಮಹತ್ವವಿಲ್ಲದೇ ಅವರು ಈ ರೀತಿ ವರ್ತಿಸಲಾರರು. ನನಗೆ ತಿಳಿದಮಟ್ಟಿಗೆ ಸಾಂಬಮೂರ್ತಿ, ಸದಾಶಿವ, ರತ್ನಕುಮಾರಿ, ಇನ್ನೊಬ್ಬ ಪಿ.ಎ. ಎಲ್ಲರೂ ಒಂದೇ.ಅವರೆಲ್ಲ ಸೇರಿ ತಮ್ಮ ಸುತ್ತಲೇ ನಮ್ಮನ್ನುಸುತ್ತಿಸುತ್ತಿದ್ದಾರೆ. ನಾವು ಅವರನ್ನು ಬಿಟ್ಟು ಒಂದೆಳೆಯೂ ಮುಂದೆ ಹೋಗಿಲ್ಲ. ಏನೇ ಘಟನೆ ನಡೆದರೂ ಅದರಲ್ಲಿ ಯಾರಾದರೂ ಒಬ್ಬರಿರುತ್ತಾರೆ".

"ಹೌದು. ಹೀಗಾಗಿ ನಾವೆಲ್ಲಿಯೂ ಹೋಗದಂತಾಗಿದೆ".

"ಗುಡ್.ನೀನೀಗ ಸರಿದಾರಿಗೆ ಬಂದೆ ಅಶೋಕ.ಇನ್ನೂ ಸ್ವಲ್ಪ ಯೋಚನೆ ಮಾಡು, ಅವರ ವರ್ತನೆ ಏನನ್ನು ಸೂಚಿಸುತ್ತದೆ?"

ಅಶೋಕ ಗಂಭೀರವಾಗಿ ಆಲೋಚಿಸತೊಡಗಿದ. ಸುಷಮಾ ಕೂಡ. ಹೇಮಂತ ಮಾತ್ರ ನಿಶ್ಚಿಂತನಾಗಿದ್ದ. ಅವನಿಗಾಗಲೇ ಉತ್ತರ ದೊರಕಿತ್ತು. ಸ್ವಲ್ಪ ಸಮಯದ ನಂತರ ಅಶೋಕ ಬಾಯಿಬಿಟ್ಟ. "ನಾವೆಲ್ಲಿಗೂ ಹೋಗದಂತೆ ಬಂಧಿಸಿಡಬೇಕಾದರೆ, ಅವರು ಬೇರೆ ಯಾರನ್ನೋ ಕವರ ಮಾಡುತ್ತಿದ್ದಾರೆ ಎಂದೆನಿಸುತ್ತದೆ".

"ಶಹಬಾಶ್....ನನ್ನ ಊಹೆಯೂ ಅದೇ ಆಗಿತ್ತು........ನಾವು ಬೇರೆಡೆ ಕಾಲಿಟ್ಟರೆ ರಹಸ್ಯ ಬಯಲಾಗುವ ಸಂಭವವಿದೆ. ಹೊರಗಿದ್ದವರ ಮೇಲೆ ನಮ್ಮ ದೃಷ್ಟಿ ಬೀಳುವ ಸಂಭವವಿದೆ........ಅದಕ್ಕಾಗಿ ಅವರನ್ನು ರಕ್ಷಿಸಲು ಇವರು ಈ ರೀತಿ ನಾಟಕ ಮಾಡುತ್ತಿದ್ದಾರೆ."

"ಹಾಗಾದರೆ ಇವರು ಅವರಿಗೆ ಸಹಾಯಕರಾಗಿದ್ದಾರೆಂದಾಯಿತು".

"ಇರಬಹುದು".

"ನಿಮ್ಮನ್ನು....ನಮ್ಮನ್ನು ದಾರಿಯಿಂದ ಸರಿಸಲೂ ಸಹ ಇವರೇ ಯತ್ನ

ಮಾಡಿದ್ದಾರೆ ಏನ್ನುತ್ತೀರಾ?" ಸುಷಮಾ ವ್ಯಂಗ್ಯವಾಗಿ ಕೇಳಿದಳು.

"ಇಲ್ಲೇ ನನಗೆ ಸ್ವಲ್ಪ ಅನುಮಾನ ಉಂಟಾಗಿದೆ. ಸಾಂಬಮೂರ್ತಿ ಮತ್ತು ಅವರು ಸಂಗಡಿಗರು ನಮ್ಮನ್ನು ಒಂದೆಡೆ ರೇಶಿಮೆ ದಾರದಿಂದ ಬಂಧಿಸಿದ್ದಾರೆ ಎಂಬ ಮಾತಿನಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೆ ಇವರೇ ನಮ್ಮ ಕೊಲೆ ಮಾಡಲೂ ಪ್ರಯತ್ನಿಸಿದರು ಎಂಬುದನ್ನು ನನ್ನ ಮನಸ್ಸೇಕೋ ಒಪ್ಪುತ್ತಾ ಇಲ್ಲಾ".

"ಅವರನ್ನೇ ನೇರವಾಗಿ ಪ್ರಶ್ನಿಸಬಹುದಿತ್ತಲ್ಲ".

ಸುಷಮಾಳ ಮಾತಿಗೆ ಮೇಜರ ನಕ್ಕು ಹೇಳಿದ. "ಅವರು ಹೇಳಬೇಕಲ್ಲ? ಅದನ್ನು ನಾವೀಗ ಕಂಡುಹಿಡಿಯಬೇಕಾಗಿದೆ".

"ಹೌದು ಮೇಜರ್. ಅದರೊಂದಿಗೆ ನಮ್ಮಿಂದ ಅವರು ಯಾರನ್ನು ದೂರ ವಿಡಲು ಬಯಸುತ್ತಿದ್ದಾರೋ ಅವರನ್ನೂ ಕಂಡುಹಿಡಿಯಬೇಕಾಗಿದೆ".

"ನಿನ್ನ ದೃಷ್ಟಿಯಲ್ಲಿ ಅವರು ಯಾರಿರಬಹುದು?"

"ನಮ್ಮ ಸಂಪರ್ಕದಲ್ಲಿ ಬಂದ ವ್ಯಕ್ತಿ ಎಂದರೆ ಚಂದ್ರಮೋಹನ.ಅವನನ್ನು ನಾವು ನೋಡಿಲ್ಲ. ಮಾತನಾಡಿಸಿಲ್ಲ ನಿಜ. ಆದರೂ ನಮ್ಮೊಂದಿಗೆ ಆತ ಸತತ ನಿಕಟ ಸಂಪರ್ಕ ಹೊಂದಿದ್ದಾನೆ".

"ನೂರಕ್ಕೆ ನೂರು ನಿನ್ನ ಮಾತು ಸತ್ಯ. ಅದಕ್ಕೆಂದೇ ನಾನು ಅಂಕಲ್ ಹಾರ್ಟ ಅಟ್ಯಾಕ್ ನಾಟಕ ಮಾಡಿ ಪರದೇಶಕ್ಕೆ ಹೋಗುವ ಸೋಗುಹಾಕಿ ಛದ್ಮವೇಶದಲ್ಲಿ ಇಲ್ಲಿಗೆ ಬಂದಿದ್ದು".

"ಅಂತೂ ಸಾಂಬಮೂರ್ತಿಗಳಿಗೆ ಚಕ್ಮಾ ಕೊಟ್ಟಿರಿ"ಸುಷಮಾಳ ಮಾತಿಗೆ ಮೂವರೂ ಮುಕ್ತವಾಗಿ ನಕ್ಕರು.

ಮೇಜರ ಮೇಲೇಳುತ್ತ ಹೇಳಿದ. "ಮೂವರೂ ಒಂದೇ ಬಾರಿ ಹೋಗುವದು ಬೇಡ. ಒಬ್ಬರಿಗೆ ಒಬ್ಬರು ಕಾವಲಾಗಿರೋಣ........ಮೊದಲು ಚಂದ್ರಮೋಹನ ಆಫೀಸ್. ಆಮೇಲೆ ಅವನ ಮನೆ ತಿಳಿಯಿತಾ?"

ಅವರಿಬ್ಬರೂ ತಲೆಕೊಡವಿದರು. ಹತ್ತು ನಿಮಿಷ ಬಿಟ್ಟು ಒಬ್ಬೊಬ್ಬರಾಗಿ ಮೂವರೂ ಹೊರಬಂದರು.

ಆಫೀಸಿನಲ್ಲಿ ಯಾವ ವಿಷಯವೂ ತಿಳಿಯಲಿಲ್ಲ. ಆತ ಕೆಲಸದ ಮೇಲೆ ಬರದೇ ಒಂದೂವರೆ ಎರಡು ತಿಂಗಳು ಸಮೀಪಿಸಿವೆ. ಇಂದಿನವರೆಗೂ ಅವನ ಯಾವ ಸಂದೇಶವೂ ಬಂದಿಲ್ಲ ಎಂದು ಸಂಪಾದಕರು ಹೇಳಿದರು.ಕೆಲವು ದಿನಗಳ ಹಿಂದೆ ಚಂದ್ರಮೋಹನನ ಪತ್ನಿ ಅನುಸೂಯಾಳನ್ನು ಕರೆಯಿಸಿಕೊಂಡಿದ್ದನ್ನು ಅವರು ನಿರಾಕರಿಸಿದರು.

ಇಷ್ಟು ತಿಳಿದ ಮೇಲೆ ಮೇಜರ ಆಫೀಸಿನಿಂದ ಹೊರಬಂದ.

ಅಲ್ಲಿಂದ ಮನೆ....ಅನಸೂಯಾಳ ಮನೆ.

ಅನಸೂಯಾಳ ಮನೆ ಬೀಗ ಹಾಕಿತ್ತು. ಅವಳು ಬರದೇ ಆರು ದಿನಗಳಾದವು. ಅಂದು ಗಂಡನ ಫೋನು ಬಂತೆಂದು ಹೋದವಳು ಮರಳಿ ಬರಲೇ ಇಲ್ಲ ಎಂದು ತಿಳಿಯಿತು. ಅದರೊಂದಿಗೆ ಅಲ್ಲಿದ್ದ ಒಬ್ಬ ವಾಚಮನ್ ಚಂದ್ರಮೋಹನನಿಗೆ ಬಂದ ರಜಿಸ್ಟರ್ಡ ಪೋಸ್ಟ ವಿಷಯ ತಿಳಿಸಿದಾಗ ಹೇಮಂತ ಸಂತಸದಿಂದ ಕೇಕೆ ಹಾಕುವದೊಂದೇ ಉಳಿದಿತ್ತು. ಕಳೆದು ಹೋಗಿದ್ದ ಕೊಂಡಿ ದೊರಕಿತ್ತು. ಈ ರಜಿಸ್ಟರ್ಡ ಮಹತ್ವದ ಪಾತ್ರವಹಿಸುತ್ತದೆ ಎಂದಾತ ಅರಿತಿದ್ದ.

ಮುಂದಾತ ಒಂದು ಕ್ಷಣವನ್ನೂ ವ್ಯರ್ಥಮಾಡಲಿಲ್ಲ. ಹೆಡ್ ಪೋಸ್ಟ ಆಫೀಸಿಗೆ ಬಂದು ಜನರಲ್ ಮ್ಯಾನೇಜರನನ್ನು ಕಂಡು ತನ್ನ ನಿಜ ಪರಿಚಯ ಮಾಡಿಕೊಟ್ಟ. ಮುಂದಿನ ಕೆಲಸ ಸರಳವಾಯಿತು. ಚಂದ್ರಮೋಹನನಿಗೆ ಆ ರಜಿಸ್ಟರ್ಡ ಎಲ್ಲಿಂದ ಬಂದಿತ್ತೆಂದು ತಿಳಿದುಬಂದಿತು. ಅದನ್ನು ಗುರುತು ಹಾಕಿಕೊಂಡು ಅವರಿಗೆ ವಂದಿಸಿ ಆತ ಹೊರಬಂದಾಗ ಅವನ ಮುಖದ ಮೇಲೆ ವಿಜಯದ ನಗೆ ಮೂಡಿತ್ತು.

.ಸರಿಯಾಗಿ ಹನ್ನೊಂದು ಗಂಟೆಗೆ ಒಬ್ಬರಾದ ಮೇಲೆ ಒಬ್ಬರಂತೆ,ಮೂವರೂ ರೂಮಿನೊಳಗೆ ಬಂದರು. ತಮ್ಮ ಬಹುರೂಪವನ್ನು ಕಿತ್ತು ಹಾಕಿ ನಿಜರೂಪಕ್ಕೆ ಬಂದಾದ ಮೇಲೆ ಮಾತಿಗಿಳಿದರು. "ಅಶೋಕ ನಮ್ಮನ್ನಾರಾದರೂ ಹಿಂಬಾಲಿಸಿದ್ದರೆ?"

"ನನಗೆನಿಸುವ ಮಟ್ಟಿಗೆ ಇಲ್ಲ....ಸುಷಮಾ ನಿನಗೆ?"

ಅವಳೂ ಸಹ ಇಲ್ಲ ಎನ್ನುವಂತೆ ಗೋಣು ಆಡಿಸಿದಳು.

"ಗುಡ್. ಇದರ ಅರ್ಥ ನಾವಿಲ್ಲಿದ್ದೇವೆ ಎಂಬ ಸಂಶಯ ಯಾರಿಗೂ ಬಂದಿಲ್ಲ ಎಂದಂತಾಯಿತು. ಹಾಂ....ಮೊದಲು ಬಿಸಿ ಬಿಸಿ ಕಾಫಿ....ಅಶೋಕ"

"ಆಂ?...."

ಮೇಜರ ಒಮ್ಮೆಲೇ ಗಂಭೀರನಾದ. ಇಬ್ಬರಿಗೂ ಗಾಬರಿ........ಏನಾಯಿತೆಂದು.

"ನೀನು ಗರಮಾಗರಮ್ ಈರುಳ್ಳಿ ಬಜಿ ನೋಡಿರುವೆಯಲ್ಲ?"

"ನೋಡಿದ್ದೇನೆ ಏಕೆ?" ಏನೂ ತಿಳಿಯದೆ ಗೊಂದಲದಲ್ಲಿ ಬಿದ್ದ ಅಶೋಕ ಉತ್ತರಿಸಿದ.

"ಏಕೆಂದರೆ ಕಾಫಿಯೊಂದಿಗೆ ಅದನ್ನೂ ನಾಲ್ಕಾರು ಪ್ಲೇಟ್ ಹೇಳಿದರೆ ಹೇಗೆ ಅಂತ?"

"ಓಹ್ಹೋ...." ...ಒಮ್ಮೆಲೇ ಗಂಭೀರ ವಾತಾವರಣ ತಿಳಿಯಾಯಿತು. ಹೇಮಂತನ ಹಾಸ್ಯದ ಸ್ವಭಾವಕ್ಕೆ ಸೋತ ಸುಷಮಾ ಅವನೆಡೆ ಕಳ್ಳನೋಟ ಬೀರಿದಳು....ಹೇಮಂತ ಒಮ್ಮೆಲೆ ಎಡ ಎದೆಯ ಮೇಲೆ ಕೈ ಒಗೆದು ಹಾ.... ಹಾಗೆ ನೋಡಬೇಡ ಪ್ರಿಯೆ" ಎಂದಾಗ ಆಕೆ ನಾಚಿನೀರಾಗಿ ತಲೆತಗ್ಗಿಸಿದಳು.

ಕಾಫಿ....ಈರುಳ್ಳಿ ಬಜಿ ಬರಲು ಹದಿನೈದು ನಿಮಿಷಗಳು ಹಿಡಿದವು.

ಕಂದು ಬಣ್ಣದ ಹದವಾಗಿ ಕರಿದ ಬಜಿಯಿಂದ ಹಿತವಾದ ಆಹ್ಲಾದ ನೀಡುವ ವಾಸನೆ ಬರುತ್ತಿದ್ದಂತೆ ಬಾಯಲ್ಲಿ ನೀರೂರಿ ಮೂವರೂ ಪ್ಲೇಟಿಗೆ ಕೈ ಹಾಕಿದರು. ಐದಾರು ನಿಮಿಷ 'ಕುರುಂ.... ಕುರುಂ.... ಆಹಾ.... ಆಹಾಹಾ' ಎಂಬ ಉದ್ಗಾರಗಳೇ. ಕಾಫಿ ಕುಡಿದಾದ ಮೇಲೆ ಹಿತವಾಯಿತು.

ಮೂವರೂ ಮತ್ತೆ ಕೆಲಸಕ್ಕೆ ಸಿದ್ಧರಾದರು. ಹೇಮಂತ ಮೇಲೆದ್ದ. ವಿಳಾಸದ ಚೀಟಿ ತೆಗೆದ. ಜಿ.ಬಿ. ಭಂಡಾರಿ, ಎಂ.ಎ. ಆನರ್ಸ, ೫ನೇ ಕ್ರಾಸ್. ೫೬ನೇ ಮೇನ್, ಆದರ್ಶ ಕಾಲನಿ, ಸಂಗೀತ ನಗರ–ಎಂದಿತ್ತು.

"ಚಂದ್ರಮೋಹನನಿಗೆ ರಜಿಸ್ಟರ ಪತ್ರ ಕಳಿಸಿದವ ಭಂಡಾರಿ ಎಂದಾಯಿತು. ಭಂಡಾರಿ ಯಾರು? ಅವನಿಗೂ ಚಂದ್ರಮೋಹನನಿಗೂ ಏನು ಸಮ್ಮಂಧ? ಸಾದಾ ಅಂಚೆ ಬದಲು ರಜಿಸ್ಟರ ಕಳಿಸುವ ಉದ್ದೇಶವೇನು ಎಂಬುದು ನಮಗೆ ಗೊತ್ತಿಲ್ಲ....".

"ಅದರೊಂದಿಗೆ ಚಂದ್ರಮೋಹನ ನಿಜವಾದ ಹೆಸರೋ ಅಥವಾ ಕಾಲ್ಪನಿಕವೋ ತಿಳಿಯದು"ತನ್ನ ಮಾತನ್ನು ತಡೆದು ಮಧ್ಯದಲ್ಲಿ ನುಡಿದ, ಅಶೋಕನೆಡೆ ಹರ್ಷಭರಿತ ದೃಷ್ಟಿ ಎಸೆದ ಮೇಜರ.

"ಕರೆಕ್ಟ....ನಮಗೆ ಭಂಡಾರಿ ಬಗ್ಗೆ ಏನೂ ತಿಳಿಯದು....ಆದರೆ ಅವರ ಬಳಿ ನಮಗೆ ಅವಶ್ಯವಿರುವ ಮಾಹಿತಿ ದೊರೆಯುವ ಸಂಭವವಿದೆ. ಮೊದಲು ನಾವಾತನನ್ನು ಸಂಧಿಸಬೇಕು".

"ಯಾವಾಗ?"

"ಇನ್ನೊಂದರ್ಧ ಗಂಟೆ ಬಿಟ್ಟು".

"ಹಾಗಾದರೆ ಸ್ವಲ್ಪ ತಯಾರಿ ಮಾಡಿಕೊಳ್ಳೋಣವೇ?"

"ಏಕೆ?"

"ಈ ಭಂಡಾರಿ ಎಂಥವ ಎಂದು ನಮಗೆ ತಿಳಿಯದು. ಆತ ಅಮಾಯಕನೋ.....ಅಪಾಯಕಾರಿಯೋ.....ಗೊತ್ತಿಲ್ಲ.....ಆದಕ್ಕಾಗಿ ತಯಾರಿ ಮಾಡಿಕೊಂಡರೆ ಹಾನಿ ಏನಿದೆ?"

"ಹಾನಿಯಂತೂ ಇಲ್ಲ. ನಮ್ಮ ಉದ್ಯೋಗದಲ್ಲಿ ನಾವೆಷ್ಟು ಸತರ್ಕ

ರಾಗಿರುತ್ತೀವೆಯೊ ಅಷ್ಟು ಒಳ್ಳೆಯದು...."

ಅಶೋಕ ತನ್ನ ರೂಮಿನತ್ತ ನಡೆದಾಗ ಹೇಮಂತ ತಡೆದ.

"ಅಶೋಕ ಮೊದಲು ಸಿ. ಪಿ. ಆಯ್. ಬಿ. ಡಿ. ಪಾಟೀಲರಿಗೆ ಕಾಲ್ ಬುಕ್ ಮಾಡು."

"ಅವರಿಗೇಕೆ?"

"ಮರೆತೆ ಏನು? ನಾವು ಇಲ್ಲಿಗೆ ಬರುವ ಮುನ್ನ ಕೆಲಸವೊಂದನ್ನು ಹೇಳಿದ್ದೆವು. ರತ್ನಕುಮಾರಿ, ಚಿಂಗಚಾನ್ ಹಾಗೂ ಸುನೀಲ ಕಟಾರಿಯಾ ಬಗ್ಗೆ ಮಾಹಿತಿ ಸಂಗ್ರಹಿಸಬೇಕೆಂದು."

ಓಹ್....ಮರೆತೇಬಿಟ್ಟಿದ್ದೆ."

"ಮರೆವು ನನ್ನ ಶತ್ರು ಅಶೋಕ ಅದೆಂದೂ ನಮ್ಮ ಬಳಿ ಸುಳಿಯದಂತೆ ನೋಡಿಕೊಳ್ಳಬೇಕು."

ಅಲ್ಲೇ ಇದ್ದ ಫೋನ ಮೂಲಕ ಮ್ಯಾನೇಜರ ಸಂಪರ್ಕ ಪಡೆದ ಅಶೋಕ ಅರ್ಜಂಟ ಸಂಪರ್ಕ ನೀಡಲು ಪಾಟೀಲರ ನಂಬರ ನೀಡಿ ರಿಸೀವರ್ ಕೆಳಗಿಟ್ಟ.... ಮೂವರೂ ಸಿದ್ಧರಾಗುವಷ್ಟರಲ್ಲಿ ಅರ್ಧಗಂಟೆ ಕಳೆದಿತ್ತು. ಮೂವರ ದೃಷ್ಟಿ ಟೆಲಿಫೋನ ಮೇಲೆ....ಕಾಯ್ದು ಕಾಯ್ದು ಬೇಸರ....ಮತ್ತೊಂದು ಗಂಟೆ ಕಳೆಯಿತು....ನಂಬರ ದೊರೆಯುತ್ತಿಲ್ಲ, ಎಂದು ತಿಳಿಸಿದ್ದ ಮ್ಯಾನೇಜರ .. ........ ಇನ್ನೊಂದರ್ಧ ಗಂಟೆ ಕಾಯ್ದು ಕ್ಯಾನ್ಸಲ್ ಮಾಡಿ ಎಂದು ಹೇಳಿದ ಹೇಮಂತ ಹತ್ತೇ ನಿಮಿಷಗಳಲ್ಲಿ ಗಂಟೆ ಬಾರಿಸಿತ್ತು. ಹೇಮಂತನೇ ಅಟೆಂಡ ಮಾಡಿದ. ಆ ಕಡೆಯಿಂದ ಪಾಟೀಲರೇ ಮಾತಾಡುತ್ತಿದ್ದರು.

"ಏನು ಮೇಜರ....ಒಮ್ಮೆಲೆ ಮಾಯವಾದಿರಲ್ಲ?"

"ಸ್ವಲ್ಪ ಕೆಲಸ ಬಂದಿತು ಅದಕ್ಕೇ...............ನಾನು ಹೇಳಿದ ವಿಷಯ ಏನಾಯಿತು?"

"ಎರಡು ಸುಳ್ಳು....ಒಂದು ನಿಜ."

"ಅಂದರೆ?"

"ಮಿಸ್ ರತ್ನಕುಮಾರಿ, ಚಿಂಗಚಾನ್ ಇವೆರಡೂ ಸುಳ್ಳು. ಅವರ ಅವಶೇಷಗಳೂ ಇಂಡಿಯಾದಲ್ಲಿಲ್ಲ....ಸುನೀಲಕಟಾರಿಯಾ ರತ್ನಮಹಲ್ ಕೊಂಡದ್ದು ಮಾತ್ರ ನಿಜ."

"ಗುಡ್, ಎಷ್ಟಕ್ಕೆ?"

"ತೋರಿಸಿದ್ದು ಒಂದು ಲೆಕ್ಕ....ಕೊಟ್ಟಿದ್ದು ಒಂದು ಲೆಕ್ಕ."

"ಎಷ್ಟು?"

ತೋರಿಸಿದ್ದು ಎಂಭತ್ತೈದು ಲಕ್ಷಕ್ಕೆ....ಕೊಟ್ಟಿದ್ದು ಮೂವತ್ತೈದು ಕೋಟಿಗೆ."

"ಗುಡ್, ಆಮೇಲೆ ಮತ್ತೇನು ವಿಷಯ?"

"ಏನಿಲ್ಲ....ಸಾಂಬಮೂರ್ತಿ ಹಾಗೂ ಸದಾಶಿವ ನಿಮ್ಮನ್ನು ತುಂಬಾ ವಿಚಾರಿಸುತ್ತಿದ್ದಾರೆ....ನಿಮ್ಮೊಡನೆ ಮಾತನಾಡಬೇಕಾಗಿದೆಯಂತೆ ನಿಮ್ಮವಿಳಾಸಕ್ಕಾಗಿ ದಿನವೂ ನನ್ನನ್ನು ಪೀಡಿಸುತ್ತಿದ್ದಾರೆ."

"ಈ ಮಾತು ಕೇಳುತ್ತಿದ್ದಂತೆ ಹೇಮಂತ ಮುಗುಳುನಗೆ ನಕ್ಕು ನುಡಿದ. "ಅವರನ್ನು ಹಾಗೇ ಓಡಾಡಿಸಿ....ನನ್ನೊಂದಿಗೆ ಮಾತಾಡಿದ....ನಾನಿಲ್ಲಿರುವ ಯಾವ ವಿಷಯವನ್ನೂ ಅವರ ಮುಂದೆ ಹೇಳಬೇಡಿ ತಿಳಿಯಿತಾ... ಬೈ...."

ರಿಸೀವರ ಕೆಳಗಿರಿಸಿ ತನ್ನ ಸಂಗಡಿಗರಿಗೆ ವಿಷಯ ತಿಳಿಸಿದಾಗ ಅವರು ಆಶ್ಚರಿಪಟ್ಟರು.

"ಹಾಗಾದರೆ....ಹಾಗಾದರೆ...." ಅಶೋಕ ಮುಂದೆ ಮಾತನಾಡಲಿಲ್ಲ.

"ಇಷ್ಟು ದಿವಸ ನಾವು ಗಾಳಿಯಲ್ಲೇ ಕೈಕಾಲು ಬಡಿಯುತ್ತಿದ್ದೇವೆ. ಎಲ್ಲಾ ಸುಳ್ಳು, ಕಟ್ಟುಕಥೆ ಹಾಗೂ ಪಾತ್ರಗಳು."

"ಥೂ ನನಗಂತೂ ತಲೆಕೆಟ್ಟುಹೋಗುತ್ತಿದೆ....ತುಂಬಾ ವಿಚಿತ್ರಕೇಸಿದು" ಸುಷಮಾಳ ಮಾತಿಗೆ ಹೇಮಂತನಿಗೆ ನಗೆ ಬಂದಿತು.

"ಎಂತೆಂಥ ದೊಡ್ಡ ಭಯಾನಕ ಗಂಭೀರ ಕೇಸುಗಳನ್ನು ಮುಗಿಸಿದ ನಮಗೆ ಇದೊಂದು ಬಹಳ ಸತಾಯಿಸುತ್ತಿದೆ...ಮೇಲ್ನೋಟಕ್ಕೆ ವಿಚಿತ್ರ. ಉಪಯೋಗವಿಲ್ಲದಂತೆ ಕಾಣುತ್ತಿರುವ ಈ ಕೇಸಿನ ಹಿಂದಿರುವ ಪರದೆ ಸರಿಸಿದಾಗ ಆ ಅದ್ಭುತ ಕಂಡು ನೀನು ಬೆರಗಾಗುತ್ತಿ ನೋಡು."

"ಹಾಗೆ ಮಾತನಾಡುತ್ತ ಮೂವರು ರೂಮಿಗೆ ಬೀಗಹಾಕಿ ಕೆಳಗೆ ಬಂದರು. ಮೂವರನ್ನೂ ಕುಳ್ಳಿರಿಸಿಕೊಂಡ 'ಪ್ರೀಮಿಯರ್ ಪದ್ಮಿನಿ' ಓಡತೊಡಗಿತ್ತು ಆದರ್ಶ ಸಂಗೀತ ನಗರದತ್ತ."

ಸಾಯಂಕಾಲ ಅವರು ಸಂಗೀತನಗರ ತಲುಪಿದ್ದರು. ಆದರ್ಶ ಕಾಲನಿ ಎಲ್ಲಿದೆ ಎಂದವರಿಗೆ ತಿಳಿಯದು. ಮೊದಲು ಕಾಫಿ ಕುಡಿದು, ಆಯಾಸ ಪರಿಹರಿಸಿಕೊಂಡು, ಅಲ್ಲೇ ವಿಚಾರಿಸಿ ತಿಳಿದರಾಯ್ತೆಂದು 'ಮಧುದರ್ಶಿನಿ' ಮುಂದೆ ಕಾರು ನಿಲ್ಲಿಸಿ ಒಳ ನಡೆದರು. ಚಿಕ್ಕದಾಗಿದ್ದರೂ ಸುಂದರವಾದ ಹೊಟೆಲ್ ಮಧು-ದರ್ಶಿನಿ. ಮೊದಲು ಕೈಕಾಲು ಮುಖ ತೊಳೆದುಕೊಂಡು ಫ್ರೆಶ್ ಆದರು. ಆಮೇಲೆ ಸ್ಪೇಶಲ್ ರೂಮು ಸೇರಿ ಮಾಣಿಯೊಂದಿಗೆ ಮಾತಿಗಿಳಿದರು.

"ಈ ಹೊಟೆಲ್ ಸ್ಪೇಶಲ್ ಏನು?"

"ರವೆ ಇಡ್ಲಿ ಸರ್."

"ಸರಿ ತೆಗೆದುಕೊಂಡು ಬಾ."

ಮಾಣಿ ಮಾತು ಸುಳ್ಳಾಗಿರಲಿಲ್ಲ. ನಿಜವಾಗಿಯೂ ಮಧುದರ್ಶಿನಿಯಲ್ಲಿಯರುವ ರವೆ ಇಡ್ಲಿ ರುಚಿಕರವಾಗಿದ್ದವು. ಮತ್ತೊಂದು ಪ್ಲೇಟ್‌ಆರ್ಡರ್ ಮಾಡಿಅದನ್ನೂ ಮುಗಿಸಿ ಕಾಫಿ ಕುಡಿದುಹೊರಬಂದರು.ಮಾಣಿಯಿಂದ ಆದರ್ಶ ಕಾಲನಿ ಎಲ್ಲಿದೆ ಎಂದು ತಿಳಿದಿತ್ತು. ಅದಕ್ಕಾಗಿ ಅವನು ನೀಡಿದ ಸರ್ವೀಸಿಗಾಗಿ. ಐದು ರೂಪಾಯಿ ಜೇಬಿಗೆ ತುರುಕಿದಾಗ ಮಾಣಿ ಮುಖ ಕರಿದ ಹಪ್ಪಳದಂತೆ ಅರಳಿತ್ತು.

ಅವರು ತೆಗೆದುಕೊಂಡ ಶ್ರಮವೆಲ್ಲ ವ್ಯರ್ಥವಾಯಿತು.

ಭಂಡಾರಿ ಮನೆಯ ಬಾಗಿಲ ಬೀಗ ಅವರನ್ನು ಸ್ವಾಗತಿಸಿತು. ಅವರ ಭೆಟ್ಟಿಯಾಗದಿದ್ದರೂಭಂಡಾರಿ ಇರುವದಂತೂ ನಿಜವಾಗಿತ್ತು. ಚಂದ್ರಮೋಹನನಿಗೆ ಬಂದ ರಜಿಸ್ಟರ ಪತ್ರಖೊಟ್ಟಿಯಾಗಿರಲಿಲ್ಲ. ಭಂಡಾರಿ ಕಾಲ್ಪನಿಕ ಹೆಸರಾಗಿರಲಿಲ್ಲ. ಭಂಡಾರಿ ಪತ್ನಿ ಅವಳಿ, ಜವಳಿ ಹೆಣ್ಣುಮಕ್ಕಳನ್ನು ಹೆತ್ತಿದ್ದಳು. ಅವಳನ್ನೂ, ಮಕ್ಕಳನ್ನೂ ನೋಡಲು ಭಂಡಾರಿ ಅವರು ಪ್ರಯಾಣ ಬೆಳೆಸಿದ್ದರು. ಮರಳುವದು ಎರಡು ದಿನಗಳ ನಂತರ, ಅಲ್ಲಿಯ ವರೆಗೂ ಬಂದಂತಾಗಿತ್ತು. ಮುಂದೇನು ಮಾಡುವದೆಂದು ಮೂವರು ಆಪ್ತಾಲೋಚನೆಯಲ್ಲಿ ತೊಡಗಿದ್ದರು. ಎರಡು ದಿನ ಖಾಲಿಯಾಗಿ ಕೂಡುವಂತಿರಲಿಲ್ಲ, ಅವರ ಮಾವನ ಮನೆಯ ವಿಳಾಸವೂ ದೊರೆಯಲಿಲ್ಲ.

ಮುಂದೇನು.....?

ಒಮ್ಮಿಂದೊಮ್ಮೆಲೆ ಅಶೋಕ ಬೆಚ್ಚಿಬಿದ್ದ. ತಾವೊಂದು ಮಹತ್ವದ ವಿಷಯವನ್ನು ಮರೆತೇ ಬಿಟ್ಟಿದ್ದೇವಲ್ಲ ಅನಿಸಿತು.ತಟಕ್‌ನೇ ನುಡಿದ, ಮೇಜರ್ ನಾವೊಂದು ವಿಷಯವನ್ನು ಮರೆತಿದ್ದೇವೆ."

"ಯಾವ ವಿಷಯ?"

"ವಿಮಾನ ಅಪಘಾತಗಳ ವಿಷಯ."

"ಅರೆ, ಹೌದಲ್ಲ. ನಾನೆಂಥ ತಪ್ಪು ಮಾಡಿದೆ." ಹೇಮಂತ ಹಲ್ಲಿಯಂತೆ ಲೊಚಗುಟ್ಟಿದಾಗ ಸುಷಮಾ ಸಮಾಧಾನ ಮಾಡಿದಳು.

"ನೀವೆಲ್ಲಿ ಮರೆತಿದ್ದೀರಿ...ನಿಮಗೆ ಮರೆಯುವಂತೆ ಮಾಡಿದರು."

"ಯಾರು?"

"ನನಗೆ ಕೇಳುತ್ತೀರಲ್ಲ ಮಾಜಿ ಸಚಿವ ಸಾಂಬಮೂರ್ತಿ ಅಂಡ ಪಾರ್ಟಿ ಅಲ್ಲವೇ...ನಿಮ್ಮನ್ನು ರೇಶಿಮೆ ಬಲೆಯಲ್ಲಿ ಸೆರೆಹಾಕಿದ್ದು."

ಅವಳ ವ್ಯಂಗ್ಯೋಕ್ತಿಗೆ ಖುಶಿಯಾಯಿತು.......ಹೇಮಂತ ಚಟಕ್‌ನೆ ಮೇಲೆದ್ದ.

"ಸ್ನೇಹಿತರೇ ಮರೆತದ್ದು ನಿಜ. ಅದಕ್ಕಾಗಿ ಸಾಧ್ಯವಾದ ದಂಡವನ್ನೂ ತೆರೋಣ. ಸದ್ಯ ನಮ್ಮ ಗುರಿ ವಿಮಾನ ಅಪಘಾತಗಳ ಹಿಂದೆ ಇರುವ ರಹಸ್ಯ ವನ್ನು ಹೊರಗೆಡಹುವದು ನಡೆಯಿರಿ."

ಇಬ್ಬರೂ ಹೇಮಂತನನ್ನು ಹಿಂಬಾಲಿಸಿದರುನೆರಳಿನಂತೆ,ಆಗ ಮಧ್ಯಾಹ್ನ ಎರಡುಗಂಟೆ.

"ಯಾಲಕ್ಕಿ ಶೆಟ್ಟರ ಕಾಲನಿ ಎಲ್ಲಿದೆ?"

ಕಾರನ್ನು ನಿಲ್ಲಿಸಿ, ಕಿಟಕಿಯಿಂದ ತಲೆ ಹೊರಗೆ ಹಾಕಿ ಹೇಮಂತ ಎದುರು ಬಂದವನನ್ನು ಕೇಳಿದ. ಆತ ಹೊರಳಿನಿಂತು ಕೈಮಾಡಿ ತೋರಿಸುತ್ತ ಒಳ್ಳೆ ನಿಷ್ಠೆಯಿಂದ ಹೇಳಿದ.

"ನೇರವಾಗಿ ಹೋಗಿ ರಸ್ತೆ ಕವಲೊಡೆಯುತ್ತದೆ. ಎಡಕ್ಕೆ ತಿರುಗಿ ಸ್ವಲ್ಪ ಮುಂದೆ ಹೋಗುತ್ತಲೂ ಎಡಕ್ಕೆ ಟಾರು ರೋಡು ಹೋಗುತ್ತದೆ. ಅದನ್ನು ಬಿಡಿ. ಮಣ್ಣಿನ ದಾರಿ ಇರುವ ಬಲಭಾಗಕ್ಕೆ ತಿರುಗಿ ಅಲ್ಲಿಂದ ಕಾಣುವದೇ ಯಾಲಕ್ಕಿ ಶೆಟ್ಟರ ಕಾಲನಿ."

"ಥ್ಯಾಂಕ್ಸ್."

ಆತ ಹೇಳಿದಂತೆಯೇ ಮೇಜರ ಕಾರು ನಡೆಸತೊಡಗಿದ.

ಭಂಡಾರಿ ಅಂತೂ ಸಿಗಲಿಲ್ಲ. ತನ್ನ ಹೆಂಡತಿ ಹೆತ್ತ ಅವಳಿ ಜವಳಿ ಹೆಣ್ಣು ಮಕ್ಕಳನ್ನು ನೋಡಲು ಮಾವನ ಮನೆಗೆ ಹೋಗಿದ್ದರು. ಮರಳಿ ಬರುವದು ಎರಡು ದಿನ. ಅದಕ್ಕಾಗಿ ವ್ಯರ್ಥಕಾಲಹರಣ ಮಾಡಬಾರದೆಂದು ಬೇರೊಂದೆಡೆ ತನ್ನ ಕಾರ್ಯ ಕ್ಷೇತ್ರ ವಿಸ್ತರಿಸಿದ್ದ ಹೇಮಂತ. ಆಗ ಹೊಳೆದದ್ದು ಮಾರ್ಟಿನ್ ಅತೀ ಮಹತ್ವದ ವ್ಯಕ್ತಿ ಲಿಬಿಯಾ ವಿಮಾನ ದುರಂತದ ಸಮಯದಲ್ಲಿ ಅದರ ಪೈಲಟ್‌ನೊಂದಿಗೆ ಮಾತನಾಡಿದ ಕೊನೆಯ ವ್ಯಕ್ತಿ.ಅವನನ್ನು ಭೆಟ್ಟಿಯಾಗುವ ವಿಚಾರ ಮಾಡುತ್ತಿರುವಾಗಲೇ ಹೇಮಂತನ ಮೇಲೆ ದೂರದಲ್ಲಿ ಕಾದು ಕುಳಿತಿದ್ದ ಲೆನ್ಸ ಜೋಡಿಸಿದ ರೈಫಲ್‌ಧಾರಿ ಗುಂಡಿನ ಆಕ್ರಮಣ ಮಾಡಿದ್ದ. ಹೇಮಂತನ ಸಮಯ ಜಾಗ್ರತೆ ಅವನನ್ನು ಕಾಪಾಡಿತ್ತು. ಮುಂದೆ ಆತ ಮನೆಗೆ ಬಂದ ಮೇಲೆ ಮಿಂಚಿನಂತೆ ಘಟಿಸಿದ ದುರ್ಘಟನೆಗಳಿಂದಾಗಿ ಆತ ಎಷ್ಟು ವ್ಯಸ್ತನಾದನೆಂದರೆ ಮಾರ್ಟಿನ್ ಅವನ ನೆನಪಿನ ಜಗತ್ತಿನಿಂದ

ಮರೆಯಾಗಿ ಹೋಗಿದ್ದ.

ಪುನಃ ನೆನಪಿಗೆ ಬಂದದ್ದು ಆರು ತಾಸುಗಳ ಹಿಂದೆ.

ನೆನಪಾಗುತ್ತಲೂ ರೂಮಲ್ಲೇ ಮೂವರು ವೇಷ ಮರೆಸಿಕೊಂಡು ಗಾಢ ವಾದ ಮೇಕಪ್‌ನೊಂದಿಗೆ ಮಾರ್ಟಿನ್‌ನನ್ನು ಕಾಣಲು ಹೊರಟರು. ಗಂಟೆಗೆ ಅರವತ್ತರ ವೇಗದಲ್ಲಿ ಹಾಯಾಗಿ ಐದು ಗಂಟೆಗಳ ನಂತರ ನಿಶ್ಚಿತ ಗಮ್ಯಸ್ಥಾನ ಸೇರಿದ್ದರವರು.

ಈಗ ಸಂಜೆ ಏಳಕ್ಕೆ ಸಮೀಪಿಸಿತ್ತು. ಸೂರ್ಯ ಮುಳುಗಿ ಬಹಳ ಹೊತ್ತಾ ಗಿದ್ದರೂ ಇನ್ನೂ ಮಂದವಾದ ಬೆಳಕು ಎಲ್ಲೆಡೆ ಹರಡಿತ್ತು........ಹೇಮಂತನ ಕಾರು ಯಾಲಕ್ಕಿ ಶೆಟ್ಟರ ಕಾಲನಿ ಸೇರಿತ್ತು. ಅಲ್ಲಿ ಬಂದಾದ ಮೇಲೆ ಶಂಕರ ಮಠ ಎಲ್ಲಿದೆ? ಅಂತ ಕೇಳುವ ಪ್ರಸಂಗ ಬರಲಿಲ್ಲ. ಎದುರಿಗೇ ಎತ್ತರವಾದ ಗೋಪುರ, ಅದೂ ಒಂದಲ್ಲ ಎರಡು ಕಂಡಾಗ ಹೇಮಂತ ಅತ್ತಲೇ ಕಾರು ನಡೆಸಿ ಮಠದ ಮುಂದೆ ತಂದು ನಿಲ್ಲಿಸಿದ. ಮೂವರು ಕಾರಿನಲ್ಲೇ ತಮ್ಮ ತಮ್ಮ ಪಾದ ರಕ್ಷೆಗಳನ್ನು ಬಿಟ್ಟು ಕೆಳಗಿಳಿದರು. ಭವ್ಯವಾದ ಮಂದಿರದೆದುರು ನಿಂತಾಗ ಆ ಸುಂದರ ಕಲಾಕೃತಿಯನ್ನು ನೋಡಿ ಹೃದಯತುಂಬಿ ಬಂದಿತ್ತು. ದೊಡ್ಡದಾದ ಗೇಟು ತೆಗೆದು ಒಳಗೆಕಾಲಿಟ್ಟರೆ ಸ್ವಾಗತಿಸಿದವು ಎಡಬಲಕ್ಕಿದ್ದ ಭವ್ಯಗಜಗಳು. ಬಿಳಿಕಲ್ಲಿನಲ್ಲಿ ಕೆತ್ತಿದ ಮುದ್ದಾದ ಆನೆಗಳು. ಅಲ್ಲಿಂದ ಮೆಟ್ಟಲು ಮೇಲೇರಿದರೆ ಎದುರಿಗೆ ಜೋಡು ಮಂದಿರಗಳು. ಎಡಬಲಕ್ಕೆ ಸುತ್ತುಮುತ್ತ ಹಸಿರು ರೇಶಿಮೆ ಯಂಥ ಹುಲ್ಲಿನ ಮೈದಾನ ಗುಲಾಬಿ ಗಿಡಗಳ ಉದ್ಯಾನ....ಶಾಂತ ವಾತಾ ವರಣ ಮನಸ್ಸು ಪವಿತ್ರವಾಗುವ ತಾಣ.

ಮೊದಲು ಶೃಂಗೇರಿ ಶಾರದೆಗೆ ವಂದಿಸಿ ಪೂಜೆ ಮಾಡಿಸಿ ಆದಿ ಶಂಕರಾ ಚಾರ್ಯರ ಮಂದಿರಕ್ಕೆ ಬಂದರು. ಪೂಜೆಯ ನಂತರ ಪ್ರಸಾದ ತೀರ್ಥ ಸೇವಿಸಿ ಹತ್ತು ನಿಮಿಷ ಅಲ್ಲೇ ಕುಳಿತು ವಿಶ್ರಾಂತಿ ತೆಗೆದುಕೊಂಡರು. ಮುರಡೇಶ್ವರದ ಸುಂದರ ಕಲ್ಲುಗಳಿಂದ ನಿರ್ಮಿಸಿದ ಶಿಲಾಮಂದಿರ ಮನಕ್ಕೆ ಮುದನೀಡಿತು.

ಮೂವರೂ ಹೊರಬಂದರು. ಮಂದಿರದ ಎಡಭಾಗದಲ್ಲೇ ಮಾರ್ಟಿನ್ ಇರುವರೆಂದು ತಿಳಿದುಕೊಂಡಿದ್ದರು. ಹೀಗಾಗಿ ಯಾರನ್ನೂ ವಿಚಾರಿಸುವ ಅವ ಶ್ಯಕತೆ ಇರಲಿಲ್ಲ.ತುಸುದೂರದಲ್ಲೇ ಕಾಣುತ್ತಿತ್ತು ಒಂಟಿ ಕೆಂಪು ಹಂಚಿನ ಮನೆ. ಆಗಲೇ ಕತ್ತಲಾಗಿತ್ತು. ಅವರು ಕೈಬ್ಯಾಟರಿ ಸಹ ತಂದಿರಲಿಲ್ಲ. ಹಾಗೇ ನಿಧಾನ ವಾಗಿ ಮನೆಯತ್ತ ನಡೆದರು. ಮುಳ್ಳುಕಂಟೆಗಳಿಲ್ಲದ ಸ್ವಚ್ಛ ದಾರಿ. ತೊಂದರೆ ಎನಿಸಲಿಲ್ಲ. ಮನೆಯ ಮುಂದೆ ದೀಪದ ಬೆಳಕಿನಲ್ಲಿ ಎರಡು ಮೂರು ಹುಡುಗ ರೊಂದಿಗೆ ಮಾತನಾಡುತ್ತ ಕುಳಿತಿದ್ದ ಹೆಂಗಸೊಬ್ಬಳು ದೂರದಲ್ಲಿ ಬರುತ್ತಿರುವ

ಇವರನ್ನು ನೋಡಿ ಎದ್ದು ನಿಂತಳು. ಬಹುಶಃ ಆಕೆ ಮಾರ್ಟಿನ್ನನ ಪತ್ನಿ ಇರ ಬಹುದೆಂದುಕೊಂಡ ಹೇಮಂತ. ಅವರು ತೀರ ಹತ್ತಿರ ಬರುತ್ತಲೂ ಆಕೆ ಒಳಗೆ ಸರಿದು ಮರೆಯಾದಳು. ಮಕ್ಕಳು ಇವರತ್ತಲೇ ನೋಡತೊಡಗಿದರು. ಒಂದು ಬಗೆಯ ಭಯ ಅವರ ಮುಖದ ಮೇಲೆ ಮೂಡಿರುವದನ್ನು ಗಮನಿಸಿದ ಮೇಜರ ಇಂಗ್ಲೀಷಿನಲ್ಲಿ ತನ್ನಷ್ಟಕ್ಕೆ ಹೇಳಿದ.

"ನಾವು ತುಂಬಾ ತಡವಾಗಿ ಬಂದಿದ್ದೇವೆ. ಅನರ್ಥವಾಗಿ ಹೋಗಿದೆ...."

ಅಶೋಕ ಹಾಗೂ ಸುಷಮಾ ಹೇಮಂತ ಕಡೆಗೆ ಅಚ್ಚರಿಯಿಂದ ನೋಡಿದರು.

"ಮಾರ್ಟಿನ್ ಮನೆ ಇದೇನಾ?...." ಮೇಜರ ಕೇಳಿದ.

ಉತ್ತರ ಬರಲಿಲ್ಲ....ಒಂದು ಬಗೆಯ ಮೌನ....ಭೀಕರ ಮೌನ.

"ಏನಮ್ಮಾ, ಮಾರ್ಟಿನ್ ಮನೆ ಇದೇನಾ?"

"ಮತ್ತೊಮ್ಮೆ ಒತ್ತಾಯದಿಂದ ಕೇಳಿದ.'ಏನಮ್ಮ' ಎಂಬ ಶಬ್ದ ಮೋಡಿ ಮಾಡಿತು. ಒಳಗಿದ್ದಾಕೆ ಮೆಲುವಾಗಿ 'ಹೌದು' ಅಂದಳು.

"ಸ್ವಲ್ಪ ಅವರನ್ನು ಕರೆಯುತ್ತೀ ಏನಮ್ಮಾ....ಕೆಲಸವಿದೆ".

ಒಮ್ಮೆಲೇ ಆಕೆಯು ಬಿಕ್ಕಲಾರಂಭಿಸಿದಳು. ಆಕೆ ಬಿಕ್ಕುವದಕ್ಕೆಆರಂಭಿಸು ತ್ತಲೂ ಹೊರಗಿದ್ದ ಮೂರೂ ಮಕ್ಕಳು ಒಳಗೋಡಿದವು ತಾಯಿ ಬಳಿ. ಅವನ್ನು ತಬ್ಬಿಕೊಂಡು ಆಕೆ ಜೋರಾಗಿ ರೋದಿಸಲಾರಂಭಿಸಿದಳು. ಮೇಜರಗೆ ಉತ್ತರ ದೊರಕಿತ್ತು. ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇರಲಿಲ್ಲ.

ಮಾರ್ಟಿನ್ ಶತ್ರುಗಳಿಗೆ ಬಲಿಯಾಗಿದ್ದ.ರಹಸ್ಯ ಬಯಲಾಗಬಾರದೆಂದು ಅಪರಾಧಿಗಳು ಅವನ ಕಥೆ ಮುಗಿಸಿದ್ದರು.

ಸ್ವಲ್ಪ ಸಮಯದ ನಂತರ ಆಕೆ ಸುಧಾರಿಸಿಕೊಂಡಳು.

"ನನಗೆಲ್ಲಾ ಗೊತ್ತಾಯಿತಮ್ಮ, ದೇವರ ಚಿತ್ತ. ನಾವು ಮನುಷ್ಯರು ಏನು ಮಾಡುವಂತಿಲ್ಲ"........ಮೇಜರ ಸಮಾಧಾನಮಾಡಿದ. ಆಕೆಗೆ ನೆಮ್ಮದಿ ಸಿಕ್ಕಿತು.

"ನೀವು ಯಾರು? ಏನಾಗಬೇಕಾಗಿತ್ತು?"

"ನನ್ನ ಹೆಸರು ಮೇಜರ ಹೇಮಂತ....ನಾನು....".

"ಅಂ? ಏನೆಂದಿರಿ? ಮೇಜರ....ಹೇಮಂತ....".

ಅವನ ಮಾತನ್ನು ಅರ್ಧಕ್ಕೆ ತಡೆದು ಆಕೆ ಉದ್ಗರಿಸಿದಾಗ ಕತ್ತಲೆಯ ಮಧ್ಯೆ ಬೆಳ್ಳಿ ರೇಖೆ ಮೂಡಿದಂತಾಯಿತು. ಹೇಮಂತನಿಗೆ....ತನ್ನ ಬಗ್ಗೆ ಆ ಮಹಿಳೆ ತಿಳಿದುಕೊಂಡಿದ್ದಾಳೆ-ನನಗಾಗಿ ಏನೋ ವಿಶೇಷ ಸಮಾಚಾರ ಕಾದಿದೆ

ಎಂದುಕೊಂಡ.

"ಹೌದಮ್ಮಾ, ಏಕೆ?"

"ನೀವು ಇಲ್ಲಿಗೆ ಬಂದೇ ಬರುತ್ತೀರೆಂದು ಮಾರ್ಟಿನ್ ನನ್ನೆದುರು ಹೇಳಿದ್ದ".

"ಯಾವಾಗ?"

"ಸಾಯುವ ಹಿಂದಿನ ದಿನ".

"ಅವನಿಗೆ ನನ್ನ ಬಗ್ಗೆ ಹೇಗೆ ತಿಳಿದಿತ್ತು."

"ಶಂಕರ ಮತ್ತು ನಾರಾಯಣ ಬಂದು ನಿಮ್ಮ ಬಗ್ಗೆ ಹೇಳಿದ್ದರು."

"ಓಹ್ ಹೀಗೋ....ಮುಂದೆ....".

"ಮೊದಲು ಅವರು ಬಹಳ ಭಯಪಟ್ಟುಕೊಂಡರು.ಆಮೇಲೆ ಸಮಾಧಾನ ಮಾಡಿಕೊಂಡು ಮಲಗಿದರು. ಮಧ್ಯರಾತ್ರಿ ಎದ್ದು ಸ್ವಲ್ಪಹೊತ್ತು ಏನೇನೋ ಬರೆದು ಒಂದು ಚಿಕ್ಕ ಪೆಟ್ಟಿಗೆಯಲ್ಲಿ ಹಾಕಿ ನನ್ನನ್ನು ಎಬ್ಬಿಸಿ ನನಗೇನಾದರೂ ಆದರೆ ಈ ಪೆಟ್ಟಿಗೆ ಮೇಜರ ಹೇಮಂತ ಕೈಗೆ ಕೊಡು" ಎಂದರು. ನನಗೆ ಗಾಬರಿ ಆಯಿತು. "ಹೀಗೇಕೆ....ಏನಾಗಿದೆ ನಿಮಗೆ"ಎಂದು ಕೇಳಿದೆ. ನಾನು ಹಣಕ್ಕಾಗಿ ಆಶೆಪಟ್ಟು ತುಂಬಾ ಪಾಪ ಮಾಡಿರುವೆ.ಅದಕ್ಕಾಗಿ ಶಿಕ್ಷೆ ಆಗಲೇಬೇಕು.ಇದನ್ನು ಯಾರೂ ತಪ್ಪಿಸುವಂತಿಲ್ಲ....ಈ ಪೆಟ್ಟಿಗೆ ಮಾತ್ರ ಅವರಿಗಲ್ಲದೇ ಬೇರೆ ಯಾರ ಕೈಗೂ ಕೊಡಕೂಡದು ಎಂದು ಕಟ್ಟಪ್ಪಣೆ ಮಾಡಿ, ಆಣೆ ಮಾಡಿಸಿ ನನ್ನ ಕೈಗೆ ಕೊಟ್ಟರು....".

"ಆ ಪೆಟ್ಟಿಗೆ ಈಗ ಎಲ್ಲಿದೆ?"

"ಒಳಗಿದೆ, ಇರಿ ತರತೇನೆ".

ಆಕೆ ಒಳ ನಡೆದಳು.

ಐದಾರು ನಿಮಿಷಗಳಲ್ಲಿ ಆಕೆ ಹೊರಬಂದಾಗ ಕೈಯಲ್ಲೊಂದು ಕೆಂಪು ಬಣ್ಣದ ತಗಡಿನ ಡಬ್ಬಿಯೊಂದಿತ್ತು.ಅದನ್ನು ಹೇಮಂತನ ಕೈಗೆ ನೀಡಿ "ಇಂದು ನನ್ನ ಪತಿಯ ಆತ್ಮಕ್ಕೆ ಶಾಂತಿ ದೊರೆಯಿತು. ಅವರಿಗೆ ಕೊಟ್ಟ ಮಾತಿನಂತೆ ನಾನಿದನ್ನು ನಿಮ್ಮ ಕೈಗೆ ಕೊಡುತ್ತಿದ್ದೇನೆ"....ಆಕೆ ಗದ್ಗದಿತಳಾಗಿದ್ದಳು.

ಇತ್ತ ಈ ಮೂವರ ಹೃದಯವೂ ಭಾರವಾಗಿತ್ತು. ಹೇಮಂತನ ಬಗ್ಗೆ ಇದ್ದ ಭಾವನೆ ಬೆರಗುಗೊಳಿಸುವಂತಿತ್ತು. ಮಾರ್ಟಿನ್ ತಿಳಿದೊ ತಿಳಿಯದೊ ದ್ರೋಹಿಗಳ ಸಹಾಯಕನಾದ.ಮುಂದವನ ಮನಸ್ಸು ಅವನನ್ನು ಧಿಃಕ್ಕರಿಸಿತು. ಏನೇ ಆದರೂ ತನ್ನ ರಹಸ್ಯ ಬೇರೆಯವರ ಪಾಲಾಗಬಾರದೆಂದು ಈ ವ್ಯವಸ್ಥೆ ಮಾಡಿದ್ದ ಸಾವಿಗೆ ಮುನ್ನ.

ಮೇಜರ' ಪೆಟ್ಟಿಗೆ ತೆರೆದ. ಅದರಲ್ಲೊಂದು ಚಿಕ್ಕ ಪ್ಲಾಸ್ಟಿಕ್ ಪೆಟ್ಟಿಗೆ. ಬ್ಲೇಡುಗಳನ್ನು ಇಡಲು ಉಪಯೋಗಿಸುವಂತಹದು. ಅದರಲ್ಲಿ ಎರಡು ಗುಲಗಂಜಿಗಳಿದ್ದವು. ಹೇಮಂತನಿಗೆ ಅಚ್ಚರಿ. ಗುಲಗಂಜಿಗಳನ್ನೇಕೆ ಆತ ಇಷ್ಟು ಭದ್ರವಾಗಿಟ್ಟಿದ್ದಾನೆಂದು ಪ್ಲಾಸ್ಟಿಕ್ ಪೆಟ್ಟಿಗೆಯಿಂದ ಗುಲಗಂಜಿ ತೆಗೆದು ಅಂಗೈಯಲ್ಲಿಟ್ಟುಕೊಂಡ ಅವು ಬಿರುಸಾಗಿರದೆ ಅರಳೆಯಂತೆ ಮೆತ್ತಗಾಗಿದ್ದವು. ಅದರೊಂದಿಗೆ ಕೈಗೆ ಅಂಟಿಕೊಳ್ಳುತ್ತಿದ್ದವು.ಅದಕ್ಕೆ ಯಾವದೇ ಬಗೆಯ ವಾಸನೆ ಇರಲಿಲ್ಲ. ಪುನಃ ಅವನ್ನು ಪೆಟ್ಟಿಗೆಗೆ ಸೇರಿಸಿದ. ಅದರೊಳಗಿದ್ದ ಪತ್ರವನ್ನು ತೆಗೆದು ಓದತೊಡಗಿದ:

'ಪ್ರಿಯ ಮೇಜರ ಅವರೆ.

'ನಿಮ್ಮ ಹೆಸರು, ನಿಮ್ಮ ಖ್ಯಾತಿ ಪರಿಚಯ ನನಗೆಲ್ಲಾ ಗೊತ್ತು.ಒಂದು ದೃಷ್ಟಿಯಿಂದ ನೀವು ನನ್ನ ಆರಾಧ್ಯದೈವ. ವಿಧಿಲಿಖಿತ ನೋಡಿ. ಬದುಕಿದ್ದಾಗ ನಿಮ್ಮನ್ನು ಕಾಣದೆ ಸಾಯುವಾಗ ಅಥವಾ ಸತ್ತಮೇಲೆ ನಿಮಗೆ ನನ್ನ ಪತ್ರ ಕೈಸೇರಲಿದೆ. ನೀವು ಯಾವ ವಿಷಯಕ್ಕಾಗಿ ನನ್ನನ್ನು ಹುಡುಕಿಕೊಂಡು ಬಂದಿದ್ದೀರೋ ಅದರ ಅಪರಾಧಿ ನಾನು. ಮೂರು ಇಂಥ ಹೇಯ ಕೆಲಸಗಳು ನನ್ನ ಕೈಯಿಂದ ಜರುಗಿವೆ. ಅದಕ್ಕಾಗಿ ನಾನು ಸಾಕಷ್ಟು ಹಣ ಸಹ ಪಡೆದಿರುವೆ ನಾನು ಈ ಅಪರಾಧ ಮನಸಾ ಮಾಡಲಿಲ್ಲ. ನನ್ನಿಂದ ಮಾಡಿಸಿದರು. ನನ್ನ ಪತ್ನಿ ಲಕ್ಷಕ್ಕೊಬ್ಬಳು, ತುಂಬಾ ಸುಂದರಿ. ಅವಳನ್ನು ಪ್ರೀತಿಸಿ ಮದುವೆ ಆದೆ. ಆದರೆ ಅವಳಿಗೆ ತಕ್ಕ ಸುಖ ನೀಡಲಾಗಲಿಲ್ಲ. ಮನದಲ್ಲಿ ಕೊರಗುತ್ತಿರುವಾಗಲೇ ಒಂದು ಕಪ್ಪುರಾತ್ರಿ ನನ್ನ ಜೀವನವನ್ನು ಪ್ರವೇಶಿಸಿತು.'

'ಅಂದು ರಾತ್ರಿ ನಗರದ ಬಾರಿನಲ್ಲಿ ಕುಳಿತು ಕುಡಿಯುತ್ತಿದ್ದೆ. ನನ್ನ ಪಕ್ಕದಲ್ಲಿ ಬಂದು ಕುಳಿತ ಅಪರಿಚಿತ ನನ್ನೆಡೆ ಆಲ್ಬಂ ಸರಿಸಿದ. ಅವನೆಡೆ ಒಂದು ಬಾರಿ ನೋಡಿ ಆಲ್ಬಂ ತೆರೆದೆ. ಎದೆ ಧಸಕ್ ಎಂದಿತು. ಅದರ ತುಂಬ ನನ್ನ ಪತ್ನಿಯ ನಗ್ನ ಚಿತ್ರಗಳು. ಮತ್ತೊಬ್ಬ ಪರಪುರುಷನೊಂದಿಗೆ ಇದ್ದವು. ಅವನೂ ಸಹ ನಗ್ನವಾಗೇ ಇದ್ದ. ಇಬ್ಬರೂ ಶೃಂಗಾರ ಚೇಷ್ಟೆ ನಡೆಸಿರುವಾಗ, ರತಿಕ್ರಿಯೆಗಳಲ್ಲಿ ತೊಡಗಿರುವಾಗ ತೆಗೆದ ಚಿತ್ರಗಳವು. ನಾನು ಬೆವರೊಡೆದೆ. ಆತ ಕೆಲವೆ ಮಾತುಗಳನ್ನಾಡಿದ. ನಿನ್ನ ಪತ್ನಿ ಮರ್ಯಾದೆ ಉಳಿಸಬೇಕೆಂದಿದ್ದರೆ ನಾವು ಹೇಳಿದಂತೆ ಕೇಳು. ನಾನು ನನ್ನ ಹೆಂಡತಿಯನ್ನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ. ಈ ವಿಷಯ ಆಕೆಗೆ ತಿಳಿದರೆ ಆಕೆ ಖಂಡಿತವಾಗಿಯೂ ಜೀವ ಕಳೆದುಕೊಳ್ಳುತ್ತಾಳೆಂದು ನನಗೆ ಗೊತ್ತಿತ್ತು. ಆಕೆಗೆ ತಿಳಿಯದಂತೆ ಯಾರೋ ದುಷ್ಟರು ಅವಳ ಮೇಲೆ ಬಲೆ ಒಗೆದಿದ್ದರು. ನಾನು ಆಕೆಯನ್ನು ಉಳಿಸುವ

ದೃಷ್ಟಿಯಿಂದ ಅವರ ಮಾತಿನಂತೆ ನಡೆಯುವದಾಗಿ ಒಪ್ಪಿಕೊಂಡೆ. ನನಗವರು ಒಂದು ಚಿಕ್ಕ ಪ್ಲಾಸ್ಟಿಕ್ ಡಬ್ಬಿಕೊಟ್ಟರು.ಅದು ನಿಮ್ಮ ಮುಂದೆ ಇದೆ.ಅದರಲ್ಲಿ ಆರು ಕೆಂಪು ಬಣ್ಣದ ಮೆತ್ತಗಿನ ಗುಳಿಗೆಗಳಿದ್ದವು. ಅವರು ಅದರ ಬಗ್ಗೆ ವಿವರವಾಗಿ ತಿಳಿಸಿದರು ಅದರಂತೆ ಒಂದು ದಿನ ಹೇಳಿದ ದಿವಸ ಅವರು ತಿಳಿಸಿದ ವಿಮಾನದ ಪೈಲಟ್‌ನನ್ನು ಮಾತನಾಡಿಸಿ, ಅದೇ ಸ್ಥಿತಿಯಲ್ಲಿ ಅವನಿಗೆ ತಿಳಿಯದಂತೆ ಒಂದು ಕೆಂಪು ಗುಳಿಗೆಯನ್ನು ಪೆಟ್ರೋಲ್ ಟ್ಯಾಂಕ ಇರುವಲ್ಲಿ ಅಂಟಿಸಿ ಬರುವ ಕೆಲಸ ನನ್ನದಾಗಿತ್ತು. ಪ್ರತಿಬಾರಿಯ ನನ್ನ ಕೆಲಸಕ್ಕೆ ಅವರು ನನಗೆ ಒಂದೊಂದು ಲಕ್ಷ ರೂಪಾಯಿ,ಆಮಿಷ ಒಡ್ಡಿದರು. ಪತ್ನಿಯ ಪ್ರೇಮ ಹಾಗೂ ಹಣದ ಆಶೆ ಎರಡೂ ನನ್ನಿಂದ ಈ ಕೆಲಸ ಮಾಡಿಸಿವೆ.'

'ಇದು ನನ್ನ ಕಥೆ. ನಾನು ಸಂಪೂರ್ಣವಾಗಿ ನನ್ನ ಪಾಪಕೃತ್ಯ ಒಪ್ಪಿಕೊಂಡಿರುವೆ. ನನಗೆ ಈ ಕೆಲಸ ತಿಳಿಸಿದವ, ಹಣಕೊಟ್ಟವ, ಅಲ್ಬಂ ನೀಡಿದವ ಒಬ್ಬನೇ. ಆತನ ಬಗ್ಗೆ ನನಗೆ ಹೆಚ್ಚಿನ ವಿವರ ತಿಳಿಯದು. ಆದರೂ ತಿಳಿದ ವಿಷಯ ಹೀಗಿದೆ. ಇಲ್ಲಿಯ ಭಂಗಿ ಕಾಲನಿಯಲ್ಲಿ ಡಿ. ೩೮ ರಲ್ಲಿ ಆತ ವಾಸವಾಗಿದ್ದಾನೆ. ರೈಲು ಇಲಾಖೆಯಲ್ಲಿ ಆತ ಖಲಾಸಿ. ಹೆಸರು ತಿಳಿಯದು. ದಪ್ಪ ಗುಂಡಗಿನ ಮೂಗು, ಹಣೆಯ ಎಡ ಭಾಗದಲ್ಲಿ ವಾಳವಿದೆ, ಇದಿಷ್ಟು ಅವನ ಪರಿಚಯ.'

'ಮುಂದಿನ ವಿಷಯ ನಿಮಗೆ ಬಿಟ್ಟಿದ್ದು.

'ಅಡಿಗೆ ಮನೆಯಲ್ಲಿ ಗ್ಯಾಸ ಸಿಲಿಂಡರ್ ಇಡುವಲ್ಲಿ ತೆಗ್ಗು ತೆಗೆದು ಹಣ ಹೂಳಿಟ್ಟಿದ್ದೇನೆ....

'ನನ್ನ ಪಾಪ ಕ್ಷಮಿಸುವಂತೆ ನೀವು ದೇವರಲ್ಲಿ ಪ್ರಾರ್ಥನೆ ಮಾಡಿ.'

ಕೆಳಗಡೆ ಆತ ತನ್ನ ಹೆಸರು ಬರೆದು ಸಹಿ ಮಾಡಿದ್ದ. ಪತ್ರವನ್ನು ಓದಿಯಾದ ಮೇಲೆ ಅದನ್ನು ಮಡಚಿ, ಪ್ಲಾಸ್ಟಿಕ್ ಪೆಟ್ಟಿಗೆಯೊಂದಿಗೆ ಜೇಬಿಗಿಳಿಸಿದಾಗ ಹೇಮಂತನ ಕಣ್ಣುಗಳು ಒದ್ದೆಯಾಗಿದ್ದವು. ಮಾರ್ಟಿನ್ ಅವರ ಮನಕಲಕಿದ್ದ. ಅಪರಾಧಿಯಾದರೂ ತನ್ನ ಕರ್ತವ್ಯ ನೆರವೇರಿಸಿ ಸಾವನ್ನಪ್ಪಿದ್ದ.

"ಮಾರ್ಟಿನ್ ಹೇಗೆ ಸತ್ತ?"

ಭಾರವಾದ ಕಂಠದಲ್ಲಿ ಕೇಳಿದ ಹೇಮಂತ ತಲೆಎತ್ತಿ.

ಕೈಯಲ್ಲಿ ಕಾಫಿ ಟ್ರೇಯೊಂದಿಗೆ ನಿಂತಿದ್ದಳು ಅವನ ಪತ್ನಿ.

ಪತ್ರ ಓದುತ್ತಿರುವಾಗ ಅಡಿಗೆ ಮನೆಗೆ ಹೋದ ಆಕೆ ಕಾಫಿ ಮಾಡಿ ತಂದಿದ್ದಳು.ಅವಳನ್ನು ನೋಡಿದಾಗ ಮಾರ್ಟಿನ್ ಪತ್ರದಲ್ಲಿ ಬರೆದದ್ದು ಸುಳ್ಳಲ್ಲ. ನೂರಕ್ಕೆ ನೂರು ಸತ್ಯ ಎನಿಸದಿರಲಿಲ್ಲ ಹೇಮಂತನಿಗೆ.ಲಕ್ಷ ಜನರಲ್ಲಿ ಸುಲಭವಾಗಿ

ಗುರುತಿಸಬಹುದಾದಷ್ಟು ರೂಪವಂತಿಯಾಗಿದ್ದಳಾಕೆ.

ಅವಳಿಂದ ಮೂವರೂ ಕಾಫಿ ಇಸಿದುಕೊಂಡು ಕುಡಿಯಲಾರಂಭಿಸಿದರು, "ಮರುದಿನ ಅವರು ಕೆಲಸಕ್ಕೆ ಹೋಗಲಿಲ್ಲ. ಭಯ ಮನೆಮಾಡಿಕೊಂಡಿತ್ತು. ಯಾರಿಗೋ ಫೋನು ಮಾಡಿಬಂದರು. ಸಂಜೆ ಆ ಮನುಷ್ಯ ಬಂದ. ಬರುವಾಗ ಆತ ರಮ್ ಬಾಟಲಿ ತಂದಿದ್ದ. ಅವರೊಂದಿಗೆ ಮಾತನಾಡಿ ಮರಳಿ ಕಳಿಸಿದರು. ನಾನು ಒಳಗಿನ ಕೋಣೆಯಲ್ಲಿ ಮಲಗಿದ್ದೆ. ಇವರು ಹೊರಸು ಹಾಕಿಕೊಂಡು ಹೊರಗೆ ಮಲಗಿದ್ದರು. ಬೆಳಿಗ್ಗೆ ಎದ್ದಾಗ ನೋಡಿದೆ. ಪೂರ್ತಿ ರಕ್ತದ ವಾಂತಿ ಮಾಡಿಕೊಂಡು ಇವರು ಸತ್ತುಬಿದ್ದಿದ್ದರು. ರಮ್‌ನಲ್ಲಿದ್ದ ಭಯಾನಕ ವಿಷಕ್ಕೆ ಬಲಿಯಾಗಿದ್ದಾರೆ ಎಂದು ಆಮೇಲೆ ತಿಳಿಯಿತು."

"ಸ್ವಲ್ಪ ನನ್ನೊಂದಿಗೆ ಅಡುಗೆ ಮನೆಗೆ ಬರುತ್ತೀಯಾ?"

ಆಕೆಗೆ ಅಚ್ಚರಿ,ಏಕೆಂದು ಕೇಳಲಿಲ್ಲ ತಲೆಯಾಡಿಸಿದಳು. ಎಲ್ಲರೂ ಅಡುಗೆ ಮನೆ ಸೇರಿದರು. ಅಲ್ಲಿದ್ದ ಹಾರಿ ಕೈಗೆತ್ತಿಕೊಂಡ ಹೇಮಂತ. ಅಶೋಕನಿಗೆ ಸಿಲಿಂಡರ ಎತ್ತಿಇಡುವಂತೆ ಹೇಳಿದ. ಆಮೇಲೆ ಅಗೆಯತೊಡಗಿದ. ಸ್ವಲ್ಪೇ ಸಮಯದಲ್ಲಿ ಅಲ್ಲಿ ಹುಗಿದಿದ್ದ ಪ್ಲಾಸ್ಟಿಕ್ ಚೀಲದ ಗಂಟು ಹೊರಬಂದಿತು. ಅದರಲ್ಲಿನೂರರ ನೋಟಿನ ಬಂಡಲುಗಳೇ ತುಂಬಿದ್ದವು. ಅದನ್ನೆತ್ತಿ ಮಾರ್ಟಿನ್ ಹೆಂಡತಿಗೆ ನೀಡಿ ಹೇಳಿದ.

"ಇದು ನಿನಗೆ ಸೇರಬೇಕಾದದ್ದು ಮಾರ್ಟಿನ್ ದುಡಿದದ್ದು. ಇದರಿಂದ ಮಕ್ಕಳನ್ನು ಚೆನ್ನಾಗಿ ಓದಿಸಿ ಜೀವನ ಸಾಗಿಸು. ಈ ರವಿವಾರ ಚರ್ಚಿನಲ್ಲಿ ಅವನ ಬಗ್ಗೆ ವಿಶೇಷ ಪೂಜೆ ಮಾಡಿಸು, ಆತ್ಮಕ್ಕೆ ಶಾಂತಿ ಸಿಗುತ್ತದೆ".

ಆಕೆ ಕಣ್ಣೀರು ಮಿಡಿದಳು. ಮೂವರೂ ಹೊರಬಂದರು. ತಾವು ಕಣ್ಮರೆಯಾಗುವವರೆಗೂ ಆಕೆ ನೋಡುತ್ತ ನಿಂತಿರುತ್ತಾಳೆ ಎಂದು ಹೇಮಂತ ಊಹಿಸಿದ್ದು ನಿಜವಾಗಿತ್ತು. ಮೂವರು ಕಾರಿನಲ್ಲಿ ಕುಳಿತರು. ಕಾರು ಹೊರಟಿತು ನಿಧಾನವಾಗಿ. ಮಾರ್ಟಿನ್‌ನ ಸಾವಿನ ಆಘಾತದಿಂದಾಗಿ ಕಾರಿನ ಹೃದಯವೂ ಸಹ ಭಾರವಾಗಿತ್ತೇನೋ....

ಕಾರು ನಡೆಸುತ್ತ ಹೇಮಂತ ಮುಂದಿನ ಹೆಜ್ಜೆ ಬಗ್ಗೆ ಯೋಚಿಸುತ್ತಿದ್ದ. ಮಾರ್ಟಿನ್ ತಿಳಿಸಿದ ಭಂಗಿ ಕಾಲನಿಯ ಅಪರಾಧಿಯನ್ನು ಬಂಧಿಸಬೇಕಾಗಿತ್ತು. ಖಂಡಿತವಾಗಿ ಅವನೇ ಮಾರ್ಟಿನ್‌ನ ಕೊಲೆಗಾರ ಎಂದಾತ ತಿಳಿದಿದ್ದ. ಅವನೇ 'ರಮ್'ನಲ್ಲಿ ವಿಷ ಸೇರಿಸಿಕೊಟ್ಟಿದ್ದ.

ಒಂದು ದೃಷ್ಟಿಯಿಂದ ಆತ ಭಯಂಕರ ಮನುಷ್ಯ.

ಸುಲಭವಾಗಿ ಬಲೆಗೆ ಬೀಳಲಿಕ್ಕಿಲ್ಲ. ಅದಕ್ಕಾಗಿ ಪೊಲೀಸ ಸಹಾಯ

ಪಡೆಯಬೇಕಾಗಬಹುದೆಂದು ಯೋಚಿಸುತ್ತಿದ್ದ.

"ಯಾವ ಕಡೆಗೆ ಮೇಜರ....?" ಕಾರು ನಡೆಸುತ್ತ ಕೇಳಿದ ಅಶೋಕ.

"ಮೊದಲು ಉತ್ತಮ ಹೋಟೇಲಿಗೆ ಊಟದ ನಂತರ ಮುಂದಿನ ಮಾತು"

ಅವನ ಮಾತು ಮುಗಿದಿರಲಿಲ್ಲ. ತಟಕ್‌ನೆ ನುಡಿದಳು ಸುಷಮಾ. "ಹೇಮಂತ..........ಯಾವದೋ ಒಂದು ವಾಹನ ಬಹುಶಃ ಕಾರಿರಬೇಕು ಹಿಂಬಾಲಿಸುತ್ತಿದೆ."

"ಹೀಗೋ....ಹಾಗಾದರೆ ಸಿದ್ಧರಾಗಿ....ತುಂಬಾ ದಿನಗಳಿಂದ ನಮ್ಮ ಆಯುಧಗಳು ಮೌನವಾಗಿದ್ದವು. ಅವುಗಳಿಗಿಂದು ತುಂಬಾ ಕೆಲಸ ದೊರೆಯ ಬಹುದು...."

ಹೇಮಂತನ ಕಣ್ಣುಗಳು ಬೆಂಕಿಯುಂಡೆಯಂತೆ ಮಿನುಗತೊಡಗಿದವು.

"ಊಟ ಕ್ಯಾನ್ಸಲ್....ಅಶೋಕ....ಕಾರನ್ನು ಹೈವೇ ಮೇಲೆ ನಡೆಸು."

ರಿವಾಲ್ವರಿಗೆ ಸೈಲೆನ್ಸರ ಜೋಡಿಸುತ್ತ ನುಡಿದ ಹೇಮಂತ. ಹಿಂದೆ ಕುಳಿತಿದ್ದ ಸುಷಮಾ ಸಹ ತನ್ನ ಪುಟ್ಟ ರಿವಾಲ್ವರ್ ಹೊರತೆಗೆದಿದ್ದಳು.

"ಸುಷಮಾ ನೀನು ಬಲ ಕಿಡಕಿಯಿಂದ ಶತ್ರುವಿನ ಮೇಲೆ ಕಣ್ಣಿಡು. ನಾನು ಎಡ ಭಾಗವನ್ನು ಕವರ್ ಮಾಡುತ್ತೇನೆ. ಯಾವದೇ ಪ್ರಸಂಗದಲ್ಲಿ ಅವನನ್ನು ನಮ್ಮಿಂದ ಮುಂದೆ ಬಿಡಕೂಡದು...."

ಸುಷಮಾ 'ಹುಂ' ಗುಟ್ಟಿದಳು. ಅಷ್ಟರಲ್ಲಿ ಅಶೋಕ ಕಾರನ್ನು ಹೈವೇ ಮೇಲೆ ತಂದಿದ್ದ. ಈಗಾತ ಕಾರಿನ ವೇಗಹೆಚ್ಚಿಸಿ ತನ್ನ ದೃಷ್ಟಿಯನ್ನು ಸಂಪೂರ್ಣವಾಗಿ ರಸ್ತೆ ಮೇಲೆ ಕೇಂದ್ರೀಕರಿಸಿದ. ಅವನ ಕೆಲಸ ಅದೊಂದೇ ಎದುರಿನಿಂದ ಬರುವ ವಾಹನಗಳಿಂದ ತಪ್ಪಿಸಿಕೊಂಡು, ಹಿಂದಿನಿಂದ ಬರುವ ಯಾವದೇ ವಾಹನಕ್ಕೆ ಮುಂದೆ ದಾಟಿ ಹೋಗಲು ಆಸ್ಪದ ನೀಡದಿರುವದು. ಪ್ರತಿಕ್ಷಣ ವೇಗ ಹೆಚ್ಚತೊಡಗಿತು. ಹಿಂದಿನಿಂದ ಹಲವಾರು ವಾಹನಗಳು ಬರುತ್ತಿದ್ದು ಎಲ್ಲಾ ಒಂದೊಂದಾಗಿ ಹಿಂದುಳಿದು ಕಣ್ಣಿನಿಂದ ಮರೆಯಾಗತೊಡಗಿದವು. ಒಂದೇ ಒಂದು ವಾಹನ ಮಾತ್ರ ಯಾವದೇ ಸಂದರ್ಭದಲ್ಲೂ ವೇಗ ಕಡಿಮೆ ಮಾಡದೇ ಅಟ್ಟಿಸಿಕೊಂಡು ಬರುತ್ತಿತ್ತು. ಅದರ ಜೋಡು ದೀಪಗಳು ಸೈಡ್ ಮಿರರ್‌ನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಹೇಮಂತ ಅಶೋಕನನ್ನು ಕೇಳಿದ. "ನಾವು ಬರುವಾಗ ಮಾವಿನ ತೋಪಿನ ಪಕ್ಕದಲ್ಲಿ ಒಂದು ಕೆರೆಯನ್ನು ನೋಡಿದ್ದೆವು....ನೆನಪಿದೆಯಲ್ಲ...."

"ಹಾಂ....ಸಮತಲವಾಗಿರುವ ರಸ್ತೆಯ ಸಮಪಾತಳಿಗೆ ಹೊಂದಿರುವ ಕೆರೆ ತಾನೇ....ಅಲ್ಲೇ ನಾವು ಅದರ ಬಗ್ಗೆ ಚರ್ಚಿಸಿದ್ದೆವು."

"ಹಾಂ....ಅದೇ."

"ಅದು ಸುಮಾರು ಎಂಟು ಕಿಲೋಮೀಟರ ದೂರದಲ್ಲಿದೆ."

"ಕೆರೆ ಸಮೀಪ ಬಂದಂತೆ ವೇಗ ಕಡಿಮೆ ಮಾಡಿ ಹಿಂದಿನ ಗಾಡಿಗೆ ಹತ್ತಿರ ಬರಲು ಆಸ್ಪದ ನೀಡು. ಕೆರೆ ತೀರ ಸಮೀಪ ಬಂದಾಗ ಒಮ್ಮೆಲೆ ವೇಗಹೆಚ್ಚಿಸು. ಕೆರೆ ಬರುತ್ತಲೂ ಹಿಂದಿನ ಹಾಗೂ ಮುಂದಿನ ದೀಪ ಆರಿಸಿ ಪಕ್ಕಕ್ಕೆ ಕಾರು ತಂದು ಮರದ ಕೆಳಗೆ ನಿಲ್ಲಿಸು."

"ಇದರಿಂದೇನಾಗುತ್ತದೆ."

"ನೀನೇ ನೋಡುವಿಯಂತೆ."

ಅಚ್ಚರಿಯಿಂದ ಕೇಳಿದ ಅಶೋಕನಿಗೆ ಗುಪ್ತವಾಗೇ ಉತ್ತರಿಸಿದ ಮೇಜರ.

ಅಶೋಕ ಅದೇ ರೀತಿ ಮಾಡಿದ ವೇಗವಾಗಿ ಓಡುತ್ತಿದ್ದ ಕಾರು ನಿಧಾನ ವಾಗಿ ವೇಗ ತಗ್ಗಿಸಿತ್ತು. ಹಿಂದಿನ ದೀಪಗಳು ಹತ್ತಿರ ಬಂದವು....ಅದೇ ವೇಳೆಗೆ ಒಂದೆರಡು ಬೆಂಕಿ ಕಿಡಿಗಳು ಕಾಣಿಸಿದವು. ಆಕ್ರಮಣ ಆರಂಭವಾಗಿತ್ತು. ಇವರ ಕಾರು ತುಂಬಾ ದೂರದಲ್ಲಿದ್ದುದರಿಂದ ಯಾವ ಅಪಾಯವಾಗಲಿಲ್ಲ.

"ಸುಷಮಾ ಈಗ ನೀನು ಆಕ್ರಮಣ ಆರಂಭಿಸು. ಅವರನ್ನು ನಾವು ಪ್ರಚೋದಿಸಬೇಕು ಸಿಟ್ಟಿಗೆಬ್ಬಿಸಬೇಕು."

ಹೇಮಂತನ ಮನದಲ್ಲೇನಿದೆ ಎಂದು ಇಬ್ಬರಿಗೂ ಅರ್ಥವಾಗಲಿಲ್ಲ. ಅದನ್ನವರು ವಿಚಾರಿಸುವ ಗೋಜಿಗೂ ಹೋಗಲಿಲ್ಲ....ಸುಷಮಾ ಬಲಭಾಗದ ಕಿಟಕಿಯಲ್ಲಿ ಕೈಹಾಕಿ ಒಂದೆರಡು ಬಾರಿ ಕುದುರೆ ಎಳೆದಳು. ಅದು ಗುರಿರಹಿತ ಕೇವಲ ಸಪ್ಪಳ ಮಾತ್ರ....ಹಿಂದಿನವಾಹನ ತುಸು ಓಲಾಡಿದಂತೆ ಕಂಡಿತು. ಅದರೊಂದಿಗೆ ವೇಗ ಕಡಿಮೆಯಾಯಿತು.

"ಗುಡ್, ಅಶೋಕ ನೀನು ವೇಗ ಹೆಚ್ಚಿಸು. ಸುಷಮಾ ಇನ್ನು ಗುಂಡು ಹಾರಿಸಬೇಡ."

ಹಿಂದಿನ ಕಾರು ತುಸು ಗೊಂದಲದಲ್ಲಿ ಬಿದ್ದಂತಾಯಿತು. ಅದರ ಚಾಲಕ ಇದನ್ನು ನಿರೀಕ್ಷಿಸಿರಲಿಲ್ಲವೆಂದು ಕಾಣುತ್ತದೆ. ಹೀಗಾಗಿ ನಿಧಾನವಾಗಿ ಬಿಡುತ್ತಿದ್ದ ಆತ ಒಮ್ಮೆಲೆ ಮತ್ತೆ ವೇಗ ಹೆಚ್ಚಿಸಿದ. ಅಷ್ಟರಲ್ಲಿ ಮುಂದಿನ ಕಾರು ಎಷ್ಟೋ ದೂರ ಹೊರಟುಹೋಗಿತ್ತು.

"ಮೇಜರ್....ಹಿಂದಿನ ವಾಹನ ತೀರ ಹಿಂದುಳಿಯಿತು."

"ಗುಡ್ ಅದೇ ನನಗೆ ಬೇಕಾದದ್ದು. ನೀನು ವೇಗ ಕಡಿಮೆ ಮಾಡಿ ಕೆರೆಯ ಹತ್ತಿರ ಬಂದು ನಾನು ಹೇಳಿದಂತೆ ಮಾಡು."

ಅಶೋಕ ಕೆರೆಯ ಸಮೀಪ ಬರುತ್ತಲೂ ಸೈಡ್ ಮಿರರ ಕಡೆ ನೋಡಿದ. ಹಿಂದಿನ ವಾಹನ ಬಿರುಗಾಳಿಯಂತೆ ಬರುತ್ತಿತ್ತು. ಅಶೋಕ ಒಮ್ಮೆಲೆ ಹಿಂದಿನ ಹಾಗೂ ಮುಂದಿನ ಎರಡೂ ದೀಪ ಆರಿಸಿ ಕಾರನ್ನು ಪಕ್ಕಕ್ಕೆ ತೆಗೆದುಕೊಂಡು ಮರದಡಿ ನಿಲ್ಲಿಸಿದ.

ಮೂವರೂ ನಿರೀಕ್ಷಿಸತೊಡಗಿದರು.

ಮುಂದಾಗುವ ಘಟನೆ ಬಗ್ಗೆ.

ಸುಂಟರಗಾಳಿಯಂತೆ ಬೆಂಬತ್ತಿ ಬಂದ ಕಾರು ಕೆರೆ ಬಳಿ ಇದ್ದ ಚಿಕ್ಕದಾದ ದಿನ್ನೆಯನ್ನು ಏರಿತು. ದಾರಿ ಪಕ್ಕಕ್ಕೆ ಸರಿದದ್ದು ಗಮನಕ್ಕೆ ಬಾರದ ಚಾಲಕ ತಬ್ಬಿಬ್ಬಾಗಿ ವೇಗ ತಗ್ಗಿಸುವ ಮೊದಲು ದಾರಿಯ ಸಮಪಾತಳಿಗೆ ಹೊಂದಿ ಇರುವ ಕೆರೆಗೆ ಧುಮುಕಿತ್ತು. ಢಮಾರ್ ಎಂದು ನೀರಿಗೆ ಬಿದ್ದ ಸದ್ದು ಕೇಳುತ್ತಲು ಕಾರಿನ ಬಾಗಿಲು ತೆಗೆದು ಹೊರಗೆ ಧಾವಿಸಿದ ಮೇಜರ ಕೂಗಿ ಹೇಳಿದ.

"ರೈಟ್ ಹೊರಬನ್ನಿ....ಹಾಗೆ ದೊಡ್ಡ ಬ್ಯಾಟರಿ ತೆಗೆದುಕೊಳ್ಳಿ. ಕಾರಿನಿಂದ ಯಾರೇ ಹೊರಗೆ ಬಂದು ಪಾರಾಗಲು ಯತ್ನಿಸಿದರೆ ಹಿಂದೆ ಮುಂದೆ ನೋಡದೆ ಗುಂಡಿಡಿ."

ಮೂವರೂ ಧಾವಿಸಿದರು ಕೆರೆಯತ್ತ.

ಅಶೋಕ ಬ್ಯಾಟರಿ ಬೆಳಕು ಚೆಲ್ಲಿದ.

ಕಾರು ನಿಧಾನವಾಗಿ ಮುಳುಗತೊಡಗಿತ್ತು....ಮೂರು ವ್ಯಕ್ತಿಗಳು ನೀರಿನಲ್ಲಿ ಈಜುತ್ತಿದ್ದರು. ಹೇಮಂತ ರಿವಾಲ್ವರ ಮೇಲೆತ್ತಿ ಅದರ ಸೈಲೆನ್ಸರ ತೆಗೆದು ಗಾಳಿಯಲ್ಲಿ ಒಂದು ಗುಂಡು ಹಾರಿಸಿ ಎಚ್ಚರಿಸಿದ.

"ಶರಣಾಗತರಾಗಿರಿ....ಇಲ್ಲದಿದ್ದರೆ ವ್ಯರ್ಥವಾಗಿ ಸಾಯುತ್ತೀರಿ...." ಇಬ್ಬರು ತಮ್ಮ ಎರಡೂ ಕೈ ಎತ್ತಿದರು.

"ಸರಿ ನೀವು ದಂಡೆಗೆ ಬರಬಹುದು....ಹಾಂ. ನಮ್ಮ ಕಡೆ."

ಒಂದು ವ್ಯಕ್ತಿ ಮಾತ್ರ ಅವರಿಂದ ದೂರ ಎದುರಿನ ದಂಡೆಯತ್ತ ವೇಗವಾಗಿ ಈಸತೊಡಗಿತು. ಆ ಬದಿಗಿದ್ದ ನೂರಾರು ಮಾವಿನ ಗಿಡಗಳು ಅವನಿಗೆ ರಕ್ಷಣೆ ನೀಡಬಹುದಾಗಿದ್ದವು. ಅದನ್ನರಿತ ಮೇಜರ್ ಕೆರೆಯ ದಂಡೆ ಮೇಲೆ ಓಡುತ್ತ ಹೇಳಿದ.

"ಅಶೋಕ ನೀನಿಲ್ಲೇ ಇದ್ದು ಇಬ್ಬರನ್ನು ಕವರ್‌ಮಾಡು...ಸುಷಮಾ ನೀನು ನನ್ನೊಂದಿಗೆ ಬಾ" ಓಡುತ್ತ ಓಡುತ್ತ ಬೇಕೆಂತಲೆ ಎರಡು ಮೂರು ಬಾರಿ ಗುಂಡು ಹಾರಿಸಿದ. ಹೇಮಂತ ಅದರ ಪರಿಣಾಮ ಈಸುತ್ತಿರುವ ಆ ವ್ಯಕ್ತಿಯ ಮೇಲೆ ಆಗಲಿಲ್ಲ. ಆಗಲೇ ಆತ ದಂಡೆ ಸೇರಿದ್ದ. ನೀರಿನಿಂದ ಮೇಲೆ ಬಂದಾಗ

ಅವನನ್ನು ಹೇಮಂತ ಗುರ್ತಿಸಿದ.

"ಅರೆ....ಚಾಂಗಚಿನ್...." ಸುಷಮಾ ಬೇಟೆ ತಪ್ಪಬಾರದು ಹುಂ.

ಇಬ್ಬರೂ ತಮ್ಮ ತಮ್ಮ ರಿವಾಲ್ವರ ಅವನೆಡೆ ಹೊರಳಿಸಿ ಕುದುರೆ ಎಳೆದರು. ನಾಲ್ಕಾರು ಗುಂಡು ಸಿಡಿದವು. ಹಾ ಎಂದು ನರಳಿದ ಚಾಂಗಚಿನ್ ನೆಲಕ್ಕೆ ಬಿದ್ದವ ಪುನಃ ಎದ್ದು ಮಾವಿನ ತೋಪಿನಲ್ಲಿ ಮರೆಯಾದ.ಅಲ್ಲಿದ್ದ ಮರಗಳು ಅವನಿಗೆ ರಕ್ಷಣೆ ನೀಡಿದವು.

"ಮುಂದೆ ಹೋಗುವದು ಅಪಾಯ ಸುಷಮಾ.ಆತನಿಗೆಅವಿತುಕೊಳ್ಳಲು ಮರಗಳಿವೆ. ನಮಗಿಲ್ಲ, ಅವನ ಬಳಿ ಯಾವ ಆಯುಧಗಳಿವೆಯೋ ತಿಳಿಯದು. ನಡೆ ಮರಳಿ ಹೋಗೋಣ."

ಮಾತು ಮುಗಿಯುವ ಮುನ್ನವೇ "ಢಂ....ಢಂ" ಎಂದು ಎರಡು ಗುಂಡು ಹಾರಿದವು. ಇಬ್ಬರೂ ಓಡಿದರು. ಅಶೋಕನತ್ತ. ಅವರೆದೆ ಭಯದಿಂದ ಕಂಪಿಸುತ್ತಿತ್ತು.

ಅಶೋಕ ಸುರಕ್ಷಿತವಾಗಿದ್ದ. ಅವನಿಂದ ತುಸು ಅಂತರದಲ್ಲಿ ಇಬ್ಬರು ನೆಲಕ್ಕುರುಳಿದ್ದರು. ಅವರ ಕೈಯಲ್ಲಿ ಪಿಸ್ತೂಲುಗಳು.

"ಇಬ್ಬರೂ ಒಂದೇ ಬಾರಿ ನನ್ನ ಮೇಲೆ...."

"ನನಗೆಲ್ಲಾ ಅರ್ಥವಾಯಿತು. ನೀನು ಮಾಡಿದ್ದು ಸರಿ...." ಉತ್ತರಿಸಿದ ಹೇಮಂತ ಬಿದ್ದ. ಎರಡೂ ದೇಹಗಳತ್ತ ನಡೆದ. ಅಶೋಕನ ರಿವಾಲ್ವರದಿಂದ ಸಿಡಿದ ಗುಂಡುಗಳು ಇಬ್ಬರ ಎದೆಯನ್ನು ಸೀಳಿಕೊಂಡು ಪಾರಾಗಿದ್ದವು. ಯಾವದೇ ಬಗೆಯ 'ರಿಸ್ಕ್' ತೆಗೆದುಕೊಳ್ಳಲು ಬಯಸದ ಅಶೋಕ ಅವರನ್ನು ಭೂಮಿಗೆ ಉರುಳಿಸಿದ್ದ. ಸುಮಾರು ಐವತ್ತು ವರ್ಷಕ್ಕೆ ಎಡಬಲಕ್ಕಿದ್ದ ಇಬ್ಬರೂ ಕುಖ್ಯಾತ ಅಪರಾಧಿಗಳ ಸಾಲಿಗೆ ಅವರು ಸೇರಿದವರೆಂಬುದನ್ನು ಪ್ರತ್ಯೇಕವಾಗಿ ಹೇಳುವಂತಿರಲಿಲ್ಲ. ಅವರಿಬ್ಬರ ಜೇಬುಗಳನ್ನು ಪರಿಶೀಲಿಸಿದಾಗ ಸಿಕ್ಕದ್ದು ಕರವಸ್ತ್ರ, ಸಿಗರೇಟ ಪ್ಯಾಕ್, ಲೈಟರ ಒಂದಿಷ್ಟು ಹಣ.ಅವರ ಬಗ್ಗೆ ತಿಳಿಯಲು ಸಾಧ್ಯವಾಗುವ ಯಾವದೇ ಕುರುಹುಗಳು ದೊರೆಯಲಿಲ್ಲ. ಎರಡೂ ದೇಹಗಳನ್ನು ಎತ್ತಿ ಕಾರಿನ ಡಿಕ್ಕಿಯಲ್ಲಿ ಎಸೆದು ಕಾರನ್ನೇರಿದರು. ಈ ಬಾರಿ ಹೇಮಂತ ಕಾರು ನಡೆಸತೊಡಗಿದ್ದ.

"ಚಾಂಗಚಿನ್....ನಿಮಗಿಬ್ಬರಿಗೂ.... ನೆನಪಿದ್ದಾನಲ್ಲವೇ?" ಹೇಮಂತ ಕೇಳಿದ.

"ಯಾರು? ನಿಮ್ಮ ಮೇಲೆ ರತ್ನಮಹಲಿನಲ್ಲಿ ಆಕ್ರಮಣ ಮಾಡಿದವನೆ?" ಸುಷಮಾ ಪ್ರಶ್ನಿಸಿದಳು.

"ಹಾಂ....ಅವನೇ."

"ಅವನೇನಾದರೂ ನನ್ನ ಕೈಗೆ ಸಿಕ್ಕರೆ ಗುಡಾಣದಂಥ ಅವನ ಹೊಟ್ಟೆಯನ್ನೇ ಒಡೆಯುತ್ತೇನೆ," ಕರಕರ ಹಲ್ಲು ಕಡಿಯುತ್ತ ಅಬ್ಬರಿಸಿದ ಅಶೋಕ.

"ನಾನು ಅವನ ಬೋಳುತಲೆ ನೂರಾರು ಹೋಳುಗಳಾಗುವಂತೆ ಗುಂಡು ಇಡುತ್ತೇನೆ" ಕಣ್ಣುಗಳಲ್ಲಿ ಕಿಡಿಕಾರುತ್ತ ಭುಸುಗುಟ್ಟಿದಳು ಸುಷಮಾ.

ಅವರಿಬ್ಬರ ಮಾತಿಗೆ ನಕ್ಕ ಹೇಮಂತ....ನಗೆಯಲ್ಲಿ ಒಂದು ಬಗೆಯ ವ್ಯಂಗ್ಯವಿತ್ತು.

"ಏಕೆ? ಈ ರೀತಿ ನಗುತ್ತಿದ್ದೀರಿ....ನಮ್ಮ ಬಗ್ಗೆ ಅಪನಂಬಿಗೆಯೆ?"

"ಇರಲಿಕ್ಕಿಲ್ಲ. ಚಾಂಗಚಿನ್ ಸಿಕ್ಕರೆ ತಾನೇ?ಎಂದು ಕೇಳುತ್ತಿರಬೇಕು."

ತನ್ನಿಬ್ಬರೂ ಸಂಗಡಿಗರ ಮಾತಿಗೆ ಈ ಸಲ ನಿಜವಾಗಿಯೂ ನಗೆ ಬಂತು.

"ನಾನು ನಕ್ಕದ್ದು ಅದಕ್ಕಲ್ಲ."

"ಮತ್ತೆ ಬೇರಾವುದಕ್ಕೆ?"

"ಚಾಂಗಚಿನ್ ನಿಮ್ಮ ಕೈಗೆ ಸಿಕ್ಕು ಪಾರಾದನಲ್ಲ ಅದಕ್ಕೆ...."

"ಅಂ?" ತಬ್ಬಿಬ್ಬಾದ ಅವರಿಬ್ಬರೂ ಉದ್ಗರಿಸಿದರು.

"ಕೆರೆಯಲ್ಲಿ ಈಜಿ ಆಚೆ ಪಾರಾದವನೇ ಚಾಂಗಚಿನ್ ಅವನ ಅದೃಷ್ಟ ಚೆನ್ನಾಗಿತ್ತು. ಹೀಗಾಗಿ ನನ್ನ ಗುಂಡು ಸರಿಯಾಗಿ ಗುರಿಗೆ ಬೀಳದೇ ಅವನ ಕಾಲಿಗೋ ಕೈಗೋ ಎಲ್ಲೋ ಒಂದು ಕಡೆ ತಗುಲಿತು."

"ಹಾಗಾದರೆ ಆತ ನಮ್ಮಿಂದ ಬಹುದೂರ ಹೋಗಲಾರ. ಇಲ್ಲೇ ಎಲ್ಲಾದರೂ ಆಶ್ರಯಪಡೆಯಬಹುದು." ಸುಷಮಾ ತನ್ನ ವಿಚಾರ ಮುಂದಿಟ್ಟಳು.

"ನಿನ್ನ ವಿಚಾರದಲ್ಲಿ ಸತ್ಯಾಂಶವಿದೆ....ಹಾಂ ಅಶೋಕ ಈಗ ನೀನುಹೇಳು ಆತ ಇಲ್ಲೇ ಎಲ್ಲಾದರೂ ಅವಿತುಕೊಳ್ಳಬೇಕೆಂದರೆ....ಎಲ್ಲಿ ತಂಗಬಹುದು?"

ಅಶೋಕ ಗಂಭೀರವಾಗಿ ಯೋಚಿಸತೊಡಗಿದ. ಮೇಜರ್‌ಗೆ ಉತ್ತರ ಗೊತ್ತಿದ್ದರೂ ಪರೀಕ್ಷಿಸಲು ಮೌನವಾಗಿದ್ದ. ಕೇವಲ ಎರಡು ನಿಮಿಷಗಳು. ಸಟಕ್‌ನೆ ಉತ್ತರಿಸಿದ ಅಶೋಕ.

"ಮತ್ತೆಲ್ಲಿ? ಭಂಗಿ ಕಾಲನಿಯಲ್ಲಿ...."

"ಶಹಬ್ಬಾಶ್" ಮುಕ್ತ ಕಂಠದಿಂದ ಹೇಮಂತಬೆನ್ನು ಚಪ್ಪರಿಸಿ ಹೇಳಿದ. ಇಂದು ರಾತ್ರಿ ನಾವು ಭಂಗಿ ಕಾಲನಿಯಮನೆಮೇಲೆದಾಳಿ ಮಾಡುವಾ.

"ದಾಳಿ ಮಾಡಲು ಶಕ್ತಿ ಬೇಕಲ್ಲವೇ?" ಸುಷಮಾ ತುಂಟತನದಿಂದ ಕೇಳಿದಳು.

"ನನಗರ್ಥವಾಯಿತು. ಮೊದಲು ಎಲ್ಲಾದರೂ ಒಂದೆಡೆಗೆ ಚೆನ್ನಾಗಿ

ಊಟ ಮಾಡೋಣ."

ಮೇಜರನ ಅಭಿಪ್ರಾಯಕ್ಕೆ ಇಬ್ಬರೂ ಒಪ್ಪಿದರು.

'ಪಹಲೆ ಪೋಟೋಬಾ ನಂತರ ವಿಠೋಬಾ,' ಅನ್ನುವಂತೆ ಹಸಿದಿದ್ದ ಮೂವರೂ ಹೊಟೇಲ್ ಡಿ.ಆರ್.ಗೆ ಬಂದು ಚೆನ್ನಾಗಿ ಊಟ ಮಾಡಿದರು. ಹೊರಬರುವಾಗಲೇ ಹತ್ತಿರವಿರುವ ಪೊಲೀಸ್ ಸ್ಟೇಷನ್ ಬಗ್ಗೆ ವಿಚಾರಿಸಿದರು. ಅಲ್ಲಿದ್ದ ಡಿ.ಸಿ.ಪಿ. ಬೇಕಲ್ ಸಾಹೇಬರ ಬಗ್ಗೆ ಮೇಜರ್ ಕೇಳಿ ತಿಳಿದಿದ್ದ. ಸಂಪರ್ಕ ಬಂದಿರಲಿಲ್ಲ ಅಷ್ಟೇ. ಗೋಪಾಲಕೃಷ್ಣ ಬೇಕಲ್ ಪೂರ್ಣ ಹೆಸರಾದರೂ ಚಿಕ್ಕದ ರಲ್ಲಿ ಜಿ.ಕೆ. ಬೇಕಲ್ ಒಳ್ಳೆ ದಕ್ಷ ಅಷ್ಟೇ ಪ್ರಾಮಾಣಿಕ ಅಧಿಕಾರಿ ಎಂದೇ ಪರಿಚಿತರಾಗಿದ್ದರು. ಯಾವ ಆಶೆ ಆಮಿಷಗಳೂ ಅವರನ್ನು ಕರ್ತವ್ಯದ ದಾರಿಯಿಂದ ದೂರ ಸರಿಯುವಂತೆ ಮಾಡಿರಲಿಲ್ಲ. ಅವರು ಸರ್ಕಲ್ ಇನಸ್ಪೆಕ್ಟರ ಇದ್ದಾಗ ಒಂದು ಮಗುವನ್ನು ಕಿಡ್‌ನ್ಯಾಪ್ ಮಾಡಿ ನಂತರ ಮರ್ಡರ್ ಮಾಡಿದ ಕೇಸೊಂದು ಬಂದಿತ್ತು. ಅವರ ಕೈಗೆ ಬಂದ ಹದಿನೆಂಟು ಗಂಟೆಗಳಲ್ಲಿ ಅವರು ಅಪರಾಧಿಯನ್ನು ಬಂಧಿಸಿ, ಸೆರೆಮನೆಗೆ ತಳ್ಳಿದ ಮೇಲೆಯೇ ಮನೆ ಸೇರಿದ್ದರು. ಇಂಥ ಅನೇಕ ಕೇಸುಗಳಲ್ಲಿ ಅವರು ತಮ್ಮ ನೈಪುಣ್ಯತೆ ತೋರಿದ್ದರೂ ದುರ್ದೈವಕ್ಕೆ ಇನ್ನೂವರೆಗೆ ಅವರಿಗೆ ಪ್ರಶಸ್ತಿಗಳು ಬಂದಿರಲಿಲ್ಲ. ಅವರು ತಮ್ಮ ಪ್ರತಿಭೆಗೆ ಪುರಸ್ಕಾರ ಸ್ವರೂಪವಾಗಿ ಯಾವ ಪ್ರಶಸ್ತಿಗಳೂ ಬರಲಿಲ್ಲವೆಂದು ನೋವು ಮಾಡಿಕೊಂಡಿರಲಿಲ್ಲ, ಕರ್ತವ್ಯದಿಂದ ವಿಮುಖರಾಗಿರಲಿಲ್ಲ.

ಡಿ.ಸಿ.ಪಿ. ಬೇಕಲ್ ಅವರ ಮನೆ ಕರೆಗಂಟೆ ಮೇಜರ ಬಾರಿಸಿದಾಗ ಎದುರಾದವ ಸೆಂಟ್ರಿ ತನ್ನ ಹೆಸರಿನ ಕಾರ್ಡು ನೀಡುತ್ತ "ಮೇಜರ ಹೇಮಂತ ಬಂದಿದ್ದಾರೆ ಅಂತ ಹೇಳು " ಅಂದ. ಸೆಂಟ್ರಿ ಹೊರಳುತ್ತಿರುವಾಗಲೇ ಒಳಗಡೆ ಢಡಢಡ ಸದ್ದಾಯಿತು. ಟೇಬಲ್ ಕುರ್ಚಿ ಸರಿದಂತೆ ಅದರ ಹಿಂದೆಯೇ ಧಪ್ ಧಪ್ ಹೆಜ್ಜೆ ಸಪ್ಪಳ ಸೆಂಟ್ರಿ ಗಾಬರಿಯಾಗಿ ಹಿಂದೆ ಸರಿದ. ಮೇಜರನ ಮಾತು ಒಳಗಿದ್ದ ಬೇಕಲ್‌ರಿಗೆ ಕೇಳಿತ್ತೇನೋ ಬರೆಯುತ್ತ ಕುಳಿತವರ ಕೈಯ್ಯಲ್ಲಿ ಪೆನ್ ಹಿಡಿದುಕೊಂಡೇ ಹೊರಗೆ ಧಾವಿಸಿ ಬಂದರು. ತಮ್ಮೆದುರು ನಿಂತ ಸುಂದರ ಸದೃಢ ಅಷ್ಟೇ ಪ್ರಭಾವಶಾಲಿ ವ್ಯಕ್ತಿತ್ವದ ಮೂವರನ್ನೂ ಕಂಡು ದಂಗಾಗಿ ನಿಂತರು ಒಂದು ಕ್ಷಣ. ಮರುಕ್ಷಣ ಚೇತರಿಸಿಕೊಂಡರು.

"ಓಹ್ ಮೇಜರ ಹೇಮಂತ....ನೀವು ನಿಮ್ಮ ದಂಡಿನೊಂದಿಗೇ ಬಂದಂತೆ ಕಾಣುತ್ತಿದೆ....ನನ್ನ ಭಾಗ್ಯ....ನಿಮಗೆ ನನ್ನ ಸ್ವಾಗತ."

"ನಮಗೂ ಅಷ್ಟೇ ಬೇಕಲ್‌ಸಾಹೇಬರೆ....ನಿಮ್ಮಂಥ ಪೊಲೀಸ್‌ಅಧಿಕಾರಿಗಳನ್ನು ಭೆಟ್ಟಿಯಾಗುವದು ನನ್ನ ಪೂರ್ವಜನ್ಮದ ಪುಣ್ಯಎಂದೇಭಾವಿಸುತ್ತೇನೆ"

ಇಬ್ಬರೂ ಮಹಾನ್ ವ್ಯಕ್ತಿಗಳು ಪರಸ್ಪರ ಹಸ್ತಲಾಘವ ನೀಡಿ ಯೋಗ ಕ್ಷೇಮ ವಿಚಾರಿಸಿದರು. ಇವರಿಬ್ಬರ ಅತ್ಯುತ್ಸಾಹದ ಮಾತುಗಳಿಗೆ ಬೆಡ್‌ರೂಮಿನಲ್ಲಿದ್ದ ಶ್ರೀಮತಿ ಬೇಕಲ್ ಅವರು ಹೊರಬಂದು ವಂದಿಸಿದರು. ಎಲ್ಲರೂ ಒಳ ನಡೆದರು. ಬೇಕಲ್ ಅವರು ಅತಿಥಿ ಸತ್ಕಾರಕ್ಕೆ ಮುಂದಾದಾಗ ಹೇಮಂತ ನಿರಾಕರಿಸಿ ಕೇವಲ ಕಾಫಿ ಎಂದ. ಕಾಫಿ ತಯಾರಾಗಿ ಬರುವಷ್ಟರಲ್ಲಿ ಸಂಕ್ಷಿಪ್ತವಾಗಿ ನಡೆದ ವಿಷಯ ತಿಳಿಸಿದ ಮೇಜರ. ತಕ್ಷಣಮಾಡಬೇಕಾದ ಕೆಲಸದ ಬಗ್ಗೆ ತನ್ನ ವಿಚಾರ ಮುಂದಿಟ್ಟ.

ಬೇಕಲ್ ಸಾಹೇಬರು ಕೂಡಲೇ ಕಾರ್ಯತತ್ಪರರಾದರು. ದೂರವಾಣಿ ಮೂಲಕ ತಮ್ಮ ಸಿಬ್ಬಂದಿಗೆ ಕೂಡಲೇ ಹೊರಟುಬರುವಂತೆ ಕರೆ ನೀಡಿದರು. ವಿಶೇಷವಾಗಿ ಇನಸ್ಪೆಕ್ಟರ ಶ್ಯಾಮಸುಂದರ ಕುಲಕರ್ಣಿ ಅವರಿಗೆ ಕರೆ ನೀಡಲು ಮರೆಯಲಿಲ್ಲ.

ಹದಿನೈದು ನಿಮಿಷಗಳಲ್ಲಿ ಎರಡು ಪೊಲೀಸ್ ಗಾಡಿಗಳು ಬಂದು ಅವರ ಮನೆ ಮುಂದೆ ನಿಂತವು. ಒಂದರಿಂದ ಶ್ಯಾಮಸುಂದರ ಕೆಳಗಿಳಿದು ಎಲ್ಲರಿಗೂ ಗೌರವ ನೀಡಿದರು. ಬೇಕಲ್ ಅವರು ಎಲ್ಲರ ಪರಿಚಯ ಮಾಡಿಕೊಟ್ಟರು. ಹೇಮಂತ ಎಲ್ಲರನ್ನು ಹತ್ತಿರ ಕರೆದು ಮುಂದೇನು ಮಾಡಬೇಕು ಎಂಬ ಬಗ್ಗೆ ವಿವರ ನೀಡತೊಡಗಿದ....

ಭಂಗಿ ಕಾಲನಿಗೆ ಒಂದು ಫರ್ಲಾಂಗ್ ಹಿಂದೆಯೇ ಮರಗಳ ಮರೆಯಲ್ಲಿ ಗಾಡಿಗಳನ್ನು ನಿಲ್ಲಿಸಿದ ಪೊಲೀಸ್ ಪಡೆ ನಡೆಯುತ್ತ ತನ್ನ ಬಲೆಯನ್ನು ಬಲಪಡಿಸುತ್ತ ನಡೆಯಿತು, ಅದೊಂದು ಚಕ್ರವ್ಯೂಹವೆಂದರೂ ತಪ್ಪಾಗಲಾರದು. ಅದರ ನೇತೃತ್ವ ಡಿ.ಸಿ.ಪಿ. ಬೇಕಲ್ ವಹಿಸಿದ್ದರೆ, ಸಹಾಯಕನಾಗಿ ಶ್ಯಾಮಸುಂದರ ನಡೆದಿದ್ದರು. ಅವರಿಗೆ ತಿಳಿಯದಂತೆ ಅವರನ್ನು ಹಿಂಬಾಲಿಸಿದವ ಹೇಮಂತ. ಪೊಲೀಸ್ ಪಡೆ ಭಂಗಿ ಕಾಲನಿಯಲ್ಲಿಯ ಡಿ. ೩೮ ಮನೆ ಸುತ್ತುವರೆದಾಗ ರಾತ್ರಿ ಎರಡು ಗಂಟೆ ಎಷ್ಟೇ ಸಪ್ಪಳಾಗದಂತೆ ಜಾಗ್ರತೆವಹಿಸಿದ್ದರೂ ವಿಕಟವಾಗಿ ಬೊಗಳುವ ನಾಯಿಗಳ ಬಾಯಿ ಮುಚ್ಚಲಾಗಲಿಲ್ಲ.

ಅವರಿಂದ ತುಂಬಾ ದೂರದಲ್ಲಿ ಕಾರು ನಿಲ್ಲಿಸಿ ಅದರ ಟಾಪ್ ಮೇಲೆ ಕುಳಿತಿದ್ದ ಹೇಮಂತ ತನ್ನ ಶಂಕೆ ವ್ಯಕ್ತಪಡಿಸಿದ.

"ನಾಯಿಗಳು ಅವರಿಗೆ ಸೂಚನೆ ನೀಡಿವೆ. ಹೀಗಾಗಿ ಜಾಗ್ರತರಾಗಿರಲು ಸಾಕು. ನಾವು ಹುಷಾರಿಯಿಂದಿದ್ದು ಬೇಕಲ್ ಸಾಹೇಬರನ್ನು ರಕ್ಷಿಸಬೇಕು."

ಸುಷಮಾ ಮತ್ತು ಅಶೋಕ ತಮ್ಮ ತಮ್ಮ ರಿವಾಲ್ವರ್‌ನೊಂದಿಗೆ ಸಿದ್ಧರಾದರು.

ಡಿ. ಶಿಲ ಸಾಧಾರಣವೊಂದು ಮನೆ. ಆದರೂ ಮೇಲ್ಭಾಗ ತುಸು ಎತ್ತರ ವಿದ್ದಂತೆ ಕಂಡು ಮೇಲೊಂದು ಚಿಕ್ಕ ಕೋಣೆಯಿರುವ ಸಾಧ್ಯತೆಬಗ್ಗೆ ಮೇಜರ್ ಯೋಚಿಸುತ್ತಿದ್ದ.

"ಟಕ್....ಟಕ್....ಟಕ್ ಸದ್ದು....ಬಾಗಿಲು ಬಡಿದದ್ದು ಬೇಕಲ್ ಅವರು ಬಾರಿಸುತ್ತಿರಬೇಕು. ಸ್ವಲ್ಪ ಸಮಯದ ನಂತರ ಮನೆಯಲ್ಲಿ ದೀಪಬೆಳಗಿತು. 'ಹುಷಾರ್' ಎಂದು ಎಚ್ಚರಿಸಿದ್ದ ಹೇಮಂತ.

ಅಲ್ಲೇನು ಮಾತುಕತೆ ನಡೆಯುತ್ತಿದೆ ಎಂದು ತಿಳಿಯದು. ಮೇಜರನ ಕಣ್ಣುಗಳು ಪೂರ್ತಿಯಾಗಿ ಆ ಮನೆ ಮೇಲೆಯೇ ನಟ್ಟಿದ್ದವು. ಆತ ಊಹಿಸಿ ದಂತೆಯೇ ಆಯಿತು.

ಆ ಮನೆಯ ಮೇಲ್ಭಾಗದಲ್ಲಿದ್ದ ಕೆಂಪು ಹಂಚುಗಳಲ್ಲಿ ಕೆಲವೊಂದು ಸರಿ ದಾಡಿದಂತೆ ಕಂಡು ಕೆಲವೇ ಸೆಕೆಂಡುಗಳಲ್ಲಿ ಕಪ್ಪು ಆಕೃತಿಯೊಂದು ನಿಧಾನ ವಾಗಿ ಮೇಲೆ ಬಂದಂತೆ ಭಾಸವಾಯಿತು. ಆ ವ್ಯಕ್ತಿಯಹಿಂದೆಯೇ ಮತ್ತೊಂದು ವ್ಯಕ್ತಿ. ಒಂದು ವ್ಯಕ್ತಿಯ ಮೇಲ್ಭಾಗದಲ್ಲಿ ಬಿಳಿ ಬಣ್ಣದ ಗುರುತು ಕಂಡ ಹೇಮಂತ ಉದ್ಗರಿಸಿದ.

"ಚಾಂಗಚಿನ್....ಅವನ ಮೇಲ್ಭಾಗಕ್ಕೆ ಗುಂಡು ತಾಗಿರಬೇಕು. ಈಗಾತ ಪಟ್ಟಿ ಧರಿಸಿಕೊಂಡಿದ್ದಾನೆ ಆತ. ಆತನ ಜೊತೆ ಮಾರ್ಟಿನ್ ಕೊಲೆಗಾರ ಇಬ್ಬರೂ ಮನೆ ಮೇಲಿದ್ದಾರೆ............ಎಚ್ಚರ........ಅವರು ಅಪಾಯಕಾರಿ ಪ್ರಾಣಿಗಳು...."

ಡಿ.ಸಿ.ಪಿ. ಬೇಕಲ್ ತಮ್ಮೆದುರು ನಿಂತ ತುಂಬು ಯೌವನದ ಭಾರದಿಂದ ಬಳಲುತ್ತಿರುವ ಕೃಷ್ಣವರ್ಣದ ಸುಂದರಿಯೊಂದಿಗೆ ವಾರ್ತಾಲಾಪದಲ್ಲಿ ತೊಡಗಿದ್ದರು. ತಮ್ಮ ನೆತ್ತಿ ಮೇಲೆ ಸುಳಿಯುತ್ತಿರುವ ಅಪಾಯದ ಕಾರ್ಮೋ ಡದ ಬಗ್ಗೆ ಅವರಿಗೆ ತಿಳಿದಿರಲಿಲ್ಲವೆಂದು ಕಾಣುತ್ತದೆ.

"ನಿನ್ನ ಹೆಸರೇನು?"

"ರುಕ್ಮಿಣಿ."

"ಮನೆಯಲ್ಲಿ ಯಾರಿದ್ದಾರೆ?"

"ಸಧ್ಯ ಯಾರೂ ಇಲ್ಲ....ನನ್ನ ಪತಿ ಕೆಲಸದ ಮೇಲೆ ಹೋಗಿದ್ದಾರೆ."

"ಏನವರ ಹೆಸರು?"

"ನಟರಾಜ."

"ಅವರೇನು ಮಾಡುತ್ತಾರೆ?"

"ಖಲಾಸಿ".

"ಹಣೆಯ ಮೇಲೆ ಗಾಳ ಇರುವವನೇ ನಿನ್ನ ಗಂಡನಲ್ಲವೇ?"

"ಹೌದು".

"ಸರಿ. ನಾನು ಮನೆ ಶೋಧಿಸಬೇಕಾಗಿದೆ".

"ಏಕೆ?"

"ಅದೆಲ್ಲ ಆಮೇಲೆ".

"ನಾನದಕ್ಕೆ ಆಸ್ಪದ ಕೊಡುವದಿಲ್ಲ. ಮನೆಯಲ್ಲಿ ಗಂಡಸರಿಲ್ಲ".

"ನೀನು ಹೊರಗಡೆ ಬಂದು ನಿಲ್ಲು....ನಾವು ಒಳಗೆ ಹೋಗುತ್ತೇವೆ".

"ನನ್ನಿಂದ ಆಗದು".

ಬೇಕಲ್ ಅವರು ಮಾತನಾಡುವ ಮೊದಲೇ ಮುಂದೆ ಬಂದ ಶ್ಯಾಮ ಸುಂದರ ಆ ಹೆಣ್ಣುಮಗಳನ್ನು ಸರಿಸುವಂತೆ ತನ್ನೊಡಗಿದ್ದ ಸಿಬ್ಬಂದಿಗೆ ಹೇಳಿದ. ಮುಂದೇನು? ಮೂವರು ಬಂದವರೇ ಅವಳನ್ನು ಅನಾಮತ್ತಾಗಿ ಎತ್ತಿ ಹೊರಗೆ ತಂದರು.ಆಕೆ ಬಾಯಿ ಬಾಯಿ ಬಡಿದುಕೊಳ್ಳುತ್ತ ಬೊಬ್ಬೆಹಾಕತೊಡಗಿದಳು. ಆ ಬೊಬ್ಬೆಗೆ ಎಡಬಲದ ಮನೆಗಳಲ್ಲಿ ದೀಪ ಕಾಣಿಸಿಕೊಂಡವು.

"ಹೀಗಾಗಬಾರದಿತ್ತು. ಪಬ್ಲಿಕ್ ಎಚ್ಚತ್ತು ಸುತ್ತುವರಿದರೆ ಅಪರಾಧಿಗಳು ಸುಲಭವಾಗಿ ಪಾರಾಗುತ್ತಾರೆ.ಬೇಗ ಮನೆಯನ್ನು ಸುತ್ತುವರೆಯಿರಿ. ಅಶೋಕ ನೀನು ಹಿಂಭಾಗಕ್ಕೆ....ಸುಷಮಾ ನೀನು ಬಲಭಾಗಕ್ಕೆ. ನಾನು ನೇರವಾಗಿ ಮುಂದಿನಿಂದ ಪ್ರವೇಶಿಸುತ್ತೇನೆ.. ".

ಮೇಲೆ ನಿಂತ ಎರಡೂ ಆಕೃತಿಗಳು ಈಗ ನಿಚ್ಚಳವಾಗಿ ಕಾಣುತ್ತಿದ್ದವು. ಅವುಗಳಲ್ಲಿ ಒಂದು ಚಾಂಗಚಿನ್ ಎಂದು ಭವ್ಯವಾದ ಆಕೃತಿ ಕಂಡೇ ಹೇಮಂತ ನಿರ್ಧರಿಸಿದ್ದ........ಅವರಿಬ್ಬರೂ ನಿಧಾನವಾಗಿ ಮುಂದೆ ಬರತೊಡಗಿದ್ದರು. ಖಂಡಿತವಾಗಿ ಅವರು ಶಸ್ತ್ರಸಜ್ಜಿತರಾಗಿದ್ದಾರೆಂದು ಮೇಜರಗೆ ಗೊತ್ತು. ಆತ ಓಡುತ್ತ ಬೇಕಲ್‌ರ ಸಮೀಪಕ್ಕೆ ಬರುತ್ತ ಕೂಗಿ ಹೇಳಿದ.

"ಎಲ್ಲರೂ ದೂರ ಸರಿಯಿರಿ. ಮೇಲೆ ಯಾರೋ ಇದ್ದಾರೆ...."

ಬೇಕಲ್ ಒಮ್ಮೆಲೆ ಎಚ್ಚರಾದರು.

"ಲೈಟ್ಸ್ ಆನ್" ಎಂದು ಕೂಗಿದರು. ಆದರೆ ಆಗಲೇ ಸಾಕಷ್ಟು ತಡ ವಾಗಿತ್ತು. ಸುತ್ತಲೂ ದೀಪ ಬೆಳಗಿ ಮನೆಯನ್ನು ಬೆಳಕಿನಿಂದ ತೋರಿಸುತ್ತಿದ್ದಂತೆಯೇ ಮೇಲಿದ್ದ ಇಬ್ಬರೂ ತಮ್ಮ ಕೈಯಲ್ಲಿದ್ದ ರೈಫಲ್ ಬಾಯಿ ತೆರೆದಿದ್ದರು.

'ಢೆ ಢೆ ಢೆ ಢೆ....'ಗುಂಡುಗಳ ಭಾರಿ ಸಪ್ಪಳಕ್ಕೆ ಸುತ್ತಲಿನ ವಾತಾವರಣ ಪ್ರತಿಧ್ವನಿಸುತ್ತಿದ್ದಂತೆ ಮೂರು ನಾಲ್ಕು ಜನ ಪೊಲೀಸರು ಚೀತ್ಕಾರವಾಗಿ

ಚೀರುತ್ತ ನೆಲಕ್ಕುರುಳಿದರು. ಈ ಸಮಯ ಸಾಧಿಸಿ ರುಕ್ಮಿಣಿ ದಿಕ್ಕು ಸಿಕ್ಕತ್ತ ಓಡುತ್ತಿದ್ದಂತೆ ಅವಳೆಡೆ ಬಂದ ಗುಂಡಿನ ಪ್ರವಾಹಕ್ಕೆ ಆಕೆ ವಿಲಿವಿಲಿ ಒದ್ದಾಡಿ ನೆಲಕಚ್ಚಿದಳು. ಕನಿಷ್ಠ ಪಕ್ಷ ಹತ್ತು ಇಪ್ಪತ್ತು ಗುಂಡುಗಳಾದರೂ ಅವಳ ದೇಹ ಪ್ರವೇಶಿಸಿರಬೇಕು. ಮೇಲಿದ್ದವರು ಯಾವುದೇ ಪ್ರಸಂಗದಲ್ಲೂ ಅವಳನ್ನು ಜೀವಂತ ಇಡಲು ಬಯಸಿರಲಿಲ್ಲವೆಂದು ಕಾಣುತ್ತದೆ. ಆಕೆ ಪೋಲೀಸರ ಕೈಸೆರೆಯಾದರೆ ತಮಗೆ ಅಪಾಯವೆಂದವರು ಅರಿತಿದ್ದರು.

ಇಷ್ಟೆಲ್ಲಾ ಅನಾಹುತಗಳಾಗುವ ಹೊತ್ತಿಗೆ ಹೇಮಂತ ಮನೆ ಸಮೀಪ ಬಂದಿದ್ದ. ಅವನ ಕೈಯಲ್ಲಿಯ ರಿವಾಲ್ವರ ಬಾಯ್ತೆರೆಯುತ್ತಿದ್ದಂತೆ ಮೇಲಿದ್ದವರ ಕೈಯಲ್ಲಿಯ ಆಯುಧಗಳು ಗಾಳಿಯಲ್ಲಿ ಹಾರಾಡಿದವು. ಅವರಿಬ್ಬರೂ ಚೀರುತ್ತ ಹಿಂಭಾಗಕ್ಕೆ ಓಡತೊಡಗಿದರು. ಮತ್ತೊಮ್ಮೆ ಹೇಮಂತ ರಿವಾಲ್ವರ ಕುದುರೆ ಅದುಮಿದ. ಚಾಂಗಚೆನ್ ಜೊತೆಗಿದ್ದವ ಬಹುಶಃ ನಟರಾಜನಿರಬೇಕು. ಬುಡ ಕಡಿದ ಮರದಂತೆ ಹಂಚುಗಳ ಮೇಲೆ ಬಿದ್ದು ಮೇಲಿಂದ ಕೆಳಗೆ ಗುಡು ಗುಡು ಉರುಳುತ್ತ ಬೆಕಲ್‌ರ ಬಳಿ ಬಂದು ಬಿದ್ದು ಕೊನೆಯುಸಿರೆಳೆದ.... ಚಾಂಗಚೆನ್ ಮರೆಯಾಗಿದ್ದ. ಇದೆಲ್ಲಾ ಕೆಲವೇ ಕ್ಷಣಗಳಲ್ಲಿ ನಡೆದುಹೋಯಿತು. ಅಪ್ರತಿಭರಾದ ಬೇಕಲ್ ಮೇಜರ ಕಡೆ ಹೊರಳಿ "ನೀವು.... ಇಲ್ಲಿ" ಎಂದರು. "ಅದೆಲ್ಲಾ ಆಮೇಲೆ ಮೊದಲು ನಮ್ಮ ಬೇಟೆ ಕೈಯಿಂದ ಪಾರಾಗಬಾರದು.... ಹಿಂಭಾಗಕ್ಕೆ ಓಡಿ" ಎಂದು ಕೂಗುತ್ತ ಹೇಮಂತ ಮೊದಲು ತಾನೇ ಅತ್ತ ಧಾವಿಸಿದ....

ಹಿಂಭಾಗಕ್ಕೆ ಬಂದಿದ್ದ ಅಶೋಕ ಮೇಲಿಸಿಂದ ಬಂದ ಗುಂಡುಗಳ ಸದ್ದು ಕೇಳಿ ಏನು ಮಾಡಬೇಕು ಎಂಬ ವಿಚಾರದ ಗೊಂದಲದಲ್ಲಿ ಮುಳುಗಿ ಚಡಪಡಿಸುತ್ತಿರುವಾಗಲೇ 'ಧಪ್, ಧಪ್' ಎಂದು ಹಂಚುಗಳ ಮೇಲೆ ಬಂದ ಹೆಜ್ಜೆ ಸಪ್ಪಳಕ್ಕೆ ಮನೆಯತ್ತ ನೋಡಿದ. ಚಿಕ್ಕ ಪರ್ವತದಂತೆ ಕೆಳಗೆ ಇಳಿಯುತ್ತಿರುವ ವ್ಯಕ್ತಿ ಕಣ್ಣಿಗೆ ಕಾಣುತ್ತಲೂ ಆತನೇ 'ಚಾಂಗಚೆನ್' ಎಂದು ತಿಳಿಯಲು ಸಮಯ ಹಿಡಿಯಲಿಲ್ಲ. ರಿವಾಲ್ವರ ಗುರಿ ಅವನತ್ತ ಹಿಡಿಯುವ ಮುನ್ನವೇ ಮೇಲಿಸಿಂದ ಸಿಡಿದು ಬಂದ ಗುಂಡು ಅವನ ರಿವಾಲ್ವರ ಹಾರಿಸಿತ್ತು. ಎಂಥಾ ಗುರಿ....... ಆತ ಸುಧಾರಿಸಿಕೊಳ್ಳುವ ಮುನ್ನವೇ ಮೇಲಿಂದ ಹದ್ದಿನಂತೆ ಆತ ಅವನ ಮೇಲೆ ಹಾರಿದ್ದ. ಇಬ್ಬರೂ ಒಂದೆರಡು ಬಾರಿ ಗುದುಮುರಿಗೆ ಹಾಕಿದರು. ಅವನ ಶಕ್ತಿ ಮುಂದೆ ಅಶೋಕನ ಶಕ್ತಿ ಕೈಕೊಟ್ಟಿತು. ಆತ ಕೆಳಗಾದ, ಚಾಂಗಚೆನ್ ತನ್ನ ಕೈಮುಷ್ಟಿ ಮಾಡಿ ಒಂದು ಬಾರಿ ನೆತ್ತಿಮೇಲೆ ಗುದ್ದಿದ. ಕಣ್ಣು ಮುಂದೆ ಕತ್ತಲೆ ಕವಿತು ಅಶೋಕ ಮೂರ್ಛಿತನಾದ....... ಚಾಂಗಚೆನ್ ಮೇಲೆದ್ದು ಓಡುತ್ತಿರುವಾಗಲೇ ಹಿಂದಿನಿಂದ ಧ್ವನಿ ಬಂದಿತು.

"ಚಾಂಗಚಿನ್....ಅಲ್ಲೇ ನಿಲ್ಲು."

ಚಾಂಗಚಿನ್ ಹೊರಳಿ ನಿಂತ, ಎದುರು ಮೇಜರ ಹೇಮಂತ....

"ನೀನು....ಇಲ್ಲಿ...."

"ಹೌದು....ನಾನಂದೇ ನಿನಗೆ ಹೇಳಿದ್ದೆ....ನಾನು ನಿನ್ನ........ಪಾಲಿನ ಯಮ ಎಂದು.

"ನೀನು ಅಮೇರಿಕೆಗೆ ಹೋಗಲಿಲ್ಲವೇ?"

ಹೇಮಂತ ಮುಗುಳು ನಗೆ ನಕ್ಕ.

ನಿನ್ನನ್ನು ಯಮಪುರಿಗೆ ಕಳಿಸದೇ ನಾನು ಹೇಗೆ ಹೋಗಲು ಸಾಧ್ಯ. ಮಿತ್ರ ನನ್ನ ಮಾತು ಕೇಳು. ಶರಣಾಗತನಾಗು. ನನಗೆ ನಿನ್ನ ಬಗ್ಗೆ ಎಲ್ಲ ತಿಳಿದಿದೆ. ನಿನ್ನ ಕಾರಸ್ಥಾನದ ಅರಿವಾಗಿದೆ. ನಿನ್ನ ಉದ್ದೇಶ ಗೊತ್ತಾಗಿದೆ.

ಚಾಂಗಚಿನ್ ಸ್ತಬ್ಧನಾದ....ಬೇರೆ ದಾರಿಯೇ ಇರಲಿಲ್ಲ.

ಓಕೆ ಮೇಜರ್........ನಿನ್ನ ಮುಂದೆ ನಾನು ಶಸ್ತ್ರಾಸ್ತ್ರ ಕೆಳಗೆ ಹಾಕಿ ನಿಲ್ಲುವೆ.

ಮೇಜರ್ ಹೇಮಂತನಂಥ ಅನುಭವಿಯೂ ಅಲ್ಲಿ ಮೋಸ ಹೋದ.ಅಷ್ಟು ಚಾಂಗ್‌ಚಿನ್‌ನ ಅಭಿನಯ ಸ್ವಾಭಾವಿಕವಾಗಿತ್ತು. ಹೇಮಂತ ಅವನನ್ನು ಸಮೀಪಿಸಿದ. ರಿವಾಲ್ವರ್ ಹಿಡಿದ ಕೈ ಈಗ ಮೇಲಾಗಿತ್ತು ಅವನ ಬಳಿ ಬರುತ್ತಲೇ ಮೇಜರ ಯಮಪುರಿಗೆ ಸೇರಿಸಿದ. ಅದೇ ಸಂದರ್ಭಕ್ಕಾಗಿ ಕಾಯುತ್ತಿದ್ದ 'ಚಾಂಗಚಿನ್' ಮೇಲೆ ಹಾರಿದ. ಹೇಮಂತನ ತೆರೆದ ಬಾಯಿ ತೆರೆದಂತೇ ಇತ್ತು.ಪರ್ವತದಂಥ ಮನುಷ್ಯ ಇಷ್ಟು ಲೀಲಾಜಾಲವಾಗಿ ಮೇಲೆ ಹಾರುವದೆಂದರೆ........ಕಾಲಲ್ಲಿ ಸ್ಪ್ರಿಂಗೇನಾದರೂ ಇದೆಯೇ? ಮೇಲೆ ಹಾರಿ ಕೆಳಗೆ ಬಂದ ಆತ ತನ್ನೆರಡೂ ಕಾಲುಗಳನ್ನು ಜೋಡಿಸಿ ಒಂದೇ ಒಂದು ಪ್ರಹಾರ ಮಾಡಿದ ಹೇಮಂತನ ಎದೆಯ ಮೇಲೆ....ಆ ಪ್ರಹಾರಕ್ಕೆ ಬೇರೆ ಯಾರಾದರೂ ಆಗಿದ್ದರೆ ಕ್ಷಣಾರ್ಧದಲ್ಲಿ ರಕ್ತಕಾರಿ ಸಾಯುತ್ತಿದ್ದರೇನೋ ಹೇಮಂತನದು ವಜ್ರಶರೀರ. ದಿನನಿತ್ಯ ಯೋಗಾ ವ್ಯಾಯಾಮಗಳಿಂದ ಬಲಿಷ್ಠವಾದದ್ದು. ಅದಲ್ಲದೆ ಚಾಂಗಚಿನ್ ಮೇಲೆ ಹಾರಿದಾಗಲೇ ಮುಂದೆ ಹೀಗಾಗಬಹುದೆಂದು ಊಹಿಸಿದ್ದ ಆತ. ಅದನ್ನೆ ದುರಿಸಲು ಸಿದ್ಧನಾಗೇ ಇರುವದರಿಂದ....ಪ್ರಹಾರಕ್ಕೆ ಜೋಲಿ ಹೋಗಿ ಹಿಂದಕ್ಕೆ ಬಿದ್ದ....ಎದೆಗೆ ಬಿದ್ದ ಬಾರಿ ಏಟು. ತಲೆಯ ಹಿಂಭಾಗ ನೆಲಕ್ಕೆ ಅಪ್ಪಳಿಸಿದ ಹೊಡೆತದಿಂದಾಗಿ ಆತ ಕಂಗಾಲಾಗಿ ಕ್ಷಣಕಾಲ ಮೂರ್ಛಿತನಾದ.

ಚಾಂಗಚಿನ್‌ಗೆ ಸಮಯವಿರಲಿಲ್ಲ....ಪಾರಾಗಬೇಕಿತ್ತು ಹೀಗಾಗಿ. ಹಿಂದೆ ಮುಂದೆ ಯೋಚಿಸದೇ ಒಂದು ಬಾರಿ ಹೇಮಂತನತ್ತ ಹಾರುವ ದೃಷ್ಟಿ ಬೀರಿ

ಹಿಂದೆ ಸರಿದು ಓಡತೊಡಗಿತ. ಅವನ ಧಪ್ ಧಪ್ ಹೆಜ್ಜೆಯ ಸದ್ದು ಭೂಮಿಯನ್ನು ಕಂಪಿಸುತ್ತಿದ್ದಂತೆ ಹೇಮಂತ ಎಚ್ಚರಗೊಂಡ. ಅದೃಷ್ಟಕ್ಕೆ ರಿವಾಲ್ವರ ಕೈಯಿಂದ ಜಾರಿರಲಿಲ್ಲ... ಅವನ ಮುಖ ಕಠೋರವಾಯಿತು. ನಿಧಾನವಾಗಿ ಮೇಲೆ ಎದ್ದು ಎರಡೂ ಮೊಣಕಾಲು ನೆಲದ ಮೇಲೆ ಊರಿ ರಿವಾಲ್ವರ್ ಗುರಿ ಹಿಡಿದು ಕುದುರೆ ಎಳೆದ.

'ಢಂ....ಢಂ' ಎರಡು ಗುಂಡು ಹಾರಿದವು.

ಓಡುತ್ತಿದ್ದ 'ಚಾಂಗಚಿನ'' ಗಾಳಿಯಲ್ಲಿ ಹಾರಿ ನೆಲಕ್ಕೆ ಬಿದ್ದ....ನಂತರ ಮೇಲೆದ್ದು ಕುಂಟುತ್ತ ಓಡತೊಡಗಿದ. ಒಂದು ಗುಂಡು ಅವನ ಕಾಲಿಗೆ ಗಾಯ ಮಾಡಿತ್ತು.

'ಢಂ....ಢಂ' ಈ ಬಾರಿ ಮತ್ತೆರಡು ಗುಂಡುಗಳು ಸಿಡಿದವು.

'ಹಾಂ' ಎಂದು ಎದೆ ಹಿಡಿದುಕೊಂಡು ನೆಲಕ್ಕೆ ಕುಸಿದ ಆತ. ಒಂದು ಗುಂಡು ಬಹುಶಃ ಬೆನ್ನಿಗೆ ನಾಟಿ ಎದೆಯಿಂದ ಪಾರಾಗಿರಬೇಕು.

ಹೇಮಂತ ಮೇಲೆದ್ದು ನಿಂತ. ಬೇಕಲ್ ಸಾಹೇಬರು ತಮ್ಮ ಸಿಬ್ಬಂದಿಯೊಂದಿಗೆ ಓಡಿಬಂದರು. ಅವರೊಂದಿಗೆ ಸುಷಮಾ ನೆಲಕಚ್ಚಿದ್ದ ಅಶೋಕ ಸಹ ಎಚ್ಚತ್ತು ಮೇಲೆದ್ದ ಎಲ್ಲರೂ ಚಾಂಗಚಿನ್‌ನತ್ತ ಧಾವಿಸಿದರು.

ಆತ ಕೊನೆಯುಸಿರು ಎಳೆಯುವದರಲ್ಲಿದ್ದ.

ಹೇಮಂತನತ್ತ ನೋಡಿದ. ಕಣ್ಣುಗಳಲ್ಲಿ ದೀಪ ಬೆಳಗಿದಂತಾಯಿತು.

"ಮೇಜರ ಹೇಮಂತ........ನೀನು ನನ್ನ ಶತ್ರುವೆಂದು ಹೇಳಿಕೊಳ್ಳಲು ನನಗೆ ತುಂಬಾ ಸಂತಸವಾಗುತ್ತದೆ. ನನಗೆ ಸರಿಯಾದ ಜೋಡಿ ನೀನು....ನನಗೆ ವೀರ ಮರಣ ನೀಡಿದ ನಿನಗೆ ನಾನು ಆಭಾರಿ. ಮುಂದಿನ ಜನ್ಮದಲ್ಲಿ ಪುನಃ ಸಂಧಿಸು."

ಚಾಂಗಚಿನ್ ಕೊನೆಯುಸಿರೆಳೆದಿದ್ದ. ಹೇಮಂತ ಖಿತಗೊಂಡು ನುಡಿದ.

"ಹೀಗಾಗಬಾರದಾಗಿತ್ತು".

"ಏಕೆ? ಈತ ನಿಮ್ಮ ಶತ್ರುವಲ್ಲವೇ?" ಬೇಕಲ್ ಕೇಳಿದರು.

"ಹೌದು....ಆಗ....ಈಗಲ್ಲ".

"ಆಂ?"

"ಸಾಯುವುದಕ್ಕೆ ಮೊದಲು ಈತ ನನ್ನ ಶತ್ರು....ಈಗ ಒಬ್ಬ ವೀರ.... ಮಹಾಶಕ್ತಿಶಾಲಿ".

"ನಿಜ ಮೇಜರ........ಗುಣಕ್ಕೆ ಮತ್ಸರವಿಲ್ಲವಂತೆ. ಈ ಮಾತು ನಿಮಗೆ ಪೂರ್ಣವಾಗಿ ಒಪ್ಪುತ್ತದೆ".

"ಸರಿ.... ಒಂದು ಕೆಲಸ ಮಾಡಿ."

"ಹೇಳಿ."

"ಮುಂದಿನ ಕೆಲಸ ಸಿಬ್ಬಂದಿಗೆ ವಹಿಸಿ, ನಾವು ಮನೆ ಶೋಧಿಸೋಣ."

ನಟರಾಜನ ಮನೆಯ ಶೋಧನೆ ಆರಂಭವಾಯಿತು. ದೊಡ್ಡ ಪ್ರಮಾಣದಲ್ಲಿದ್ದ ಸ್ಫೋಟಕ ವಸ್ತುಗಳು, ರೈಫಲ್ ಮುಂತಾದ ಆಯುಧಗಳು ಹೇರಳವಾದ ಕರೆನ್ಸಿ ಅವರಿಗೆ ದೊರೆಯಿತು. ಎಲ್ಲಕ್ಕಿಂತ ಹೆಚ್ಚಾಗಿ ಒಂದು ವಸ್ತು ದೊರೆತಾಗ ಹೇಮಂತ ಸಂತಸಪಟ್ಟ. ಚಿಕ್ಕ ಪೆಟ್ಟಿಗೆಯಲ್ಲಿದ್ದ ಎರಡು ಪ್ಲಾಸ್ಟಿಕ್ ಸೀಸೆಗಳು ಪ್ರತಿಯೊಂದು ಸೀಸೆಯಲ್ಲಿ ಹತ್ತು ಹತ್ತು ಕೆಂಪು ಬಣ್ಣದ ಮೃದುವಾದ ಗುಳಿಗೆಗಳಿದ್ದವು. ಮಾರ್ಟಿನ್ ಮನೆಯಲ್ಲಿ ದೊರೆತಂಥಹವು....

ಹೇಮಂತನೊಂದಿಗೆ ಬೇಕಲ್ ಅವರು ಪುನಃ ಮನೆಗೆ ಬಂದರು. ಈ ಮಧ್ಯೆ ಎಲ್ಲಾ ವಿಷಯವನ್ನು ಅವರಿಗೆ ವಿವರವಾಗಿ ತಿಳಿಸಿದ್ದ ಹೇಮಂತ. ಮತ್ತೊಂದು ಬಾರಿ ಕಾಫಿ ಆಯಿತು. ಹೇಮಂತ ಹೊರಟು ನಿಂತ ಮಿಸೆಸ್ ಗೋಪಾಲ ಅಸಮಾಧಾನ ವ್ಯಕ್ತಪಡಿಸಿದರು.

"ಇಷ್ಟೊಂದು ಅವಸರವೇಕೆ? ಬೆಳಿಗ್ಗೆ ಹೋದರೆ ಆಗದೆ?"

"ಇಲ್ಲ ತಾಯಿ ಇನ್ನೊಂದು ದಿವಸ ಖಂಡಿತ ಬರುತ್ತೇವೆ."

ಬೇಕಲ್ ಅವರು ಮುಂದೆ ಬಂದು ಎಲ್ಲರ ಕೈ ಕುಲುಕಿದರು.

"ಮೇಜರ........ನನಗೆ ಪುನರ್ಜನ್ಮ ನೀಡಿದೆ. ನಿಮಗೆ ಕೃತಜ್ಞತೆ ಹೇಗೆ ಹೇಳಲಿ?"

ಶ್ರೀಮತಿ ಬೇಕಲ್ ಗಾಬರಿಯಾಗಿ ಮುಖ ನೋಡಿದರು.

"ಬೇಕಲ್‌ರೆ, ಇವೆಲ್ಲ ನಮ್ಮ ಉದ್ಯೋಗದಲ್ಲಿ ಮಾಮೂಲು...."

"ಆದರೂ ಇಂದು ಸಮಯಕ್ಕೆ ಸರಿಯಾಗಿ ನೀವು ಎಚ್ಚರಿಸದಿದ್ದರೆ ನಾನೂ ನನ್ನ ಜೊತೆ ಹತ್ತಿಪ್ಪತ್ತು ಪೊಲೀಸರೂ ಸತ್ತು ಹೋಗುತ್ತಿದ್ದವು."

"ಅದನ್ನೆಲ್ಲ ಮರೆತುಬಿಡಿ. ಮುಂದಿನದನ್ನು ನೋಡಿ...."

"ಶ್ರೀಮತಿ ಬೇಕಲ್ ಗೇಟಿನವರೆಗೂ ಕಳಿಸಲು ಬಂದರು. ಅವರ ಕಣ್ಣುಗಳು ಹೇಮಂತನ ಗುಂಪಿಗೆ ತಮ್ಮ ಕೃತಜ್ಞತೆ ತಿಳಿಸಿದವು. ಎಲ್ಲರಿಗೂ ವಂದಿಸಿ ಮೇಜರ ಕಾರು ಏರಿದ.

ಪಯಣ ಮುಂದುವರೆಯಿತು.

ಮೂವರೂ ಬೃಂದಾವನ ಲಾಜು ಸೇರಿದಾಗ ಸೂರ್ಯ ಉದಯಿಸಿದ್ದ. ಒಂದು ಗಂಟೆ ವಿಶ್ರಾಂತಿ ಪಡೆದ ಮೂವರು ಮತ್ತೆ ಸಿದ್ಧರಾದರು. ಒಂದು ಬಾರಿ ಭಂಡಾರಿ ಅವರ ಮನೆ ಸುತ್ತುಹಾಕಿದರಾಯ್ತೆಂದುಕೊಂಡು ಮೇಕಪ್

ಮಾಡಿಕೊಂಡು ಮಾರು ವೇಷದಲ್ಲಿ ಹೊರ ನಡೆದರು. ಅವರ ಊಹೆ ನಿಜವಾಗಿತ್ತು. ಭಂಡಾರಿ ಮನೆ ಬೀಗ ತೆರೆದಿತ್ತು. ಎರಡು ದಿನಗಳ ನಂತರ ಬರಬೇಕಾಗಿದ್ದ ಭಂಡಾರಿ ಒಂದು ದಿನ ಮೊದಲು ಬಂದಿದ್ದರು. ಮೇಜರ ಕೈಗಡಿಯಾರ ನೋಡಿಕೊಂಡ, ಒಂಭತ್ತೂವರೆ. ಅಂಚೆಯವ ಬರುವದು ಸುಮಾರು ಹನ್ನೊಂದು ಗಂಟೆಯ ವೇಳೆಗೆ....

ಒಂದುಕ್ಷಣ ಯೋಚಿಸಿದ ಹೇಮಂತ ಅಂಚೆ ಕಚೇರಿ ಕಡೆ ನಡೆದ.

ಅವನ ಹಿಂದೆ ಅಶೋಕ........ಅಶೋಕನ ಹಿಂದೆ ಸುಷಮಾ ಬೆಂಗಾವಲಾಗಿದ್ದರು.

ಯಾವ ದುರ್ಘಟನೆಗಳೂ ನಡೆಯಲಿಲ್ಲ....

ಹೆಚ್ಚು ಕಡಿಮೆ ಅರ್ಧಗಂಟೆ ಹೇಮಂತ ಅಂಚೆ ಕಚೇರಿಯಲ್ಲಿ ಇದ್ದು ಹೊರಬಂದರೆ, ಹತ್ತು ನಿಮಿಷ ಬಿಟ್ಟು ಅಂಚೆಯವ.

ಮುಂದಿದ್ದ ಹೇಮಂತ ನಿಲ್ಲುವಂತೆ ಸೂಚನೆ ನೀಡಿ ತನ್ನ ಕಾರನ್ನು ಚಿಕ್ಕದಾದ ಆದರೆ ಸುಂದರವಾದ ಹೊಟೇಲೊಂದರ ಮುಂದೆ ನಿಲ್ಲಿಸಿದ. ಚಹ ಕುಡಿಯುತ್ತ ಮೂವರೂ ಆಪ್ತಾಲೋಚನೆ ನಡೆಸಿದರು.

"ಅಂಚೆಯವನನ್ನು ನೀವೇ ಹೊರಹಾಕಿರಬೇಕು............" ಸುಷಮಾ ಛೇಡಿಸಿದಳು.

"ಹೌದು....ಹತ್ತು ರೂಪಾಯಿ ಖರ್ಚು ಮಾಡಿದೆ. ಇನ್ನು ಒಂದು ವಿಷಯ....ಏನಿರಬಹುದು ಎಂದು ಊಹಿಸುತ್ತೀರಾ?"

ತನ್ನ ಸಂಗಡಿಗರಿಗೆ ಚಾಲೇಂಜ ನೀಡಿ ಕೇಳಿದ ಹೇಮಂತ.

"ನನಗೆ ಗೊತ್ತು...." ಸರಳವಾಗಿ ಹೇಳಿದ ಅಶೋಕ.

"ನಿಮಗಿಂತ ಮೊದಲೇ ಅಂಚೆಯವನಿಗೆ ಯಾರೋ ಭಂಡಾರಿ ಬಗ್ಗೆ ತಿಳಿಸಿದ್ದಾರೆ."

"ಕರೆಕ್ಟ....ಅಶೋಕ. ನಿನ್ನ ಬಗ್ಗೆ ನನಗೆ ಹೆಮ್ಮೆ ಎನಿಸುತ್ತದೆ."

"ಅಂದರೆ...." ಸುಷಮಾ ಹೇಳಲಾರಂಭಿಸಿದಳು. "ಭಂಡಾರಿ ಬಂದೇ ಇಲ್ಲ ಅವನ ಬದಲು ಬೇರೆ ಯಾರೋ ಬಂದು ಮನೆಸೇರಿದ್ದಾರೆ ಅಂದಂತಾಯ್ತು."

"ಹೌದು............ಇದೆಲ್ಲಾ ಆ ರಜಿಸ್ಟರ್ಡ ಪಾರ್ಸಲ್ ಹೊಡೆಯುವ ದಕ್ಕೋಸ್ಕರ."

ಒಂದು ನಿಮಿಷ ಮೂವರೂ ಮೌನ ತಾಳಿದರು.

"ಮುಂದಿನ ಕಾರ್ಯಕ್ರಮವೇನು?"

ಅಶೋಕನ ಪ್ರಶ್ನೆಗೆ ಮೇಜರ ಉತ್ತರಿಸತೊಡಗಿದ.

"ಭಂಡಾರಿ ಮನೆಯಲ್ಲಿದ್ದವ, ಭಂಡಾರಿ ಅಲ್ಲ. ರಜಿಸ್ಟರ ಪೋಸ್ಟ ಕದಿಯಲು ಬಂದವ ಆತ ಶತ್ರುಗಳ ಹಸ್ತಕ ಎಂಬುದು ಸತ್ಯ. ಅದಕ್ಕಾಗಿ ನಾವು ಅವನನ್ನು ಬಂಧಿಸುವ ವಿಚಾರ ಬಿಟ್ಟು ಅವನನ್ನು ಹಿಂಬಾಲಿಸೋಣ. ಇದರಿಂದಾಗಿ ಅವನ ಹಿಂದಿರುವವರ ಬಗ್ಗೆ ಅವರ ತಾಣದ ಬಗ್ಗೆ ತಿಳಿಯಬಹುದು."

"ಹಾಗಾದರೆ ನಾವು ಕೇವಲ ಮೂಕ ಪ್ರೇಕ್ಷಕರು ತಾನೇ?"

"ಅಲ್ಲ....ಚತುರ ಹಿಂಬಾಲಕರು. ನಾವು ಅವನ ಹಿಂದಿದ್ದೇವೆ ಎಂಬ ಬಗ್ಗೆ ಎಳ್ಳಷ್ಟೂ ಸಂಶಯ ಬರದಂತೆ ವರ್ತಿಸಬೇಕು. ಅವರಿಗೆ ಕೂದಲೆಳೆಯಷ್ಟು ಸಂಶಯ ಬಂದರೂ ನಮ್ಮ ಪ್ರಯತ್ನವೆಲ್ಲ ನೀರಲ್ಲಿ ಹೋಮ ಮಾಡಿದಂತಾಗುತ್ತದೆ....ಹೂಂ ಇನ್ನು ಹೊರಡೋಣ...."

ಬಿಲ್ಲು ಕೊಟ್ಟು ಮೂವರೂ ಮೇಲೆದ್ದರು. ಮುಂದಿದ್ದ ಹೇಮಂತ ಬಾಗಿಲಿಗೆ ಬರುತ್ತಿದ್ದಂತೆ ಸರಕ್ಕನೆ ಹಿಂದೆ ಸರಿದ. ಅಶೋಕ ಮತ್ತು ಸುಷಮಾ ಮಿಂಚಿನಂತೆ ಮರೆಯಾದರು. ಅವರ ಜೇಬಿನಲ್ಲಿದ್ದ ರಿವಾಲ್ವರ ಹೊರಬಂದವು.

"ಅದರ ಅವಶ್ಯಕತೆ ಇಲ್ಲ....ನಿಧಾನವಾಗಿ ತಲೆ ಎತ್ತಿ ಪೆಟ್ರೋಲ ಬಂಕ್ ಕಡೆ ನೋಡಿ....ಹುಷಾರ್....ನೀವು ಅವರಿಗೆ ಕಾಣಿಸಬಾರದು."

ಮೂವರೂ ಮೆಲ್ಲನೆ ತಲೆ ಎತ್ತಿ ಕಿಟಕಿಯಿಂದ ಹೊರಗೆ ಇಣುಕಿದರು.

"ಎದುರಿಗಿನ ಪೆಟ್ರೋಲ ಬಂಕ್ ಬಳಿ ಕಾರೊಂದು ನಿಂತಿತ್ತು.

ಮುಂದಿನ ಸೀಟಿನಲ್ಲಿ ಕುಳಿತಿದ್ದ........ವ್ಯಕ್ತಿಯನ್ನು ಕಂಡು ಮೂವರೂ ಬೆಚ್ಚಿದರು.

"ಮಾಜಿ ಸಚಿವ ಸಾಂಬಮೂರ್ತಿಗಳು."

ಅಶೋಕ ಉದ್ಗರಿಸಿದ....

"ಅವರ ಜೊತೆ ಸದಾಶಿವ ಸಹ...." ಮೇಜರ ಪೂರ್ತಿ ಮಾಡಿದ.

"ಇದು ಹೇಗೆ ಸಾಧ್ಯ? ಅವರಿಬ್ಬರೂ ಹಾವು ಮುಂಗಸಿಯಂತಿದ್ದರಲ್ಲ."

ಮುಗುಳು ನಗೆ ನಗುತ್ತ ಸುಷಮಾ ಕೇಳಿದಾಗ ಹೇಮಂತ ರಹಸ್ಯಮಯ ಧ್ವನಿಯಲ್ಲಿ....

"ಹಾವು ಮುಂಗಸಿ ಒಂದೆಡೆ ಸೇರಿವೆ ಎಂದರೆ ಹಾವಾಡಿಗ ಸಹ ಇಲ್ಲೇ ಇರಬೇಕಲ್ಲವೇ?" ಎಂದ.

ಸದಾಶಿವ ಹಣಕೊಟ್ಟು ಚಾಲಕ ಸ್ಥಾನದಲ್ಲಿ ಕುಳಿತ. ಹಿಂದೆ ಯಾರು ಕುಳಿತಿದ್ದರೋ ತಿಳಿಯದು.

"ಅಶೋಕ....ನೀನು ಹಿಂಬಾಲಿಸು. ಸುಷಮಾ ನಿನ್ನ ಬೆಂಗಾವಲಿಗೆ ಇರುತ್ತಾಳೆ."

"ಮತ್ತೆ ನೀವು?"

"ನಾನು ಭಂಡಾರಿ ಮನೆ ಸೇರುತ್ತೇನೆ."

"ಕೂಡುವದೆಲ್ಲಿ?"

"ನೋಡುತ್ತಿರು ನಾವೆಲ್ಲಿ ಕೂಡುತ್ತೇವೆಂದು....ನಿನಗೇ ಅಚ್ಚರಿಯಾಗುತ್ತದೆ. ಹಾಂ....ಒಂದು ಮಾತು ಟ್ರಾನ್ಸ್‌ಮೀಟರ್ ವಾಚು ಸಿದ್ಧವಾಗಿರಲಿ."

ಮೊದಲು ಅಶೋಕ ಹೊರಟ. ಅವನ ಹಿಂದೆ ಸುಷಮಾ.

ಒಂದರ ಹಿಂದೆ ಒಂದರಂತೆ ಮೂರು ವಾಹನಗಳು ಹೊಟೆಲ್ ಮುಂದೆ ಹಾಯ್ದು ಹೋದ ಮೇಲೆ ಸಿಳ್ಳುಹಾಕುತ್ತ ಹೇಮಂತ ತನ್ನ ಕಾರಿನತ್ತ ನಡೆದ. ಭಂಡಾರಿ ಮನೆಯಿಂದ ತುಸು ದೂರದಲ್ಲಿ ಕಾರು ನಿಲ್ಲಿಸಿದ. ಭಂಡಾರಿ ಮನೆ ಬಾಗಿಲು ಮುಚ್ಚಿತ್ತು. ಬೀಗ ಹಾಕಿರಲಿಲ್ಲ. ಮನೆಯೆದುರು ಗೋಡೆಗೆ ಹೊಂದಿ ಮೋಟರ ಬೈಕ್‌ವೊಂದು ಒರಗಿಕೊಂಡಿತ್ತು. ಹತ್ತು ನಿಮಿಷಗಳು ಕಳೆದವು. ಒಂದೊಂದೇ ಮನೆಗೆ ಅಂಚೆ ಮುಟ್ಟಿಸುತ್ತ ಬಂದ ಅಂಚೆಯವ ಭಂಡಾರಿ ಮನೆ ಬಾಗಿಲು ತಟ್ಟಿದ. ಕೂಡಲೇ ಬಾಗಿಲು ತೆರೆಯಿತು. ಹೇಮಂತ ಅವನನ್ನು ಚೆನ್ನಾಗಿ ದಿಟ್ಟಿಸಿದ. ತುಟಿಯಂಚಿನಲ್ಲಿ ನಗೆ ಮೂಡಿತು. ಆತ ಮಾಜಿ ಸಚಿವ ಸಾಂಬಮೂರ್ತಿಯವರ ಹೊಸ ಪಿ.ಎ. ಎಂದು ಗೊತ್ತಾಯಿತವನಿಗೆ....ಸಹಿ ಪಡೆದು ಚೀಲದಲ್ಲಿದ್ದ ಚಿಕ್ಕ ಪ್ಯಾಕೆಟ್ ಅವನ ಕೈಗೆ ನೀಡಿದ ಅಂಚೆಯವ. ಮುಂದಿನ ಮನೆಗೆ ನಡೆದ. ಎರಡು ನಿಮಿಷ ಕಳೆಯುವಷ್ಟರಲ್ಲಿ ಭಂಡಾರಿ ಹೊರ ಬಂದು ಬೀಗ ಹಾಕಿ ಬೈಕ್ ಇದ್ದಲ್ಲಿಗೆ ಬಂದ ಹೇಮಂತನ ತರ್ಕ ನಿಜವಾಯಿತು. ಬೈಕ್ ಆತನದೇ, ಬೈಕ್ ಓಡಿಸಿದ ಆತ ಹೇಮಂತ ಅವನನ್ನು ಹಿಂಬಾಲಿಸಿದ. ನಿಶ್ಚಿತ ಅಂತರ ಮಧ್ಯೆ ಇಟ್ಟು ಬೈಕ್ ಚಾಲಕನಿಗೆ ಕಿಂಚಿತ್ತೂ ಸಂಶಯ ಬಾರದಂತೆ ಹಿಂಬಾಲಿಸತೊಡಗಿದ ಮೇಜರ.

ಹತ್ತು ನಿಮಿಷ ಇದೇ ರೀತಿ ನಡೆಯಿತು. ಕಣ್ಣುಮುಚ್ಚಾಲೆ ಆಟ. ಕೊನೆಗೆ ಹೊಸ ಬಡಾವಣೆಯ ಹಳೆಯ ಮನೆಯೊಂದರ ಮುಂದೆ ಬಂದುನಿಂತಿತು ಬೈಕ್ ಮೇಜರ ಕಾರು ನಿಲ್ಲಿಸಿ ಕೆಳಗಿಳಿದ. ಮೆಲ್ಲನಡಿಯಿಡುತ್ತ ಮನೆಯೆದುರು ಬಂದ. ಸುತ್ತಲೂ ನಿರೀಕ್ಷಿಸಿದ. ಅಲ್ಲೊಂದು ಇಲ್ಲೊಂದು ಮನೆಗಳು, ಕೂಗಿದರೂ ಕೇಳದಷ್ಟು ದೂರ. ಇದೊಂದೇ ಮಹಡಿಯಿದ್ದ ಬಂಗಲೆ. ಅತ್ತಿತ್ತ ನೋಡುತ್ತ ಗೇಟು ನಿಧಾನವಾಗಿ ನೂಕಿದ ಕುಂಯೀ. ಯೀ. ಯೀ ಕರ್ಕಶ ಸ್ವರ ಹೊರಟಿತು... ಅದೊಂದು ಆಗಬಾರದ. ಘಟನೆ ಟನ್....ಟನ್....ಟನ್.... ಟನ್....ಎಂದು ಹಾರುತ್ತ ಮೂರು ನಾಲ್ಕು ಹಾರಿಕೆಗೆ ಬಂಗಲೆ ಸೇರಿದ ಕಿಟಕಿ ಕೆಳಗೆ ಬಂದ....ಗೇಟು ಮುಟ್ಟುವದು ಆಗಲೇ ಇಲ್ಲ...ನಿಂತಲ್ಲಿಂದ ನೇರವಾಗಿ

ಮೇಲೆ ಮಹಡಿಯ ಕಿಟಕಿ ತೆರೆದ ಸಪ್ಪಳ. ಒಂದೆರಡು ಧ್ವನಿಗಳು ಕೇಳಿದವು.

"ನೀನು ಬರುವಾಗ ಗೇಟು ಬಂದು ಮಾಡಿರಲಿಲ್ಲವೇ?"

"ಮಾಡಿದ್ದೇನಲ್ಲ?"

"ಸ್ವಲ್ಪ ನೋಡು ತೆರೆದಿದೆ....ನಿನ್ನ ಹಿಂದೆ ಯಾರೋ ಬಂದಿರಬೇಕು".

"ಇಲ್ಲ....ಇಲ್ಲ".

"ಸಾಧ್ಯವೇ ಇಲ್ಲ....ಇದೇ ಸ್ವಲ್ಪ ಮುಂಚೆ ಗೇಟು ತೆರೆದ ಸಪ್ಪಳ ಇಬ್ಬರಿಗೂ ಕೇಳಿತು".

"ನನಗೇಕೋ ಸಂಶಯ ಬರುತ್ತಿದೆ".

ಮುಂದೆ ಮೌನ.

ಹೇಮಂತ ನುಸುಳುತ್ತ ಬಾಗಿಲಿಗೆ ಬಂದ. ಒಳಗಿನಿಂದ ಬೀಗ ಹಾಕಿತ್ತು. ಇಂಟರಲಾಕ್ ಜೇಬಿಗೆ ಕೈ ಹಾಕಿ ತಂತಿ ಹೊರತೆಗೆದ. ಒಂದೆರಡು ಸುತ್ತು, ಕೊಕ್ಕೆ ಮಾಡಿ ಛಿದ್ರದಲ್ಲಿ ತೋರಿಸಿದ. ಮಹಡಿಯಲ್ಲಿ ಏನೋ ಗಲಾಟೆ. ಮೇಜು, ಸ್ಟೂಲ್, ಕುರ್ಚಿ ಸರಿದಾಡಿದಂತೆ "ಫಿಶ್" ಎಂದು ಏನೋ ಬಿದ್ದು ಒಡೆದ ಸದ್ದು. ಬಹುಶಃ ಅದು ಹೂದಾನಿ ಇರಬೇಕು........ಹಾಗಾದರೆ ಮೇಲೆ ಮಹಡಿಯಲ್ಲಿ ಗುದ್ದಾಟ ನಡೆದಿದೆ. ಅನಾಹುತ ನಡೆಯುವ ಮುನ್ಸೂಚನೆ.... ಹೇಮಂತ ಏಕಾಗ್ರತೆಯಿಂದ ತಂತಿ ಆಡಿಸಿದ. "ಕ್ಲಿಕ್........" ಸದ್ದಿನೊಂದಿಗೆ ಕೊಂಡಿ ಬಾಯಿ ಬಿಟ್ಟಿತು. ದೂಡಿದ ಬಾಗಿಲು ತೆರೆದುಕೊಂಡಿತು. ಒಳಗೆ ನುಗ್ಗಿದ. ಡ್ರಾಯಿಂಗ ರೂಮು ದಾಟಿ ಬಂದರೆ ದೊಡ್ಡದಾದ ಹಾಲ್. ಅಲ್ಲೇ ಪಕ್ಕದಲ್ಲಿ ಮೇಲೆ ಹೋಗಲು ಮೆಟ್ಟಿಲು. ಜೇಬಿನಿಂದ ರಿವಾಲ್ವರ ಹೊರತೆಗೆದು ಕೈಗೆ ತೆಗೆದುಕೊಂಡು ಮೆಟ್ಟಿಲು ಏರಿದ. ಮೇಲೊಂದು ಹಾಲ್........ಅಲ್ಲಿದ್ದ ಕುರ್ಚಿ ಮೇಜು ಬುಡಮೇಲಾಗಿದ್ದವು. ಹೂದಾನಿ ಬಿದ್ದು ಒಡೆದಿತ್ತು.... ಪಕ್ಕದಲ್ಲೇ....ಅಲ್ಲೇ ಬಿದ್ದಿತ್ತೊಂದು ದೇಹ. ಹೇಮಂತ ಅತ್ತ ಧಾವಿಸಿದ. ಆತ ಭಾವಿಸಿದಂತೆ ಅನಾಹುತ ನಡೆದೇ ಬಿಟ್ಟಿತ್ತು.ಸಾಂಬಮೂರ್ತಿಗಳ ಹೊಸ ಪಿ.ಎ. ಕೆಲವೇ ನಿಮಿಷಗಳ ಹಿಂದೆ ಭಂಡಾರಿ ಹೆಸರಿನಿಂದ ರಜಿಸ್ಟರ್ಡ ಪಾರ್ಸಲ್ ತಂದವ, ಈಗ ಜೀವಕಳೆದುಕೊಂಡು ಬಿದ್ದಿದ್ದ. ಆತ ಯಾರಿಗಾಗಿ ಈ ಕೆಲಸ ಮಾಡಿದ್ದನೋ ಅವರೆ ಆತನಿಗೆ ಯಮನಾಗಿದ್ದರು. ನೈಲಾನ್ ದಾರದಿಂದ ಕುತ್ತಿಗೆಗೆ ಉರುಲು ಹಾಕಿ ಜೀವ ಕಳೆದಿದ್ದರು. ನಾಲಿಗೆ ಹೊರಬಂದು ಅಲ್ಲಲ್ಲಿ ಹಲ್ಲಿನ ಗಾಯಗಳಿಂದಾಗಿ ರಕ್ತ ಒಸರುತ್ತಿತ್ತು. ಕಣ್ಣು ಗುಡ್ಡೆಗಳು ಹೊರ ಬಂದಿದ್ದವು. ಭಯಾನಕವಾದ ಮುಖ....

ಹೇಮಂತ ಸುತ್ತಲೂ ಕಣ್ಣಾಡಿಸಿದ. ರಜಿಸ್ಟರ ಪಾರ್ಸಲ್ ಕಾಣಲಿಲ್ಲ.

ಅದು ಕೊಲೆಪಾತಕನ ಕಡೆ ಇರಬೇಕು.

ಆದೆ....ಅವನೆಲ್ಲಿ? ಸುತ್ತಲೂ ಕಣ್ಣಾಡಿಸಿದ. ಯಾರ ಸುಳಿವೂ ಇಲ್ಲ. ಹಾಲ್‌ನಿಂದ ಹೊರಬಂದ. ಅದೊಂದು ಬಾಲ್ಕನಿ....ಅಲ್ಲಿಂದ ಕೆಳಗೆ ಹೋಗಲು ಮೆಟ್ಟಿಲುಗಳು....ಓಹ್....ಎಂಬ ಉದ್ಗಾರ ಹೊರಟಿತು. ಮೇಜರನ ಬಾಯಿ ಯಿಂದ, ಹೊರಗಡೆಯಿಂದಲೂ ಮಹಡಿಗೆ ಬರಲು ಮೆಟ್ಟಿಲುಗಳು ಇವೆ ಎಂಬ ಕಲ್ಪನೆಯೇ ಅವನಿಗೆ ಬಂದಿರಲಿಲ್ಲ.

"ಪಟ್....ಪಟ್ ಟ್‌ಟ್" ಮೋಟಾರಬೈಕ್ ಸದ್ದು.

"ಓಹ್ ಗಾಡ್" ಎನ್ನುತ್ತ ಓಡಿ ಕಿಟಕಿ ಬಳಿಬಂದ.

ಸ್ವಲ್ಪ ಮುಂಚೆ ಹೊರಗಿದ್ದ ಮೋಟಾರ ಬೈಕ್ ಏರಿದ ಕೊಲೆಗಾರ ದೂರ ಹೋಗುತ್ತಿರುವದು ಕಾಣಿಸಿತು. ಕೈ ಕೈ ಹಿಸುಕಿಕೊಂಡ ಹೇಮಂತ. ಆತ ಕೆಳಗಿಳಿದು ಬಂದು ಕಾರಿನಿಂದ ಅವನನ್ನು ಹಿಂಬಾಲಿಸುವದು ಸಾಧ್ಯವೇ ಇರಲಿಲ್ಲ. ಅಪರಾಧಿ ಅವನ ಮೀಸೆಯ ಕೆಳಗಿನಿಂದಲೇ ನುಸುಳಿ ಪಾರಾಗಿದ್ದ. ಮತ್ತೊಂದು ಬಾರಿ ಮನೆಯನ್ನೆಲ್ಲ ಜಾಲಾಡಿಸಿದ. ಸುಳಿವು ನೀಡುವಂಥ ಯಾವದೇ ವಸ್ತುಗಳು ಕಂಡುಬರಲಿಲ್ಲ. ಹಾಗೇ ಕೆಳಗೆ ಬಂದ.

ಕಾರು ಸುಸ್ಥಿತಿಯಲ್ಲಿತ್ತು. ಆತ ಹೋಗುವ ಮುನ್ನ ಕಾರಿಗೆ ಯಾವ ಅಪಾಯವನ್ನೂ ಮಾಡಿರಲಿಲ್ಲ....ಎಲ್ಲಿಗೆ ಹೊರಡುವದು? ಎಂದು ಚಿಂತಿಸುತ್ತಿ ರುವಾಗಲೇ ಅಶೋಕನ ನೆನಪಾಯಿತು. ವಾಚಿನ ತಿರುಪನ್ನು ತಿರುವಿ ಹೊರ ಗೆಳೆದ, ಜಿನುಗಾದ ತಂತಿಯೊಂದಿಗೆ ಹೊರಬಂದಿತು. ಅದನ್ನು ಬಾಯಿ ಬಳಿ ತಂದು ಮಾತನಾಡಲಾರಂಭಿಸಿದ. ಅವನ ದೃಷ್ಟಿ ವಾಚಿನ ಮಧ್ಯ ಭಾಗದಲ್ಲಿದ್ದ ಚಿಕ್ಕ ಕೆಂಪು ದೀಪದ ಮೇಲಿತ್ತು.

"ಹಲೋ ಜೆಡ್....ಹಲೋ ಜೆಡ್...ಎಕ್ಸ ಕಾಲಿಂಗ...ಎಕ್ಸ ಕಾಲಿಂಗ" ನಾಲ್ಕೈದುಬಾರಿ ಇದನ್ನೇ ಪುನರುಚ್ಚರಿಸುತ್ತಿರುವಂತೆ ಕೆಂಪುದೀಪ ಆರಿ ಹಸಿರು ದೀಪ ಮಿನುಗಲಾರಂಭಿಸಿತು. ಅದರೊಂದಿಗೆ ಅಶೋಕನ ಧ್ವನಿ.

"ಹಲೋ ಎಕ್ಸ...ಹಲೋ ಎಕ್ಸ...ಜೆಡ್ ರಿಸಿವಿಂಗ...ಜೆಡ್ ರಿಸಿವಿಂಗ".

"ಅಶೋಕ.......ಇಲ್ಲಿ ಹೊಸ ಪಿ.ಎ.ನ ಕೊಲೆಯಾಗಿದೆ. ರಜಿಸ್ಟರ ಪಾರ್ಸಲ್ ಜೊತೆ ಅಪರಾಧಿ ಪಾರಾಗಿದ್ದಾನೆ".

"ಓಹ್" ಆತ ಉದ್ಗರಿಸಿದ.

"ನೀನೀಗ ಎಲ್ಲಿರುವೆ?"

"ತಿಳಿಯದು. ಭವ್ಯವಾದ ಬಂಗಲೆಯಿಂದ ತುಸು ದೂರದಲ್ಲಿ ನಾನಿದ್ದೇನೆ. 'ಹಾಂ' ವಿಜಯಾ ಚಿತ್ರಮಂದಿರದಿಂದ ನೇರವಾಗಿ ಬಂದರೆ ಒಂದು ಸರ್ಕಲ್

ಸಿಗುತ್ತದೆ. ಅಲ್ಲಿಂದ ಎಡಕ್ಕೆ ತಿರುಗಿ ಮೇಲೆ ಬಂದರೆ ಕೊನೆಭಾಗದಲ್ಲಿದೆ".

"ಸರಿ. ನಾನಲ್ಲಿಗೆ ಬರುತ್ತಿದ್ದೇನೆ....ಸುಷಮಾ ಎಲ್ಲಿ?"

"ನನಗಿನ್ನೂ ಅವಳು ಕಂಡಿಲ್ಲ....ಬಹುಶಃ ತುಸು ದೂರದಲ್ಲಿರಬೇಕು".

"ಆಯ್ತು. ಇಲ್ಲಿಂದ ಫರಾರಿಯಾದ ಆಸಾಮಿ ಜಾವಾ ಮೋಟಾರ ಬೈಕ್ ಮೇಲಿದ್ದಾನೆ. ನೀಲಿ ಸೂಟು ಧರಿಸಿದ್ದಾನೆ. ನನಗನಿಸುವಂತೆ ಆತ ಅಲ್ಲಿಗೇ ಬರಬಹುದು, ಎಚ್ಚರವಾಗಿರು".

"ಅಂದರೆ....ಅವನನ್ನು ವಿಚಾರಿಸಿಕೊಳ್ಳಲೇ?"

"ಬೇಡ....ಆತನ ತಂಟೆಗೆ ಹೋಗಬೇಡ".

"ಸರಿ....".

ಹಸಿರು ದೀಪ ಆರಿತು. ಮೇಜರ ತಿರುಪನ್ನು ಪುನಃ ನಾಚಿಗೆ ಸೇರಿಸಿದ ಕೆಂಪುದೀಪ ಮಾಯವಾಯಿತು.ಹೇಮಂತ ಕಾರು ಸ್ಟಾರ್ಟಮಾಡಿದ.ಹಲವಾರು ಬಾರಿ ಓಡಾಡಿದ ಜಾಗೆಯಾದುದರಿಂದ ವಿಜಯ ಚಿತ್ರಮಂದಿರ ಯಾವ ಕಡೆ ಇದೆ ಎಂದವನಿಗೆ ತಿಳಿದಿತ್ತು.

ವಿಜಯಾ ಚಿತ್ರಮಂದಿರದ ಮುಂದೆ ಹಾಯ್ದು ಸರ್ಕಲ್‌ಗೆ ಬರುತ್ತಿರುವಂತೆ ಸುಷಮಾ ಅವನ ದೃಷ್ಟಿಗೆ ಬಿದ್ದಳು. ತನ್ನ ಹಿಂದೆ ಬರುವಂತೆ ಆತ ಸೂಚಿಸಿ ಮುಂದೆ ನಡೆದ. ಎಡಕ್ಕೆ ತಿರುಗಿ ನೇರವಾಗಿ ಮೇಲೆ ನಡೆದ. ರಸ್ತೆ ಕೊನೆ ತುಸು ದೂರವಿರುವಾಗಲೇ ಅಶೋಕ ಅವನತ್ತ ಬರುವದು ಕಂಡಿತು. ಕಾರಿನ ವೇಗ ಕಡಿಮೆ ಮಾಡಿ ರಸ್ತೆ ಪಕ್ಕಕ್ಕೆ ನಿಲ್ಲಿಸಿದ. ಹಿಂದೆ ಬರುತ್ತಿದ್ದ ಸುಷಮಾ ಸಹ ತನ್ನ ಕಾರು ನಿಲ್ಲಿಸಿ ಕೆಳಗಿಳಿದು ಬರುವಷ್ಟರಲ್ಲಿ ಅಶೋಕ ಅವನ ಬಳಿ ಬಂದಿದ್ದ.

"ಎರಡು ನಿಮಿಷದ ಹಿಂದೆ ನೀಲೀಸೂಟು ಧರಿಸಿದ ಬೈಕ್‌ವಾಲಾ ಬಂದ".

"ಎಲ್ಲಿದ್ದಾನೆ?"

"ನಾನು ಹೇಳಿದ ಬಂಗಲೆ ಒಳಗೆ".

ಸುಷಮಾಳಿಗೆ ಯಾವ ವಿಷಯವೂ ತಿಳಿದಿರಲಿಲ್ಲ. ಮತ್ತೊಮ್ಮೆ ಎಲ್ಲಾ ಪುನಃ ಪಠಣ ಮಾಡಿದ ಹೇಮಂತ. ಮುಂದೇನು ಮಾಡಬೇಕೆಂಬ ಬಗ್ಗೆ ಅವರು ಮಂತ್ರಾಲೋಚನೆ ನಡೆಸಿದರು. ಕೊನೆಗೆ ಮೇಜರನೇ ತೀರ್ಮಾನ ನೀಡಿದ.

"ನನಗೆನಿಸುವ ಮಟ್ಟಿಗೆ ಇದು ಅಪರಾಧಿಗಳ ಕೇಂದ್ರಸ್ಥಾನ. ಇಲ್ಲಿಯೇ ಅವರ ಬಾಸ್ ಇರಬೇಕು ಅನಿಸುತ್ತಿದೆ....ಬಹುಶಃ ಅನುಸೂಯಾ ಹಾಗೂ ಮಗು ಸಹ ಇಲ್ಲೇ ಇರಬಹುದು. ಇದು ನನ್ನ ಊಹೆ ಮಾತ್ರ. ಅದಕ್ಕಾಗಿ ನಾವು ಈಗ ಸ್ವಲ್ಪ ಮಟ್ಟಿಗೆ ರಿಸ್ಕ ತೆಗೆದುಕೊಳ್ಳಬೇಕು. ಒಂದೇ ಬಾರಿ ನಾವು

ಮೂವರೂ ಒಂದೇ ದಿಕ್ಕಿನಿಂದ ಆಕ್ರಮಣ ಮಾಡುವ ಬದಲು ಮೂರು ಕಡೆಯಿಂದ ದಾಳಿ ಮಾಡೋಣ. ಅಂದ ಹಾಗೆ ಬುಲೆಟ್ ಪ್ರೂಫ್ ಜಾಕೆಟ್ ಧರಿಸಿದ್ದೀರಲ್ಲವೇ"....

"ಹಾಂ...." ಸುಷಮಾ ಉತ್ತರಿಸಿದಳು.

"ಗುಡ್....ನಾನು ಮುಂಭಾಗದಿಂದ....ಅಶೋಕ ನೀನು ಹಿಂದಿನಿಂದ ಸುಷಮಾ ನೀನು ಪಕ್ಕದಿಂದ....ಸರಿ ತಾನೇ".

ಇಬ್ಬರೂ ಗೋಣು ಆಡಿಸಿದರು.

"ಸರಿ....ಶ್ರೀ ಗಣೇಶ ನನ್ನಿಂದ....ನೀವು ನನ್ನ ಕವರ ಮಾಡುತ್ತ ಮುನ್ನುಗ್ಗಿ".

ಹೇಮಂತ ಕೈಯಲ್ಲಿ ರಿವಾಲ್ವರ ಹಿಡಿದು ಜಾಗ್ರತೆಯಿಂದ ಹೆಜ್ಜೆ ಹಾಕುತ್ತ ಮುನ್ನಡೆದ. ಅಶೋಕ ಮತ್ತು ಸುಷಮಾರ ಹದ್ದಿನ ಕಣ್ಣುಗಳು ಬೆಂಗಾವಲಾಗಿದ್ದವು. ಹೇಮಂತ ಗೇಟಿನ ಮೂಲಕ ಹೋಗದೇ ಕಂಪೌಂಡ ಗೋಡೆ ಏರಿದ. ಇನ್ನೇನು ಕೆಳಗೆ ಜಿಗಿಯಬೇಕು ಎನ್ನುತ್ತಿರುವಂತೆ ಮನೆಯ ಮೊದಲ ಮಹಡಿ ಕಿಟಕಿಯಿಂದ ಎರಡು ಮೂರು ಗುಂಡುಗಳು ಸಿಡಿದವು. ಅವುಗಳಲ್ಲಿ ಎರಡು ನೇರವಾಗಿ ಅವನೆದೆಗೆ. ಆತ ಬುಲೆಟ್ ಪ್ರೂಫ್ ಜಾಕೆಟ್ ತೊಟ್ಟಿದ್ದು ಒಳ್ಳೆಯದಾಯಿತು. ಆತ ಬೇಕೆಂತಲೇ "ಆ....ಅಯ್ಯೋ" ಎಂದು ಚೀರಿ ಮುಂದೆ ನೆಗೆದ....ಕಂಪೌಂಡ ಒಳಗೆ. ಅಶೋಕ ಮತ್ತು ಸುಷಮಾ ಒಂದೇ ಬಾರಿ ಕಿಟಕಿಯೆಡೆ ಗುಂಡಿನ ಸುರಿಮಳೆಗರೆಯತೊಡಗಿದರು. ಮೇಲಿದ್ದವರಿಗೆ ಇದೊಂದು ಭಾರಿ ಆಘಾತ....ಅವರು ಹಿಂದೆ ಸರಿದರು. ಇದನ್ನೇ ಊಹಿಸಿದ್ದ ಹೇಮಂತ ಮೇಲೆದ್ದು ಮನೆಯೆಡೆ ಓಡುತ್ತ ಇಬ್ಬರಿಗೂ ಸಂಜ್ಞೆ ನೀಡಿದ. ಸುಷಮಾ ಬಲ ಪಕ್ಕಕ್ಕೆ ಓಡಿದರೆ ಅಶೋಕ ಎಡಭಾಗದಿಂದ ಸುತ್ತುವರೆದು ಹಿಂಭಾಗಕ್ಕೆ ಬಂದ ಹಿಂದಿನಿಂದ ಮೂರು ನಾಲ್ಕು ಗುಂಡುಗಳು ಸಿಡಿದದ್ದು ಕೇಳಿಸಿತು.... ಹೇಮಂತ ಹಾಗೂ ಮೇಲೆ ಇದ್ದವರ ಮಧ್ಯದಲ್ಲಿ ನಡೆದ ಸಮರ ಎಂದಾತ ತರ್ಕಿಸಿದ....ಒಂದು ಮಾತು ಸ್ಪಷ್ಟವಾಗಿತ್ತು. ಮೇಲೆ ಬಹಳ ಜನ ಇಲ್ಲವೆಂದು ಒಬ್ಬರೋ ಇಬ್ಬರೋ ಇರಲುಸಾಕು. ಅವರೂ ಸಹ ಸ್ವಲ್ಪ ಸಮಯ ಬಿಟ್ಟು ಹಿಂಭಾಗದ ಮೂಲಕ ಪಲಾಯನ ಮಾರ್ಗ ಹಿಡಿದರೂ ಅಚ್ಚರಿಪಡಬೇಕಾಗಿಲ್ಲ. ಅವರು ಆ ನಿರ್ಧಾರ ಕಾರ್ಯಗತ ಮಾಡುವ ಮೊದಲೇ ಆತ ಅವರ ನೆತ್ತಿ ಮೇಲೆ ಪ್ರಹಾರ ಮಾಡುವ ಉದ್ದೇಶದಿಂದ ಮುನ್ನುಗ್ಗಿದ.

ಹಿಂಭಾಗದಲ್ಲಿ ಮೆಟ್ಟಿಲುಗಳಿದ್ದವು. ಒಂದು ಕ್ಷಣ ನಿಂತು ಆತ ಯೋಚಿಸಿದ. ಮೆಟ್ಟಿಲಿನಿಂದ ಮೇಲೆ ಹೋದರೆ ಮೇಲಿದ್ದವರ ಕಣ್ಣುಗಳಿಗೆ ಆತ ಸುಲಭವಾಗಿ

ಬೀಳುವ ಸಂಭವವಿತ್ತು. ಹೀಗಾಗಿ ಆತ ಆ ಅಪಾಯದಿಂದ ಪಾರಾಗಲು ಉಪಾಯ ಯೋಚಿಸಿದ. ಅರ್ಧ ಮೆಟ್ಟಿಲು ಏರುತ್ತಲೂ ಸ್ವಲ್ಪ ಅಂತರದಲ್ಲಿದ್ದ ಕಿಟಕಿ ಅವನ ಗಮನ ಸೆಳೆಯಿತು. ದೊಡ್ಡ ಕಿಟಕಿ ಅದಕ್ಕೆ ಗಾಜಿನ ಬಾಗಿಲುಗಳು ಕಿಟಕಿ ತೆರೆದರೆ ಒಳಗೆ ಸುಲಭವಾಗಿ ಕಾಲಿಡಬಹುದು........ಅದೇ ಸರಿಯಾದ ಮಾರ್ಗವೆನಿಸಿತು.

ಎಚ್ಚರಿಕೆಯಿಂದ ಮೆಟ್ಟಿಲು ಏರಿ ಕಿಟಕಿ ಕೆಳಗಡೆ ಬಂದು ನಿಂತ. ಆಮೇಲೆ ಸುತ್ತಲೂ ದೃಷ್ಟಿ ಬೀರಿ ಕಬ್ಬಿಣದ ಸರಳುಗಳ ಮೇಲೆ ಕಾಲಿಟ್ಟು ತನ್ನ ದೇಹದ ಸಮತೋಲ ಕಾಯ್ದುಕೊಳ್ಳುತ್ತ ಕಿಟಕಿಯ ಮೇಲೆ ಕೈಯಿಂದ ಭಾರಹಾಕಿದ. ಬಾಗಿಲು ತೆರೆದುಕೊಳ್ಳಲಿಲ್ಲ. ಒಳಗಿನಿಂದ ಕೊಂಡಿ ಹಾಕಿರಬೇಕು.ಮತ್ತೊಂದು ಬಾರಿ ಯತ್ನ ಮಾಡಿದರಾಯಿತೆಂದುಕೊಂಡು ಪುನಃ ದೂಡಿದ. ಈ ಬಾರಿ ಜೋರಾಗಿ....ಒಮ್ಮೆಲೆ ಕಿಟಕಿ ತೆರೆಯಿತು. ತೆರೆದ ಕಿಟಕಿಯಲ್ಲಿ ಸುಂದರಮುಖದ ಮುಗ್ಧ ಬಾಲಕನೊಬ್ಬ ಕಂಡ. ಅಶೋಕನತ್ತ ನೋಡಿ ಅಚ್ಚರಿಯಿಂದ ಕೇಳಿದ.

"ಅಂಕಲ್....ನೀವೇನು ಮಾಡ್ತಾ ಇದೀರಿ."

ಅಶೋಕ ತನ್ನ ಸಮತೋಲ ಕಾಯ್ದುಕೊಳ್ಳಲು ಓಲಾಡುತ್ತಿದ್ದ.

"ಸರ್ಕಸ್ ಮಾಡುತ್ತಿದ್ದೇನೆ....ನನಗೆ ಸಹಾಯ ಮಾಡುವೆಯಾ?"

"ಅವಶ್ಯವಾಗಿ ಏನು ಹೇಳಿ."

"ನನಗೆ ಒಳಗೆ ಬರಲುಕೊಡು. ಇಲ್ಲದಿದ್ದರೆ ಬಿದ್ದು ಹೋಗುತ್ತೇನೆ."

"ಅಯ್ಯೋ ಹಾಗಾಗುವದು ಬೇಡ....ಬನ್ನಿ....ಹಾಂ....ಸ್ವಲ್ಪ ಇರಿ."

ಕೆಲವೇ ಸೆಕೆಂಡುಗಳಲ್ಲಿ ಆ ಹುಡುಗ ಹಗ್ಗವೊಂದನ್ನು ಅಶೋಕನೆಡೆ ಎಸೆದ. ಅದು ಸ್ಕಿಪಿಂಗ್‌ರೋಪ ..ಇನ್ನೊಂದು ತುದಿಯನ್ನು ಕಿಟಕಿಗೆ ಕಟ್ಟಿದ. ಹೀಗಾಗಿ ಅಶೋಕ ಹಗ್ಗದ ಸಹಾಯದಿಂದ ಕಿಟಕಿಯಿಂದ ರೂಮಿನೊಳಗೆ ನೆಗೆದ. ಅದೇ ಕ್ಷಣ ಬಾತ್‌ರೂಮು ಬಾಗಿಲು ತೆರೆಯಿತು.

"ಆನಂದಾ....ಯಾರೊಂದಿಗೆ ಮಾತಾಡುತ್ತಿರುವೆ?" ಹೊರಬಂದ ಮಹಿಳೆ ಕೇಳಿದಳು.

"ಅಂಕಲ್ ಜೊತೆಗೆ."

ಅಶೋಕ ಅತ್ತ ಹೊರಳಿದ. ಆ ಮಹಿಳೆ ಹಾಗೂ ಮಗುವನ್ನು ನೋಡುತ್ತಲೂ ಒಮ್ಮೆಲೆ ಅನುಸೂಯಾ ಹಾಗೂ ಮಗುವಿನ ನೆನಪಾಯಿತು.

"ಗಾಬರಿಯಾಗಬೇಡಿ....ನನ್ನಿಂದ ನಿಮಗೆ ಅಪಾಯವಿಲ್ಲ.ನೀವು....ನೀವು ಅನುಸೂಯಾ ಅಲ್ಲವೇ?"

"ಹೌದು....ನೀವಾರು?" ಆಕೆ ಅಚ್ಚರಿಯಿಂದ ಕೇಳಿದಳು.

"ನಾನು ಕ್ಯಾಪ್ಟನ್ ಅಶೋಕ. ಮೇಜರ ಹೇಮಂತನ ಸಂಗಾತಿ."

ಒಮ್ಮಿಂದೊಮ್ಮೆಲೆ ಅನುಸೂಯಾಳ ಮುಖ ಕಮಲದಂತೆ ಅರಳಿತು. ಅವಳ ಪ್ರಾರ್ಥನೆ ಕೈಗೂಡಿತ್ತು.

"ಬೇಗ ನನ್ನೊಂದಿಗೆ ಬನ್ನಿ...."

ಅನುಸೂಯಾ ಬೆಲ್ ಗುಂಡಿ ಅದುಮಿದಳು. ಬಾಗಿಲು ತೆರೆದು ಒಳ ಬಂದವ ಕೇಳಿದ.

"ಏನು ತಂಗಿ ..."

ಎದುರಿಗೆ ಬಂದವ ಅಶೋಕ. ಕೈಯಲ್ಲಿ ರಿವಾಲ್ವರ....ಅವನಿಗೆ ಮಾತ ನಾಡಲು ಅವಕಾಶ ಕೊಡದೆ ಅವನ ತಲೆ ಮೇಲೆ ರಿವಾಲ್ವರ ಹಿಡಿಯಿಂದ ಬಾರಿ ಸಿದ. ಆತ ಕೆಳಗೆ ಉರುಳುತ್ತಿದ್ದಂತೆ....ಅನುಸೂಯಾಳೊಂದಿಗೆ ಹೊರಬಂದ.... ಎಡಬದಿಗೆ ಮೆಟ್ಟಿಲುಗಳು....ಕೆಳಗಿಳಿದ....ಮುಖ್ಯಬಾಗಿಲು....ತೆರೆದು ಹೊರ ಬಂದ....ಎದುರಿಗೆ ಕಂಡವ ಹೇಮಂತ.

"ಅಶೋಕ....ನೀನು ಕಾರಿನೆಡೆ ಓಡು. ನಾನು ಕವರ್ ಮಾಡುವೆ."

ಅದೇ ವೇಳೆಗೆ ರಿವಾಲ್ವರ ಹಿಡಿದ ಸುಷಮಾ ಸಹ ಅವನೆಡೆ ಧಾವಿಸಿದಳು.

ಅಶೋಕ ಅನುಸೂಯಾ ಹಾಗೂ ಆನಂದನೊಂದಿಗೆ ಗೇಟಿನೆಡೆ ಓಡ ತೊಡಗಿದ....ಒಮ್ಮೆಲೆ ಮೇಲಿದ್ದ ಕಿಟಕಿಯಿಂದ ಪಿಸ್ತೂಲು ಗರ್ಜಿಸಿತು....... ಢಂ....ಢಂ...

ಒಂದು ಗುಂಡು ಅಶೋಕನ ಬೆನ್ನು ಪ್ರವೇಶಿಸುತ್ತಿದ್ದಂತೆ ಆತ ಕೆಳಕ್ಕೆ ಕುಸಿದ. ಬೆನ್ನಿನಿಂದ ರಕ್ತಧಾರೆ. ಅನುಸೂಯಾ ಚೀರಿದಳು.ಸುಷಮಾ ಹಾಗೂ ಹೇಮಂತ ಕಕ್ಕಾವಿಕ್ಕಿಯಾದರು. ಅಶೋಕ ಬುಲೆಟ್ ಪ್ರೂಫ್ ಜಾಕೀಟ ಧರಿಸಿರಲಿಲ್ಲ.

ಸುಷಮಾ ಕರುಳು ಕೊರೆಯುವಂತೆ ಕಿರುಚಿದಳು.

"ಅಶೋಕ....ಅಶೋಕ...."

ಹೇಮಂತನ ಕಣ್ಣುಗಳಿಂದ ಕ್ರೋಧಾಗ್ನಿ ಪ್ರಜ್ವಲಿಸಿತು.

ಆತನ ದೇಹದಲ್ಲಿಯ ರಕ್ತ ಕಳಕಳನೆ ಕುದಿಯತೊಡಗಿತು. ರಿವಾಲ್ವರ ಕುದುರೆ ಮೇಲೆ ಅವನ ಬೆರಳುಗಳು ಬಿಗಿಯತೊಡಗುತ್ತಿದ್ದಂತೆ ಆತ ಕರಕರ ಹಲ್ಲು ಕಡಿದ.

* * * *

"ಇಷ್ಟೆಲ್ಲ ನನ್ನಿಂದಲೇ ಆದದ್ದು. ನಿಮ್ಮ ಪಾಲಿಗೆ ನಾನೇ ಶನಿಯಾದೆ."

ರೋದಿಸುತ್ತ ಪಶ್ಚಾತ್ತಾಪದಲ್ಲಿ ಬೆಂದ ದನಿಯಲ್ಲಿ ನುಡಿದಳು ಅನುಸೂಯಾ. ಸುಷಮಾ ಸಮಾಧಾನಪಡಿಸಿದಳು.

"ಅನುಸೂಯಾ....ನೀನಿಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಈಗಾಗಲೇ ವೈದ್ಯರು ಯಾವ ಅಪಾಯವೂ ಇಲ್ಲ ಎಂದು ಹೇಳಿದ್ದಾರೆ. ಗುಂಡನ್ನೂ ಸಹ ಹೊರ ತೆಗೆಯಲಾಗಿದೆ. ಇನ್ನೊಂದೆರಡು ಗಂಟೆಗಳಲ್ಲಿ ಅಶೋಕನಿಗೆ ಎಚ್ಚರ ಬರುತ್ತದೆ".

"ನಾನಿದನ್ನು ಒಪ್ಪಲಾರೆ. ನನ್ನ ಬಿಡಿಸಲು ಬಂದುದಕ್ಕೇ ಅಲ್ಲವೆ ಹೀಗಾದದ್ದು".

"ಒಂದು ದೃಷ್ಟಿಯಿಂದ ನಿನ್ನದು ಒಪ್ಪತಕ್ಕ ಮಾತೇ........ಆದರೂ ಇದರಲ್ಲಿ ಅಶೋಕನ ತಪ್ಪೂ ಇದೆ."

ಮಧ್ಯೆ ಪ್ರವೇಶಿಸಿ ಹೇಮಂತ ನುಡಿದಾಗ ಅಚ್ಚರಿಯಿಂದ ಅವನತ್ತ ನೋಡಿದಳು ಅನುಸೂಯಾ.

"ಹೌದು. ಯಾವಾಗಲೂ ನಾವು ಇಂಥ ಸಮಯದಲ್ಲಿ ಬುಲೆಟ್ ಪ್ರೂಫ್ ಜಾಕೆಟ್ ಧರಿಸುತ್ತೇವೆ. ಗುಂಡು ತಗಲಿದರೂ ನಮಗೇನೂ ಆಗುವದಿಲ್ಲ. ಆದರೆ ಅಶೋಕ ಈ ರೀತಿ ಮಾಡಿರಲಿಲ್ಲ. ಅಷ್ಟೇ ಅಲ್ಲ ನನ್ನ ಮಾತಿಗೆ ಸುಳ್ಳು ನುಡಿದ. ಜಾಕೀಟ ಧರಿಸಿರುವೆ ಎಂದ...."

ಅನುಸೂಯಾ ಚಿಂತಿತಳಾದಳು. ಇನ್ನೂ ಮೂರ್ಛಾವಸ್ಥೆಯಲ್ಲಿರುವ ಅಶೋಕನತ್ತ ತದೇಕಚಿತ್ತದಿಂದ ನೋಡಲಾರಂಭಿಸಿದಳು. ಅವಳ ಮುಖದ ಮೇಲೆ ಅಪಾರ ವ್ಯಥೆ ಮನೆ ಮಾಡಿತ್ತು. ಅವಳನ್ನು ಆನಂದನನ್ನು ಪಾರು ಮಾಡಿ ಹೊರತಂದಿದ್ದ ಅಶೋಕ ಗುಂಡಿನಿಂದಾಗಿ ಗಾಯಹೊಂದಿ ಭೂಮಿ ಗೊರಗಿದ್ದ. ಹೇಮಂತ ರುದ್ರಾವತಾರ ತಾಳಿ ಮೇಲಿದ್ದವರ ಮೇಲೆ ಆಕ್ರಮಣ ಮಾಡಿದ. ಮೇಲಿದ್ದ ಇಬ್ಬರೂ ಅವನ ರಿವಾಲ್ವರಿಗೆ ಆಹುತಿಯಾಗಿ ಒಬ್ಬ ಫರಾರಿಆದ ಮೇಲೆಯೇ ಅವನ ಕೋಪ ಶಾಂತವಾಗಿತ್ತು. ಸ್ವಲ್ಪಸಮಯವನ್ನೂ ವ್ಯರ್ಥವಾಗಿಸದೇ ಸುಷಮಾ ಹಾಗೂ ಹೇಮಂತ ಕೂಡಿಕೊಂಡು ಅಶೋಕನನ್ನು ಸಮೀಪದ ಆಸ್ಪತ್ರೆಗೆ ತಂದಿದ್ದರು. ಗುಂಡು ಅಪಾಯಕಾರಿಯಾದ ಜಾಗೆಯಲ್ಲಿ ನಾಟಿರಲಿಲ್ಲ. ಎಲುಬಿಗೂ ತಾಗಿರಲಿಲ್ಲ. ಹೀಗಾಗಿ ಅಶೋಕ ಪ್ರಾಣಾಪಾಯ ದಿಂದ ಪಾರಾಗಿದ್ದ. ಹೇಮಂತ ಪೊಲೀಸ್ ಸಿಬ್ಬಂದಿಯೊಂದಿಗೆ ಪುನಃ ಈ ಘಟನೆ ನಡೆದ ಮನೆಯಲ್ಲೆಲ್ಲ ಜಾಲಾಡಿಸಿದ. ಮೂರು ಜನ ವಾಸಿಸುವ ಉಡುಪು ಹಾಗೂ ಪಾದರಕ್ಷೆಗಳು ಅಲ್ಲಿ ದೊರೆತವು. ಮೂವರಲ್ಲಿ ಒಬ್ಬರು ಪಾರಾಗಿದ್ದು ಇಬ್ಬರು ಪ್ರಾಣಕ್ಕೆರವಾಗಿದ್ದಾರೆ ಎಂದು ಖಚಿತವಾಯಿತು. ಭಂಡಾರಿ ಹೆಸರಿನ

ಲಕ್ಕೋಟೆ ಹರಿದು ಒಂದೆಡೆ ಬಿದ್ದಿತ್ತು. ಅದರಲ್ಲಿ ಏನಿತ್ತು ಎಂಬುದು ತಿಳಿಯು ದಿದ್ದರೂ "ಬರೋಡಾ ಬ್ಯಾಂಕ್, ನಾರಾಯಣಪುರ" ಎಂಬ ಚಿಕ್ಕ ಚೀಟಿ ಯೊಂದು ಮಾತ್ರ ಕೆಳಗಡೆ ಬಿದ್ದದ್ದು ಗೋಚರಿಸಿತು. ಹೀಗಾಗಿ ಆ ಪಾರ್ಸಲ್ಲಿ ನಲ್ಲಿ ನಾರಾಯಣಪುರ ಬರೋಡಾ ಬ್ಯಾಂಕಿಗೆ ಸಮ್ಬಂಧಿಸಿದ ಯಾವದೋ ಒಂದು ವಸ್ತುವಿದ್ದದ್ದು ಸ್ಪಷ್ಟವಾಯಿತು.

ಹೇಮಂತ ಸನಿಹದ ಬರೋಡಾ ಬ್ಯಾಂಕಿಗೆ ಭೇಟಿ ನೀಡಿ ಮ್ಯಾನೇಜರಿಗೆ ತನ್ನ ಪರಿಚಯ ಮಾಡಿಕೊಟ್ಟು ಅವರ ಸಹಕಾರ ಬೇಡಿದ.ಹೇಮಂತನ ಹೆಸರಿಗೆ ಪ್ರಭಾವಿತರಾದ ಅವರು ಸಕಲ ರೀತಿಯ ಸಹಕಾರ ನೀಡಲು ಮುಂದಾದರು. ನಾರಾಯಣಪುರದ ಬರೋಡಾ ಬ್ಯಾಂಕ್ ಮ್ಯಾನೇಜರ್ ಜೊತೆ ಕೂಡಲೇ ಸಂಪರ್ಕ ಬೆಳೆಸುವ ವಿಚಾರ ಅವನ ಮುಂದಿಟ್ಟ. ಅದಕ್ಕಾಗಿ ಒಂದು ಒಂದೂ ಕಾಲು ಗಂಟೆ ಕಾಯಬೇಕಾಯಿತು. ಚಡಪಡಿಸುತ್ತ ಕುಳಿತ. ಸಂಪರ್ಕ ದೊರೆ ಯುತ್ತಲೂ ಮಾತನಾಡಿದ.ಅವನ ಊಹೆಯಂತೆ ನಾರಾಯಣಪುರ ಬರೋಡಾ ಬ್ಯಾಂಕಿನಲ್ಲಿ ಚಂದ್ರಮೋಹನನ ಹೆಸರಿಗೊಂದು ಲಾಕರ್ ಇತ್ತು. ಆ ಲಾಕರ ನಲ್ಲಿರುವ ವಸ್ತುವೇ ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣ ಎಂಬುದೂ ಹೊಳೆಯಿತು. ಆ ಲಾಕರ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಿದ ಹೇಮಂತ ಆ ಲಾಕರ್ ಬೀಗ ತರುವ ವ್ಯಕ್ತಿಯನ್ನು ತಡೆದು ಪೊಲೀಸರ ವಶಕ್ಕೆ ಒಪ್ಪಿಸುವಂತೆ ನಿರ್ದೇಶನ ನೀಡಿದ ನಂತರ ಸಮಾಧಾನದ ಉಸಿರು ಬಿಟ್ಟು ಆಸ್ಪತ್ರೆಗೆ ಬಂದಿದ್ದ ಹೇಮಂತ.

ಇನ್ನೂ ಅಶೋಕನಿಗೆ ಎಚ್ಚರ ಬಂದಿರಲಿಲ್ಲ. ಆನಂದ ಒಂದೆಡೆ ಮಂಕಾಗಿ ಕುಳಿತಿದ್ದ. ನಡೆಯುತ್ತಿರುವ ವಿಚಿತ್ರ ಘಟನೆಗಳ ಅರ್ಥವೇ ಆಗುತ್ತಿದ್ದಿಲ್ಲ ಅವನಿಗೆ ಅನಸೂಯಾ ತನ್ನನ್ನು ತಾನೇ ಶಪಿಸಿಕೊಳ್ಳತೊಡಗಿದ್ದಳು.ಸುಷಮಾ ಮತ್ತು ಮೇಜರ ಇಬ್ಬರೂ ಕೂಡಿ ಅವಳನ್ನು ಸಮಾಧಾನಪಡಿಸಿದರು.

ಮತ್ತೊಂದು ಗಂಟೆ ಕಳೆಯಿತು.

ಅನುಸೂಯಾ ಅಶೋಕನ ತಲೆದಿಂಬ ಬಳಿ ಕುಳಿತವಳು ಒಂದಿಂಚೂ ಕದಲಿರಲಿಲ್ಲ.

"ಆಹ್....ಅಯ್ಯೋ....ಹಾ...."

ಅಶೋಕ ನರಳುತ್ತ ಕಣ್ಣು ತೆರೆದ. ಅನುಸೂಯಾಳ ಬಾಡಿದ ಮುಖ ಕಮಲದಂತೆ ಅರಳಿತ್ತು. ಮಂಕಾಗಿ ಕುಳಿತಿದ್ದ ಆನಂದ ಓಡಿಬಂದ ಮಂಚದ ಬಳಿ. ಸುಷಮಾ ಡಾಕ್ಟರರನ್ನು ಕರೆಯಲು ಓಡಿದರೆ, ಹೇಮಂತ ಅಶೋಕನ ಪಕ್ಕದಲ್ಲಿ ಕುಳಿತು ಮೆಲ್ಲನೆ ಅವನ ಹಣೆ ನೀವತೊಡಗಿದ....ಎರಡು ಮೂರು ನಿಮಿಷಗಳಲ್ಲಿ ವೈದ್ಯರೊಂದಿಗೆ ಸುಷಮಾಬಂದಳು.ಅಶೋಕನನ್ನುಪರೀಕ್ಷಿಸಿದರು.

ವೈದ್ಯರು "ಗುಡ್....ಸಂತೋಷದ ವಿಚಾರ....ಮೇಜರ ನೀವಿನ್ನು ಯಾವು-ದಕ್ಕೂ ಚಿಂತಿಸಬೇಡಿ. ಅಶೋಕ ಮೂರು ನಾಲ್ಕು ದಿನಗಳಲ್ಲಿ ಗುಣಹೊಂದು ತ್ತಾರೆ....ಸಧ್ಯ ನೋವು ನಿವಾರಣೆಗಾಗಿ ಮಾತ್ರೆ ಕೊಡುತ್ತೇನೆ. ಅಷ್ಟೇ...."

ಬ್ಯಾಗಿನಿಂದ ಎರಡು ಮಾತ್ರೆ ತೆಗೆದರು. ಎಲ್ಲರಿಗಿಂತ ಮುಂದಾದ ಅನುಸೂಯಾ ಅದನ್ನು ಇಸಿದುಕೊಂಡು ಯಾರಿಗೂ ಕಾಯದೇ ಯಾರೊಂದಿಗೆ ಕೇಳದೇ ಎರಡೂ ಮಾತ್ರೆ ಅಶೋಕನ ಬಾಯಿಗೆ ಹಾಕಿ ಮೆಲ್ಲನೆ ನೀರು ಕುಡಿಸಿ ದಳು. ಅಶೋಕ ಸಹ ಹಸುಗೂಸಿನಂತೆ ಮಾತ್ರೆ ನುಗ್ಗಿ ನೀರು ಕುಡಿದ. ಅವನ ಕಣ್ಣುಗಳು ಅನುಸೂಯಾಳ ಮುಖದಲ್ಲೇ ನೆಟ್ಟಿದ್ದವು. ಇದನ್ನು ಗಮನಿಸಿದ ಸುಷಮಾ ರಹಸ್ಯಪೂರ್ಣವಾಗಿ ಹೇಮಂತನತ್ತ ನೋಡಿದಳು.ಹೇಮಂತನ ತುಟಿ ಗಳ ಮೇಲೆ ಅಪರೂಪದ ನಗೆ ಲಾಸ್ಯವಾಡಿತು. ಅದರರ್ಥ ತಿಳಿದದ್ದು ಕೇವಲ ಸುಷಮಾಳಿಗೆ ಮಾತ್ರ....

"ಅಶೋಕ, ಈಗ ಹೇಗಿದೆ?"

ಹೇಮಂತನ ಧ್ವನಿಗೆ ಬೆಚ್ಚಿದ ಅಶೋಕ ಮೇಜರ ಕಡೆನೋಡಿದ ಅನಂತರ ಅವನ ದೃಷ್ಟಿ ಸುಷಮಾಳತ್ತ ತಿರುಗಿತು.

"ಚೆನ್ನಾಗಿದ್ದೇನೆ...."

ಮುಂದೆ ಮಾತಿಲ್ಲದೇ ಮೌನ ಮನೆ ಮಾಡಿತು. ಅವನೇ ನುಡಿದ.

"ಮೇಜರ....ನನ್ನನ್ನು ಕ್ಷಮಿಸಿ."

ಹೇಮಂತ ಅವನತ್ತ ನೋಡಿದ....

"ಈಗ ಮಾತು ಬೇಡ ವಿಶ್ರಾಂತಿ ತೆಗೆದುಕೋ."

"ನಿಮಗೆ ನಾನು ಸುಳ್ಳು ಹೇಳಿದೆ....ನಾನು ಬುಲೆಟ್ ಪ್ರೂಫ್ ಜಾಕೀಟ ಧರಿಸಿರಲಿಲ್ಲ."

"ನನಗೆಲ್ಲ ಗೊತ್ತಾಗಿದೆ. ನೀನು ಕರ್ತವ್ಯವನ್ನು ಪ್ರಾಣಕ್ಕಿಂತ ಹೆಚ್ಚಾಗಿ ನೋಡಿದೆ. ನಿನ್ನ ಬಗ್ಗೆ ನನಗೆ ಹೆಮ್ಮೆ ಇದೆ....ಈಗ ಸಧ್ಯ ವಿಶ್ರಾಂತಿ ತೆಗೆದುಕೊ ನಿನ್ನ ಆರೈಕೆಗಾಗಿ ಅನುಸೂಯಾ ಇಲ್ಲೇ ಇರುತ್ತಾಳೆ...."

ಅನುಸೂಯಾ ಕೃತಜ್ಞತೆಯಿಂದ ಮೇಜರನೆಡೆ ನೋಡಿದಳು.

"ನಾನೂ ಅಂಕಲ್ ಜೊತೆ ಇರತೇನೇ...."

ಪುಟ್ಟ ಆನಂದ ಪಟಕ್‌ನೆ ನುಡಿದಾಗ ಭಾರವಾದ ವಾತಾವರಣ ಹಗುರಾ ಯಿತು. ಅಶೋಕನಿಗೂಅನುಸೂಯಾಳಸಾನಿಧ್ಯಹಿತನೀಡತೊಡಗಿತ್ತು. ಏಕೆಂದು ತಿಳಿಯದು. ಹೀಗಾಗಿ ಆತನೂ ವಿರೋಧಿಸಲಿಲ್ಲ.

ಒಂದು ಬಗೆಯ ತೃಪ್ತಿ ಹಾಗೂ ಸಮಾಧಾನ ಭಾವನೆಗಳೊಂದಿಗೆ

ಸಂತೃಪ್ತಿ ಅನುಭವಿಸುತ್ತ ಹೇಮಂತ ಹಾಗೂ ಸುಷಮಾ ಹೊರನಡೆದರು. ಅನುಸೂಯಾ ಅಶೋಕನತ್ತ ಸರಿದಳು.

ಮೂರು ನಾಲ್ಕು ದಿನಗಳು ಕಳೆದವು.

ಅಶೋಕ ಪೂರ್ಣ ಗುಣಹೊಂದಿದ್ದ. ಗಾಯ ಸಹ ಮಾಯುತೊಡಗಿತ್ತು. ಡಾಕ್ಟರರ ಸಲಹೆ ಪಡೆದು ಹೇಮಂತ ಆಸ್ಪತ್ರೆಯಿಂದ ಅಶೋಕನನ್ನು ಕರೆತಂದ ಅನುಸೂಯಾ ಆನಂದ ಸಹ ಬೃಂದಾವನ ಲಾಜಿಗೆ ಬಂದರು. ಅಂದೊಂದು ದಿನ ಮೇಜರ ಒಬ್ಬನೇ ಹೊರಗೆ ಹೋದವ ರಾತ್ರಿ ಬರಲೇ ಇಲ್ಲ. ಆತ ಬಂದಾಗ ರಾತ್ರಿ ಕಳೆದು ಮಧ್ಯಾಹ್ನ ಬಂದಿತ್ತು. ಬಂದವನೇ ಸ್ನಾನ ಮಾಡಿ ಹರಟೆ ಹೊಡೆಯುತ್ತ ಎಲ್ಲರೊಂದಿಗೆ ಊಟ ಮಾಡಿದ. ಇಂದುಸಂಜೆಲಾಜಖಾಲಿ ಮಾಡಿ ಊರಿಗೆ ಹೊರಡುವದು ಎಂದಾತ ನುಡಿದಾಗ ಅನುಸೂಯಾ ಒಮ್ಮೆಲೆ ಗಂಭೀರ ಳಾದಳು.

ಮುಂದೇನು? ಎಂಬ ಪ್ರಶ್ನೆ 'ಧತ್' ಎಂದು ಇದಿರು ಬಂದುನಿಂತಿತು. ಕಗ್ಗಾಳ ಭವಿಷ್ಯದ ಛಾಯೆ ಅವಳ ಮುಖದ ಮೇಲೆ ಆವರಿಸಿತು....ಅವಳು ಸ್ತಬ್ಧಳಾಗಿ ಕುಳಿತಿರುವಾಗಲೇ ಹೇಮಂತ ಗಂಭೀರ ವಿಷಯಕ್ಕೆ ಪೀಠಿಕೆ ಹಾಕಿದ.

"ಅನುಸೂಯಾ ನಿನಗೊಂದು ದುಃಖದ ಸಮಾಚಾರ ತಿಳಿಸಬೇಕಾಗಿದೆ."

ಸುಷಮಾಳ ಎದೆ ಧಡ್ ಎಂದಿತು. ಅಶೋಕನ ಗುಂಡಿಗೆ ಡಬ್ ಡಬ್ ಬಡಿದುಕೊಳ್ಳಲಾರಂಭಿಸಿತು. ಆನಂದ ಮುಖವೆತ್ತಿ ಮೇಜರನತ್ತ ನೋಡಿದ.... ಒಂದುಕ್ಷಣ ಹೇಮಂತನಿಗೂ ಅಧೈರ್ಯವಾಯಿತು....ಪೀಠಿಕೆಹಾಕಿದ್ದಾಯಿತ್ತು ಆದರೆ........ಇಂಥ ಆಘಾತಕಾರೀ ಸುದ್ದಿ ಹೇಗೆ ಹೇಳುವದೆಂದು........ತೋಚ ದಂತಾಯಿತು.

"ನೀನು ಧೈರ್ಯದಿಂದ ಎದುರಿಸಬೇಕು ಅನುಸೂಯಾ" ಉಗುಳು ನುಂಗಿದ ಹೇಮಂತ.

ಅನುಸೂಯಾಳ ಮುಖದ ಮೇಲೆ ವಿಷಣ್ಣದ ಭಾವ ಮೂಡಿತು. ಕಣ್ಣಲ್ಲಿ ನೀರಾಡಿತು.

"ಮೇಜರ ಸಾಹೇಬ್....ನನಗೆಲ್ಲಾ ಗೊತ್ತಿದೆ...."

"ಆಂ....?" ಹೇಮಂತ ಗಾಬರಿಯಾಗಿ ಉದ್ಗರಿಸಿದ. ಉಳಿದವರಿಗೂ ದಿಗ್ಭ್ರಮೆ.

"ಹೌದು....ನನಗೆ ತಿಳಿದಿದೆ."

"ಇಲ್ಲ ಇಲ್ಲ."

"ಖಂಡಿತವಾಗಿ ನನಗೆ ಗೊತ್ತಿದೆ ಮೇಜರ....ಚಂದ್ರಮೋಹನ ಬದುಕಿಲ್ಲ ಎಂದು....ಆತ....ನನ್ನನ್ನೂ....ಆನಂದನನ್ನು ಅನಾಥರನ್ನಾಗಿ ಮಾಡಿ ಹೊರಟು ಹೋಗಿದ್ದಾನೆ....ದುಷ್ಟರ ಗುಂಡಿಗೆ ಆತಬಲಿಯಾಗಿದ್ದಾನೆ....ನಾನುಮುತ್ತೈದೆ ಅಲ್ಲ...ವಿಧವೆ...ವಿಧವೆ..."

ತಡೆಹಿಡಿದ ದುಃಖ ಒಟ್ಟರಿಸಿ ಬಂದಿತು. ಭೋರೆಂದು ಆಕೆ ಅಳಲಾರಂಭಿಸುತ್ತಲೇ ಏನೂ ತಿಳಿಯದ ಆನಂದ ಅವಳೊಂದಿಗೆ ಧ್ವನಿ ಕೂಡಿಸಿದ. ಅಶೋಕ ಅನುಸೂಯಾಳನ್ನು ಸಮಾಧಾನಪಡಿಸಲು ಮುಂದಾಗುತ್ತಿದ್ದಂತೆ ಆಕೆ ಅವನನ್ನು ಬಲವಾಗಿ ತಬ್ಬಿಕೊಂಡು ಅವನೆದೆಯಲ್ಲಿ ಮುಖ ಹುದುಗಿಸಿ ಬಿಕ್ಕಲಾರಂಭಿಸಿದಳು. ಆನಂದ ಸಹ ತೆಕ್ಕೆ ಬಿದ್ದ...

ಆ ಅಪೂರ್ವ ದೃಶ್ಯ ಕಂಡು ಹೇಮಂತ ಹಾಗೂ ಸುಷಮಾ ಮಂತ್ರಮುಗ್ಧರಾದರು...ಮುಂದಾಗುವುದನ್ನು ನೆನೆದು ಪುಲಕಿತರಾದರು.

ಹತ್ತು ಹದಿನೈದು ನಿಮಿಷಗಳಲ್ಲಿ ಅನುಸೂಯಾ ಸುಧಾರಿಸಿಕೊಂಡಳು. ಮುಖ ತೊಳೆದು ಬಂದಾಗ ಆಕೆ ಸಂಪೂರ್ಣ ಬದಲಾಗಿದ್ದಳು. ಸುಷಮಾ ಎಲ್ಲರಿಗೂ ಕಾಫಿ ತರಿಸಿದಳು. ಕಾಫಿ ಕುಡಿದಾದ ಮೇಲೆ ಎಲ್ಲರಿಗೂ ಹಾಯೆನಿಸಿತು. ಅನುಸೂಯಾ ಹೇಳಲಾರಂಭಿಸಿದಳು.

"ಮೇಜರ್ ಸಾಹೇಬ... ಚಂದ್ರಮೋಹನ ಹಾಗೂ ನನ್ನದು ಪ್ರೇಮ ವಿವಾಹ....ಆರು ವರ್ಷ ನಾವು ಹಾಯಾಗಿ ಕಳೆದೆವು. ಸುಮಾರು ಒಂದೂವರೆ ಎರಡು ತಿಂಗಳ ಹಿಂದೆ ರಾತ್ರಿ ಚಂದ್ರು ನನ್ನ ಮುಂದೊಂದು ರಹಸ್ಯ ಹೇಳಿದ. ಅವನ ಕೈಗೊಂದು ಭಯಂಕರ ಜಾಲದ ಸುದ್ದಿ ತಗಲಿತ್ತು. ಅದರ ಹಿಂದೆ ಆತ ಬಿದ್ದಿದ್ದ. ನಮ್ಮ ದೇಶದ ಸೀಳುನಾಲಿಗೆಯ ಜನರನ್ನು ಆತ ಬೆತ್ತಲೆಯಾಗಿ ನಿಲ್ಲಿಸಲು ತಯಾರಿ ನಡೆಸಿದ್ದ. ಈ ಕೆಲಸದಲ್ಲಿ ಪ್ರಾಣದ ಭಯವೂ ಇತ್ತು. ಆದರೂ ಆತ ಹೆದರಲಿಲ್ಲ. ದೇಶಕ್ಕಾಗಿ, ದೇಶದ ಭದ್ರತೆಗಾಗಿ ಪ್ರಾಣ ತ್ಯಾಗಕ್ಕೂ ಸಿದ್ಧನಾದ. ನನಗೆ ಅಧೀರಳಾಗದಿರಲು ಸೂಚಿಸಿದ....ಆದರೆ ಆ ರಹಸ್ಯ ಏನೆಂಬುದನ್ನು ಮಾತ್ರ ಆತ ಹೇಳಲಿಲ್ಲ. ಮುಂದೆ ಒಂದೇ ವಾರದಲ್ಲಿ ಆತ ಕಣ್ಮರೆಯಾದ, ಮನೆಗೆ ಬರಲೇ ಇಲ್ಲ. ಆಫೀಸಿನಲ್ಲಿ ವಿಚಾರಿಸಿದೆ ಅಲ್ಲಿಯೂ ಇಲ್ಲ. ಹೀಗೆ ಒಂದು ಒಂದೂವರೆ ತಿಂಗಳು ಕಳೆದವು. ಅವನ ಹೆಸರಿಗೆ ರಜಿಸ್ಟರ್ಡ್ ಪತ್ರ ಒಂದು ಮರಳಿ ಹೋದಾಗ ನನ್ನ ಅಶಂಕೆ ಸತ್ಯವಾಯಿತು.ಅಂದೇ ಚಂದ್ರಮೋಹನ ಬದುಕಿಲ್ಲ ಎಂದು ಸ್ಪಷ್ಟವಾಯಿತು."

"ಹೇಗೆ?"

"ನಾನು ನಾಪತ್ತೆಯಾದ ಮೇಲೆ ನನ್ನ ಹೆಸರಿನಿಂದ ರಜಿಸ್ಟರ್ಡ್ ಬಂದರೆ

ಅದು ನನ್ನ ಮರಣದ ವಾರ್ತೆ ಎಂದು ತಿಳಿ ಎಂದಾತ ಸೂಚನೆ ನೀಡಿದ್ದ."

"ಹೀಗಿದ್ದೂ ನೀನೇಕೆ ನಕಲಿ ಫೋನಿಗೆ ಮೋಸ ಹೋದಿ?"

"ಏನು ಮಾಡುವದು? ಎಷ್ಟೆಂದರೂ ನಾನಾತನ ಪತ್ನಿ ನೋಡಿ ಆತ ಬದುಕಿದ್ದರೂ ಬದುಕಿರಬಹುದೆಂದು ಹುಚ್ಚು ವ್ಯಾಮೋಹ, ಓಡಿದೆ. ಅವರ ಬಂದಿಯಾದೆ. ಆದರೊಂದು ಆಶ್ಚರ್ಯ."

"ಏನು?"

"ನನ್ನನ್ನು ಬಂಧಿಸಿದವರು ನನ್ನೊಂದಿಗೆ ಅಭದ್ರವಾಗಿನಡೆದುಕೊಳ್ಳಲಿಲ್ಲ. ನನ್ನ ಶೀಲಕ್ಕೆ ಕಲಂಕ ತರುವ ಕೆಲಸ ಮಾಡಲಿಲ್ಲ. ಎಲ್ಲರೂ 'ತಂಗಿ' ಎಂದೇ ಅನ್ನುತ್ತಿದ್ದರು. ಅವರ ಬಾಸ್ ಅಂತೂ 'ಮಗಳೇ' ಅನ್ನುತ್ತಿದ್ದ.

"ಏನು?....ಮಗಳೇ ಅನ್ನುತ್ತಿದ್ದನೇ?"

"ಹೌದು....ಏಕೆ?"

"ಏಕೂ ಇಲ್ಲ"....ನಗುತ್ತ ನುಡಿದ ಹೇಮಂತ.

"ಸ್ವಲ್ಪ ನೆನಪು ಮಾಡಿಕೊಂಡು ಹೇಳಿ....ಬಾಸ್‌ನನ್ನು ಎಲ್ಲಿಯಾದರೂ ನೋಡಿದ ನೆನಪು ಆಗುತ್ತದೆಯೇ?"

"ಆತ ಮುಖಕ್ಕೆ ಸ್ಕಾರ್ಫ ಸುತ್ತಿಕೊಂಡಿದ್ದ. ಹೀಗಾಗಿ ಗುರುತಿಸುವ ಪ್ರಮೇಯವೇ ಇಲ್ಲ. ಆದರೂ ಅವನ ಧ್ವನಿ ಎಲ್ಲೋ ಕೇಳಿದ ನೆನಪು ಬರುತ್ತಿತ್ತು."

"ಎಲ್ಲಿ? ಯಾವಾಗ?"

"ಚಂದ್ರಮೋಹನ ನನ್ನ ಮುಂದೆ ರಹಸ್ಯ ಬಾಯಿಬಿಡುವದಕ್ಕೆ ಮೊದಲು ಒಂದು ವಾರದ ಹಿಂದೆ ಒಬ್ಬ ಗೌರವರ್ಣದ ಸುಮಾರು ಅರವತ್ತು ವರ್ಷದ ವ್ಯಕ್ತಿಯೊಬ್ಬರು ಬಂದಿದ್ದರು. ಇಬ್ಬರೂ ಕೋಣೆಯಲ್ಲಿ ಅರ್ಧಗಂಟೆ ಕುಳಿತು ಗುಪ್ತವಾಗಿ ಮಾತಾಡಿದ್ದರು. ಹೊರಡುವ ಮುನ್ನ ನಾನವರಿಗೆ ನಮಸ್ಕರಿಸಿದ್ದೆ. ಆಗ ಅವರು ಬಾಯಿ ತುಂಬಾ ಮಗಳೇ ಎಂದು ಸಂಬೋಧಿಸಿ ಆಶೀರ್ವದಿಸಿದ್ದರು."

"ನಿಮ್ಮನ್ನವರು ಬಂಧಿಸಲು ಕಾರಣವೇನು?"

"ಆ ರಜಿಸ್ಟರ ಪತ್ರದ ಬಗ್ಗೆ ವಿಚಾರಿಸಿದರು... ಚಂದ್ರಮೋಹನ ಯಾವ ರಹಸ್ಯ ಹೇಳಿದಾನೆ ಎಂದು ಪ್ರಶ್ನಿಸಿದರು. ಬಹುಶಃ ಆದಕ್ಕಾಗಿ ಇರಬಹುದು."

ಹೇಮಂತನಿಗೂ ಸರಿ ಎನಿಸಿತು.

"ಮುಂದೇನು ಮಾಡಬೇಕೆಂದಿರುವಿ?"

"ಚಂದ್ರಮೋಹನನ ಮರಣದಿಂದ ನಾನು ಸೋತಿಲ್ಲ ಮೇಜರ. ಅವರ

ವೀರಮರಣದ ಬಗ್ಗೆ ನನಗೆ ಗೌರವವಿದೆ............ಆನಂದನಿಗಾಗಿ ಧೈರ್ಯದಿಂದ ಬಾಳಲು ನಾನು ನಿರ್ಧರಿಸಿದ್ದೇನೆ."

"ನಾನೊಂದು ಮಾತು ಕೇಳಲೇ?"

"ಕೇಳಿ."

"ನೀವು ನಮ್ಮ ಜೊತೆಗೇ ಬಂದುಬಿಡಿ. ಆನಂದ ಅಶೋಕನೊಂದಿಗೆ ತುಂಬಾ ಹೊಂದಿಕೊಂಡಿದ್ದಾನೆ. ಅವನಿಗೂ ಒಂದು ಆಸರೆ ದೊರೆಯುತ್ತದೆ. ನಾನು ನಿಮಗೆ ಎಲ್ಲ ಬಗೆಯ ವ್ಯವಸ್ಥೆ ಮಾಡಿಕೊಡುವೆ."

ಅನುಸೂಯಾಳ ಮುಖ ಕಿವಿವರೆಗೆ ಕೆಂಪಗಾಯಿತು. ಅಶೋಕನೆಡೆ ಕಳ್ಳ ನೋಟ ಬೀರಿದಳಾಕೆ. ಅಶೋಕನ ಹೃದಯ ಅವಳ ಉತ್ತರಕ್ಕಾಗಿ ಕಾತುರ ವಾಗಿತ್ತು.

"ಮೇಜರ ಸಾಹೇಬ....ನಾನು ಗೊಡ್ಡು ನಂಬಿಕೆಗಳಿಗೆ ಜೀವ ಬಲಿಕೊಡು ವಂಥ ಅಶಿಕ್ಷಿತಳಲ್ಲ. ಹಾಗಂತೆ ಚಂದ್ರಮೋಹನನ್ನು ನಾನು ಅವಹೇಳನಮಾಡು ವದಿಲ್ಲ, ಜೀವನದುದ್ದಕ್ಕೂ ಆದರ್ಶಮಯ ಜೀವನ ಸಾಗಿಸಿ ಕರ್ತವ್ಯಕ್ಕಾಗಿ ಬಲಿಯಾದ ಆತ ನನಗೆ ದಾರಿದೀಪ....ಆನಂದನಿಗಾಗಿ ಹಾಗೂ ನನ್ನ ಉಳಿದ ಜೀವನಕ್ಕಾಗಿ ಒಂದು ಆಸರೆ ಹುಡುಕಲೇಬೇಕಾಗಿದೆ."

"ನಾನು ನಿನ್ನ ವಿಚಾರ....ಆದರ್ಶ....ಧೈರ್ಯ ಎಲ್ಲವನ್ನೂ ಮೆಚ್ಚಿದ್ದೇನೆ ನೀನು ತೆಗೆದುಕೊಂಡ ನಿರ್ಣಯಕ್ಕಾಗಿ ಅಭಿನಂದಿಸುತ್ತೇನೆ. ಇಂದಿನಿಂದ ನೀನು ನಮಗೆ ಹೊರಗಿನವಳಲ್ಲ; ನಮ್ಮವಳು. ನಮ್ಮ ಕುಟುಂಬದ ಓರ್ವ ಸದಸ್ಯೆ. ಆನಂದ ನಮ್ಮ ಕಣ್ಮಣಿ ನಿಮ್ಮಿಬ್ಬರ ಸುಖ ದುಃಖ ನಮ್ಮೆಲ್ಲರಿಗೆ ಸೇರಿದ್ದು. ಒಪ್ಪಿಗೆಯೇ?"

"ತುಂಬಾ ಸಂತೋಷ ಮೇಜರ. ನನ್ನದೊಂದು ಕಂಡೀಶನ್ ಇದೆ."

"ಏನದು?"

"ನೀವು ನನ್ನನ್ನು ತಂಗಿ ಎಂದು ಸಂಬೋಧಿಸಬೇಕು."

"ಓಹ್ ಅವಶ್ಯವಾಗಿ....ನೀನೂ ಸಹ ನನ್ನನ್ನು ಅಣ್ಣಯ್ಯ ಎಂದೇ ಕರೆಯಬೇಕು."

"ಮತ್ತೆ ನಾನು?" ಮಧ್ಯೆ ಮುದ್ದು ಮುದ್ದಾಗಿ ಕೇಳಿದ ಆನಂದ.

"ನನಗೆ ದೊಡ್ಡಪ್ಪ ಮತ್ತೆ ಅಶೋಕನಿಗೆ ಡ್ಯಾಡಿ ಎಂದು ಕರೆಯಬೇಕು."

ಆನಂದನಿಗೆ ಈ ಉತ್ತರದಿಂದ ಗೊಂದಲದಲ್ಲಿ ಬಿದ್ದಂತಾಯಿತು. ಲಜ್ಜೆ ಯಿಂದ ಮುಖ ಕೆಳಗೆ ಹಾಕಿದ್ದ ತಾಯಿಯತ್ತ ನೋಡಿದ. ಆಕೆ ಸಹಾಯಕ್ಕೆ ಬಂದಳು.

"ಹೌದು ಆನಂದ...........ಇವರು ನಿನ್ನ ಹೊಸಡ್ಯಾಡಿ........ಅವರು ದೊಡ್ಡಪ್ಪ."

"ಮತ್ತೆ ಇವರು...." ಸುಷಮಾಳೆಡೆ ಬೊಟ್ಟು ಮಾಡಿ ಕೇಳಿದ.

ಮತ್ತೆ ಒಂದು ಕ್ಷಣ ಎಲ್ಲರೂ ಸ್ತಬ್ಧರಾದರು........ಅನುಸೂಯಾ.... ನಗೆಸೂಸಿದಳು.

"ಅವರು ನಿನ್ನ ದೊಡ್ಡಮ್ಮ...." ಸುಷಮಾ ನಾಚಿ ನೀರಾದಳು.

"ಅರೆ ನಾವೊಂದು ವಿಷಯ ಮರೆತೆವಲ್ಲ?" ಹೇಮಂತ ಗಬಕ್‌ನೆ ಕೇಳಿದಾಗ ಎಲ್ಲರೂ ಗಾಬರಿಯಾಗಿ ಅವನೆಡೆ ನೋಡಿದರು....

"ಎಲ್ಲಾ ನಾವೇ ನಿರ್ಣಯಿಸಿದೆವು. ಅಶೋಕನ ಅಭಿಪ್ರಾಯ ಕೇಳಲೇ ಇಲ್ಲವಲ್ಲ?"

ಸುಷಮಾ ತಟಕ್‌ನೆ ನುಡಿದಳು.

"ಕೋಳಿ ಕೇಳಿ ಯಾರಾದರೂ ಮಸಾಲೆ ಅರೆಯುತ್ತಾರೆಯೇ?"

ಘೊಳ್ ಎಂಬ ನಗೆ ಎಲ್ಲೆಡೆ ಪ್ರತಿಧ್ವನಿಸಿತು.

ಅಂದೇ ಎಲ್ಲರೂ ರೂಮು ಖಾಲಿ ಮಾಡಿ ಊರಿಗೆ ಬಂದರು. ಹೇಮಂತನ ಬಂಗಲೆ ಕಂಡು ಅನುಸೂಯಾ ಮಂತ್ರಮುಗ್ಧಳಾದಳು. ಆನಂದ ಸಂತಸದಿಂದ ಕುಣಿದಾಡಿದ. ಎರಡು ಮೂರು ದಿನಗಳಲ್ಲಿ ಅಶೋಕ ಸಂಪೂರ್ಣ ಗುಣ ಹೊಂದಿದ.

ಸಾಯಂಕಾಲದ ಸಮಯ. ಕಾರಿನಲ್ಲಿ ಸಾಂಬಮೂರ್ತಿ ಅವರ ಹಿಂದೆಯೇ ಬೈಕ್ ಪೋಲೀಸದಾಶಿವ ಆಗಮಿಸಿದರು. ಹೇಮಂತನೊಂದಿಗೆ ಮಾತನಾಡಿದರು.

"ಏನೇನು? ಇಷ್ಟು ಬೇಗಬಂದಿರಿ?"

"ಓಹ್. ನನ್ನ ಅಂಕಲ್ ಚೆನ್ನಾಗಿಯೇ ಇದಾರೆ. ಯಾರೋ ಫೂಲ್ ಮಾಡಿದ್ದರು."

"ಹೀಗೋ ಸಮಾಚಾರ. ಸರಿ....ನಾಳೆ ನಮ್ಮ ಮನೆಯಲ್ಲಿ ಪಾರ್ಟಿ ಇದೆ ಬನ್ನಿ."

"ಇನ್ನೊಂದು ಸಾರಿ ಬರುತ್ತೇವೆ. ಕ್ಷಮಿಸಿ, ಅಶೋಕನಿಗೆ ಜ್ವರ........ ಹುಷಾರಿಲ್ಲ."

ಆಗ ಸಾಂಬಮೂರ್ತಿಗಳ ಲಕ್ಷ್ಯ ಅಶೋಕನತ್ತ....ಅವನ ಬಳಿ ಕುಳಿತಿದ್ದ ಅನುಸೂಯಾ, ಆನಂದನತ್ತ ಹರಿಯಿತು. ಚೇಳು ಕುಟುಕಿದವರಂತೆ ಬೆಚ್ಚಿಬಿದ್ದರು. ಅನುಸೂಯಾ ಸಹ ಅವರನ್ನೇ ಕಣ್ಣು ರೆಪ್ಪೆ ಬಡಿಯದೇ ನೋಡುತ್ತಿದ್ದಳು.

ಹೇಮಂತ ಮುಗುಳ್ನಗೆ ನಗುತ್ತಿದ್ದ.

ಹತ್ತು ನಿಮಿಷಗಳಲ್ಲಿ ಒಬ್ಬರ ನಂತರ ಒಬ್ಬರು ಹೊರಟುಹೋದರು. ಅನುಸೂಯಾ ಏನೋ ಹೇಳಲು ಮುಂದಾದಳು. ಹೇಮಂತ ತಡೆದ.

"ತಂಗೀ....ನನಗೆ ಗೊತ್ತು ನೀನು ಏನು ಹೇಳಬೇಕೆಂದಿರುವೆ ಎಂದು."

ಆಕೆ ತುಟಿ ಎರಡು ಮಾಡಲಿಲ್ಲ.

"ಅಶೋಕ ನೀನು ಹೇಗಿರುವೆ."

"ಚೆನ್ನಾಗಿದ್ದೇನೆ ಏಕೆ?"

"ಇನ್ನೊಂದು ಅಪಾಯಕಾರಿ ಕೆಲಸಕ್ಕೆ ಹೊರಡಬೇಕಿದೆ. ಅದಕ್ಕೆ...."

"ಓಹ್ ನಾನು ರೆಡಿ...." ಅಶೋಕ ಚಂಗನೆ ಎದ್ದುನಿಂತು ನುಡಿದ ಅನುಸೂಯಾಳ ಮುಖ ಕಪ್ಪಿಟ್ಟಿತು....

* * * *

ಮಧ್ಯಾಹ್ನ ನಾಲ್ಕುಗಂಟೆ ಸಮೀಪಿಸಿತ್ತು.

ನಾರಾಯಣಪುರ ಬರೋಡಾ ಬ್ಯಾಂಕಿನ ಸಿಬ್ಬಂದಿ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದರು. ಹಣದ ವಹಿವಾಟು ಮುಗಿದು ಲೆಕ್ಕಪತ್ರದ ಕೆಲಸ ಮುಗಿಯುವ ಹಂತದಲ್ಲಿತ್ತು. ಮ್ಯಾನೇಜರ 'ಕಾಕಾ' ಬಾಯಿವರೆಗೆ ಬಂದ ಆಕಳಿಕೆಯನ್ನು ತಡೆದು ಕುಲಕರ್ಣಿಯವರನ್ನು ಕೂಗಿ ಚಹ ತರಿಸಲು ಹೇಳಿದರು. ಕುಲಕರ್ಣಿ ಹತ್ತಿರವೇ ಇದ್ದ ದೇಸಾಯಿಯನ್ನು ಕರೆದು ಅವರ ಆಜ್ಞೆಯನ್ನು ಅವನಿಗೆ 'ಪಾಸ್' ಮಾಡಿದರು. ಕೈಲಿ ಥರ್ಮಾಸ್ ಹಿಡಿದ ದೇಸಾಯಿ ಮುಂದಿನ ಬಾಗಿಲು ಮುಚ್ಚಿ ಶಟರ್ ಇಳಿಸಿದ್ದರಿಂದ ಹಿತ್ತಲ ಬಾಗಿಲಿನಿಂದ ಹೊರನಡೆದ. ಕೆಲಸವನ್ನು ಅಲ್ಲಿಗೆ ಬಿಟ್ಟುಕೊಟ್ಟ ಕುಲಕರ್ಣಿ, ಕಟಾವಕರ ಸಿದ್ಧೇಶ್ವರ ಮುಂತಾದವರು ಮ್ಯಾನೇಜರ 'ಕಾಕಾ' ಅವರ ಕೋಣೆಯನ್ನು ಆಕ್ರಮಿಸಿದರು. ಐದಾರು ನಿಮಿಷಗಳು ಕಳೆದವು. ಹಿತ್ತಲ ಬಾಗಿಲ ಬಳಿ ಧಪ್ ಧಪ್ ಸದ್ದಾಯಿತು. ಅರೆ ದೇಸಾಯಿ ಎಷ್ಟು ಬೇಗ ಬಂದ ಎಂದುಕೊಳ್ಳುತ್ತಿರುವಾಗಲೇ ಕೈಯಲ್ಲಿ ರೈಫಲ್ ಹಿಡಿದ ಮುಸುಕುಧಾರಿ ವ್ಯಕ್ತಿಯೊಬ್ಬ ಒಳನುಗ್ಗಿ ಬಂದ. ಅವನನ್ನು ನೋಡುತ್ತಲೂ ಎಲ್ಲರೂ ಕುಳಿತಲ್ಲೇ ತಣ್ಣಗಾದರು.

"ಹುಷಾರ್....ಯಾರಾದರೂ ಜಾಣತನ ತೋರಿಸಲು ಪ್ರಯತ್ನಿಸಿದರೆ ದೇಸಾಯಿಗಾದ ಗತಿಯೇ ನಿಮಗೂ ಆಗುತ್ತದೆ."

"ಆಂ? ದೇಸಾಯಿಗೇನಾಯ್ತು?" ಹೌಹಾರಿ ಕೇಳಿದರು ಕಾಕಾ.

ಕುಳಿತಲ್ಲಿಂದಲೇ ಕುಲಕರ್ಣಿ ತನ್ನ ಕೈಯನ್ನೂ ಮೇಜಿನ ಕಾಲಿಗೆ ಅಂಟಿಸಿದ 'ಅಲಾರಾಂ' ಗುಂಡಿಯತ್ತ ಒಯ್ಯತೊಡಗಿದ. ರೈಫಲ್‌ಧಾರಿ ತುಂಬಾ ಜಾಣಾಕ್ಷ....ಪಟ್ ಎಂದು ಬಲಗೈ ವಾರೆ ಏಟು ಬಿತ್ತು ಕುಲಕರ್ಣಿ ಕೈಮೇಲೆ 'ಅಯ್ಯಯ್ಯಪ್ಪೋ' ಎಂದು ಸಾಯುವಂತೆ ಅರಚಿ ಹಿಂದಕ್ಕೆ ಬಿದ್ದರು........ ಕುಲಕರ್ಣಿ.

"ಇವರಿಗೆ ಆದದ್ದೇ ದೇಸಾಯಿಗೂ ಆಗಿದೆ....ಎಚ್ಚರ...." ಆತಗುಡುಗಿದ.

"ನಿನಗೆ ಏನಾಗಬೇಕು....? ಸಧ್ಯ ಕ್ಯಾಶ್ ಹೆಚ್ಚಿಗೆ ಇಲ್ಲ...."

ಅಳುಕುತ್ತ ಕಾಕಾ ನುಡಿದಾಗ ಆತ ನಕ್ಕು ಹೇಳಿದ.

"ನನಗೆ ಕ್ಯಾಶ್ ಬೇಡ. ಚಂದ್ರಮೋಹನನ ಲಾಕರ್ ಓಪನ್ ಮಾಡಬೇಕು ಅಷ್ಟೇ."

"ಆಂ?" ಬಾಯಿಬಿಟ್ಟರು 'ಕಾಕಾ....' ಹೇಮಂತ ನೀಡಿದ ನಿರ್ದೇಶನ ನೆನಪಾಯಿತು.

"ನನ್ನ ಬಳಿ ಇನ್ನೊಂದು ಬೀಗವಿಲ್ಲ" ಉಳಿದುಕೊಳ್ಳಲು ನೋಡಿದರು.

"ಚಿಂತಿಸಬೇಡಿ ನನ್ನ ಬಳಿ ಇದೆ. ನಿಮ್ಮ ಬೀಗ ಒಂದಾದರೆ ಸಾಕು."

ಕಾಕಾ ಅಲ್ಲೇ ಭೂಮಿಗಿಳಿದುಹೋದರು.

ಹತ್ತು ನಿಮಿಷಗಳಲ್ಲಿ ಚಂದ್ರಮೋಹನನ ಲಾಕರಿನಲ್ಲಿದ್ದ ಚಿಕ್ಕ ಬ್ರಿಫ್ ಕೇಸು ಕೈಗೆತೆಗೆದುಕೊಂಡ ರೈಫಲ್‌ಧಾರಿ 'ಅಲಾರಾಂ' ವಾಯರ, ಟೆಲಿಫೋನ ವಾಯರ ಕಟ್‌ಮಾಡಿ, ಹೊರನಡೆದ. ಹೊರಗೆ ಬಂದು ಚಿಲುಕ ಹಾಕಲು ಮರೆಯಲಿಲ್ಲ....

ಬ್ಯಾಂಕ ಎದುರಿಗೇ ನಿಂತಿತ್ತು ಅವನ ಕಾರು. ಮುಂದಿನ ನಿಮಿಷ ಆತ ತನ್ನ ಪಕ್ಕದಲ್ಲಿ ಬ್ರಿಫ್‌ಕೇಸನ್ನಿರಿಸಿ ಕಾರು ಸ್ಟಾರ್ಟ ಮಾಡಿದ. ಅದೇ ಕ್ಷಣ ಬ್ಯಾಂಕಿನೊಳಗಿನಿಂದ "ಅಯ್ಯೋ............ಕಾಪಾಡಿ........ಹೆಲ್ಪ .. ...."ಎಂಬ ನಾಲ್ಕಾರು ಕೂಗು ಕೇಳಿ ಬಂದಾಗ....ಅತ್ತ ನೋಡಿ ಅಪಹಾಸ್ಯದ ನಗೆ ಬೀರಿ ಬೆಳಗಾವಿ ರೋಡಿನಲ್ಲಿ ಕಾರು ವೇಗವಾಗಿ ಓಡತೊಡಗಿತು.

'ಥನ್ಸ್ಲಿಪ್' ಫ್ಯಾಕ್ಟರಿ ದಾಟಿ ಕಾರು ಸ್ವಲ್ಪ ದೂರ ಬಂದಿರಬೇಕು ಅಷ್ಟೇ....ಮುಸುಕುಧಾರಿ ಚಾಲಕನ ಕುತ್ತಿಗೆ ತಣ್ಣನೆಯ ಕಬ್ಬಿಣದ ನಳಿಕೆಯ ಸ್ಪರ್ಶವಾಯಿತು. ಅದರ ಜೊತೆಗೇ ಅದಕ್ಕಿಂತಲೂ ತಣ್ಣಗಿನ ವಾಣಿ.

"ಮಾಯ್ ಡಿಯರ ಬಾಯ್" ನಾನು ಹೇಳಿದತ್ತ ಕಾರು ನಡೆಸಿದರೆ ನಿನಗೆ ಕ್ಷೇಮ."

ಮುಸುಕುಧಾರಿ ಚಾಲಕನಿಗೆ ಬೇರೆ ದಾರಿಯೇ ಇರಲಿಲ್ಲ. ರೈಫಲ್ ಕೈಗೆ

ತೆಗೆದುಕೊಳ್ಳಲು ಮುಂದಾದರೆ ಹಿಂದಿದ್ದ ರಿವಾಲ್ವರ ಬೆಂಕಿಯುಗುಳುತ್ತಿತ್ತು. ಬೇರೆ ದಾರಿಯಿಲ್ಲದೆ ಹಿಂದಿನಿಂದ ಆಜ್ಞೆ ಬಂದತ್ತ ಕಾರು ನಡೆಸಿದ........ಹತ್ತು ಹನ್ನೆರಡು ಕಿಲೋಮೀಟರ ದೂರ ಕ್ರಮಿಸಿದ ಮೇಲೆ ಎಡಬದಿಗೆ ಕಾಣುವ 'ರಾಮಾಪುರ'ಎಂಬ ಮೈಲಿಗಲ್ಲಿನ ಬಳಿ ಎಡಕ್ಕೆ ಹೊರಳಿಸಲು ಸೂಚನೆ ಬಂತು. ಹೊರಳಿಸಿದ. ಅಲ್ಲಿಂದ ಮುಂದೆ ಕೆಂಪು ಮಣ್ಣಿನ ದಾರಿ. ಅರ್ಧ ಕಿಲೋಮೀಟರ ದೂರದ ನಂತರ ಚಿಕ್ಕ ಮಾವಿನತೋಪು ಗೋಚರಿಸಿತು. ತೋಪಿನಲ್ಲೊಂದು ಪುಟ್ಟ ಕೆಂಪು ಹಂಚಿನ ಮನೆ. ಮನೆಯೆದುರು ಕಾರು ನಿಲ್ಲಿಸುವಂತೆ ಸೂಚನೆ. ಅದರಂತೆ ಮಾಡಿದ ಕಾರು ನಿಲ್ಲುತ್ತಲೂ ಬಾಗಿಲು ತೆರೆಯಿತು. ಕಾರಿನ ಹಿಂದಿನ ಬಾಗಿಲು ತೆರೆದು ರಿವಾಲ್ವರ ಗುರಿಯೊಂದಿಗೆ ಚಾಲಕ ಹೊರಗೆ ಬಂದ. ಕೈಲಿ ಅದೇ ಬ್ರಿಫ್‌ಕೇಸ್. ಇಬ್ಬರೂ ಮನೆಯೊಳಗೆ ಹೋಗುತ್ತಲೂ ಬಾಗಿಲು ಮುಚ್ಚಿಕೊಂಡಿತು.

"ಗುಡ್...."ರಿವಾಲ್ವರಧಾರಿ ನುಡಿದ."ಬ್ರಿಫ್‌ಕೇಸ್‌ಕೆಳಗಿಟ್ಟು ನೀನು ನಿನ್ನ ಮುಸುಕನ್ನು ತೆರೆದು ಸುಂದರವಾದ ನಿನ್ನ ಮುಖದರ್ಶನ ಮಾಡಿಸು ಮಗು".

"ಯಾಕಾಗಲಾರದು ಪಿತಾಶ್ರೀ" ಎಂದು ಹಾಸ್ಯ ಮಾಡಿದ ಮುಸುಕು ಧಾರಿ ಮುಸುಕನ್ನು ಕಿತ್ತಿ ಹಾಕಿದ. 'ಆಂ'....ನೀನು....ನೀನು ಅಶೋಕ" ಎಂದು ಉದ್ಗರಿಸಿದ ರಿವಾಲ್ವರಧಾರಿ.

"ಹೌದು ನಾನೇ ಕ್ಯಾಪ್ಟನ್ ಅಶೋಕ . ....ಏಕೆ? ಅಚ್ಚರಿಯಾಯಿತೇ ಮಾಜಿ ಸಚಿವ ಸಾಂಬಮೂರ್ತಿಗಳೇ....".

"ಓಹ್. ದೇವರೇ" ರಿವಾಲ್ವರ ಹಿಡಿದಿದ್ದ ಸಾಂಬಮೂರ್ತಿಗಳೂ ಅಲ್ಲೇ ಕುಸಿದರು.ಒಳಗಿದ್ದ ಸದಾಶಿವ ಹಾಗೂ ಬೇರೆ ಇಬ್ಬರು ಮೂವರು ಗಾಬರಿಯಾಗಿ ನಿಂತರು. ಅಶೋಕ ನಗುತ್ತ ನಿಂತೇ ಇದ್ದ, ಒಂದೆರಡು ನಿಮಿಷಗಳಲ್ಲಿ ಸಾಂಬ ಮೂರ್ತಿಗಳು ಸುಧಾರಿಸಿಕೊಂಡರು.

"ಅಶೋಕ....ನಿಮಗೆ ಜ್ವರ ಬಂದಿತ್ತಲ್ಲ?"

"ಅದೆಲ್ಲ ಒಂದು ಸೋಗು ಎಂದು ನಿಮಗೆ ತಿಳಿಯಲಿಲ್ಲವೇ?....ಅನುಸೂಯಾ ಮಗು ಆನಂದನನ್ನು ನೋಡಿಯಾದರೂ ನೀವು ಎಚ್ಚೆತ್ತುಕೊಳ್ಳಬೇಕಾಗಿತ್ತು".

ನಿಟ್ಟುಸಿರುಬಿಟ್ಟ ಸಾಂಬಮೂರ್ತಿಗಳು ಎದ್ದು ನಿಂತರು.

"ಅಶೋಕ ದಯವಿಟ್ಟು ನಮ್ಮನ್ನು ಕ್ಷಮಿಸಿ. ನಿಮ್ಮನ್ನು ಕೊಲ್ಲುವದಂತೂ ನಮ್ಮಿಂದ ಸಾಧ್ಯವಿಲ್ಲ. ನಿಮ್ಮನ್ನು ಇಲ್ಲೇ ಬಂಧಿಸಿಟ್ಟು ಪಾರಾಗಲು ಯತ್ನಿಸು ತ್ತೇವೆ".

"ಅದೂ ನಿಮ್ಮಿಂದ ಸಾಧ್ಯವಿಲ್ಲ ಮೂರ್ತಿಗಳೇ".

"ಏಕೆ?....ಏಕೆ ಸಾಧ್ಯವಿಲ್ಲ".

"ಸುತ್ತುಮುತ್ತಿನಿಂದಲೂ ನೀವು ಬಂದಿಯಾಗಿದ್ದೀರಿ. ಹೊರಗಡೆ ಮೇಜರ, ಸುಷಮಾ ಹಾಗೂ ಡಿ.ಸಿ ಪಿ. ಬೇಕಲ್, ಅವರ ಸಿಬ್ಬಂದಿ ಇದೆ........ನೀವಿನ್ನು ಶರಣಾಗುವದೆ ಲೇಸು....".

ಸಾಂಬಮೂರ್ತಿ ಹಾಗೂ ಸದಾಶಿವ ಹತಾಶರಾಗಿ ಅಲ್ಲೇ ತಣ್ಣಗಾದರು.

"ನನ್ನಿಂದ ಇದು ಸಾಧ್ಯವಿಲ್ಲ" ಎಂದು ಹಿಂದಿಯಲ್ಲಿ ಜೋರಾಗಿ ಕೂಗುತ್ತ ಕೆಂಪುವರ್ಣದ ದಷ್ಟಪುಷ್ಟವಾಗಿದ್ದ ತರುಣನೊಬ್ಬ ತಲೆಬಾಗಿಲ ಕಡೆ ನಡೆದ ಬಿರಬಿರನೆ.ಅವನನ್ನು ಹಿಂಬಾಲಿಸಿದರು. ಗೌರವರ್ಣದ,ಚೆನ್ನದಕಟ್ಟು ಹೊಂದಿದ ಕನ್ನಡಕ ಧರಿಸಿದ ಅರವತ್ತು ದಾಟಿದ ಸಭ್ಯಗೃಹಸ್ಥರು. ತರುಣ ಬಾಗಿಲು ತೆರೆದವ ಹಾವು ಮೆಟ್ಟಿದವನಂತೆ ಹಿಂದೆ ಸರಿದ.ಹಿಂದಿದ್ದ ವೃದ್ಧರು ಗಾಬರಿಯಾಗಿ ಏನಾಯ್ತು ಎಂದರು. ತರುಣ ಉತ್ತರಿಸಲಿಲ್ಲ.

"ಹಲೋ ಮಿಸ್ಟರ ಸುನೀಲ ಕಟಾರಿಯಾ........ಗ್ಲ್ಯಾಡ ಟು ಮೀಟ್ ಯು...."

ಪಿಂಕ್ ಕಲರ ಸೂಟು ಧರಿಸಿ ತನ್ನೆರಡೂ ಕೈಗಳನ್ನು ಪ್ಯಾಂಟಿನ ಎರಡೂ ಜೇಬಿಗೆ ಇಳಿಬಿಟ್ಟು ನಗುತ್ತ ನಿಂತಿದ್ದ ಮೇಜರ ಹೇಮಂತ ಸಂತಸದಿಂದ ನುಡಿದ.

ಅವನ ಹಿಂದೆ ಸುಷಮಾ. ಡಿ.ಸಿ.ಪಿ. ಬೇಕಲ್ ಹಾಗೂ ಸುಮಾರು ಹತ್ತು ಜನರ ಪೋಲೀಸ್ ಪಡೆ.

ಒಳಬಂದ ಹೇಮಂತ. ಅವನಿಗೆ ಮುಖ ತೋರಿಸದೇ ಚಡಪಡಿಸುತ್ತಿದ್ದ ಸಾಂಬಮೂರ್ತಿಗಳ ಕಡೆಗೆ ನೋಡಿ ಹೇಳಿದ.

"ಸಾಂಬಮೂರ್ತಿಗಳೇ ನಿಮ್ಮೆಲ್ಲ ಪ್ರಯತ್ನಗಳು ವಿಫಲವಾದುದಕ್ಕೆ ನನಗೆ ತುಂಬಾ ದುಃಖವಾಗುತ್ತಿದೆ"

"ಯಾರಿವರು?"....ಪ್ರಥಮಬಾರಿ ಕೇಳಿದರು ಸಭ್ಯಗೃಹಸ್ಥರು.

"ಈ ಒಡವನಿಗೆ ಮೇಜರ ಹೇಮಂತ ಎನ್ನುತ್ತಾರೆ. ಪಂಜಾಬದ ಮಾಜೀ ಮುಖ್ಯಮಂತ್ರಿಗಳೇ....ಇವನು ನನ್ನ ಸಹಾಯಕ ಕ್ಯಾಪ್ಟನ್ ಅಶೋಕ ಹಾಗೂ ಈಕೆ ನನ್ನ ಸಂಗಾತಿ ಸಾರ್ಜಂಟ್ ಸುಷಮಾ....ಈಗಾದರೂ ನನ್ನ ಪರಿಚಯ ವಾಯಿತೇ?"

ಪಂಜಾಬದ ಮಾಜೀ ಮುಖ್ಯಮಂತ್ರಿ ಹಾಗೂ ಅವರ ಅಳಿಯ ಸುನೀಲ ಕಟಾರಿಯಾ ಹೇಮಂತನ ಪರಿಚಯ ಕೇಳಿ ಸ್ತಂಭೀಭೂತರಾದರು. ಅವರ ಕಾಲ್ಕೆಳಗಿನ ಭೂಮಿ ಕುಸಿದಂತಾಯಿತು....

ಹೇಮಂತ ಅವರತ್ತ ನೋಡಿ ಹಲ್ಲಿಯಂತೆ ಲೊಚಗುಟ್ಟಿದ....

ನಮ್ಮ ದೇಶದ ರಾಜಕೀಯ ಎತ್ತ ಸಾಗಿದೆ? ನಮ್ಮ ರಾಜಕಾರಣಿಗಳ ಸೀಳುನಾಲಿಗೆ ಪ್ರವೃತ್ತಿ ದೇಶವನ್ನು ಯಾವ ರೀತಿ ವಿನಾಶದ ಅಂಚಿಗೆ ತಂದು ನಿಲ್ಲಿಸಿದೆ. ಇದರ ಪರಿಣಾಮವಾಗಿ ನಮ್ಮ ದೇಶದ ಭವಿಷ್ಯ ಎಷ್ಟು ಕರಾಳವಾಗಿದೆ ಎಂಬುದಕ್ಕೆಲ್ಲ ಕನ್ನಡಿ ಹಿಡಿಯುವದು ನಮ್ಮ ಈ ಕೇಸು. ಒಂದು ದೃಷ್ಟಿಯಿಂದ ವಿಚಿತ್ರ. ಒಂದು ದೃಷ್ಟಿಯಿಂದ ಭಯಾನಕ, ಒಂದು ದೃಷ್ಟಿಯಿಂದ ಅಪಾಯದ ಮುನ್ಸೂಚನೆ ನೀಡುವ ಗಂಟೆ........ ಈ ಮೂರೂ ದೃಶ್ಯಗಳನ್ನು ರೂಪಕದಂತೆ ನಾವಿಲ್ಲಿ ಕಾಣಬಹುದು. ಇದಕ್ಕೆಲ್ಲ ಮೂಲ ಪುರುಷರು ನಮ್ಮ ಮಾಜಿ ಸಚಿವ ಸಾಂಬಮೂರ್ತಿಗಳು. ಅವರ ಕರ್ಣಧಾರ ಚಂದ್ರಮೋಹನ... ಇವರಿಬ್ಬರಿಂದ ನಮ್ಮ ಮುಂದಿರುವ ಕೇಸು ವಿಚಿತ್ರ ತಿರುವು ಪಡೆದು ಭಯಾನಕ ಹಂತ ತಲುಪುತ್ತಿದೆ....ಸಾಂಬಮೂರ್ತಿಗಳು ನಿಜವಾದ ಅರ್ಥದಲ್ಲಿ ಅಪರಾಧ ಮಾರ್ಗ ದಲ್ಲಿ ಹೆಜ್ಜೆ ಹಾಕಿದ ಅಪರಾಧಿಗಳಾದರೂ, ನನ್ನ ದೃಷ್ಟಿಯಲ್ಲಿ ಅವರು ಅಪ ರಾಧಿಗಳೇ ಅಲ್ಲ. ಕಣ್ಣುಗಳಿಗೆ ಜಾತೀಯತೆಯ, ಮತಾಂಧತೆಯ, ಕೆಂಪು ಪಟ್ಟಿ ಕೊಂಡು ಕುರ್ಚಿ ಮೇಲೆ ಕಣ್ಣಿಟ್ಟು ಹಿಂದುಮುಂದೆ ವಿಚಾರಿಸದೇ ಅಂಧರಂತೆ ಸಾಗಿರುವ ರಾಜಕಾರಣಿಗಳನ್ನು ಅವರ ತಾಳಕ್ಕೆ ಕುಣಿಯುತ್ತಿರುವ ಸರಕಾರ ವನ್ನು ಎಚ್ಚರಿಸಲು,ಅವರು ಬೀಸಿದ ಚಾವಟಿ ಅಥವಾ ಹಂಟರ್ ಈ ಕೇಸು.... ನ್ಯಾಯಾಲಯ ಅವರಿಗೆ ಶಿಕ್ಷೆ ನೀಡಲಿ ಬಿಡಲಿ, ನಾನಂತೂ ಅವರನ್ನು ಗೌರವಿ ಸುತ್ತೇನೆ. ಅವರ ಪ್ರಯತ್ನ ಸಾಧುವಲ್ಲದಿದ್ದರೂ ಸಧ್ಯದ ಪರಿಸ್ಥಿತಿಯಲ್ಲಿ ಅದರ ಹೊರತು ಬೇರೆ ದಾರಿಯೇ ಇಲ್ಲದಿರುವದರಿಂದ, ಅದಕ್ಕಾಗಿ ಅವರನ್ನು ಶ್ಲಾಘಿ ಸುತ್ತೇನೆ. ಹೀಗೆ ಅವರು ಒಬ್ಬ ಭಯಾನಕ ಅಪರಾಧಿಗಳು ಹೌದು........ ನಮ್ಮೆಲ್ಲರನ್ನು ಎಚ್ಚರಿಸಿದ ಪುಣ್ಯ ಪುರುಷರೂ ಹೌದು".

ಮೇಜರ ಹೇಮಂತನ ಬಾಯಿಯಿಂದ ಪ್ರಶಂಸೆಯ ಸುರಿಮಳೆ ಸುರಿಯು ತ್ತಿದ್ದಂತೆ ಎಲ್ಲರ ಕಣ್ಣುಗಳು ಸಾಂಬಮೂರ್ತಿಗಳತ್ತ ಹರಿದಾಗ ಅದನ್ನು ಎದು ರಿಸಲಾರದೇ ಸಾಂಬಮೂರ್ತಿಗಳು ಅಧೋಮುಖಿಯಾದರು.

"ಹಳದಿಜೇಳು" ಬಂಗಲೆಯ ಟೆರೆಸ್ ಮೇಲೆ ಮೇಜರ ಹೇಮಂತ ಸಭೆ ಕರೆದಿದ್ದ. ಇದೊಂದು ಮಾಮೂಲು ಕಾರ್ಯಕ್ರಮ. ತನ್ನ ಕೈಗೆ ಬಂದ ಕೇಸಿ ಗೊಂದು ಗತಿ ಕಾಣಿಸಿದ ಮೇಲೆ ತನ್ನ ಬಂಗಲೆ ಹಳದಿಜೇಳು ಟೆರೆಸ್ ಮೇಲೆ ಸಭೆ ಕರೆಯುವದು ಅವರ ಪರಿಪಾಠ....ಅದರಂತೆಯೇ ಈ ಕಾರ್ಯಕ್ರಮ ಏರ್ಪಾ ಟಾಗಿತ್ತು. ಅದರ ಮೇಲ್ವಿಚಾರಣೆ ಪೋಲೀಸ್ ಇಲಾಖೆಯದು. ಡಿ.ಸಿ.ಪಿ. ಬೇಕಲ್ ನೇತೃತ್ವವಹಿಸಿದ್ದರು. ಎದುರಿಗೆ ಸ್ವಲ್ಪ ಎತ್ತರದಲ್ಲೊಂದು ಮೇಜು, ಮೂರು ನಾಲ್ಕು ಕುರ್ಚಿಗಳು. ಅವುಗಳಲ್ಲಿ ಕ್ರಮವಾಗಿ ಡಿ.ಸಿ.ಪಿ. ಬೇಕಲ್,

ಸುಷಮಾ, ಹೇಮಂತ ಹಾಗೂ ಅಶೋಕ ಆಸೀನರಾಗಿದ್ದರು. ಅವರ ಎದುರು ಸುಮಾರು ನೂರು ನೂರಿಪ್ಪತ್ತು ಕುರ್ಚಿಗಳು. ಅವೆಲ್ಲ ಖಚಾಖಚ್ ತುಂಬಿ ಹೋಗಿದ್ದವು. ಪತ್ರಕರ್ತರು, ಪೋಲೀಸ್ ಅಧಿಕಾರಿಗಳು, ರಾಜಕಾರಣಿಗಳು, ಊರ ಹಿರಿಯರು, ಗಣ್ಯ ವ್ಯಕ್ತಿಗಳು ಅಲ್ಲದೆ ಚಲನಚಿತ್ರಕ್ಕೆ ಸಮ್ಮಂಧಿಸಿದ ಕೆಲವೊಂದು ಪ್ರಭಾವಿ ವ್ಯಕ್ತಿಗಳು. ಹೇಮಂತನShort ಆಮಂತ್ರಣದ ಮೇಲೆ ಬಂದಿದ್ದರು.

ಎಡಪಕ್ಕದಲ್ಲಿ ಸಾಲಾಗಿ ಇಪ್ಪತ್ತು ಮೂವತ್ತು ಕುರ್ಚಿಗಳಿದ್ದು ಅವುಗಳ ಮೇಲೆ ಮುಖ ಕೆಳಗೆ ಹಾಕಿಕೊಂಡು ಕುಳಿತಿದ್ದ ದೇಶದ ವಿಭಿನ್ನಭಾಗದ ವ್ಯಕ್ತಿಗಳು. ಬಲಬದಿಗೆ ನಾಲ್ಕಾರು ಕುರ್ಚಿಗಳು, ಸಾಂಬಮೂರ್ತಿ, ಸದಾಶಿವ, ಸುಶೀಲ ಕಟಾರಿಯಾ,ಪಂಜಾಬದ ಮಾಜಿ ಮುಖ್ಯಮಂತ್ರಿಗಳು,ಅನುಸೂಯಾ ಹಾಗೂ ಆನಂದ ಅಲ್ಲಿ ಕುಳಿತಿದ್ದರು.

ಸುತ್ತಲೂ ಅಲ್ಲದೆ ಬಂಗಲೆ ಒಳಹೊರಗೂ ಭದ್ರ ಪೋಲೀಸ್ ಕಾವಲು.

ಇನ್ಸ್ಪೆಕ್ಟರ ಶ್ಯಾಮಸುಂದರ ಕುಲಕರ್ಣಿ ಹಾಗೂ ಸಿ.ಪಿ.ಐ. ಪಾಟೀಲರ ಮೇಲ್ವಿಚಾರಣೆಯಲ್ಲಿ ಎಲ್ಲರಿಗೂ ಕುಳಿತಲ್ಲೇ ಕಾಫಿ ಬಿಸ್ಕಿಟ್ ನೀಡಲಾಯಿತು. ಕಾಫಿ ಕುಡಿಯುತ್ತಿದ್ದಂತೆ ಹೇಮಂತನ ಕಂಚಿನಕಂಠ ಮತ್ತೆ ಪ್ರತಿಧ್ವನಿಸಿತು.

"ಸೀಳುನಾಲಿಗೆ" ಎಂದು ಹೆಸರಿಸುವ ಈ ಕೇಸಿನ ಶ್ರೀ ಗಣೇಶ ಆರಂಭ ವಾದದ್ದು ಸುಮಾರು ಎಂಟು ವರ್ಷಗಳ ಹಿಂದೆ. ಆಗ ಸಾಂಬಮೂರ್ತಿಗಳು ಅಧಿಕಾರಾರೂಢ ಪಕ್ಷದಲ್ಲಿ ಪ್ರಭಾವಿ ಕಾರ್ಯಕರ್ತರೂ, ನಾಯಕರೂ ಆಗಿದ್ದರು. ಅವರು ಒಬ್ಬ ಒಳ್ಳೆ ನಿಷ್ಠಾವಂತ ರಾಜಕಾರಣಿಗಳಾಗಿದ್ದರು ಅದರೊಂದಿಗೆ ಪ್ರಾಮಾಣಿಕರೂ ಆಗಿದ್ದರು. ರಾಜಕಾರಣಿಗಳಲ್ಲಿ ನಿಷ್ಠೆ ಹಾಗೂ ಪ್ರಾಮಾಣಿಕತೆಗಳು ಒಂದೇ ವ್ಯಕ್ತಿಯಲ್ಲಿರುವದು ತುಂಬಾ ಅಪರೂಪ. ಅಂಥ ಅಪರೂಪದ ರಾಜಕಾರಣಿಗಳಾಗಿದ್ದರು ಸಾಂಬಮೂರ್ತಿಗಳು ಅವರ ಸತತ ಪ್ರಯತ್ನ.... ಅವಿರತ ದುಡಿಮೆಯಿಂದಾಗಿಯೇ ಅವರಿದ್ದ ಪಕ್ಷ ಪ್ರಚಂಡ ಬಹುಮತದೊಂದಿಗೆ ಆಡಳಿತದ ಗದ್ದುಗೆ ಏರಿತ್ತು. ಮುಖ್ಯಮಂತ್ರಿಗಳಾಗುತ್ತಾರೆಂದು ಎಲ್ಲರೂ ಭಾವಿಸಿದ್ದ ಸಾಂಬಮೂರ್ತಿಗಳು ಕೇಂದ್ರದಲ್ಲಿರುವ ಧುರೀಣರ ಕುತಂತ್ರದಿಂದಾಗಿ ಕೂದಲೆಳೆಯಷ್ಟು ಅಂತರದಲ್ಲಿ ಅದರಿಂದ ವಂಚಿತರಾದರು. ಅವರ ಬದಲು ಅವರಿಗಿಂತ ಎಲ್ಲದರಲ್ಲೂ ಕಿರಿಯರಾಗಿದ್ದ ಅಲ್ಪಸಂಖ್ಯಾಕರೊಬ್ಬರು ಮುಖ್ಯಮಂತ್ರಿ ಗದ್ದುಗೆ ಏರಿದರು. ಮನಸ್ಸಿರದಿದ್ದರೂ ಹೈಕಮಾಂಡ್ ಒತ್ತಾಯ ಮೀರಲಾರದೇ ಸಾಂಬಮೂರ್ತಿಗಳು ತಾವಾಗಿಯೇ ಶಿಕ್ಷಣ ಖಾತೆಯನ್ನು ಆರಿಸಿಕೊಂಡು ಶಿಕ್ಷಣ ಸಚಿವರಾಗಿ ಅಧಿಕಾರ ವಹಿಸಿಕೊಂಡರು.

"ಅಲ್ಪಸಂಖ್ಯಾಕರರ ಬಗ್ಗೆ ಮಾತು ಬಂದಿದೆ ಎಂದರೆ ನಾನು ಇಲ್ಲಿ ಇನ್ನೊಂದು ಮಾತನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ನನ್ನ ಮಾತು ಹಲವರಿಗೆ ಅಪಥ್ಯವಾದರೂ ಇದು ಪರಮಸತ್ಯವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಈ ಪರಮಸತ್ಯದ ಮೇಲೆಯೇ ಈ ಕೇಸು ಜನ್ಮತಾಳಿತು. ಅಷ್ಟೇ ಅಲ್ಲ ಇದರ ಮೇಲೆಯೇ ನಮ್ಮ ದೇಶದ ಅಳಿವು ಉಳಿವುಗಳಿರುವದರಿಂದ– ನಾನು ಹೇಳಲೇಬೇಕಾಗಿದೆ. ಇದರರ್ಥ ನಾನು ಜಾತೀಯತೆಯನ್ನು ಪ್ರತಿಪಾದಿಸುತ್ತೇನೆ....ಅಲ್ಪಸಂಖ್ಯಾಕರ ಮನಸ್ಸನ್ನು ನೋಯಿಸುತ್ತಿದ್ದೇನೆ....ಅಥವಾ ಬಹುಸಂಖ್ಯಾಕರ ಭಾವನೆಯನ್ನು ಕೆರಳಿಸುತ್ತೇನೆ ಎಂದಲ್ಲ. ಈಗಾಗಲೇ ಸಾಕಷ್ಟು ಭಯಂಕರ, ಭೀಭತ್ಸ ಭಯಾನಕ ಘಟನೆಗಳು ದೇಶದಲ್ಲಿ ನಡೆದು ಹೋಗಿರುವಾಗ ದೇ[illegible]ಆಂತರಿಕ ಭದ್ರತೆ ಗಂಡಾಂತರದಲ್ಲಿರುವಾಗ ಅದರ ಬಗ್ಗೆ ಎಚ್ಚರಿಕೆ ನೀಡು[illegible]ವ್ಯಂಥ ದೇಶಭಕ್ತ ನಾಗರಿಕನ ಕರ್ತವ್ಯವಾಗಿರುವದರಿಂದ ಹೇಳುತ್ತಿದ್ದೆ[illegible]ಇದಕ್ಕೆ ಬೇಕವಾದವರು ತಮಗೆ ಬೇಕಾದ ಬಣ್ಣವನ್ನು ತುಂಬಿದರೆ [illegible]ಮಾಡುವಂತಿಲ್ಲ. ಅವರ ಬಗ್ಗೆ ನನಗೆ ಕನಿಕರವಿದೆ. ಕೋಪವಿಲ್ಲ. ದೇವರಾ[illegible]ಸ್ತವಿಕ ತಿಳುವಳಿಕೆ ನೀಡು. ಸದ್ಬುದ್ಧಿ ನೀಡು ಎಂದು ಬೇಡಿಕೊಳ್ಳು[illegible]

'ನಮ್ಮ ದೇಶಕ್ಕೆ ಸ್ವಾತಂ[illegible]ದ್ದು ಒಂದು ಐತಿಹಾಸಿಕ ಸತ್ಯ. ಸತ್ಯ–ಪ್ರೇಮ–ಅಹಿಂಸೆಗಳ ಅಡಿಪಾಯದ ಮೇಲೆ ಸಾವಿರಾರು, ಲಕ್ಷಾನುಲಕ್ಷ ಸ್ವಾತಂತ್ರ್ಯ ಯೋಧರ ಬಲಿದಾನದಿಂದಾಗಿ ನಾವಿಂದು ಸ್ವತಂತ್ರರಾಗಿ ಜೀವನ ಸಾಗಿಸುತ್ತಿದ್ದೇವೆ. ಸರ್ವಧರ್ಮ ಸರ್ವಜಾತಿಯ ಜನರೆಲ್ಲ ಈ ಸ್ವಾತಂತ್ರ್ಯ ಯಜ್ಞದಲ್ಲಿ ಧುಮುಕಿ ತಮ್ಮ ಸೇವೆ ನೀಡಿದರು. ನಮಗೆ ದೊರಕಿದ ಸ್ವಾತಂತ್ರ್ಯ ಯಾವದೆ ಒಂದು ಕೋಮಿನ ಅಥವಾ ಜಾತಿಯ ಇಲ್ಲವೇ ಧರ್ಮದ ಜನರ ಹೋರಾಟದಿಂದ ಬಂದುದಲ್ಲ, ಸರ್ವರ ಪ್ರಯತ್ನ ಹಾಗೂ ಬಲಿದಾನಗಳಿಂದ ದೊರಕಿದ ಫಲವಿದು. ಹೀಗಾಗಿ ಈ ಸ್ವಾತಂತ್ರ್ಯ ಫಲವೃಕ್ಷದ ಮೇಲೆ ಎಲ್ಲ ಜನಾಂಗದ, ಎಲ್ಲ ಜಾತಿಯ, ಎಲ್ಲ ಧರ್ಮದ, ಎಲ್ಲ ಕೋಮಿನವರ ಸಮಾನ ಹಕ್ಕಿದೆ....

'ನಮ್ಮ ದುರ್ದೈವ...ಸ್ವಾತಂತ್ರ್ಯ ದೊರ[illegible]ಟ ನೋವಿನ ಹುಣ್ಣಿನೊಂದಿಗೆ ಬಂದಿತು. ಕುತಂತ್ರಿಗಳ ಕುತಂತ್ರದಿಂದ ಒಡೆದು ಹೋಳಾಯಿತು. ಯಾರಿಗೆ ಯಾವದು ಬೇಕೋ ಅದನ್ನು ಆಯ್ದುಕೊಂಡು ಅಲ್ಲಿಯೇ ನೆಲೆಸಿ ನಾಗರಿಕರಾದರು. ಇನ್ನೂ ಕೆಲವರು ವಲಸೆ ಹೋಗಿ ಪೌರತ್ವ ಪಡೆದರು. ಅದರಂತೆ ನಮ್ಮ ದೇಶದ ಬಗ್ಗೆ ಅಭಿಮಾನವಿದ್ದವರು ನಾವು ಭಾರತೀಯರು ಎಂಬ

ಭಾವನೆಗೆ ಪರವಶರಾಗಿ ಇಲ್ಲಿ ನೆಲೆಸಿದರು. ಎಲ್ಲರೊಂದಿಗೆ ಸುಖ ದುಃಖ ಹಂಚಿಕೊಂಡು ಪ್ರಸಂಗ ಬಂದರೆ ಈ ದೇಶಕ್ಕಾಗಿ ಪ್ರಾಣಕೊಡಲೂ ಸಿದ್ಧರೆಂದೂ ಪ್ರತಿಜ್ಞೆ ಮಾಡಿ ಈ ದೇಶದ ವಾಸಿಗಳಾದರು. ನಮ್ಮ ಸರಕಾರ ಅವರ ಭಾವನೆ ತ್ಯಾಗಗಳಿಗೆ ಹೃದಯ ತುಂಬಿ ಕೃತಜ್ಞತೆ ಹೇಳಿ ಅವರ ಏಳ್ಗೆಗಾಗಿ ಅವರ ಉನ್ನತಿಗಾಗಿ ಕೆಲವೊಂದು ಸೌಲಭ್ಯಗಳನ್ನು ನೀಡಿ ಗೌರವಿಸಿತು. ಅಂದಿನ ವಾತಾವರಣಕ್ಕೆ ಅಂದಿನ ಸಾಮಾಜಿಕ ಪರಿಸ್ಥಿತಿಗೆ ಈ ನಿರ್ಣಯಸಮಯೋಚಿತವಾಗಿತ್ತು.

ಆದರೆ ಬರಬರುತ್ತ ವಾತಾವರಣ ಬದಲಾಗುತ್ತ ಬಂದಿತು. ಅವರಿಗೆ ನೀಡಿದ ವಿಶೇಷ ಸೌಲತ್ತುಗಳ ಬಗ್ಗೆ ಬಹು ಸಂಖ್ಯಾಕರು ಕೊಂಕು ನುಡಿ ಆರಂಭಿಸಿದರೆ ತಮಗೆ ಬಂದ ವಿಶೇಷ ಸೌಲಭ್ಯಗಳಿಂದಾಗಿ ಅಲ್ಪಸಂಖ್ಯಾಕರು ಬೀಗಿದರು. ಇಲ್ಲಿ ಬಿರುಕು ಪ್ರಾರಂಭವಾಯಿತು.

'ಈ ಬಿರುಕನ್ನು ಅಂದೇ ಅಂದಿನ ರಾಜಕಾರಣಿಗಳು, ಅಂದಿನ ಸರಕಾರ, ಅಂದಿನ ರಾಜಕೀಯ ಪಕ್ಷಗಳು ಮುಚ್ಚಿದ್ದರೆ ಇಂದಿನ ಈ ದುರ್ದಿನಗಳು ಎಂದಿಗೂ ಬರುತ್ತಿರಲಿಲ್ಲ. ಆದರೆ ನಾನೆಂದುಕೊಂಡಂತೆ ಹಾಗಾಗಲಿಲ್ಲ. ರಾಜಕಾರಣಿಗಳು ಅಧಿಕಾರ ಗದ್ದುಗೆ ಭದ್ರಪಡಿಸಿಕೊಳ್ಳಲಿಕ್ಕೆ ಹೀಗೆ ಮಾಡಬಲ್ಲ ಅಧಿಕಾರೇತರ ಪಕ್ಷದ ರಾಜಕಾರಣಿಗಳು ಅಧಿಕಾರ ಪಡೆಯುವದಕ್ಕಾಗಿ ಇದನ್ನೊಂದು ಅಸ್ತ್ರವನ್ನಾಗಿಸಿಕೊಂಡರು: ಎರಡೂ ಕಡೆ ಸೇರಿದ ಮುಖಂಡರು, ರಾಜಕಾರಣಿಗಳು ಧರ್ಮದ ಹೆಸರಿನಲ್ಲಿ ಅಧಿಕಾರ ಹಿಡಿಯುವಂಥವರು ಎಲ್ಲರೂ ಸೇರಿ ತಮ್ಮದೇ ಆದ ಅರ್ಥವನ್ನು ಹಚ್ಚಿ ಈ ಬಿರುಕನ್ನು ದೊಡ್ಡದು ಮಾಡುತ್ತಾ ನಡೆದರು.

'ಅಲ್ಲಿಂದಲೇ ಆರಂಭವಾಯಿತು. ಅಲ್ಪಸಂಖ್ಯಾಕರರ ಹಾಗೂ ಬಹುಸಂಖ್ಯಾಕರರ ನಡುವಿನ ಶೀತಲ ಯುದ್ಧ. ಈ ಸಂದರ್ಭದಲ್ಲಿ ಯಾರೂ ಜನರ ಅಭಿಪ್ರಾಯ ಕೇಳಲೇ ಇಲ್ಲ. ತಮ್ಮ ಮೂಗಿನ ನೇರಕ್ಕೇ ಯೋಚನೆ ತೀರ್ಮಾನ ನೀಡುತ್ತ ಹೋದರು ಒಬ್ಬರ ತೀರ್ಮಾನವನ್ನು ಇನ್ನೊಬ್ಬರು ಒಪ್ಪಲಿಲ್ಲ. ಅದನ್ನವರು ಖಂಡಿಸಿದರು. ಈ ರೀತಿ ಆರೋಪ ಪ್ರತ್ಯಾರೋಪಗಳೊಂದಿಗೆ ಸಮಾಜದಲ್ಲಿ ಕೋಲಾಹಲ ಉಂಟುಮಾಡಿ ಹಾಲಾಹಲದ ಬೀಜವನ್ನು ಬಿತ್ತಿದರು.

"ಹೀಗೆ ರಾಜಕಾರಣ ಧರ್ಮ ಹಾಗೂ ಜಾತಿಗಳಲ್ಲಿ ಕೈಹಾಕಿದ್ದರಿಂದಾಗಿ ಶಾಂತಿ, ಪ್ರೀತಿ, ಸಖ್ಯಗಳ ನೆಲೆವೀಡಾದ ಭಾರತ ಒಡಲಿನ ಒಡಲಾಯಿತು. ಸುಪ್ತ ಜ್ವಾಲಾಮುಖಿಯ ತವರಾಯಿತು....ದಾವಾನಲವನ್ನು ನಂದಿಸಲು

ಯಾರೂ ಪ್ರಯತ್ನಿಸಲೇ ಇಲ್ಲ....ಹೀಗಾಗಿ ಈ ಒಂದು ಕಿಡಿ ಇಂದು ಪ್ರಜ್ವಲಿಸುವ ಅಗ್ನಿಯಾಗಿ ನಮ್ಮನ್ನೇ ಸುಡಲು ಧಾವಿಸುತ್ತಿದೆ...."

ಮೇಜರ ತನ್ನ ಮಾತನ್ನು ನಿಲ್ಲಿಸಿ, ಸ್ವಲ್ಪ ಉಸಿರು ತೆಗೆದುಕೊಂಡ. ಮುಖದ ಮೇಲಿನ ಬೆವರು ಒರೆಸಿಕೊಂಡು ಗ್ಲಾಸನ್ನೆತ್ತಿ ನಾಲ್ಕಾರು ಗುಟುಕು ನೀರು ಕುಡಿದು ಸುಧಾರಿಸಿಕೊಂಡ.

ಆತ ನೀಡಿದ ವಸ್ತುಸ್ಥಿತಿಯು ನೈಜ ಚಿತ್ರಣ ಎಷ್ಟು ಸತ್ಯವಾಗಿತ್ತೆಂದರೆ ಅಲ್ಲಿ ನೆರೆದವರು ಯಾರೂ ಅದರ ಬಗ್ಗೆ ಚಕಾರ ಶಬ್ದ ಎತ್ತಲಿಲ್ಲ. ಅದನ್ನು ವಿರೋಧಿಸುವ ಸಾಹಸವೂ ಯಾರಲ್ಲಿರಲಿಲ್ಲ. ಆತ ನುಡಿದದ್ದು ಅಕ್ಷರಶಃ ನಿಜವಾಗಿತ್ತು. ದುಷ್ಟರಾಜಕಾರಣಿಗಳನ್ನು ಬೆತ್ತಲೆ ಮಾಡಿಅವರ ಮುಂದೆ ನಿಲ್ಲಿಸಿದ್ದ ಯಾವ ಪಾಪವನ್ನೂ ಅರಿಯದ ಅಮಾಯಕ ಜನ ಯಾವ ರೀತಿ ಅವರ ಕುತಂತ್ರಕ್ಕೆ ಬಲಿಯಾಗುತ್ತಾರೆ ಎಂಬುದನ್ನಾತ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದ....

'ಇದೇ ರೀತಿ ಎಷ್ಟೋ ವರ್ಷಗಳು ಉರುಳಿದವು.'

ಹೇಮಂತ ಮತ್ತೆ ತನ್ನ ಹೇಳಿಕೆ ಆರಂಭಿಸಿದ.

'ಈ ಮಧ್ಯೆ ಚಿಕ್ಕ ಕಿಡಿಯಾಗಿದ್ದ ಈ ಒಂದು ಅಂಶ ಬೆಳೆಯುತ್ತ ಬೆಳೆಯುತ್ತ ಅಗ್ನಿಪರ್ವತವಾದರೆ, ಅದರಿಂದಾಗುವ ಲಾಭದ ಬಗ್ಗೆ ಕನಸುಕಟ್ಟಿಕೊಂಡು ತಾವು ಅಧಿಕಾರ ಗದ್ದುಗೆ ಏರುವ, ಸುಖದ ಸುಪ್ಪತ್ತಿಗೆಯ ಮೇಲೆ ಸುಖಿಸುವ ಕ್ಷಣಗಳ ಕಲ್ಪನೆಯಲ್ಲಿ ಎಲ್ಲವನ್ನೂ ಮರೆತುಬಿಟ್ಟರು.

"ಸೃಷ್ಟಿ....ಒಂದು ಅಪೂರ್ವ ಶಕ್ತಿ....ದೈವದತ್ತ ಉಡುಗೊರೆ."

"ಕೆಟ್ಟವರ ಸೃಷ್ಟಿಯಾದಾಗ ಅದನ್ನು ಸದೆಬಡಿಯಲು ಒಳ್ಳೆಯವರ ಜನ್ಮಕ್ಕೆ ಅದು ಕಾರಣವಾಗುತ್ತಿದೆ...."

"ಜಗತ್ತಿನಲ್ಲಿ ಎಲ್ಲರೂ ಕೆಟ್ಟವರಿಲ್ಲ ಒಳ್ಳೆಯವರೂ ಇದ್ದಾರೆ ಅವರಿಂದಾಗಿ ಅವರ ತ್ಯಾಗ ಬಲಿದಾನಗಳಿಂದಾಗಿ ಜಗತ್ತು ನಾಶವಾಗದೇ ಇಂದೂ ಸುಂದರವಾಗಿ ಉಳಿದಿದೆ..................ಇದಕ್ಕೆ ಸಾಕ್ಷಿ ನಮ್ಮ ಮಾಜಿ ಸಚಿವರಾದ........ ಸಾಂಬಮೂರ್ತಿಗಳು."

'ಈ ಮೊದಲೇ ಹೇಳಿದಂತೆ ಸಾಂಬಮೂರ್ತಿಗಳು ಒಬ್ಬ ಆದರ್ಶ ರಾಜಕಾರಣಿ. ನಿಜವಾದ ಅರ್ಥದಲ್ಲಿ ಪ್ರಾಮಾಣಿಕ ರಾಜಕಾರಣಿ, ಕಟ್ಟಾ ದೇಶಭಕ್ತ ಸಮಾಜ ಸೇವಕ, ಜಾತಿ ಧರ್ಮಗಳು ಹೆಸರಿನಿಂದ ಎದ್ದಿರುವ ಕೋಲಾಹಲದಿಂದಾಗಿ ಅವರು ಖತಿಗೊಂಡರು. ಕಟು ಮಾತುಗಳನ್ನು ಟೀಕಿಸಿದರು. ಪ್ರತಿಭಟಿಸಿದರು. ಭಾರತ ದೇಶದಲ್ಲಿ ವಾಸಿಸುವವರು ಅವರು ಯಾವದೇ ಜಾತಿ,

ಧರ್ಮಕ್ಕೆ ಸೇರಿದವರಾಗಲೀ ಅವರೆಲ್ಲ ಭಾರತೀಯರೇ. ಅವರ ಧರ್ಮದೇವರು ಭಾರತ ಎಂಬುದಾಗಿ ಸಾರಿ ಹೇಳಿದರು. ಈ ಏಕತೆಗೆ ಭಾರತೀಯತೆಗೆ ಧಕ್ಕೆ ತರುವ ಕೋಮು ವಿಚಾರ. ಸಂಘಟನೆಗಳನ್ನು ತಡೆಯಲು ಯತ್ನಿಸಿದರು. ಆದರೆ ಅವರ ಹೋರಾಟಕ್ಕೆ ಬೆಂಬಲ ಸಿಗಲಿಲ್ಲ. ಹೀಗಾಗಿ ಅವರ ಈ ಪ್ರಾಮಾಣಿಕ ಹೋರಾಟ ಒಂಟಿ ಹೋರಾಟವಾಗಿ ಸೋತುಹೋಯಿತು. ಅವರ ಈ ಸೋಲನ್ನು ಕೋಮುವಾದಿಗಳು ಕಂಡು ನಕ್ಕು ಅವಮಾನಿಸಿದರು.

'ಕುರದ ಮೇಲೆ ಬರೆ ಎಳೆದಂತೆ ಈ ವಿಚಾರಗಳಿಂದಾಗಿಯೇ ಸಾಂಬಮೂರ್ತಿಗಳು ಮುಖ್ಯಮಂತ್ರಿ ಹುದ್ದೆಯನ್ನು ಸ್ವಲ್ಪದರಲ್ಲಿ ಕಳೆದುಕೊಂಡರು. ಈ ಅಸಮಾಧಾನ ಅವರನ್ನು ಹಗಲಿರುಳು ಕಾಡುತ್ತಿತ್ತು. ಅದನ್ನು ಮರೆಯಲು ದಿನದ ಹೆಚ್ಚು ಹೊತ್ತು ಅವರು ಕೆಲಸ ಮತ್ತು ಸಮಾಜ ಕಾರ್ಯಗಳಲ್ಲಿ ಕಳೆಯತೊಡಗಿದರು. ಇದರಿಂದಾಗಿ ಅವರ ಜನಪ್ರಿಯತೆ ಹೆಚ್ಚತೊಡಗಿತು. ಅವರ ಒಳ್ಳೆಯ ಗುಣಗಳೇ ಅವರಿಗೆ ಮುಳ್ಳಾದವು. ಶತ್ರುವಾದವು. ಅವರು ಬೆಳೆದು ಮಹಾಪುರುಷರಾಗಿ ಜನತೆಯ ಮುಂದೆ ನಿಂತರೆ ಮುಂದೆ ಗತಿ ಏನೆಂದು ದುಷ್ಟಶಕ್ತಿಗಳು ಚಿಂತಿಸತೊಡಗಿದವು. ಅವರ ತೇಜೋವಧೆ ಮಾಡಿ, ಜೀವಂತ ಅವರನ್ನು ಸಮಾಧಿ ಮಾಡಲು ಮುಂದಾದವು, ವೇದಿಕೆ ಸಿದ್ಧವಾಯಿತು.

'ಅದೇ ಪ್ರಶ್ನೆ ಪತ್ರಿಕೆಗಳ ಸ್ಫೋಟ ಪ್ರಸಂಗ.'

"ಸಾಂಬಮೂರ್ತಿಗಳು ವಿದ್ಯಾಮಂತ್ರಿಗಳಾಗಿದ್ದಾಗ ಪ್ರಾಥಮಿಕ ಶಾಲೆಗಳಿಂದ ಹಿಡಿದು ಉಚ್ಚ ತರಗತಿಯ ಪರೀಕ್ಷೆಗಳ ವರೆಗಿನ ಪ್ರಶ್ನೆ ಪತ್ರಿಕೆಗಳು ಸ್ಫೋಟವಾದವು. ಪರೀಕ್ಷೆಗೆ ಮೊದಲೇ ಪೇಟೆಯಲ್ಲಿ ಮಾರಾಟಕ್ಕೆ ಬಂದವು. ಇದನ್ನು ಪತ್ರಿಕೆಗಳು ದೊಡ್ಡ ವಿಷಯವನ್ನಾಗಿ ಬರೆದವು.

ಒಂದು ದೃಷ್ಟಿಯಿಂದ ಇದು ಕ್ಷಮಿಸಲಾಗದ ಅಪರಾಧ.

'ಖತಿಗೊಂಡ ಸಚಿವರು ನ್ಯಾಯೋಚಿತವಾದ ವಿಚಾರಣೆಗೆಮುಂದಾದಾಗ ವಿರೋಧಿಗಳು ಬೆಚ್ಚಿದರು. ತಮ್ಮ ಅಸ್ತ್ರ ತಮಗೆ ಮರಳಿದರೆ ಗತಿ ಏನೆಂದು ಚಿಂತಿತರಾದರು....ಮುಖ್ಯಮಂತ್ರಿಗಳ ಮೊರೆ ಹೋದರು. ಮುಖ್ಯಮಂತ್ರಿಗಳಿಗೆ ಮೊದಲಿನಿಂದಲೂ ಸಾಂಬಮೂರ್ತಿಗಳ ಮೇಲೆ ಅಸಮಾಧಾನ ಇದ್ದೇ ಇತ್ತು. ಅವರನ್ನು ದಾರಿಯಿಂದ ಸರಿಸಲು ಉಪಾಯ ಹುಡುಕುತ್ತಿದ್ದರು. ಈಗ ಉಪಾಯ ಅವರನ್ನೇ ಹುಡುಕಿಕೊಂಡು ಬಂದಿತು.

"ಪರಿಣಾಮ....ಅಪರಾಧಿಗಳು ಸೆರೆಸಿಕ್ಕಲಿಲ್ಲ. ಅವರ ವಿಚಾರಣೆ ಆಗಲಿಲ್ಲ ಅವರಿಗೆ ಶಿಕ್ಷೆ ಆಗಲಿಲ್ಲ: ಅದರ ಬದಲು ನಿರಪರಾಧಿಯಾಗಿದ್ದ ಪ್ರಾಮಾಣಿಕ, ದಕ್ಷ, ನಿಷ್ಠಾವಂತ ಸಚಿವ ಸಾಂಬಮೂರ್ತಿಗಳನ್ನು ಕಳಿಸಿದ ಮುಖ್ಯಮಂತ್ರಿ

ಗಳು ಅವರ ರಾಜೀನಾಮೆ ಕೇಳಿದರು. ಅಪ್ರತಿಭರಾದ ಸಾಂಬಮೂರ್ತಿಗಳು ಕೇಂದ್ರದ ಮೊರೆಹೋದರು. ಹೈಕಮಾಂಡ್ ಮೂಕವಾಯಿತು. ಬೇರೆ ದಾರಿ ಇಲ್ಲದೆ ತಮ್ಮ ಮರ್ಯಾದೆ ಉಳಿಸಿಕೊಳ್ಳಲು ನೈತಿಕ ಹೊಣೆಹೊತ್ತು ಸಾಂಬ–ಮೂರ್ತಿಗಳು ಅಂದೇ ರಾಜೀನಾಮೆ ನೀಡಿ ಹೊರಬಂದರು.

'ಅದು ಸಾಂಬಮೂರ್ತಿಗಳ ವಿರೋಧಿಗಳಿಗೆ ದೊರೆತ ತಾತ್ಕಾಲಿಕ ವಿಜಯವಾದರೂ ಸಾಂಬಮೂರ್ತಿಗಳಿಗೆ ಮಾತ್ರ ತಡೆಯಲಾರದ ಆಘಾತ ನೀಡಿತು. ಇದೇ ಮುಂದುವರೆದರೆ ನಮ್ಮ ದೇಶಕ್ಕೆಂಥ ದುರ್ಗತಿ ದೊರೆಯ ಬಹುದು ಎಂಬುದನ್ನು ಯೋಚಿಸಿದ ಅವರು. ಇದರ ಬಗ್ಗೆ ದೇಶವಾಸಿಗಳನ್ನು ಎಚ್ಚರಿಸಲು ಒಂದೆರಡು ಕಡೆ ಪ್ರಯತ್ನಿಸಿದರು. ನಿಮ್ಮಲ್ಲಿಯ ಸಮಸ್ಯೆಗಳನ್ನು ನೀವೇ ನಿಮ್ಮಲ್ಲಿಯೇ ಬಗೆಹರಿಸಿಕೊಳ್ಳಿ, ಅದನ್ನು ರಾಜಕಾರಣಿಗಳ ಹಾಗೂ ಧಾರ್ಮಿಕ ಮುಖಂಡರ ಕೈಗೆ ಒಪ್ಪಿಸಬೇಡಿ ಎಂದು ವಿನಂತಿಮಾಡಿಕೊಂಡರು. ಪರಿಣಾಮ ಇನ್ನೂ ವಿಪರೀತವಾಯಿತು, ಇಂಥ ಹೇಳಿಕೆ ನೀಡದಂತೆ ಅವರಿಗೆ ಹೈಕಮಾಂಡ ಎಚ್ಚರಿಕೆ ನೀಡಿತು. ಸಮಸ್ಯೆ ಪರಿಹಾರ ಅವರಿಗೆ ಬೇಕಾಗಿಲ್ಲವಾಗಿದ್ದರಿಂದ ಅವರು ತಮ್ಮ ಈ ಸಮಸ್ಯೆ ಪರಿಹಾರಕ್ಕೆ ತಾವೇ ಒಂದು ಸಮಾಧಾನ ಕಂಡುಕೊಳ್ಳಲು ಯತ್ನಿಸಿದರು.

ಆಗ ಅವರಿಗೆ ನೆನಪಿಗೆ ಬಂದದ್ದು ಪಂಜಾಬ ಮಾಜಿ ಮುಖ್ಯಮಂತ್ರಿಗಳಾದ ಜ್ಞಾನಸಿಂಗ ಅವರೊಂದಿಗೆ ಇವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. ಚಲೆಜಾವ್ ಚಳವಳಿಯಲ್ಲಿ ಇಬ್ಬರೂ ಲಾಠಿ ಏಟು ತಿಂದವರು, ಜೈಲು ಸೇರಿದವರು, ಸುಖ ದುಃಖ ಹಂಚಿಕೊಂಡವರು, ಎಲ್ಲಕ್ಕಿಂತ ಹೆಚ್ಚಾಗಿ ಸಮಾನ ವಿಚಾರಧಾರೆ ಹೊಂದಿದವರು, ಇವೆಲ್ಲ ಕಾರಣಗಳಿಂದಾಗಿ ಅವರೆದುರು ತಮ್ಮ ದುಃಖ ತೋಡಿಕೊಂಡರು ಸಾಂಬಮೂರ್ತಿಗಳು. ಆ ಸಮಯದಲ್ಲಿ ಅಲ್ಲಿ ಉಪಸ್ಥಿತರಿದ್ದ ಜ್ಞಾನಸಿಂಗರ ಅಳಿಯ ಸುನಿಲ ಕಟಾರಿಯಾ ಇದಕ್ಕೆ ತೀವ್ರವಾಗಿ ಸ್ಪಂದಿಸಿದವರು ಇತ್ತೀಚಿನ ತಲೆಮಾರಿಗೆ ಸೇರಿದ ಬಿಸಿರಕ್ತದ ಸುನೀಲ ಕಟಾರಿಯಾರ ಕೆರಳಿದ ಭಾವನೆಗಳಿಂದ ಸಾಂಬಮೂರ್ತಿಗಳಿಗೆ ಅಲ್ಪ ಸಮಾಧಾನವಾದರೂ ಇದು ಅಪಾಯಕ್ಕೆ ನಾಂದಿಯಾಗಬಾರದೆಂದು ಕಳಕಳಿಯೂ ಮೂಡಿತು.

'ಮೊದಲು ಸಾಂಬಮೂರ್ತಿಗಳು ಒಂಟಿಯಾಗಿದ್ದರು. ಈಗ ಅವರ ಜೊತೆ ಜ್ಞಾನಸಿಂಗ ಹಾಗೂ ಸುನೀಲ ಸೇರಿದ್ದರಿಂದ ಅವರಲ್ಲಿದ್ದ ಶಕ್ತಿ ದ್ವಿಗುಣಿತಗೊಂಡಿತು. ಇದಕ್ಕೊಂದು ಚಳುವಳಿಯ ರೂಪಕೊಡಲು ಸುನೀಲ ಮುಂದಾದ, ಅದಕ್ಕೆ ಇಬ್ಬರೂ ಒಪ್ಪಿಗೆ ನೀಡಿದರು. ಒಬ್ಬರಿಂದ ಮೂವರವರೆಗೆ ವಿಸ್ತೃತಗೊಂಡ

ಚಳವಳಿ ಸುನೀಲನಿಂದಾಗಿ ಮೂವತ್ತಕ್ಕೇರಿತು. ಖರ್ಚಿನಭಾರ ಬೀಳತೊಡಗಿತು. ಸುನೀಲ ಉದ್ಯಮಿ. ಅವನ ಬಳಿ ಸಾಕಷ್ಟು ಹಣವಿತ್ತು. ದೇಶ ಕಾರ್ಯಕ್ಕೆ ಎಷ್ಟು ಹಣವಿದ್ದರೂ ಕಡಿಮೆ ಎಂದು ತಿಳಿದ ಸಾಂಬಮೂರ್ತಿಗಳು ತಮ್ಮ ರಂಗ ಮಹಲನ್ನು ಮಾರಲು ಹೊರಟರು. ಅವರ ಹಟದ ಮುಂದೆ ತಲೆಬಾಗಿದ ಸುನೀಲನೇ ಅದನ್ನು ಕೊಂಡ. ತಮ್ಮೆಲ್ಲ ಸಂಪತ್ತನ್ನು ಸಾಂಬಮೂರ್ತಿಗಳು ಸದ್ಯ ದೇಶ ಎದುರಿಸುತ್ತಿರುವ ಅಪಾಯದಿಂದ ಪಾರಾಗಲು ವಿನಿಯೋಗಿಸಲು ಸಂಕಲ್ಪ ಮಾಡಿದರು.

ಸುನೀಲ ದಿನೇ ದಿನೇ ತನ್ನ ಚಳವಳಿ ವೃದ್ಧಿಸುತ್ತ ನಡೆದ. ಇತ್ತ ಸಾಂಬ ಮೂರ್ತಿಗಳು ತಮ್ಮೊಂದಿಗೆ ಸದಾಶಿವ, ರತ್ನಕುಮಾರಿ ಹಾಗೂ ಹೊಸ ಪಿ.ಎ. ನನ್ನು ಸೇರಿಸಿಕೊಂಡರು. ಅವಾಗಲೇ ಒಂದು ಅವಾಂತರ ನಡೆಯಿತು. ಹೊಸ ಸಮಸ್ಯೆಯೊಂದು ಜನ್ಮತಾಳಿತು.

'ಸಾಂಬಮೂರ್ತಿಗಳ ಕಡೆ ಸೇರಿದ ನೂರಾರು ಜನರನ್ನು ದುಷ್ಟ ಶಕ್ತಿಗಳು ಕೊಂಡುಕೊಂಡವು. ಕೆಲವೇ ಸಮಯದಲ್ಲಿ ಸುನೀಲ ಎಷ್ಟು ದೊಡ್ಡ ಸೈನ್ಯ ಕೂಡಿಸಿದ್ದನೆಂದರೆ ಆತ ಸೇರಿಸಿದ ಜನರಲ್ಲಿ ಸರ್ವ ಬಗೆಯ ಜನಸೇರಿದ್ದರು. ರಕ್ಷಣಾ ಖಾತೆಯಲ್ಲಿಯ ಉನ್ನತ ಅಧಿಕಾರಿಯಿಂದ ಹಿಡಿದು ಪೋಲೀಸ ಅಧಿಕಾರಿ ವರೆಗೂ ಆತ ಪ್ರಭಾವಶಾಲಿ ವ್ಯಕ್ತಿಗಳನ್ನು ಒಂದೆಡೆ ಸೇರಿಸಿದ್ದ. ಅವರಲ್ಲಿ ಕೆಲವರು ಅಲ್ಪಸಂಖ್ಯಾತರ ಹಟದ ಸ್ವಭಾವದಿಂದಾಗಿ ಬೇಸತ್ತಿದ್ದರು. ಅವರ ರಾಷ್ಟ್ರವಿರೋಧಿ ಚಟುವಟಿಕೆ ಹಾಗೂ ಭಾವನೆಗಳಿಂದಾಗಿ ನೊಂದವರಾಗಿದ್ದರು. ಹೀಗಾಗಿ ಅಲ್ಪಸಂಖ್ಯಾತರರನ್ನು ಸಂಪೂರ್ಣವಾಗಿ ಭಾರತದಿಂದ ಹೊರಹಾಕಲು ಹಾಗೂ ಇಲ್ಲಿದ್ದ ಪ್ರಮುಖರನ್ನು ದಾರಿಯಿಂದ ಸರಿಸುವಂಥ ಭಯಂಕರ ಜಾಲದ ತಯಾರಿಕೆಗೆ ಮುಂದಾದರು. ಈ ವಿಚಾರ ಸಾಂಬಮೂರ್ತಿಗಳಿಗೆ, ಜ್ಞಾನಸಿಂಗರಿಗೆ ಹಾಗೂ ಸುನೀಲ ಕಟಾರಿಯಾಗೆ ಒಪ್ಪಿಗೆಯಾಗಲಿಲ್ಲ. ಅವರು ವಿರೋಧಿಸಿದ್ದು ಉಪಯೋಗವಾಗಲಿಲ್ಲ. ಈ ಮೂವರನ್ನೇ ಅವರು ಹೊರಹಾಕಲು ಮುಂದಾದರು, ಸಾಂಬಮೂರ್ತಿಗಳು ಚಿಂತಿತರಾದರು.

ಒಂದು ದೃಷ್ಟಿಯಿಂದ ಇದೊಂದು ಭಯಂಕರ ಯುದ್ಧ. ಅಲ್ಪಸಂಖ್ಯಾತರಿಗೆ ಅವರ ಹಟಮಾರಿತನದ ಗುಣ ಬಿಡುವಂತೆ ಒಲಿಸುವ ಬದಲು, ಅವರಲ್ಲಿರುವ ವಿಚಾರಗಳನ್ನು ಬದಲಿಸುವ ಬದಲು ಅವರನ್ನು ಈ ದೇಶದಿಂದ ಹೊಡೆದೋಡಿಸುವದೆಂದರೆ ಹೇಗೆ?

'ಹಗಲಿರುಳು ಚಿಂತಿಸಿದ ಸಾಂಬಮೂರ್ತಿಗಳು ಒಂದು ದಿನ ಖ್ಯಾತ ಪತ್ರಿಕಾ ವರದಿಗಾರ ಚಂದ್ರಮೋಹನನನ್ನು ಭೆಟ್ಟಿಯಾದರು. ಅವನ ಮುಂದೆ

ಎಲ್ಲ ವಿಷಯವನ್ನೂ ತಿಳಿಸಿದರು. ಆ ಜನರನ್ನೆಲ್ಲ ಬಂಧಿಸುವಂತೆ ಮಾಡಿ ಮುಂದಾಗುವ ಅನಾಹುತ ತಪ್ಪಿಸುವಂತೆ ಮನವಿ ಮಾಡಿಕೊಂಡರು. ಚಂದ್ರಮೋಹನ ಒಪ್ಪಿಕೊಂಡ. ಅವರಿಂದ ಮಹತ್ವದ ಮೀಟಿಂಗ ನಡೆಯುವ ದಿನ ತಿಳಿದುಕೊಂಡ. ಸಾಂಬಮೂರ್ತಿಗಳು ತಿಳಿಸಿದ ದಿವಸ ತುಂಬಾ ಮಹತ್ವದ್ದಿತ್ತು. ಅಂದು, ದೇಶದ ಪ್ರಸಿದ್ಧ ರಾಜಕೀಯ ಧುರೀಣರು, ಮುಖಂಡರು, ಧಾರ್ಮಿಕ ವ್ಯಕ್ತಿಗಳು ಅಲ್ಲಿ ಸೇರಿ ಸಮಾಲೋಚನೆ ನಡೆಸುವವರಿದ್ದರು. ಅವರಿಗೆ ಈ ಸಮಸ್ಯೆ ಬಗೆಹರಿಯುವದು ಬೇಕಾಗಿರಲಿಲ್ಲ. ಬೆಳೆದು ಪ್ರಜ್ವಲಿಸುವದು ಬೇಕಾಗಿತ್ತು. ಅದು ಜೀವಂತವಾಗಿರಬೇಕಿತ್ತು.ಅಂದಾಗಲೇ ಅದನ್ನೇ ತಮ್ಮ ಮುಖ್ಯ ಕಸುಬು ಮಾಡಿಕೊಂಡು ಅಧಿಕಾರಕ್ಕೆ ಅಂಟಿಕೊಂಡು ಜನರನ್ನು ಉದ್ದೇಶಿಸಿ, ಅವರ ಭಾವನೆ ಕೆರಳಿಸಿ, ತಮ್ಮ ಅಂಕುಶದಲ್ಲಿ ಇಟ್ಟುಕೊಳ್ಳಬಹುದಿತ್ತು. ಒಂದೊಂದು ಕಡೆ ಒಂದೊಂದು ಬಗೆಯ ಮಾತು ಆಡಿ ಉದ್ರೇಕರಾಗಿ ಭಾಷಣ ಮಾಡಿ ಸಮಾಜದಲ್ಲಿ ಅಶಾಂತಿ, ಕಲಹ, ದಂಗೆ ಮುಂತಾದವುಗಳನ್ನು ಹರಡುವ ಸೀಳುನಾಲಿಗೆಯ ಹತ್ತಾರು ನಾಯಕರು ಅಲ್ಲಿ ಸೇರುವವರಿದ್ದರು.

'ದೇಶಕ್ಕೆ ಕಂಟಪ್ರಾಯರಾಗಿರುವ ಅಂಥ ಸೀಳುನಾಲಿಗೆಯ ನಾಯಕರನ್ನು ಬೆತ್ತಲಾಗಿ ನಿಲ್ಲಿಸಲು ಚಂದ್ರಮೋಹನ ಸಿದ್ಧನಾದ. ಅವನಿಗೆ ತಾನು ಕೈಕೊಂಡ ಕೆಲಸ ಅಪಾಯಕಾರಿ ಎಂದು ತಿಳಿದಿತ್ತು. ಸ್ವಲ್ಪ ಸುಳಿವು ಆ ಜನರಿಗೆ ಸಿಕ್ಕರೂ ತಾನು ಜೀವಸಹಿತ ಉಳಿಯಲಾರೆ ಎಂದೂ ಆತ ಅರಿತಿದ್ದ. ಆದರೂ ದೇಶದ ಅಳಿವು ಉಳಿವಿಗಾಗಿ, ಸುಂದರ ಭವಿಷ್ಯಕ್ಕಾಗಿ, ಸೀಳುನಾಲಿಗೆಯ ನೂರಾರು ಜನರ ಮುಖವಾಡ ಕಳಚುವ ಕೆಲಸ ತೀರಾ ಅವಶ್ಯವಾಗಿರುವದರಿಂದ ಜೀವದ ಹಂಗು ತೊರೆದು ಆತ ಮುಂದಾದ. ಪತ್ನಿ ಅನಸೂಯಾಳ ಮುಂದೆ ತನ್ನ ಕೆಲಸದ ರೂಪರೇಷೆ ತಿಳಿದಿದ್ದರೂ ಜೀವಕ್ಕೆ ಅಪಾಯವಿದೆ ಎಂಬುದನ್ನು ಮಾತ್ರ ತಿಳಿಸಲು ಮರೆಯಲಿಲ್ಲ.

'ಎಲ್ಲ ಸುಸೂತ್ರವಾಗಿ ನಡೆಯಿತು. ಸಾಂಬಮೂರ್ತಿ, ಸುನೀಲ, ಹಾಗೂ ಜ್ಞಾನಸಿಂಗ ಮೂವರೂ ಎಲ್ಲರೊಂದಿಗೆ ಬೆರೆತರು....ಅಲ್ಲಿಯೇ ಅನೇಕ ಘಾತುಕ ವ್ಯಕ್ತಿಗಳ ಪರಿಚಯವಾಯಿತು. ಚಾಂಗಚಿನ್ ಎಂದು ಸುಳ್ಳು ಹೆಸರು ಇಟ್ಟುಕೊಂಡ ಅಂತರರಾಷ್ಟ್ರೀಯ ಖದೀಮನಿಗೆ ದೇಶದ ಆಂತರಿಕ ಭದ್ರತೆಗೆ ಧಕ್ಕೆ ತರುವ, ಅಶಾಂತಿ, ದಂಗೆ ಕೊಲೆ, ಸುಲಿಗೆ ನಡೆಸುವ ವಿಮಾನ ಅಪಘಾತ ನಡೆಸಿ ಕೋಲಾಹಲವೆಬ್ಬಿಸುವ ಕೆಲಸ ವಹಿಸಿಕೊಡಲಾಯಿತು. ಸಾರ್ವಜನಿಕ ವೇದಿಕೆ ಮೇಲೆ ಒಬ್ಬರನ್ನೊಬ್ಬರು ಟೀಕಿಸುವ ಬೇರೆ ಬೇರೆ ಮುಖಂಡರು ಇಲ್ಲಿ ಒಂದೆಡೆ ಕೂಡಿ ತಿಂದು, ಕುಡಿದು ತೇಗಿದರು. ತಮ್ಮ ತಮ್ಮ ಕೆಲಸದಲ್ಲಿ ಇದೇ ರೀತಿ

ಮುಂದುವರೆದು ಜನರನ್ನು ಬಲಿಪಶು ಮಾಡಲು ಕಂಕಣಬದ್ಧರಾದರು. ಕೋಮುವಾದಿ ದುಷ್ಟಶಕ್ತಿಗಳ ಜೊತೆಗೆ ಧಾರ್ಮಿಕ ಮುಖಂಡರೂ ಇದರಲ್ಲಿ ಸೇರಿಕೊಂಡಿದ್ದರು.

'ಸುಮಾರು ಮೂರುಗಂಟೆಗಳ ಕಾಲ ನಡೆದ ಈ ಮೀಟಿಂಗಿನ ವಿಡಿಯೋ ಚಿತ್ರೀಕರಣ ಚಂದ್ರಮೋಹನ ಯಾರಿಗೂ ಸಂಶಯಬರದಂತೆ ಮಾಡಿಕೊಂಡ. ಎರಡು ಮೂರು ಕಡೆ ಕೆಮರಾ ಕೂಡಿಸಿದ್ದ ಆತ. ಎಲ್ಲ ಮೀಟಿಂಗ ಮುಗಿದ ಮೇಲೆ ಒಂದೊಂದಾಗಿ ಟೇಪ ಸಹಿತ ಕೆಮರಾ ತೆಗೆದುಕೊಂಡು ಸಾಂಬಮೂರ್ತಿ ಗೋಂಡಿಗೆ ಹೊರಬರುವಾಗ ಆಕಸ್ಮಾತ್ತಾಗಿ ಚಾಂಗಚಿನ್ ಕಣ್ಣಿಗೆ ಬಿದ್ದುಬಿಟ್ಟ........ಅಲ್ಲಿಂದ ಅವನ ಕೈಗೆ ಸಿಗದಂತೆ ಎಲ್ಲರೂ ಎಲ್ಲರೂ ದಿಕ್ಕು ಸಿಕ್ಕತ್ತ ಫರಾರಿಯಾದರು.

'ಚಾಂಗಚಿನ್'ನಿಂದಾಗಿ ಸೀಳುನಾಲಿಗೆ ದುಷ್ಟಕೂಟದ ಎಲ್ಲ ಜನರಿಗೆ ಇದು ತಿಳಿದು ಎಲ್ಲರೂ ಭೂಮಿಗಿಳಿದು ಹೋದರು. ಚಂದ್ರಮೋಹನ ಚಿತ್ರಿಸಿದ ಟೇಪು ಸಾರ್ವಜನಿಕರೆದುರು ಬಂದರೆ ಅವರೆಲ್ಲ ತಮ್ಮನ್ನು ಕಲ್ಲಿನಿಂದ ಹೊಡೆದು ಕೊಲ್ಲುವುದು ಖಾತ್ರಿ ಎಂದು ಭಾವಿಸಿ ಚಂದ್ರಮೋಹನನ ಕಥೆ ಮುಗಿಸುವಂತೆ ಚಾಂಗಚಿನ್‌ಗೆ ಹೇಳಿದರು.

'ಚಂದ್ರಮೋಹನ ವಿಡಿಯೋ ಕ್ಯಾಸೆಟ್‌ನ್ನು ನಾರಾಯಣಪುರದ ಬರೋಡಾ ಬ್ಯಾಂಕಿನ ಲಾಕರದಲ್ಲಿಟ್ಟು,ಲಾಕರನ್ನು ಒಂದು ಚಿಕ್ಕ ಪ್ಯಾಕೆಟನಲ್ಲಿ ಬಂದು ಮಾಡಿ ತನ್ನ ವಿಳಾಸ ಬರೆದು ಮಿತ್ರ ಭಂಡಾರಿ ಕೈಗೆ ಕೊಟ್ಟ, ಒಂದು ಒಂದೂವರೆ ತಿಂಗಳಲ್ಲಿ ನಾನು ಬರದಿದ್ದರೆ ಇದನ್ನು ಪೋಸ್ಟಮಾಡು ಎಂದವನಿಗೆ ಸೂಚನೆ ನೀಡಿದ್ದ. ಅವರಿಗೆ ಪ್ರಾಣಾಪಾಯದ ಭಯವಿತ್ತು. ಹೀಗಾಗಿ ಮನೆ ಕಡೆ ತಲೆಹಾಕಲಿಲ್ಲ. ಆಫೀಸಿಗೂ ಹೋಗಲಿಲ್ಲ, ಎಲ್ಲೆಲ್ಲೋ ಸುತ್ತುತ್ತ ತಲೆ ಮರೆಸಿಕೊಂಡಿದ್ದ.

'ಚಾಂಗಚಿನ್ ಚಂದ್ರಮೋಹನನ ಬೇಟೆ ಆರಂಭಿಸಿದ್ದ. ನಡುವೆ ವಿಮಾನ ಅಪಘಾತದ ದುಷ್ಟಕಾರ್ಯಕ್ಕೂ ಮುಂದಾದ.ಅತಿ ಹೆಚ್ಚು ಅಲ್ಪಸಂಖ್ಯಾಕರಿರುವ, ಹಾಗೂ ಅಲ್ಪಸಂಖ್ಯಾತ ಧುರೀಣರಿರುವ, ಇಲ್ಲವೆ ತಮಗೆ ವಿರುದ್ಧವಾಗಿರುವ ನಾಯಕರಿರುವ ವಿಮಾನಗಳನ್ನು ಧ್ವಂಸ ಮಾಡಲು ಆತ ಯೋಜನೆ ಸಿದ್ಧಪಡಿಸಿದ. ಹಾಗೂ ಹೀಗೂ ಮಾರ್ಟಿನ್,ನಟರಾಜ, ಹಾಗೂ ರುಕ್ಮಿಣಿಯರನ್ನು ತನ್ನ ಜಾಲಕ್ಕೆ ಸೇರಿಸಿಕೊಂಡ. ಅವರಿಗೆ ಚೆನ್ನಾಗಿ ದುಡ್ಡುಕೊಟ್ಟ, ವಿಮಾನ ಹಾರುವ ಐದು ಹತ್ತು ನಿಮಿಷ ಮೊದಲು ಏನಾದರೂ ನೆವಮಾಡಿ ಚಾಲಕರ ಕೋಣೆ ಪ್ರವೇಶಿಸಿ ಪೆಟ್ರೋಲ ಟ್ಯಾಂಕಿಗೆ ಸಮ್ಮಂಧಪಡುವಂತೆ ಹೊಸದಾಗಿ

ಶೋಧಿಸಿದ ಕೆಂಪುಬಣ್ಣದ ಮಿದುವಾದ ಮಾತ್ರೆ ಅಂಟಿಸಿದರಾಯಿತು. ಕೆಲವೇ ಸೆಕೆಂಡುಗಳಲ್ಲಿ ಮಾತ್ರೆಯಲ್ಲಿದ್ದ ದ್ರವ ಟ್ಯಾಂಕ ಕೊರೆದು ಪೆಟ್ರೋಲ ತಗಲುತ್ತಲೂ ಬೆಂಕಿಯಾಗಿ ಹಾರುತ್ತಿತ್ತು. ವಿಮಾನ ಭಸ್ಮವಾಗುತ್ತಿತ್ತು.

‘ಈ ಕೆಲಸ ನಡೆದಿರುವಾಗಲೇ ಇತ್ತ ಸಾಂಬಮೂರ್ತಿಗಳು ನನ್ನ ಜೊತೆ ಆಟ ಆರಂಭಿಸಿದರು. ಒಂದು ದೃಷ್ಟಿಯಿಂದ ಅವರಿಗೆ ಪ್ರಾಣಭೀತಿ ಇತ್ತು. ಯಾವಾಗ ಆ ದುಷ್ಟಕೂಟದ ಜನರ ಕೈಗೆ ಸಿಕ್ಕಿಹಾಕಿಕೊಳ್ಳುತ್ತೇವೋ ಎಂಬ ಭಯ. ಅದಕ್ಕಾಗಿ ಒಂದು ಬಗೆಯಿಂದ ನನ್ನನ್ನು ತನ್ನ ಬಾಡಿಗಾರ್ಡ್ ಮಾಡಿಕೊಳ್ಳುವ ಯೋಜನೆ ಅವರದು. ನನಗದು ತಿಳಿಯಲಿಲ್ಲ. ಹೀಗಾಗಿ ಅವರ ಮೋಸದಾಟದಲ್ಲಿ ಸಿಲುಕಿ ನಾನೊಂದು ದಾಳವಾದೆ.ನನ್ನ ಸಂಗಡಿಗರೂ ಸಹ.... ಇದನ್ನರಿತುಕೊಳ್ಳಲು ನನಗೆ ಎಷ್ಟೋ ದಿನಗಳು ಹಿಡಿದವು. ಸಾಂಬಮೂರ್ತಿಗಳ ಬಗ್ಗೆ ನನಗೆ ಸಂಶಯ ಬಂದರೂ ರಂಗಮಹಲಿನಲ್ಲಿ ಚಾಂಗಚಿನ್ ನನ್ನ ಕೊಲೆಗೆ ಪ್ರಯತ್ನಿಸಿದ ವಿಷಯ ಮಾತ್ರ ನನಗೆ ಗೊಂದಲದಲ್ಲಿ ಕೆಡವಿತ್ತು. ಅಲ್ಲಿ ದೊರೆತ ಶವ ಯಾರದೆಂದು ತಿಳಿಯದಂತಾಗಿತ್ತು.

‘ಇಲ್ಲೊಂದು ಘಟನೆ ನಡೆಯಿತು. ಸಾಂಬಮೂರ್ತಿ ಸದಾಶಿವ ನಾಟಕ ಮಾಡಿ ರಂಗಮಹಲಿಗೆ ನನ್ನನ್ನು ಕಳಿಸಿದರು. ಆದರೆ ಅಲ್ಲಿ ಅವರಿಗಿಂತ ಮೊದಲೇ “ಚಾಂಗಚಿನ್” ಇದ್ದದ್ದು ಕಂಡು ಅಲ್ಲಿಂದ ಫರಾರಿಯಾದರು. ಅವರು ತಮ್ಮ ಜೀವ ಉಳಿಸಿಕೊಂಡರೂ ನನ್ನನ್ನು ಅಪಾಯದಲ್ಲಿ ಕೆಡವಿದರು. ಸಾಂಬಮೂರ್ತಿಗಳ ಈ ಮೂರ್ಖತನವೇ ನನಗೆ ಚಂದ್ರಮೋಹನನ್ನು ಹುಡುಕುವಂತೆಮಾಡಿತು ಸದಾಶಿವನ ಸಹಾಯವೂ ನನಗೆ ದೊರೆಯಿತು.

‘ಚಂದ್ರಮೋಹನನ ವಿಡಿಯೋ ಕ್ಯಾಸೆಟ್ ಎಲ್ಲಿಟ್ಟಿದ್ದಾನೆ ಎಂಬುದು ಸಾಂಬಮೂರ್ತಿಗಳಿಗೂ ತಿಳಿದಿರಲಿಲ್ಲ. ಅದರ ಬಗ್ಗೆ ಅವರು ತೀವ್ರ ಚಿಂತೆಯಲ್ಲಿ ಮುಳುಗಿದ್ದರು. ಸಾಂಬಮೂರ್ತಿಗಳ ವಿವಂಚನೆಗೆ ಕಾರಣವಿಲ್ಲದಿರಲಿಲ್ಲ. ಅಂದು ಚಂದ್ರಮೋಹನನಿಗೆ ರಹಸ್ಯಸಭೆ ಬಗ್ಗೆ ತಿಳಿಸುವಾಗ ತಾವೂ ಆಸಭೆಯಲ್ಲಿರುವದು ಅವರ ಕಲ್ಪನೆಗೆ ಬಂದಿರಲಿಲ್ಲ. ಇದರಿಂದಾಗಿ ಆತ ಚಿತ್ರಿಸಿಕೊಂಡ ಕ್ಯಾಸೆಟ್‌ನಲ್ಲಿ ಸ್ವತಃ ಸಾಂಬಮೂರ್ತಿಗಳಲ್ಲದೇ ಅವರ ಜೊತೆ ಜ್ಞಾನಸಿಂಗ ಅವರ ಅಳಿಯ ಸುನೀಲ ಕಟಾರಿಯಾ ಸಹ ಕಾಣಿಸಿಕೊಂಡರು. ಒಂದು ವೇಳೆ ಚಂದ್ರಮೋಹನ ಈ ಕ್ಯಾಸೆಟ್‌ನ್ನು ಸರಕಾರದ ವಶಮಾಡಿದರೆ ಅಥವಾ ಸಾರ್ವಜನಿಕವಾಗಿ ಪ್ರದರ್ಶಿಸಿದರೆ ಆ ಎಲ್ಲ ಸೀಳುನಾಲಿಗೆಯ ಸಮಾಜದ್ರೋಹಿ, ದೇಶದ್ರೋಹಿ ಜನರೊಂದಿಗೆ ಇವರೂ ಸಹ ಸೇರಿಕೊಂಡುಬಿಡುತ್ತಿದ್ದರು....ಅಲ್ಲದೆ ಅಂದು ಚರ್ಚೆಗೆ ಬಂದ ವಿಷಯಗಳೂ ಸಹ ತುಂಬಾ ಅಪಾಯಕಾರಿಯಾಗಿದ್ದವು.

ಜನರನ್ನು ಉದ್ರೇಕಿಸಿ ಅವರಿಂದ ತಮಗೆ ಅನುಕೂಲಕರವಾಗುವಂಥ ಕೆಲಸ ಮಾಡಿಸಿಕೊಳ್ಳಲು ಈ ಸಮಾಜಘಾತುಕ ಶಕ್ತಿಗಳು ಹೊಂಚು ಹಾಕಿದ್ದವು. ಹೊಡೆದಾಡಿ ಬಡಿದಾಡಿ ಜನ ಸಾಯುತ್ತಿದ್ದರು. ದೇಶ ಹಾಳಾಗುತ್ತಿತ್ತು. ಅವರನ್ನೂ ಈ ಸ್ಥಿತಿಗೆ ತಂದ ಈ ಜನ ಪಂಚತಾರಾ ಹೊಟೆಲ್‌ಗಳಲ್ಲಿ ಹಾಯಾಗಿ ಕುಡಿಯುತ್ತ ಮಜನಾಗಿರುತ್ತಿದ್ದರು.

'ಹೊಸದಾಗಿ ಉದ್ಭವಿಸಿದ ಬಿಕ್ಕಟ್ಟಿನಿಂದ ಪಾರಾಗಲು ಸಾಂಬಮೂರ್ತಿಗಳಿಗೆ ಒಂದೇ ದಾರಿ ಇತ್ತು. ಚಂದ್ರಮೋಹನನನ್ನು ಹುಡುಕುವುದು. ಅವನಿಂದ ಕ್ಯಾಸೆಟ್ ಪಡೆದು ತಾವು ಮೂವರು ಕಾಣಿಸಿಕೊಂಡ ಭಾಗವನ್ನು ತೆಗೆದುಹಾಕಿ ಪುನಃ ಮತ್ತೊಂದು ಕ್ಯಾಸೆಟ್ ಸಿದ್ಧಪಡಿಸುವದು. ಇಷ್ಟು ಮಾಡಿದಾಗ ಮಾತ್ರ ಅವರು ಅಪಾಯದಿಂದ ಪಾರಾಗುತ್ತಿದ್ದರು.

ಒಂದು ರೀತಿಯಿಂದ ಯೋಚಿಸಿದರೆ ಈ ಭಯಾನಕ ಮೋಸ ಜಾಲದಲ್ಲಿ ಸಾಂಬಮೂರ್ತಿಯವರ ಪಾತ್ರ ಎಳ್ಳಷ್ಟೂ ಇರಲಿಲ್ಲ. ಅವರು ದೇಶದ ಒಳಿತಿಗಾಗಿಯೇ ಯೋಚಿಸಿದರು. ಆದರೆ ಮುಂದೆ ಹೋಗಾಟ ಸೂತ್ರ ಅವರ ಕೈಯಿಂದ ಜಿಗಿದು ಘಾತುಕರ ಕೈಸೇರಿತ್ತು. ಸುಧಾರಿಸಲು ಬಹಳಷ್ಟು ಪ್ರಯತ್ನಪಟ್ಟು ಸೋತಿದ್ದರವರು.

'ಅದಕ್ಕಾಗಿ ಅವರು ಎರಡು ಕಾರ್ಯ ಒಂದೇ ಬಾರಿ ಕೈಕೊಂಡರು. ಒಂದನೆಯದಾಗಿ ನನ್ನ ಜೊತೆ ಸಂಪರ್ಕಮಾಡಿ ಈ ಭಯಂಕರಜಾಲದ ಸುಳಿವು ನೀಡಿದರು. ಚಾಂಗಚಿನ್ ಹಾಗೂ ಚಂದ್ರಮೋಹನನತ್ತ ನಮ್ಮ ಲಕ್ಷ್ಯ ಹರಿಸಿದರು. ಅದರ ಜೊತೆ ಜೊತೆಗೇ ತಮ್ಮ ರಕ್ಷಣೆಯನ್ನೂ ನನ್ನ ಮೂಲಕ ಮಾಡಿಕೊಂಡರು.

'ಅವರಿಗಿದ್ದ ಭಯ ಎರಡು. ಮೊದಲನೆಯದು ಕ್ಯಾಸೆಟ್ ಎಲ್ಲಿ ಅಪರಾಧಿಗಳ ಅಥವಾ ನನ್ನ ಕೈಗೆ ದೊರೆಯುತ್ತದೋ ಎಂಬ ಭಯ. ಎರಡನೆಯದಾಗಿ ತಾವೆಲ್ಲಿ ಅವರ ಕೈಗೆ ಸಿಕ್ಕಿ ಪ್ರಾಣಕ್ಕೆರವಾಗುತ್ತೇವೋ ಎಂಬ ಶಂಕೆ. ಎರಡಕ್ಕೂ ಸಮಾಧಾನ ದೊರೆತದ್ದು ನನ್ನಿಂದಾಗಿ....ಕೆಲವೊಂದು ದಿವಸ ನಾನು ಅವರ ಕೈಗೊಂಬೆಯಾದೆ. ಇದರಿಂದ ನನಗೇನೂ ಹಾನಿಯಾಗದಿದ್ದರೂ "ಚಾಂಗಚಿನ್" ಯಾವ ಕುತಂತ್ರದಿಂದ ವಿಮಾನ ಅಪಘಾತ ಮಾಡಿಸುತ್ತಿದ್ದಾನೆ. ಇದರಿಂದಾಗಿ ಅವರಿಗೆ ಬೇಡವಾದ ಜನ ಹೇಗೆ ಪ್ರಾಣಕಳೆದುಕೊಳ್ಳುತ್ತಿದ್ದಾರೆ ಎಂಬುದನ್ನು ಕಂಡು ಹಿಡಿಯುವದರ ಜೊತೆಗೆ ನಾನು ಚಂದ್ರಮೋಹನವರೆಗೆ ತಲುಪಿದೆ. ಸಾಂಬಮೂರ್ತಿಗಳೂ ಸಹ ಅನುಸೂಯಾ ಹಾಗೂ ಮಗು ಆನಂದನನ್ನು ಕಿಡ್‌ನ್ಯಾಪ್ ಮಾಡಿ ನನಗಿಂತ ಮೊದಲೇ ಕ್ಯಾಸೆಟ್ ವಶಪಡಿಸಿಕೊಳ್ಳಲು

ಮುಂದಾದರು. ಅನುಸೂಯಾ ಹಾಗೂ ಆನಂದನನ್ನು ನಾನು ನನ್ನ ಸಂಗಡಿಗರ ಸಹಾಯದೊಂದಿಗೆ ಬಿಡಿಸಿದೆ. ಈ ಸಮಯದಲ್ಲಿ ಅಶೋಕ ಗುಂಡಿನಿಂದ ಗಾಯ ಹೊಂದಿದ. ಚಾಂಗಚಿನ್ ಮತ್ತು ನಟರಾಜ ಹಾಗೂ ರುಕ್ಮಿಣಿಯರು ತಮ್ಮ ತಮ್ಮ ಪ್ರಾಣಗಳನ್ನು ಕಳೆದುಕೊಂಡರು.

'ಇತ್ತ "ಚಾಂಗಚಿನ್"ನನ್ನು ನಿಯಮಿಸಿಕೊಂಡ ದುಷ್ಟಕೂಟದವರು ಅವನ ಮೂಲ ರಾಷ್ಟ್ರವಿರೋಧಿ ಚಟುವಟಿಕೆಗಳ ಮೂಲಕ ದೇಶದ ಆಂತರಿಕ, ಹಾಗೂ ವಿಮಾನ ಅಪಘಾತಗಳ ಮೂಲಕ ಬಾಹ್ಯ ಭದ್ರತೆಗೆ ಧಕ್ಕೆ ತರುವ ಕೆಲಸ ಮುಂದುವರೆಸಿದರು. ಜನರಲ್ಲಿ ಕೋಮುವಾದ ಜಾತಿವಾದದ ಭಾವನೆಗಳನ್ನು ಬಿತ್ತಿ ಅವು ಪ್ರಜ್ವಲಿಸುವಂತೆ ಮಾಡುವದು. ಅವರನ್ನು ಹಿಂಸಾಚಾರದತ್ತ ಒಯ್ಯುವದನ್ನು ಕಾಯಕ ಮಾಡಿಕೊಂಡರು. ಇದರಲ್ಲಿ ಹಿಂದೆ ಇದ್ದ ಜನರೆದುರು ಸಾತ್ವಿಕತೆಯ ಸೋಗು ಹಾಕಿ ಅವರನ್ನು ತಮ್ಮ ಉದ್ದೇಶಗಳಿಗೆ ಬಳಸಿಕೊಳ್ಳಲು ಧಾರ್ಮಿಕ ಮುಖಂಡರು. ರಾಜಕಾರಣಿಗಳು ಮುಂದಾದರು. ಅವರೆಲ್ಲ ಒಂದೊಂದು ಕಡೆ ಒಂದೊಂದು ಬಗೆಯ ಹೇಳಿಕೆ ನೀಡಿ ತಮ್ಮ ಸೀಳು ನಾಲಿಗೆಯ ಪ್ರವೃತ್ತಿಯಿಂದಾಗಿ ಜನರಲ್ಲಿ ಹಿಂಸೆ, ಸೇಡು ಪ್ರಜ್ವಲಿಸುವಂತೆ ಮಾಡಿ ಸಂತಸಪಟ್ಟರು. ಇವರೆಲ್ಲ ಬಾಹ್ಯವಾಗಿ ಬೇರೆ ಬೇರೆಯಾಗಿ ಕಂಡರೂ ಆಂತರಿಕವಾಗಿ ಒಂದೇ ಆಗಿದ್ದರು. ಇದನ್ನರಿಯದ ಜನ ಅಂಧರಾದರು. ತಮ್ಮನ್ನು ತಾವೇ ತಮ್ಮ ರಾಜಕೀಯ ಹಾಗೂ ಧಾರ್ಮಿಕ ನಾಯಕರ ಕೈಗೆ ಸೆರೆಯಾಳಾಗಿ ಒಪ್ಪಿಸಿಕೊಂಡರು. ಹೀಗಾಗಿ ಕುರ್ಚಿ ಹಾಗೂ ಅಧಿಕಾರದ ಕನಸು ಕಾಣುತ್ತಿದ್ದ ಭಂಡರಿಗೆ ಸ್ವರ್ಗ ಮೂರೇ ಗೇಣು ಉಳಿದಂತಾಯಿತು.

'ಅವರಿಗೆ ಚಳಿಜ್ವರ ಬಂದದ್ದು ಚಂದ್ರಮೋಹನನ ಪ್ರವೇಶದಿಂದ. ಆತ ಒಬ್ಬ ಪ್ರಾಮಾಣಿಕ ಪತ್ರಕಾರ. ತಮ್ಮೆಲ್ಲ ಕುಟಿಲ ಕಾರಸ್ಥಾನದ ಟೇಪಮಾಡಿಕೊಂಡಿದ್ದಾನೆ....ಅವನಿಗೆ ಸಾಂಬಮೂರ್ತಿ ಜ್ಞಾನಸಿಂಗ ಹಾಗೂ ಸುನೀಲ ಬೆಂಗಾವಲಾಗಿದ್ದಾರೆ ಎಂದು ತಿಳಿದಾಗ ಕಂಗಾಲಾದರು. ಚಂದ್ರಮೋಹನ ಹಾಗೂ ಈ ಮೂವರನ್ನು ಮುಗಿಸಲು ಮುಂದಾದರು. ಚಾಂಗಚಿನ್‌ಗೆ ಚಂದ್ರಮೋಹನ ಸಿಕ್ಕ. ಆದರೆ ಟೇಪ್ ಸಿಗಲಿಲ್ಲ. ಅವನ ಚಿತ್ರಹಿಂಸೆಗೆ ಆತ ತನ್ನ ಪ್ರಾಣಕೊಟ್ಟನೇ ಹೊರತು ಗುಟ್ಟುಬಿಟ್ಟುಕೊಡಲಿಲ್ಲ. ಈ ಮೂವರಿಗೆ ನಾನು ಬೆಂಗಾವಲಾಗಿರುವದರಿಂದಾಗಿ ಉಳಿದುಕೊಂಡರು.

ಈ ಕಣ್ಣುಮುಚ್ಚಾಲೆ ಆಟ ನಡೆದಿರುವಾಗಲೇ ನಾನು ಜಾಗೃತನಾದೆ. ಇದರ ಹಿಂದೆ ಬೇರೊಂದು ನಾಟಕವಿದೆ ಎಂದು ಕಂಡುಹಿಡಿದು, ಪರದೇಶಕ್ಕೆ ತೆರಳುವ ನಾಟಕ ಮಾಡಿ ಶೋಧನೆ ಆರಂಭಿಸಿದೆ, ಆದರ ಪರಿಣಾಮವಾಗಿ

ಚಾಂಗಚಿನ್ ಹತನಾದ....ನಟರಾಜ........ರುಕ್ಮಿಣಿ ಪರಲೋಕ ಸೇರಿದರು. ಸಾಂಬಮೂರ್ತಿಗಳ ಗುಂಪು ಸೆರೆಸಿಕ್ಕಿತು....ಇವರ ಸೆರೆಯಲ್ಲಿದ್ದ ಅನುಸೂಯಾ ಹಾಗೂ ಆನಂದ ಬಿಡುಗಡೆ ಹೊಂದಿದರು....ಟೇಪು ನನ್ನ ಕೈಸೇರಿತು.

'ಕೆಡಿಸ ಭಾವನೆಗೆ ಬಲಿಯಾಗಿ 'ಹಿಂಸಾಚಾರ' ಒಂದೇ ಮಾರ್ಗವೆಂದು ನಂಬಿ ದುರಂತಕ್ಕೆ ನಾಂದಿ ಹಾಡಿದವರಿಂದ ನಮ್ಮ ದೇಶ ಭಾರೀ ಅನಾಹುತ ದಿಂದ ಪಾರಾಯಿತು. ಈ ಸಂಚಿನಲ್ಲಿ ಒಂದಾಗಿದ್ದ ಸುಮಾರು ಇನ್ನೂರಾ ಎಂಭತ್ತು ಜನರನ್ನು ನಿನ್ನೆ ಸಾಯಂಕಾಲವೇ ಬಂಧಿಸಲಾಗಿದೆ.ಚಂದ್ರಮೋಹನನ ಬಳಿ ಇದ್ದ ಟೇಪು....ಇದಕ್ಕೆಲ್ಲ ಕಾರಣ....

'ಪ್ರಾಮಾಣಿಕ ಪತ್ರಕರ್ತನಾಗಿ ತನ್ನ ಪ್ರಾಣಾಹುತಿಯನ್ನು ನೀಡಿದ ಚಂದ್ರಮೋಹನನನ್ನು ದೇಶ ಎಂದೂ ಮರೆಯದು. ಅವನ ಬಲಿದಾನ ಎಂದೂ ವ್ಯರ್ಥವಾಗಲಾರದು. ಅವನ ಬಗ್ಗೆ ನಮಗೆಲ್ಲಾ ಹೆಮ್ಮೆ ಇದೆ....

'ನನ್ನ ಮಾತು ಮುಗಿಸುವ ಮೊದಲು ನಾನು ನನ್ನ ದೇಶವಾಸಿಗಳಿಗೆ ಒಂದೆರಡು ಮಾತು ಹೇಳಬಯಸುತ್ತೇನೆ....

'ನೀವು ನಿಮ್ಮ ಸಮಸ್ಯೆಗಳನ್ನು ನಿಮ್ಮ ಊರಿನ ಸಮಸ್ಯೆಗಳನ್ನು ನಿಮ್ಮಲ್ಲೇ ಬಗೆಹರಿಸಿಕೊಳ್ಳಿ. ಅದನ್ನು ಬೆಳೆಯಗೊಡಬೇಡಿ. ಬೆಳೆಸಿ ದೇಶದ ಸಮಸ್ಯೆ ಮಾಡಬೇಡಿ....ನಿಮ್ಮ ಸಮಸ್ಯೆಗೆ ಪರಿಹಾರ ನಿಮ್ಮಲ್ಲಿಯೇ ಇದೆ. ಅದನ್ನು ತೆಗೆದುಕೊಂಡು ರಾಜಕೀಯ ಮುಖಂಡರ ಬಳಿಗೆ ಹೋಗಬೇಡಿ.... ಧಾರ್ಮಿಕ ಮುಖಂಡರ ಬಳಿಯಂತೂ ಸುಳಿಯಲೇಬೇಡಿ. ತಪ್ಪಿ ಅವರೆಡೆ ಹೋದರೆ ಅವರು ಆ ಚಿಕ್ಕ ಸಮಸ್ಯೆಗೆ ಪರಿಹಾರ ಹುಡುಕುವದರ ಬದಲು ಅದನ್ನು ಬೆಳೆಸಿ ಒಂದು ದೊಡ್ಡ ಸಮಸ್ಯೆಯನ್ನಾಗಿ ಮಾಡಿ ಇಡುತ್ತಾರೆ.

'ಇದಕ್ಕೆ ಪ್ರತ್ಯಕ್ಷ ಉದಾಹರಣೆ ಅಯೋಧ್ಯಾ ಸಮಸ್ಯೆ.

'ಅಯೋಧ್ಯೆಯಲ್ಲಿ ರಾಮಮಂದಿರದ ನಿರ್ಮಾಣ ಹಾಗೂ ಬಾಬರಿ ಮಸೀದಿ ಭವಿಷ್ಯ ನಿರ್ಧರಿಸುವವರು. ಅಯೋಧ್ಯೆಯ ಜನ.ಅವರಿಗೆ ಹೊಡೆದಾಟ ಬೇಕಾಗಿಲ್ಲ. ಮತ್ತೊಬ್ಬರ ಪ್ರಾಣದ ರುಚಿ ಅವರಿಗಿಲ್ಲ. ರಕ್ತದ ಹೊಳೆ ಹರಿಸುವ ಪ್ರವೃತ್ತಿಯೂ ಅವರಿಗಿಲ್ಲ. ಅಲ್ಲಿರುವ ಎಲ್ಲ ಧರ್ಮದ ಎಲ್ಲ ಜಾತಿಯ, ಎಲ್ಲ ಕೋಮಿನ ಜನರು ಅಣ್ಣ ತಮ್ಮಂದಿರಾಗಿ ಪ್ರೀತಿಯಿಂದ ಬಾಳುತ್ತಿದ್ದಾರೆ. ಈ ಸಮಸ್ಯೆಯನ್ನು ಅವರ ಕೈಗೆ ಕೊಟ್ಟರೆ ಒಂದೇ ತಾಸಿನಲ್ಲಿ ಅದಕ್ಕೊಂದು ಪರಿಹಾರವನ್ನು ಅವರೇ ಖಂಡಿತ ಕಂಡುಹಿಡಿಯುತ್ತಾರೆ. ಆದರೆ ಇಲ್ಲಿ ಆದದ್ದೇನು ಅಯೋಧ್ಯೆಗೆ ಸಿಮಿತವಾದ ಸಮಸ್ಯೆಯನ್ನು ಬೆಳೆಸಿ ದೊಡ್ಡದು ಮಾಡಲಾಯಿತು.

'ಜನರ ಮುಂದೆ ಒಯ್ಯದೇ ರಾಜಕಾರಣಿಗಳು ಧರ್ಮಾಲಂಡರ ಕೈಯಲ್ಲಿ ಇಡಲಾಯಿತು. ಅಧಿಕಾರ, ಮತ, ಗದ್ದುಗೆಗಳ ಮೇಲೆ ಕಣ್ಣಿಟ್ಟಿರುವ ಈ ಸೀಳು ನಾಲಿಗೆಯ ಜನರು ಇದನ್ನೊಂದು ಭಯಂಕರ ಸಮಸ್ಯೆಯನ್ನಾಗಿ ಮಾಡಿದರು, ಬೆಳೆಸಿದರು. ಅಂತರ ರಾಷ್ಟ್ರೀಯ ಮಟ್ಟಕ್ಕೂ ಒಯ್ದರು. ತಾವು ದೊಡ್ಡವರಾಗಿ ಮೆರೆದರು. ಪಾಪವೆಂಬುದನ್ನು ಅರಿಯದ ಅಮಾಯಕ ಜನತೆಯನ್ನು ಬಲಿಕೊಟ್ಟು ರಕ್ತದ ಓಕುಳಿಯಾಡಿದರು. ಪ್ರಾಣದ ಬೇಟೆಯಾಡಿದರು. ದೇಶ ಒಡೆದು ಹೋಗುವ ಹಂತಕ್ಕೆ ತಂದರು? ಇದು ಸರಿಯೆ....? ಇದು ಸಾಧುವೆ? ಇನ್ನೂ ಕಾಲ ಮಿಂಚಿಲ್ಲ....ಅಯೋಧ್ಯೆಯ ಜನತೆ ಒಂದಾಗಿ ಮುಂದೆ ಬರಲಿ. ಈ ಸಮಸ್ಯೆಯನ್ನು ತಮ್ಮ ಕೈಗೆ ತೆಗೆದುಕೊಂಡು ಇದರಲ್ಲಿ ತಮ್ಮ ಚುಂಚು ಪ್ರವೇಶ ಮಾಡುತ್ತಿರುವ ಭಂಡರನ್ನೂ ಒದ್ದು ಓಡಿಸಲಿ....ಅಂದರೆ ಮತ್ತೆ ದೇಶದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸೀತು. ಅಯೋಧ್ಯೆ ಜಗತ್ತಿಗೆ ಒಂದು ಮಾದರಿ ಆದೀತು.

'ಎರಡನೆಯದಾಗಿ ನಮ್ಮ ದೇಶದಲ್ಲಿರುವ ಅಲ್ಪ ಸಂಖ್ಯಾಕರರು ತಮ್ಮ ಹಟದ ಸ್ವಭಾವ ಬಿಡಬೇಕು. ಬಹುಸಂಖ್ಯಾಕರೊಂದಿಗೆ ಪೈಪೋಟಿ ಮಾಡಬಾರದು. ಸರಕಾರ ನೀಡಿದ ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ಮಾತಾಡುವ ಅವರು ತಮ್ಮ ಕರ್ತವ್ಯಗಳ ಬಗ್ಗೆಯೂ ಏಕೆ ಯೋಚಿಸಬಾರದು?

'ಒಂದು ಮಾತಂತೂ ಸತ್ಯ ಇಲ್ಲಿರುವಅಲ್ಪಸಂಖ್ಯಾಕರರು ತಾವಾಗಿಯೇ ಪ್ರೀತಿಯಿಂದ ಇಲ್ಲಿ ನೆಲೆಸಲು ಒಪ್ಪಿಬಂದವರು. ಅಥವಾ ಉಳಿದವರುಅವರನ್ನು ಯಾರೂ ಬಲವಂತದಿಂದ ತಂದುಕಟ್ಟಿ ಹಾಕಿಲ್ಲ. ಅಂದ ಮೇಲೆ ತಾವಾಗಿಯೇ ಆಯ್ದುಕೊಂಡ ತಮ್ಮ ಜನ್ಮಭೂಮಿ ಭಾರತದ ಬಗ್ಗೆ ಅದರ ಹಿರಿಮೆ ಬಗ್ಗೆ ಯೋಚಿಸುವದು ಅವರ ಕರ್ತವ್ಯವಲ್ಲವೇ? ಯಾವ ದೇಶದಲ್ಲಿ ಹುಟ್ಟಿ ಯಾವ ದೇಶದ ಅನ್ನ ಉಂಡು, ಯಾವ ದೇಶದ ನೀರು ಕುಡಿದು ಯಾವ ದೇಶದ ಗಾಳಿ ಸೇವಿಸಿ ಬೆಳೆದಿದ್ದಾರೋ, ಜೀವಿಸಿದ್ದಾರೋ ಅದರ ಋಣತೀರಿಸುವದು ಬೇಡವೇ? ಜನ್ಮ ನೀಡಿದ ಭೂಮಿಯ ಸಲುವಾಗಿ ಪ್ರಾಣ ಕೊಡುವದರ ಬದಲು ಜನ್ಮಭೂಮಿಯನ್ನೇ ಬಲಿಕೊಡುವದು ಯೋಗ್ಯವೇ? ದೇಶಬಿಟ್ಟು ಆಸ್ತಿಪಾಸ್ತಿ ಕಳೆದುಕೊಂಡು ಬಂದವರೆಂದು ಸರಕಾರ ಅವರಿಗೆ ಕೆಲವೊಂದುಸವಲತ್ತುಗಳನ್ನು ನೀಡಿರಬಹುದು. ಅದರ ಮದದಲ್ಲಿ ಇಲ್ಲಿರುವ ಬಹುಸಂಖ್ಯಾಕರರ ಮನನೋಯಿಸುವದು ಸರಿಯೇ....? ಭಾರತದಲ್ಲಿ ಇರುವ ಅಲ್ಪಸಂಖ್ಯಾಕರರು ಇತರ ದೇಶಗಳಾದ ಅಮೇರಿಕಾ, ಇಂಗ್ಲೆಂಡ, ಜಪಾನ, ಮುಂತಾದ ದೇಶಗಳಲ್ಲಿಯೂ ಇದ್ದಾರೆ. ಅಲ್ಲಿಯೂ ಭಾರತದಲ್ಲಿ ವರ್ತಿಸುವಂತೆಯೇ ವರ್ತಿಸುತ್ತಾರೆಯೇ?

ಅದು ಹೋಗಲಿ, ಪಾಕಿಸ್ತಾನದಲ್ಲಿ ಭಾರತೀಯರು ಅಲ್ಪಸಂಖ್ಯಾಕರು. ಅಲ್ಪ ಸಂಖ್ಯಾಕರರಾಗಿರುವ ಭಾರತೀಯರು ಅಲ್ಲಿ ಇದೇ ರೀತಿ ವರ್ತಿಸುತ್ತಾರೆಯೇ? ಇಲ್ಲಿ ಇರುವಷ್ಟು ಸುಖ, ಸೌಕರ್ಯ, ಸವಲತ್ತುಗಳು ಅಲ್ಲಿಯ ಭಾರತೀಯರಿಗೆ ಲಭ್ಯವಾಗಿವೆಯೇ....? ಇದನ್ನೆಲ್ಲವಿಚಾರಿಸುವದು ಸೂಕ್ತ. ಇದರಿಂದಾಗಿ ಅಲ್ಪ ಸಂಖ್ಯಾಕರರು ಬಹುಸಂಖ್ಯಾಕರ ಪ್ರೀತಿಯನ್ನು ಗೆದೆಯುತ್ತಾರೆ. ಹಟದಿಂದ ಇದನ್ನು ಸಾಧಿಸಲಿಕ್ಕಾಗದು. ತಮ್ಮದೇ ದೇಶವೆಂದು ನಂಬಿರುವ ಭಾರತಕ್ಕಾಗಿ ಸ್ವಲ್ಪ ತ್ಯಾಗಕ್ಕೆ ಅವರು ಮುಂದಾಗಬೇಕು.

'ಅದರಂತೆ ಇಲ್ಲಿಯ ಬಹುಸಂಖ್ಯಾಕರೂ ಸಹ ಅಲ್ಪ ಸಂಖ್ಯಾಕರ ಬಗ್ಗೆ ಉದಾರ ಧೋರಣೆ ತಾಳಬೇಕು. ಪ್ರೀತಿಯಿಂದ ಅವರನ್ನು ನೋಡಿಕೊಳ್ಳಬೇಕು ಅವರ ತಪ್ಪು ಒಪ್ಪುಗಳನ್ನು ವಿಮರ್ಶಿಸಬೇಕು. ತಮ್ಮ ಜೊತೆ ಅವರಿಗೂ ಬದುಕಲು ಅಸ್ಪದ ಕೊಡಬೇಕು.

'ಇವರಿಬ್ಬರ ಸಾಮರಸ್ಯದ ಜೀವನದ ಮೇಲೆ ಭಾರತದ ಅಳಿವು ಉಳಿವು ನಿರ್ಭರವಾಗಿದೆ. ಜಗತ್ತಿನಲ್ಲಿ ಭಾರತ ಒಂದು ಮಹಾನ್ ಶಕ್ತಿಯಾಗಿ ಮೆರೆಯ್ಯ ಬೇಕೆಂದರೆ ಇವರಿಬ್ಬರೂ ಪರಸ್ಪರ ಒಂದಾಗಿ ದೇಶವನ್ನು ಬಲಪಡಿಸಿದಾಗಲೇ ಸಾಧ್ಯ....

'ಕೊನೆಯದಾಗಿ ನಮ್ಮ ದೇಶದ ರಾಜಕಾರಣಿಗಳನ್ನು........ಧಾರ್ಮಿಕ ಮುಖಂಡರನ್ನು ನಾನುಎಚ್ಚರಿಸುತ್ತಿದ್ದೇನೆ. ಇಲ್ಲಿಯವರೆಗೂ ನೀವು ನಡೆಸುತ್ತ ಬಂದಿರುವ ಪ್ರವೃತ್ತಿ ಕೈಬಿಟ್ಟು ಜನರ ಜೊತೆ ಒಂದಾಗಿ ಸಮಸ್ಯೆಗಳು ಸಸಿ ಯಾಗಿರುವಾಗಲೇ ಚಿವುಟಿ ಹಾಕಿ....ಅದನ್ನು ಬೆಳೆಯಗೊಡಬೇಡಿ ಯಾವ ಸಮಸ್ಯೆಗೂ ಧಾರ್ಮಿಕ ರಾಜಕೀಯ ಬಣ್ಣ ಕೊಡಬೇಡಿ... ಜನರ ಮುಗ್ಧತೆ ಯನ್ನು ದುರುಪಯೋಗಪಡಿಸಿಕೊಂಡು ವಿನಾಶಕ್ಕೆ ನಾಂದಿಮಾಡಬೇಡಿ. ಒಂದು ದಿನ ಜನ ಎಚ್ಚತ್ತರೆಂದರೆ ನೀವು ಪಾತಾಳದಲ್ಲಿ ಅಡಗಿದ್ದರೂ ನಿಮ್ಮನ್ನು ಬಿಡ ಲಾರರು. ನಿಮ್ಮ ರುಂಡ ಚೆಂಡಾಡಿ, ಮಾಂಸವನ್ನು ಹಸಿಹಸಿಯಾಗಿ ತಿಂದು ನೆತ್ತರು ಕುಡಿದು ತೇಗಿಯಾರು....ಎಚ್ಚರ....ಎಚ್ಚರ....'

'ಸತತ ಒಂದೂವರೆ ಗಂಟೆಕಾಲ ನಿರರ್ಗಳವಾಗಿ ಮಾತನಾಡಿ ಕೇಸಿನ ಇತಿಹಾಸ ಬಿಚ್ಚಿಹೇಳುವದರೊಂದಿಗೆ ಪ್ರಸಕ್ತ ಭಾರತದ ಸ್ಥಿತಿ ಗತಿ ಭವಿಷ್ಯದ ಬಗ್ಗೆ ಚಿಂತನ ಮಾಡಿ ಎಲ್ಲರನ್ನೂ ಎಚ್ಚರಿಸಿದ ಹೇಮಂತನ ಭಾಷಣ ಜನರ ಮನಸ್ಸಿನ ಮೇಲೆ ಅಗಾಧ ಪ್ರಭಾವಬೀರಿತು. ಅವರೆಲ್ಲ ಎದ್ದು ನಿಂತು ಹರ್ಷ ದಿಂದ ಚಪ್ಪಾಳೆ ತಟ್ಟಿ ಅವನನ್ನು ಅಭಿನಂದಿಸಿದರು.

ಚಪ್ಪಾಳೆ ಸದ್ದು ಅಡಗಿದ ಮೇಲೆ ಹೇಮಂತ ಶಾಂತ ಸ್ವರದಲ್ಲಿ ನುಡಿದ

ಇಲ್ಲಿಯವರೆಗೂ ನನ್ನೊಂದಿಗೆ ಪೋಲೀಸ್ ಇಲಾಖೆ ಸಹಕರಿಸುತ್ತಾ ಬಂದಿದೆ. ಇಂದೂ ಸಹಕರಿಸಿದ್ದಾರೆ. ನೂರಾರು ಜನರು ಹುತಾತ್ಮರಾಗಿದ್ದಾರೆ. ಅವರ ಸಹಕಾರ ಇಲ್ಲದೇ ಕೇವಲ ಮೇಜರ ಹೇಮಂತನಾಗಲಿ,ಅಶೋಕನಾಗಲಿ ಅಥವಾ ಸುಷಮಾ ಆಗಲಿ, ಒಂಟಿಯಾಗಿ ಏನೂ ಮಾಡಲಾರರು. ಅವರಿಗೆ ಪೋಲೀಸ್ ಇಲಾಖೆಯ ಸಹಕಾರ, ಮಹಾನ್ ಜನತೆಯ ಆಶೀರ್ವಾದಇದ್ದಾಗಲೇ ಅವರು ಏನನ್ನಾದರೂ ಸಾಧಿಸಬಹುದು. ಈ ಸಂದರ್ಭದಲ್ಲಿ ನಮ್ಮೊಂದಿಗೆ ಒಂದಾದ ಜನತೆ ಹಾಗೂ ಸಹಕಾರ ನೀಡಿದ ಪೋಲೀಸ್ ಇಲಾಖೆ ಸಿಬ್ಬಂದಿ, ಡಿ.ಸಿ.ಪಿ. ಲೋಕಲ್ ಇನ್ಸ್ಪೆಕ್ಟರ ಶ್ಯಾಮಸುಂದರ ಕುಲಕರ್ಣಿ ಹಾಗೂ ಸಿ.ಪಿ.ಐ.ಬಿ.ಡಿ. ಪಾಟೀಲರನ್ನು ಸ್ಮರಿಸುತ್ತೇನೆ; ವಂದಿಸುತ್ತೇನೆ.

'ಇನ್ನೂ ಒಂದು ವಿಷಯದ ಬಗ್ಗೆ ನನಗಿಂದು ತುಂಬಾ ಸಂತಸವಾಗಿದೆ. ಹಿಗ್ಗಿನಿಂದ ಹೃದಯ ತುಂಬಿ ಬರುತ್ತಿದೆ. ಚಂದ್ರಮೋಹನನ ಪತ್ನಿ ಹಾಗೂ ಮಗು ಆನಂದ ಅವರಿಬ್ಬರಿಗೂ ಹೊಸ ಜೀವನಾರಂಭವಾಗಲಿದೆ,ಪ್ರಥಮನೋಟ ದಲ್ಲೇ ಅಶೋಕ ಹಾಗೂ ಅನುಸೂಯಾ ಪರಸ್ಪರ ಪ್ರೇಮಿಸಿದ್ದಾರೆ. ಅನುಸೂಯಾಳಿಗೆ ಚಂದ್ರಮೋಹನನ ಬಗ್ಗೆ ಅಪಾರ ಗೌರವ ಭಕ್ತಿ ಇದೆ. ಇದರ ಜೊತೆ ಆಕೆ ಜೀವನ ಸಾಗಿಸಲಾರಳು. ಮಗುವನ್ನು ಉತ್ತಮ ನಾಗರಿಕನನ್ನಾಗಿ ಮಾಡಲಾರಳು. ಅಲ್ಲದೆ, ಆಕೆ ಹಿಂದಿನ ಗೊಡ್ಡು ಸಂಪ್ರದಾಯಗಳಿಗೆ ಶರಣಾ ಗುವ ಮಹಿಳೆಯಲ್ಲ! ಆಧುನಿಕ ವಿಚಾರ ಹೊಂದಿದವಳು. ಹೀಗಾಗಿ ಆಕೆ ಅಶೋಕನೊಂದಿಗೆ ಮರುಮದುವೆ ಮಾಡಿಕೊಳ್ಳಲು ಸಿದ್ಧಳಾಗಿದ್ದಾಳೆ.

'ತಾವೆಲ್ಲರೂ........ಆ ನವದಂಪತಿಗಳನ್ನು ಆಶೀರ್ವದಿಸಬೇಕೆಂದು ಕೇಳಿ ಕೊಳ್ಳುತ್ತೇನೆ....

ಪ್ರಚಂಡ ಕರತಾಡನದ ಮಧ್ಯೆ ಹಾರಗಳನ್ನು ಬದಲಾಯಿಸಿಕೊಂಡ ಅನುಸೂಯಾ ಹಾಗೂ ಅಶೋಕ ದಂಪತಿಗಳಾದರು. ಅವರಿಬ್ಬರೂ ಹೇಮಂತನ ಕಾಲಿಗೆ ಬಾಗಿದಾಗ, ಅವರ ಕಣ್ಣಾಲಿಗಳು ತುಂಬಿಬಂದಿದ್ದವು. ಅಶೋಕ ಹಾಗೂ ಅನುಸೂಯಾರನ್ನು ಎತ್ತಿದ ಹೇಮಂತ ಬಿಗಿಯಾಗಿ ಅಪ್ಪಿಕೊಂಡ.

ಸುಷಮಾ ಕಣ್ಣಂಚಿಗೆ ಬಂದಿದ್ದ ನೀರನ್ನು ಒರೆಸಿಕೊಂಡಳು.

## ಸಾಹಿತ್ಯ ಪ್ರಕಾಶನದ ಪ್ರಕಟಣೆಗಳು

**ಯಂಡಮೂರಿ ವೀರೇಂದ್ರನಾಥ**

ಬೆಳದಿಂಗಳ ಹಾದಿಯಲ್ಲಿ
ರಾಕ್ಷಸ
ಪರಿಮಳ
ಕರಿಗಂಬಳಿಯಲ್ಲಿ ಹುಡಿನಾಗ
ಥ್ರಿಲ್ಲರ್
ಅಷ್ಟಾವಕ್ರ-I
ಬೇಡ ಕೃಷ್ಣ ರಂಗಿನಾಟ
ಅಷ್ಟಾವಕ್ರ-II
ಅಂತಿಮ ಹೋರಾಟ
ಸ್ವರಬೇತಾಳ
ಅಗ್ನಿ ಪ್ರವೇಶ
ಓಮಪರ್ವತ
ಮರಣ ಮೃದಂಗ
ದುಡ್ಡು ಮೈನಸ್ ದುಡ್ಡು
ಯಶಸ್ಸಿನತ್ತ ಪಯಣ
ಓ ಹೆಣ್ಣೇ ನೀನೆಷ್ಟು ಒಳ್ಳೆಯವಳು

**ಕೆ. ಟಿ. ಗಟ್ಟಿ**

ಅಭಿಚಾರ
ಅಬ್ರಾಹ್ಮಣ
ಸುಖಾಂತ
ಗ್ಲಾನಿ
ಕರ್ಮಣ್ಯೇವಾಧಿಕಾರಸ್ತೇ
ನವೆಂಬರ್ 10, 2010

**ವಿ. ಸ. ಖಾಂಡೇಕರ್**

ಅಶ್ರು

**ಸುದರ್ಶನ ದೇಸಾಯಿ**

ಎಂಟೆದೆ ಬಂಟ
ಯಮದೂತರು
ಹೇದಿ ಬೇಳು
ವಿಚಿತ್ರ ಅಪರಾಧಿ
ಅಪಹರಣ
ಸೀಳು ನಾಲಿಗೆ
ಜೆಂಕಿಯ ಕುಡಿಲ್ಲಿ ಮೇಜರ್ ಹೇಮಂತ

**ವಿಜಯ ಸಾಸನೂರ**

ಇಂದ್ರಜಾಲ, ಶಬ್ದವೇಧಿ
ಗೀತಸಂಗೀತ/ಇಂಚರ, ಉಸಿರು

**ಮಲ್ಲಾದಿ ವೆಂಕಟಕೃಷ್ಣಮೂರ್ತಿ**

ಪ್ರೇಮ ಸಂದೇಶ, ವಯಸ್ಕರಿಗೆ ಮಾತ್ರ ಕುಮಾರ ಸಂಭವ

**ಶಾತವಾಹನ**

ಓಮುಖಡ್ಗ, ಸಮ್ಮೋಹನಾಸ್ತ್ರ, ನಿಶಾಂತ ಸಂಗ್ರಾಮ

**ದಂತೂರಿ ಪಂಢರೀನಾಥ್:** ದಿ ಬ್ಲ್ಯೂ ಫಿಲಂ

**ಜಯಾ ಬೆಳ್ಳಾರಿ:** ಒಲವು ಸೆಳೆದ ಹಾದಿಯಲ್ಲಿ

**ಶಂ. ಬಾ. ಜೋಶಿ**

ಮಹಾರಾಷ್ಟ್ರದ ಮೂಲ
ಕಣ್ಮರೆಯಾದ ಕನ್ನಡ
ಸಾಂಸ್ಕೃತಿಕ ಮೂಲವಲ್ಲದ ತಾತ್ವಿಕ ಚಿಂತನಗಳು

**ಸಿಂಪಿ ಲಿಂಗಣ್ಣ**

ಸ್ವರ್ಗದೋಣಿಗಳು

**ಜನಪ್ರಿಯ ಕೃತಿ**

ಸುಂದರ ರಾಮಾಯಣ
ಶ್ರೀ ಭಕ್ತ ಮೀರಾ

**ಜಿದ್ದು ಕೃಷ್ಣಮೂರ್ತಿ**

ನಿಮಗೆ ನೀವೇ ಬೆಳಕು
ಬಿಡುಗಡೆಯ ಬೆಳಗು

**ಗ. ಪ್ರ. ಪ್ರಧಾನ**

ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ